ಶಿಂಷಾಪುರ ಜಲವಿದ್ಯುತ್ ಕೇಂದ್ರ	53.28	31.84
ಮಹಾತ್ಮ ಗಾಂಧಿ ಜಲವಿದ್ಯುತ್ ಕೇಂದ್ರ	190.76	286.06
ಮುನಿರಾಬಾದ್ ಅಣೆಕಟ್ಟು ವಿದ್ಯುದಾಗಾರ	49.26	31.81
ಡೀಸಲ್ ವಿದ್ಯುತ್ ಕೇಂದ್ರ, ಯಲಹಂಕ	0.00	0.00
ಕಪ್ಪತಗುಡ್ಡ ಪವನ ಕೇಂದ್ರ	7.21	8.01
ಸೌರ ವಿದ್ಯುತ್ ಕೇಂದ್ರ-ಇತ್ನಾಳ್, ಯೆಲಸಂದ್ರ, ಯಾಪಲ್‌ದಿನ್ನಿ ಕೋಲಾರ, ಬೆಳಕವಾಡಿ ಮತ್ತು ಶಿವನಸಮುದ್ರಂ	36.75	32.38
ಒಟ್ಟು	**21912.34**	**24614.16**

ಯರಮರಸ್ ಶಾಖೋತ್ಪನ್ನ ವಿದ್ಯುತ್ ಕೇಂದ್ರವು 2017-18ನೇ ಸಾಲಿನಲ್ಲಿ 996.32ದಲಯೂ.ಗಳಷ್ಟು ವಿದ್ಯುತ್ತನ್ನು ಉತ್ಪಾದಿಸಿದೆ (ಕವಿನಿನಿಯ ಸಹಭಾಗಿತ್ವದಲ್ಲಿ ನೆಡೆಸುತ್ತಿರುವ ವಿದ್ಯುತ್ ಕೇಂದ್ರ)

ಎಫ್) 2017-18ನೇ ಸಾಲಿನಲ್ಲಿ ಜಲಾಶಯಗಳು ಈ ಕೆಳಕಂಡ ಮಟ್ಟವನ್ನು ತಲುಪಿದ್ದವು

ಜಲಾಶಯಗಳು	ಗರಿಷ್ಠ ಮಟ್ಟ	ಕನಿಷ್ಠ ನೀರೆಳೆಯುವ ಮಟ್ಟ	ಗರಿಷ್ಠ ಮಟ್ಟ 2017-18	ದಿನಾಂಕ	ಶೇಕಡಾವಾರು ಸಾಮರ್ಥ್ಯ
ಲಿಂಗನಮಕ್ಕಿ	1819 ಅಡಿ	1715 ಅಡಿ	1799.20	20.10.2017	61.94
ಸೂಪಾ	564 ಮೀ	494 ಮೀ	549.44	24.10.2017	61.68
ಮಾಣಿ	594.36 ಮೀ	565.1 ಮೀ	587.57	22.10.2017	62.24

VIII. ಪ್ರಸಕ್ತ ಚಾಲ್ತಿಯಲ್ಲಿರುವ ವಿದ್ಯುತ್ ಯೋಜನೆಗಳು:

1. ಯರಮರಸ್ (2x800 ಮೆ. ವ್ಯಾ) ಶಾಖೋತ್ಪನ್ನ ವಿದ್ಯುತ್‌ಕೇಂದ್ರ :

- ಕರ್ನಾಟಕ ಸರ್ಕಾರವು ದಿನಾಂಕ: 03.01.2009 ರ ಆದೇಶ ಪತ್ರ ಸಂಖ್ಯೆ: ಇ.ಎನ್. 90 ಪಿ.ಪಿ.ಸಿ 2008 ರಲ್ಲಿ ಯರಮರಸ್ (2x800 ಮೆ. ವ್ಯಾ) ಶಾಖೋತ್ಪನ್ನ ವಿದ್ಯುತ್ ಕೇಂದ್ರವನ್ನು ಮೆ: ಬಿ.ಹೆಚ್.ಇ.ಎಲ್. ರವರ ಸಹಭಾಗಿತ್ವದೊಂದಿಗೆ ಕೈಗೆತ್ತಿಕೊಳ್ಳಲು ಅನುಮೋದನೆ ನೀಡಿದ್ದು, ಈ ಕುರಿತು ನಿಗಮವು ದಿನಾಂಕ.12.01.2009 ರಂದು ಮೆ: ಬಿ.ಹೆಚ್.ಇ.ಎಲ್. ರವರೊಂದಿಗೆ ಒಡಂಬಡಿಕೆ ಪತ್ರಕ್ಕೆ ಸಹಿ ಹಾಕಿದೆ.
- 17.11.2009 ರಂದು ಈ ಯೋಜನೆಗೆ ಪರಿಸರ ಮತ್ತು ಅರಣ್ಯ ಸಚಿವಾಲಯ (GOI) ರಿಂದ ಅನುಮತಿ ಪಡೆಯಲಾಗಿದೆ.
- ಯರಮರಸ್ ಶಾಖೋತ್ಪನ್ನ ವಿದ್ಯುತ್ ಯೋಜನೆಯ ಬಿ.ಟಿ.ಜಿ. ಹಾಗೂ ಇತರೆ ಪ್ರಮುಖ ಪ್ಯಾಕೇಜ್‌ಗಳಿಗಾಗಿ ದಿನಾಂಕ: 09.04.2010 ರಂದು ಮೆ: ಬಿ.ಹೆಚ್.ಇ.ಎಲ್. ರವರಿಗೆ ಆದೇಶ ಪತ್ರ ನೀಡಲಾಯಿತು.
- ಸರಬರಾಜು ಮತ್ತು ಸೇವೆಗಳಿಗೆ ಕಾರ್ಯಾದೇಶ ಪತ್ರವನ್ನು ದಿನಾಂಕ 21.03.2012ರಂದು ನೀಡಲಾಯಿತು.
- ಯೋಜನಾ ನಿರ್ವಹಣಾ ಕಾರ್ಯ ಪೂರ್ಣಗೊಂಡಿದೆ ಹಾಗೂ ಕಲ್ಲಿದ್ದಲು ನಿರ್ವಹಣಾ ವ್ಯವಸ್ಥೆಯ(CHS) ಮುಖ್ಯ ಹಾದಿಯಲ್ಲಿ ಉಳಿದ ಕೆಲವು ಕಾರ್ಯಗಳನ್ನು ಹೊರತುಪಡಿಸಿ ವಿದ್ಯುತ್ ಉತ್ಪಾದಿಸಲು ಸಾಧ್ಯವಾಗುತ್ತದೆ ಈ ಕೆಲಸವು ಡಿಸೆಂಬರ್ 2018ರ ಅಂತ್ಯದ ವೇಳೆಯಲ್ಲಿ ಪೂರ್ಣಗೊಳ್ಳುವ ಸಾಧ್ಯತೆಯಿದೆ. ಈ ಯೋಜನೆಯ ಅಂದಾಜು ಪರಿಷ್ಕೃತ ಮೊತ್ತವು 12,778 ಕೋಟಿ ರೂ. ಗಳಾಗಿದೆ ಹಾಗೂ ಸದರಿ ಯೋಜನೆಯಿಂದ ಪ್ರತಿ ವರ್ಷ 85% PLF ರಂತೆ 11,913 ದಶ ಲಕ್ಷ ಯೂನಿಟ್‌ಗಳಷ್ಟು ವಿದ್ಯುತ್ ಉತ್ಪಾದನೆಯಾಗಲಿದೆ.
- ಘಟಕ-1ರ ವಾಣಿಜ್ಯ ಉತ್ಪಾದನೆಯನ್ನು (ಸಿ.ಒ.ಡಿ) ದಿನಾಂಕ 07.03.2017 ರಂದು ಪೂರ್ಣಗೊಳಿಸಲಾಗಿದೆ ಮತ್ತು ವಿದ್ಯುತ್ ಘಟಕದ ವಿಶ್ವಾಸಾರ್ಹ ಪರೀಕ್ಷೆಯ (Reliability operation) ಕಾರ್ಯಾಚರಣೆಯನ್ನು ದಿನಾಂಕ 12.01.2018 ರಂದು ಪೂರ್ಣಗೊಳಿಸಲಾಗಿದೆ ಹಾಗೂ ಮಾರ್ಚ್ 2018ರಲ್ಲಿ 257 ದಶ ಲಕ್ಷ ಯೂನಿಟ್‌ಗಳಷ್ಟು ಉತ್ಪಾದನೆ ಮಾಡಲಾಗಿದೆ.
- ಘಟಕ-2ರ ವಾಣಿಜ್ಯ ಉತ್ಪಾದನೆಯನ್ನು (ಸಿ.ಒ.ಡಿ) ದಿನಾಂಕ 06.04.2017 ರಂದು ಪೂರ್ಣಗೊಳಿಸಲಾಗಿದೆ ಮತ್ತು ವಿದ್ಯುತ್ ಘಟಕದ ವಿಶ್ವಾಸಾರ್ಹ ಪರೀಕ್ಷೆಯ(Reliability operation) ಕಾರ್ಯಾಚರಣೆಯನ್ನು ಸಧ್ಯದಲ್ಲಿ ಪ್ರಾರಂಭಿಸಲು ಕ್ರಮ ಕೈಗೊಳ್ಳಲಾಗಿದೆ.
- FY 2017-18 ಸಾಲಿನಲ್ಲಿ YTPS ಸುಮಾರು 996 MU ಗಳ ವಿದ್ಯುತ್ ಉತ್ಪಾದನೆಯಾಗಲಿದೆ.
- ದಿನಾಂಕ 07.12.2015ರ MoEF ಅಧಿಸೂಚನೆಯಂತೆ ಪರಿಷ್ಕೃತ ಎಮಿಷನ್ ಮಾನದಂಡಗಳನ್ನು ಪೂರೈಸಲು Flue Gas D-Sulphurization(FGD) ಯನ್ನು ಅಳವಡಿಸುವ ಕಾರ್ಯ ನಿರ್ವಹಣೆಯನ್ನು ತೆಗೆದುಕೊಳ್ಳಲಾಗುವುದು.

- ಯೋಜನಾ ಪ್ರದೇಶದಲ್ಲಿ ಆಂಬಿಯಂಟ್ ಏರ್ ಕ್ವಾಲಿಟಿ ಮಾನಿಟರಿಂಗ್ ಸ್ಟೇಷನ್(AAQMS) ನ 3 ಕೇಂದ್ರಗಳನ್ನು ಸ್ಥಾಪಿಸಿ ನಿಯೋಜಿಸಲಾಗಿದೆ. ಆನ್‌ಲೈನ್ ಮಾಹಿತಿಯನ್ನು ಪಡೆದು ಅದನ್ನು ಯೋಜನಾ ಪ್ರದೇಶದ ಹೆಬ್ಬಾಗಿಲಿನ ಮುಂದೆ ಪ್ರದರ್ಶಿಸಲಾಗುತ್ತದೆ. ನೈಜ ಸಮಯ ಹೊರಸೂಸುವಿಕೆಯ ದತ್ತಾಂಶದ ಮೇಲ್ವಿಚಾರಣೆಗಾಗಿ KSPCB Server ಗೆ Server ಅನ್ನು up-linking ಮಾಡುವ ಕಾರ್ಯವು ಪ್ರಗತಿಯಲ್ಲಿದೆ.
- RSMY Works: ಯೋಜನಾ ಪ್ರದೇಶದ ಹೊರಗಿನ RSMY ಕಾರ್ಯಗಳು ಪೂರ್ಣಗೊಂಡಿದೆ ಆದರೆ ಯೋಜನಾ ಪ್ರದೇಶದ ಗಡಿಯೊಳಗಿನ RSMY ಕೆಲಸಗಳು ಪ್ರಗತಿಯಲ್ಲಿದೆ ಮತ್ತು ಶೀಘ್ರದಲ್ಲಿ ಪೂರ್ಣಗೊಳ್ಳುತ್ತದೆ.
- CHP & AHP: CHP ಯ ನಿಯಮಿತ ಕಾರ್ಯವು ಪ್ರಗತಿಯಲ್ಲಿದೆ. ಪ್ರಸ್ತುತ ಈ ಘಟಕಗಳಲ್ಲಿ ವಿದ್ಯುತ್ ಉತ್ಪಾದನೆ ಮಾಡಲು ಕಲ್ಲಿದ್ದಲನ್ನು ಆಕಸ್ಮಿಕ ಹಾದಿಯಲ್ಲಿ ERH ಮೂಲಕ ಪೂರೈಸಲಾಗುತ್ತಿದೆ. ಒಣ ಬೂದಿ ಸ್ಥಳಾಂತರಿಸುವಿಕೆ ವ್ಯವಸ್ಥೆಯ ಕೆಲಸದ ಕಾರ್ಯವು ಪ್ರಗತಿಯಲ್ಲಿದೆ ಮತ್ತು ಈ ಕಾರ್ಯವು 3 ತಿಂಗಳುಗಳಲ್ಲಿ ಪೂರ್ಣಗೊಳ್ಳುತ್ತದೆ.
- ಘಟಕ-2 ರ ವಿದ್ಯುತ್ ಉತ್ಪಾದನಾ ಕಾರ್ಯವು ಶೀಘ್ರದಲ್ಲಿ ಪ್ರಾರಂಭವಾಗುತ್ತದೆ.

2. ಬಳ್ಳಾರಿ ಶಾಖೋತ್ಪನ್ನ ವಿದ್ಯುತ್‌ಕೇಂದ್ರ, ಘಟಕ-3 (1x700 ಮೆ. ವ್ಯಾ):

ಬಳ್ಳಾರಿ ಶಾಖೋತ್ಪನ್ನ ವಿದ್ಯುತ್ ಕೇಂದ್ರದ 3 ನೇ ಘಟಕವನ್ನು (1x700 ಮೆ.ವ್ಯಾ) ಸೂಪರ್ ಕ್ರಿಟಿಕಲ್ ತಾಂತ್ರಿಕತೆ (Super Critical Technology) ಯೊಂದಿಗೆ ಇ.ಪಿ.ಸಿ. ಆಧಾರದ ಮೇಲೆ ರೂ.4686 ಕೋಟಿ ಅಂದಾಜು ವೆಚ್ಚದಲ್ಲಿ ಅಳವಡಿಸಲಾಗಿದೆ. ಈ ಘಟಕದಿಂದ ಪ್ರತಿ ವರ್ಷ 5212 ದ.ಲ.ಯೂನಿಟ್‌ಗಳಷ್ಟು ವಿದ್ಯುತ್ ಉತ್ಪಾದನೆಯಾಗಲಿದೆ. ಪರಿಸರ ಮತ್ತು ಅರಣ್ಯಗಳ ಸಚಿವಾಲಯದಿಂದ ಯೋಜನೆಗೆ ಅನುಮತಿ ನೀಡಲಾಗಿದೆ. ದಿನಾಂಕ 28.09.2010 ರಂದು ಸರಬರಾಜು ಮತ್ತು ಸೇವೆಗಳಿಗೆ ಕಾರ್ಯಾದೇಶ ಪತ್ರ ವಿತರಿಸಲಾಗಿದೆ. ಯೋಜನೆಯನ್ನು ನಿಯೋಜಿಸಿ ಪ್ರಸ್ತುತ ವಿದ್ಯುತ್ ಉತ್ಪಾದನೆ ಮಾಡಲಾಗುತ್ತಿದೆ. ಆರ್ಥಿಕ ವರ್ಷ 2017-18ರಲ್ಲಿ ಈ ಯೋಜನೆಯಿಂದ 826.88 ದ.ಲ.ಯೂನಿಟ್ ವಿದ್ಯುತ್ ಉತ್ಪಾದನೆ ಮಾಡಲಾಗಿದೆ.

MoEF ನ ಅಧಿಸೂಚನೆಯ ಪ್ರಕಾರ ಪರಿಷ್ಕೃತ ಹೊರಸೂಸುವಿಕೆ ಮಾನದಂಡಗಳನ್ನು ಪೂರೈಸಲು ಫ್ಲೂ ಗ್ಯಾಸ್ ಡಿ-ಸಲ್ಫರೈಜೇಶನ್ ಪ್ಲ್ಯಾಂಟ್ (FGD) ಸ್ಥಾಪನೆಗೆ ಟೆಂಡರ್‌ಗಳನ್ನು ಶೀಘ್ರದಲ್ಲಿ ನೀಡಲಾಗುವುದು.

3. ನಾಗಝರಿ ವಿದ್ಯುದಾಗಾರ ಘಟಕ-06 ರ ನವೀಕರಣ, ಆಧುನೀಕರಣ ಮತ್ತು ಉನ್ನತೀಕರಣ.

ಘಟಕ-6ರ 135 ಮೆ.ವ್ಯಾನಿಂದ 150 ಮೆ.ವ್ಯಾಗಳಿಗೆ ಉನ್ನತೀಕರಣ ಕೆಲಸಗಳು ಪೂರ್ಣಗೊಂಡಿದ್ದು ಘಟಕವನ್ನು 25.11.2015 ರಂದು ವಿದ್ಯುತ್ ಜಾಲಕ್ಕೆ ಸೇರಿಸಲಾಯಿತು.

4. ಘಟಪ್ರಭ ವಿದ್ಯುದಾಗಾರದ ಹೆಚ್ಚುವರಿ ಘಟಕಗಳು (16 ಮೆ.ವ್ಯಾ)

ಮಾನ್ಯ ಹೈಕೋರ್ಟ್ ದಿನಾಂಕ: 14.01.2016ರ ತೀರ್ಪು ಮತ್ತು ವಿದ್ಯುದಾಗಾರದ ಸಾಮರ್ಥ್ಯದ ಕುರಿತ ಅಧ್ಯಯನವನ್ನು ಆಧರಿಸಿ ಹಿಂದೆ ಪ್ರಸ್ತಾಪಿಸಲಾಗಿದ್ದ 2x10 ಮೆ.ವ್ಯಾಟ್‌ನ ಹೆಚ್ಚುವರಿ ಘಟಕಗಳ ಬದಲಾಗಿ 2x8 ಮೆ.ವ್ಯಾಟ್‌ನ ಘಟಕಗಳ ಅನುಸ್ಥಾಪನೆಯನ್ನು ಪ್ರಸ್ತಾಪಿಸಲಾಗಿದೆ. ಮೆ॥ ರಿಯೋ ಎನ್‌ರ್ಜಿ ಪ್ರೈವೇಟ್ ಲಿಮಿಟೆಡ್‌ನ 4 ಮೆ.ವ್ಯಾಟ್‌ನ ಜಲ ವಿದ್ಯುತ್ ಯೋಜನೆ ಮತ್ತು ಕ.ವಿ.ನಿ.ನಿಯ 16 ಮೆ.ವ್ಯಾಟ್‌ನ ವಿದ್ಯುತ್ ಯೋಜನೆ ಎರಡನ್ನೂ ಯಾವುದೇ ಅತಿಕ್ರಮಣವಿಲ್ಲದೆ ಹಿಡಕಲ್ ಅಣೆಕಟ್ಟಿನ ಘಟಪ್ರಭಾ ಬಲದಂಡೆ ಕಾಲುವೆಗೆ ಅಡ್ಡಲಾಗಿ ನಿರ್ಮಿಸಲು ವಿವರವಾದ ಯೋಜನಾ ವರದಿಯನ್ನು ತಯಾರಿಸಲಾಗಿದೆ. ಘಟಪ್ರಭಾ ಬಲದಂಡೆ ಕಾಲುವೆಯಲ್ಲಿ 2x8 ಮೆ.ವ್ಯಾಟ್‌ಗಳ ಹೆಚ್ಚುವರಿ ಘಟಕಗಳ ಅನುಸ್ಥಾಪನೆಯ ಯೋಜನಾ ವರದಿಯನ್ನು ಯೋಜನಾ ಪ್ರದೇಶದ ವ್ಯಾಪ್ತಿ ಎಂದು ನಿರ್ಧರಿಸಿ ಕ.ವಿ.ನಿ.ನಿ.ಗೆ ಯೋಜನೆಯನ್ನು ಹಂಚಿಕೆ ಮಾಡಿಕೊಡಲು ವಿನಂತಿಸಿ ಇಂಧನ ಇಲಾಖೆ, ಕರ್ನಾಟಕ ಸರ್ಕಾರಕ್ಕೆ ಸಲ್ಲಿಸಲಾಗಿದೆ.

5. ಮುನಿರಾಬಾದ್ ವಿದ್ಯುದಾಗಾರ(10 ಮೆ.ವ್ಯಾ)

ಮುನಿರಾಬಾದನ (ಕೊಪ್ಪಳ ಜಿಲ್ಲೆ), ಮುನಿರಾಬಾದ್ ವಿದ್ಯುದಾಗಾರದ (ತುಂಗಭದ್ರ ಅಣೆಕಟ್ಟಿನ ಎಡದಂಡೆಯಲ್ಲಿ) 1x10 ಮೆ.ವ್ಯಾಟ್ ಹೆಚ್ಚುವರಿ ಘಟಕದ ಇಂಜಿನಿಯರಿಂಗ್, ಖರೀದಿ ಮತ್ತು ನಿರ್ಮಾಣದ ಒಪ್ಪಂದವನ್ನು ಸುಮಾರು 37.19 ಕೋಟಿ ರೂಪಾಯಿಗಳ ವೆಚ್ಚದಲ್ಲಿ ಮೇ॥ ಆಲಾನ್‌ವಾರ್ಡ್-ಎಸ್.ಎಸ್.ಐ.ಪಿ.ಎಲ್-ಕೆ.ಆರ್ ಮತ್ತು ಕಂ ಒಕ್ಕೂಟಕ್ಕೆ ದಿನಾಂಕ 04.02.2012ರಲ್ಲಿ ನೀಡಲಾಯಿತು.

CE(ICZ), ಮುನಿರಾಬಾದ್ ರವರಿಂದ ಅನುಮತಿ ದೊರೆತ ನಂತರ ಯೋಜನಾ ಪ್ರದೇಶವನ್ನು ದಿನಾಂಕ: 19.02.2013 ರಂದು ಒಕ್ಕೂಟಕ್ಕೆ ಹಸ್ತಾಂತರಿಸಲಾಯಿತು. ಯೋಜನೆಯನ್ನು ಪೂರ್ಣಗೊಳಿಸಲು ದಿನಾಂಕ: 30.11.2017 ರವರೆಗೆ ಸಮಯ ವಿಸ್ತಿರಣೆಯ ಒಕ್ಕೂಟದ ವಿನಂತಿಯನ್ನು ಅಂಗೀಕರಿಸಲಾಯಿತು.

- **ಕಾಮಗಾರಿ ಕೆಲಸಗಳು:**

ಪ್ಯಾರಾಪೆಟ್ ಗೋಡೆಯ ನಿರ್ಮಾಣ ಕಾರ್ಯ ಪೂರ್ಣಗೊಂಡಿದೆ. ಟಿ.ಆರ್.ಪಿ ಗಟ್ಟಿ ಬಂಡೆ ಕತ್ತರಿಸುವಿಕೆ ಕೆಲಸ ಪೂರ್ಣಗೊಂಡಿದೆ. ಪ್ರವೇಶ ಸೇವಾ ಗೇಟ್-01 ಮತ್ತು ಗೇಟ್-02ರ ರೋಲರ್ ಜೋಡಣಾ ಕೆಲಸ ಪೂರ್ಣಗೊಂಡಿದೆ. ಎಲ್ಲಾ ಪ್ರಮುಖ ಕಾಮಗಾರಿ ಕಾರ್ಯಗಳು ಪೂರ್ಣಗೊಂಡಿದೆ.

- **ವಿದ್ಯುತ್ ಯಾಂತ್ರಿಕ ಕಾರ್ಯಗಳು**
- **ಟರ್ಬೈನ್:**

ಸುರಳಿಯಾಕಾರದ ಕವಚ, ರನ್ನರ್, ಗೈಡ್ ವೇನ್ಸ್, ಟರ್ಬೈನ್, ಗವರ್ನರ್ ಮತ್ತು ಅದರ ಸಹಾಯಕ ಸಾಧನಗಳ ನಿರ್ಮಾಣ ಕಾರ್ಯಗಳು ಮುಗಿದಿದೆ. SAC ನೀರಿನ ಪೈಪ್‌ಲೈನ್‌ನ ಜಲ ಪರೀಕ್ಷೆ ಮತ್ತು ಗವರ್ನರ್ ಪೈಪ್‌ಲೈನ್‌ನ GV/RB ವೆಲ್ಡಿಂಗ್ ಕೆಲಸಗಳು ಮುಗಿದಿವೆ. ಎಲ್ಲಾ ತಂಪುಗೊಳಿಸುವಿಕೆಯ ನೀರು ಮತ್ತು ತೈಲ ಪೈಪ್‌ಲೈನ್‌ನ ವೆಲ್ಡಿಂಗ್ ಮತ್ತು ಜಲ ಪರೀಕ್ಷೆಯು ಕೂಡ ಮುಗಿದಿದೆ. ಇನ್‌ಟೇಕ್ ಹಾಯಿಸ್ಟ್ ಯಂತ್ರದ ಸ್ಥಾನಿಕ ಕೆಲಸ, ಲಿಫ್ಟಿಂಗ್ ಹೂಕ್ ಫಲಕದ ಜೋಡಣೆ ಮತ್ತು ವೆಲ್ಡಿಂಗ್ ಕೆಲಸ ಮುಗಿದಿದೆ. ತಂಪುಗೊಳಿಸುವಿಕೆಯ ನೀರಿನ ಮತ್ತು ತೈಲದ ಪೈಪ್‌ಲೈನ್‌ನ ಬಣ್ಣ ಹಚ್ಚುವ ಕೆಲಸ ಮುಗಿದಿರುತ್ತದೆ. ಮನೋರೈಲ್ ಹಾಯಿಸ್ಟ್ ವೃತ್ತಾಕಾರದ ರೈಲ್‌ನ ಎರಡನೇ ಸಂಖ್ಯೆಯ ಜೋಡಣೆ ಕೆಲಸಗಳು ಮುಗಿದಿರುತ್ತದೆ. ಟೈಲ್‌ರೇಸ್‌ನ ನೀರಿನ ಮಟ್ಟದ ಸಂವೇದಕದ ರಕ್ಷಣಾ ಕವಚದ ತಯಾರಿಕೆ ಮತ್ತು ಜೋಡಣೆ ಕೆಲಸಗಳು ಮುಗಿದಿರುತ್ತವೆ. ಮೇಲು ಹೊದಿಕೆಯ ನೀರು ಹೊರತೆಗೆಯುವ DC ಮೋಟಾರ್‌ನ ರಕ್ಷಣಾ ಕವಚವು ತಯಾರಾಗಿದೆ. ತಂಪುಗೊಳಿಸುವಿಕೆಯ ನೀರಿನ ಪಂಪ್‌ನ ಗ್ರಂಥಿಗಳನ್ನ ಹೊಸದಾಗಿ ಬದಲಾಯಿಸಲಾಗಿದೆ. ಟರ್ಬೈನ್ ಮಹಡಿಯ ಕೇಬಲ್ ಕಂದಕದ ಕೋನಗಳ ಜೋಡಣ ಕೆಲಸ ಮುಗಿದಿರುತ್ತದೆ. ಟರ್ಬೈನ್ ಶಾಫ್ಟ್‌ಗೆ ಬೆಂಬಲ ಕವರನ್ನು ಜೋಡಿಸಲಾಗಿದೆ. ಯಂತ್ರದ ಅತಿ ವೇಗದ ಪರೀಕ್ಷೆಯನ್ನು, ನಿಗದಿತ ವೇಗದ ಶೇಕಡ 145% ರಲ್ಲಿ ನಡೆಸಲಾಗಿದೆ. ಯಾಂತ್ರಿಕ ತಿರುಗುವಿಕೆಯನ್ನು, ನಿಗದಿತ ವೇಗ 187.5 rpm ನಲ್ಲಿ ನಡೆಸಿ ಶೇಖಡ 25%, 50%, 75%, 100% ನಲ್ಲಿ ಕಂಪನ ಮತ್ತು ಶಬ್ದದ ಮಾಪನವನ್ನು ಮಾಡಲಾಗಿದೆ.

- **ಜನರೇಟರ್ ಮತ್ತು ಸ್ವಿಚ್‌ಯಾರ್ಡ್**

ಸ್ಟೇಟರ್, ರೋಟಾರ್ ಮತ್ತು ಇತರೆ ಉಪಕರಣಗಳ ನಿರ್ಮಾಣ ಪೂರ್ಣಗೊಂಡಿದೆ. ಜನರೇಟರ್ LGB, UGB ಯ ನಿರ್ಮಾಣ ಕೆಲಸ ಮತ್ತು ಜೋಡಣೆ ಪೂರ್ಣಗೊಂಡಿದೆ. ಸ್ವಿಚ್‌ಯಾರ್ಡ್ ಉಪಕರಣಗಳು ಮತ್ತು ಜನರೇಟರ್ ಪರಿವರ್ತಕದ ನಿರ್ಮಾಣ ಕೆಲಸ ಹಾಗೂ ಎಲ್ಲಾ ಪ್ಯಾನೆಲ್‌ಗಳ ಅನುಸ್ಥಾಪನೆ ಕೆಲಸ ಮುಗಿದಿದೆ. ಕೇಬಲ್ ಟ್ರೇ ಹಾಗೂ ನಿಯಂತ್ರಣ ಮತ್ತು ವಿದ್ಯುತ್ ಕೇಬಲ್ ಎಳೆಯುವಿಕೆ ಕೆಲಸ ಸಂಪೂರ್ಣಗೊಂಡಿದೆ. UGB ತಂಪಾಗಿಸುವ ನೀರಿನ ಪೈಪ್‌ಲೈನ್‌ನ ವೆಲ್ಡಿಂಗ್ ಕೆಲಸ ಮುಗಿದಿದೆ. ಆಯಿಲ್ ಹೆಡ್ ಡ್ರೈನೇಜ್ ಮತ್ತು ಶಾಫ್ಟ್ ಸೀಲ್ ವೆಲ್ಡಿಂಗ್ ಕೆಲಸ ಪೂರ್ಣಗೊಂಡಿದೆ. ಸರ್ವೋ ಮೋಟಾರ್ ಲಾಕ್ ಪೈಪ್‌ಲೈನ್ ಮತ್ತು ಶಾಫ್ಟ್ ಸೀಲ್ ಪೈಪ್‌ಲೈನ್‌ಗಳ ಹೈಡ್ರೊ ಪರೀಕ್ಷೆ ನಡೆಸಲಾಗಿದೆ. ಜನರೇಟರ್ ಪರಿವರ್ತಕದ ವಾರ್ಮ್ ಅಪ್ ಪೂರ್ಣಗೊಂಡಿದೆ. LGB, ಆಯಿಲ್ ಪೇಪರ್ ಹೊರತೆಗೆಯುವ ಸಾಧನದ ಸ್ಥಾಪನೆ ಮತ್ತು ವೆಲ್ಡಿಂಗ್ ಪೂರ್ಣಗೊಂಡಿದೆ. ಲೈಟಿಂಗ್ ಪ್ರೋಟೆಕ್ಷನ್ ಕಾರ್ಯ ಪೂರ್ಣಗೊಂಡಿದೆ. DC ಪ್ಯಾನಲ್ ಅನ್ನು ಚಾರ್ಜ್ ಮಾಡಲಾಗಿದೆ. CO2 ವ್ಯವಸ್ಥೆ ಸಿಲಿಂಡರ್ ಜೋಡಣೆ ಪೂರ್ಣಗೊಂಡಿದೆ. ರೇಟೆಡ್ ವೇಗದ 140% ದಲ್ಲಿ ಎಲೆಕ್ಟ್ರಿಕಲ್ ಅಧಿಕ ವೇಗ ಪರೀಕ್ಷೆ ಮಾಡಲಾಗಿದೆ. ಜನರೇಟರ್ ಮತ್ತು ಪರಿವರ್ತಕಗಳಿಗೆ SCC ಮತ್ತು OCC ಪರೀಕ್ಷೆ ನಡೆಸಲಾಗಿದೆ. ಘಟಕವನ್ನು ಧಿನಾಂಕ 23.11.2017 ಗ್ರಿಡ್‌ಗೆ ಹೊಂದಿಸಲಾಯಿತು (2.15 ಮೆ.ವ್ಯಾ ವರೆಗು ಲೋಡ್) ಮತ್ತು ಹೊಂದಿಸುವ ಸಮಯದಲ್ಲಿ ಉಂಟಾದ ತೊಂದರೆಗಳನ್ನು ಬಗೆಹರಿಸಲಾಯಿತು. ವಿಶ್ವಾಸಾರ್ಹತೆ ಪರೀಕ್ಷೆ (Reliability test run) ಪೂರ್ಣಗೊಂಡಿದೆ. ಆಯಿಲ್ ಹೆಡರ್ ಮತ್ತು ಆಯಿಲ್ ಮಟ್ಟ ಸೂಚವನ್ನು ಅಳವಡಿಸಲಾಗಿದೆ.

ಡಿ-ವಾಟರಿಂಗ್ ಹೊರದಾರಿ ಪೈಪ್‌ಲೈನ್‌ಗಳಿಗೆ ಒತ್ತಡ ಗೇಜ್ (pressure guage) ಅನ್ನು ಅಳವಡಿಸಲಾಗಿದೆ. ಗವರ್ನರ್ ಮತ್ತು ನಿಯಂತ್ರಣಾ ಪ್ಯಾನಲ್‌ಗಳಿಗೆ ತುರ್ತು ಒತ್ತು ಗುಂಡಿಗಳ ಸಂಪರ್ಕ ಕಲ್ಪಿಸಲಾಗಿದೆ. ಸ್ವಿಚ್‌ಯಾರ್ಡ್, ಇನ್‌ಟೇಕ್ ಗೇಟ್, DT ಗೇಟ್, ಬಿಡುಗಡೆ ಕಾಲುವೆ ಮತ್ತು ವಿದ್ಯುದಾಗಾರದ ಬೆಳಕಿನ ವ್ಯವಸ್ಥೆ ಕಾರ್ಯವನ್ನು ಪೂರ್ಣಗೊಳಿಸಲಾಗಿದೆ. ಇನ್‌ಟೇಕ್ ಗೇಟ್‌ನ ಲಿಮಿಟ್ ಸ್ವಿಚ್‌ನ ಜೋಡಣೆ ಕೆಲಸ ಹಾಗೂ DT ಗೇಟ್ ಚಕರ್ ಪ್ಲೇಟ್ (Checker plate) ಜೋಡಣೆ ಕೆಲಸ ಪೂರ್ಣಗೊಂಡಿದೆ. ಬಾಕಿ ಕೆಲಸಗಳ ಪಟ್ಟಿಯ ಅನುಸಾರ ಬಾಕಿ ಕೆಲಸಗಳು ಪ್ರಗತಿಯಲ್ಲಿದೆ.

6. ಯಲಹಂಕ ಕಂಬೈನ್ಡ್ ಸೈಕಲ್ ಪವರ್ ಪ್ಲಾಂಟ್ (1x370 MW)

ದಿನಾಂಕ 03.11.2015ರಂದು ಬಿಹೆಚ್‌ಇಎಲ್‌ನವರಿಗೆ ಪೂರ್ತಿ ಅನಿಲ ಘಟಕದ ವ್ಯವಸ್ಥೆ ಮತ್ತು ಸೇವೆಗಳನ್ನು ಸರಬರಾಜು ಮಾಡಲು ಕಾರ್ಯಾದೇಶ ನೀಡಲಾಗಿದೆ.

ಯೋಜನೆಯ ಮುಖ್ಯಾಂಶಗಳು:

1	ಸಾಮರ್ಥ್ಯ	370 ಮೆ.ವ್ಯಾ.
2	ವಾರ್ಷಿಕ ವಿದ್ಯುತ್ ಉತ್ಪಾದನೆ	2755 ಮೆ.ವ್ಯಾ. @85% ಪಿ.ಎಲ್.ಎಫ್
3	ಘಟಕದ ವೆಚ್ಚ	ರೂ.1571 ಕೋಟಿಗಳು
4	ನೀರು	15 ಎಂ.ಎಲ್.ಡಿ ಬಿ.ಡಬ್ಲ್ಯೂ.ಎಸ್.ಎಸ್.ಬಿ, ಜಕ್ಕೂರ್ ಸ್ಥಾವರದಿಂದ ತೃತೀಯ ಸಂಸ್ಕರಣದ ಒಳಚರಂಡಿ ನೀರು
5	ಇಂಧನ	1.5 ಎಂ.ಎಂ.ಎಸ್.ಸಿ.ಎಂ.ಡಿ ಆರ್.ಎನ್.ಎಲ್.ಜಿ ಗೈಲ್ ನೆಟ್‌ವರ್ಕ್
6	ವಿದ್ಯುತ್ ಸ್ಥಳಾಂತರಿಸುವಿಕೆ	220 ಕೆವಿ ಕೆಪಿಟಿಸಿಎಲ್ ಉಪವಿಭಾಗಗಳು
7	ಇಪಿಸಿ ಗುತ್ತಿಗೆ	ಕೆ.ಪಿ.ಸಿ.ಎಲ್. ಮತ್ತು ಬಿ.ಹೆಚ್.ಇ.ಎಲ್. ನಡುವಿನ ಒಪ್ಪಂದವನ್ನು ದಿನಾಂಕ 19.03.2016 ರಂದು ನಮೂದಿಸಲಾಯಿತು.

8	ಎಲ್‌ಓಎ ದಿನಾಂಕ	03.11.2015
9	ಇಪಿಸಿ ವೆಚ್ಚ	ರೂ.1202+17.13 ಕೋಟಿಗಳು (ಸರಬರಾಜು ರೂ.882+11.07 ಕೋಟಿಗಳು, ಸೇವೆಗಳು ರೂ.320+6.06 ಕೋಟಿಗಳು)
10	ಘಟಕದ ವೇಳಾಪಟ್ಟಿ	ಎಲ್‌ಓಎ ನಿಂದ 30 ತಿಂಗಳು (ಮೇ 2018)

- ಹಂಚಿಕೆ: ಸರ್ಕಾರದ ಆದೇಶ ಸಂಖ್ಯೆ ಇಎನ್ 28 ಪಿಪಿಸಿ 2014 ದಿನಾಂಕ 28.07.2014
- ಡಿಸಿಡಬ್ಲ್ಯೂ ಆಧಾರದ ಅಡಿಯಲ್ಲಿ ಕೆಪಿಟಿಸಿಎಲ್ ನೊಂದಿಗೆ ವೈಸಿಸಿಪಿಪಿ ಗೆ ವಿದ್ಯುತ್ ಸ್ಥಳಾಂತರಿಸುವ ವ್ಯವಸ್ಥೆಯನ್ನು ಕಾರ್ಯಗತಗೊಳಿಸಲು ರೂ.2045.9 ಲಕ್ಷ ಮೊತ್ತದ ಒಡಬಂಡಿಕೆ.

ಯಲಹಂಕ ಕಂಬೈನ್ಡ್ ಸೈಕಲ್ ಪವರ್ ಪ್ಲಾಂಟ್ ಕಾಮಗಾರಿಗಳ ಪ್ರಗತಿ:

- ಘಟಕದ ಶೇ.98ರಷ್ಟು ಎಂಜಿನಿಯರಿಂಗ್ ಕಾಮಗಾರಿಗಳು ಅಂತಿಮಗೊಂಡಿವೆ.
- ಶೇ.100 ರಷ್ಟು ಘಟಕಕ್ಕೆ ಬೇಕಾದ ಸಾಮಗ್ರಿ ಸರಬರಾಜು ಮುಕ್ತಾಯಗೊಳಿಸಿದೆ.
- ಎರೆಕ್ಷನ್ ಕೆಲಸಗಳು ಪ್ರಗತಿಯಲ್ಲಿದೆ (ಸಿವಿಲ್/ಮೆಕ್ಯಾನಿಕಲ್/ಎಲ್‌ಕ್ಟ್ರಿಕಲ್/ಇನ್ಸ್ಟ್ರುಮೆಂಟೆಷನ್)

ಶಾಸನಬದ್ಧ ಅನುಮೋದನೆಗಳು:

ಮೇಲ್ಕಂಡ ಯೋಜನೆಯನ್ನು ಸ್ಥಾಪಿಸಲು ಎಂ.ಓ.ಇ.ಎಫ್, ಭಾರತೀಯ ವಾಯು ನಿಲ್ದಾಣ ಪ್ರಾಧಿಕಾರ, ಕರ್ನಾಟಕ ರಾಜ್ಯ ನೈರ್ಮಲ್ಯ ನಿಯಂತ್ರಣ ಮಂಡಳಿ, ಕರ್ನಾಟಕ ಆರೋಗ್ಯ ಮತ್ತು ಕುಟುಂಬ ಕ್ಷೇಮಾಭಿವೃದ್ಧಿ ಇಲಾಖೆ, ಕರ್ನಾಟಕ ಮತ್ಸೋದ್ಯಮ ಇಲಾಖೆ, ಬೆಂಗಳೂರು ಮಹಾನಗರ ಪಾಲಿಕೆ, ಭಾರತೀಯ ಪ್ರಾಚೀನವಸ್ತು ಶಾಸ್ತ್ರ ಸಮೀಕ್ಷೆ ಇಲಾಖೆ, ಭಾರತೀಯ ರಕ್ಷಣಾ ಇಲಾಖೆ ಮತ್ತು ವಾಯು ಹಾರಾಟ ಕಲಿಕೆ ತರಬೇತಿ ಕೇಂದ್ರ, ಬೆಂಗಳೂರು ರವರಿಂದ ನಿರಾಪೇಕ್ಷಣಾ ಪತ್ರ ಪಡೆಯಲಾಗಿದೆ.

ಭೂಮಿಯ ನೋಂದಣಿ:

98 ಎಕರೆ ಭೂಮಿಯನ್ನು ದಿನಾಂಕ 31.03.2016 ರಂದು ಯಲಹಂಕ ನೋಂದಣಾಧಿಕಾರಿಯವರ ಕಛೇರಿಯಲ್ಲಿ ನೋಂದಾಯಿಸಲಾಗಿದೆ. ದಿನಾಂಕ 01.12.2016 ರಂದು ಎಲ್ಲ ದಾಖಲೆಗಳನ್ನು ಕ್ರಮಬದ್ಧಗೊಳಿಸಲಾಗಿದೆ ಮತ್ತು ಸೇಲ್ ಡೀಡ್‌ನ್ನು ನೋಂದಣಿಸಲಾಗಿದೆ.

ನೀರು ಸರಬರಾಜು:

ಪೈಪ್ ಲೈನ್ ಕಾಮಗಾರಿ 4.2ಕಿ.ಮೀ/4.5ಕಿ.ಮೀ ಪೂರ್ಣಗೊಂಡಿದೆ. ಆವರಣದೊಳಗೆ ಆರ್.ಡಬ್ಲ್ಯೂ ಕೊಳದ ಪೈಪ್ ಲೈನ್ ಹಾಕುವ ಕೆಲಸವು ಪ್ರಗತಿಯಲ್ಲಿದೆ. ಬಿ.ಡಬ್ಲ್ಯೂ.ಎಸ್.ಎಸ್.ಬಿಗೆ ನಮೂದಿಸಿದ ರೂ.60 ಕೋಟಿಗಳಲ್ಲಿ ರೂ.48.35 ಕೋಟಿ ಬಿಡುಗಡೆ ಮಾಡಲಾಗಿದೆ. ಅಕ್ಟೋಬರ್-2018 ರೊಳಗೆ ನೀರು ಸರಬರಾಜು ಪ್ರಾರಂಭಿಸಲು ಸಾಧ್ಯತೆ ಹೊಂದಿದೆ.

ಅನಿಲ ಸರಬರಾಜು:

ಮೆ॥ ಗೇಲ್ ರವರು ಗ್ಯಾಸ್ ಪೈಪ್ ಲೈನ್ ನಿರ್ಮಾಣ ಮತ್ತು ಪ್ಲಾಂಟ್ ಪ್ರದೇಶದೊಳಗೆ ಪರೀಕ್ಷೆ ಪೂರ್ಣಗೊಳಿಸಿದೆ ಎರಡು ಗ್ಯಾಸ್ ಸ್ಕಿಡ್ಸ್ ನಿರ್ಮಾಣವಾಗಿದೆ. ತಾತ್ಕಾಲಿಕ ನಿಯಂತ್ರಣ ಕೊಠಡಿ ಕೆಲಸ ಪೂರ್ಣಗೊಂಡಿದೆ. ನಿಯಂತ್ರಣ ಕೊಠಡಿ ಕಾಮಗಾರಿ ಕಾರ್ಯಗಳು ಪ್ರಗತಿಯಲ್ಲಿದೆ. ಅನಿಲ ಆರಂಭಿಕ ಸರಬರಾಜಿನ ಪೈಪ್ ಲೈನ್‌ನ್ನು ನಿಯಮಿತ ಪೈಪ್ ಲೈನ್‌ಗೆ ಅಂತರ್‌ಸಂಪರ್ಕ ಕಲ್ಪಿಸುವ ಕಾರ್ಯದ ನಿರ್ಮಾಣ ಹಾಗೂ ಪರೀಕ್ಷೆಯು ಪೂರ್ಣಗೊಂಡಿದೆ ಮತ್ತು ಮೆ॥ ಗೇಲ್ ಮೀಟರಿಂಗ್ ಸ್ಟೇಷನ್ ವರೆಗೆ ನೈಟ್ರೋಜನ್ ಅನಿಲವನ್ನು ತುಂಬಿಸಲಾಗಿರುತ್ತದೆ. ನಗರದ ಆವರಣದಲ್ಲಿ ನಿಯಮಿತವಾದ ಅನಿಲ ಕೊಳವೆಗಳ ಕಾರ್ಯ ಪ್ರಗತಿಯಲ್ಲಿದೆ. **ಆರ್ಥಿಕ ಪ್ರಗತಿ:**

ವಾರ್ಷಿಕ	ಸರಬರಾಜು	ಸೇವೆಗಳು	ಒಟ್ಟು ಕೋಟಿರೂ
2015-16	88.2	32	120.2
2016-17	68.4	28.1	96.5
2017-18	618.6	139.5	758.1
ಒಟ್ಟು	775.2	199.6	974.7

7. ಕೆಪಿಸಿಎಲ್ ನ ಜಲವಿದ್ಯುತ್ ಯೋಜನೆಗಳ ನವೀಕರಣಗೊಳಿಸುವಿಕೆ

ಕರ್ನಾಟಕ ವಿದ್ಯುತ್ ನಿಗಮ ನಿಯಮಿತದ ಹೆಚ್ಚಿನ ಜಲವಿದ್ಯುತ್ ಯೋಜನೆಗಳು 30 ವರ್ಷಗಳ ಅವಧಿಯನ್ನು ಪೂರ್ತಿಗೊಳಿಸಿದೆ ಹಾಗೂ ಕೆಲವು ಯೋಜನೆಗಳು 50 ವರ್ಷಗಳಿಗಿಂತಲೂ ಹೆಚ್ಚಿನ ಅವಧಿಯನ್ನು ಪೂರ್ತಿಗೊಳಿಸಿವೆ. ಮಾನ್ಯ CEA ಯ ಪ್ರಕಾರ ಜಲವಿದ್ಯುತ್ ಘಟಕಗಳ ಬಾಳಿಕೆ 35 ವರ್ಷಗಳು ಹಾಗಾಗಿ ಈ ಯೋಜನೆಗಳ ಬಾಳಿಕೆಯನ್ನು ಹೆಚ್ಚಿಸಲು ನಿಗಮವು R&D ಕಾರ್ಯಗಳನ್ನು ಕೈಗೊಂಡಿದೆ. ಅಂದರೆ ಸದರಿ ಅಸ್ತಿತ್ವದಲ್ಲಿರುವ ಉತ್ಪಾದನಾ ಘಟಕಗಳ ನವೀಕರಣ ಮತ್ತು ಆಧುನೀಕರಣ, ಯೋಜನೆಗಳ ಕಾರ್ಯಾಚರಣೆ ಮತ್ತು ನಿರ್ವಹಣೆಯಲ್ಲಿ ಹೆಚ್ಚಿನ ದಕ್ಷತೆಗಾಗಿ ಹೊಸ ತಂತ್ರಜ್ಞಾನವನ್ನು ಅಳವಡಿಸಿಕೊಳ್ಳುವುದು. ಕರ್ನಾಟಕ ರಾಜ್ಯದ ಜಲಸಂಪನ್ಮೂಲಗಳ ಆಪ್ಟಿಮೈಜೇಷನ್ ಅಧ್ಯಯನಕ್ಕಾಗಿ IIT ರೂರ್ಕಿರವರಿಗೆ ಆದೇಶವನ್ನು ನೀಡಲಾಗಿದೆ. ಅಸ್ತಿತ್ವದಲ್ಲಿರುವ ಯೋಜನೆಗಳ ನವೀಕರಣ ಮತ್ತು ಆಧುನೀಕರಣ ಕಾರ್ಯಗಳ ಕರಡು ವರದಿಯನ್ನು IIT ರೂರ್ಕಿರವರು ಸಲ್ಲಿಸಿರುತ್ತಾರೆ. ಈ ಆಧುನೀಕರಣದ ಕೆಲಸಗಳನ್ನು ಹಂತ ಹಂತವಾಗಿ ಈ ಕೆಳಗಿನ ವಿದ್ಯುದಾಗಾರಗಳಲ್ಲಿ

ನೆರವೇರಿಸಲಾಗುವುದು.

a. ನಾಗಝರಿ ವಿದ್ಯುದಾಗಾರದ ಘಟಕ-1,2 ಮತ್ತು 3ರ ನವೀಕರಣ ಮತ್ತು ಆಧುನೀಕರಣ

ಐ.ಐ.ಟಿ, ರೂರ್ಕಿಯ ಸಹಯೋಗದೊಂದಿಗೆ ತಯಾರಿಸಿದ ಸುಮಾರು 222.79 ಕೋಟಿ ರೂಪಾಯಿಗಳ ನಾಗಝರಿ ವಿದ್ಯುದಾಗಾರದ ನವೀಕರಣ ಮತ್ತು ಅಧುನೀಕರಣದ ವಿವರವಾದ ಯೋಜನಾ ವರದಿಯನ್ನು ದಿನಾಂಕ 03.01.2018ರಂದು ನಡೆದ ನಿಗಮದ ಮಂಡಳಿಯ ಸಭೆಯಲ್ಲಿ ಅನುಮೋದನೆ ನೀಡಲಾಯಿತು. ವಿವರವಾದ ಯೋಜನಾ ವರದಿಯಲ್ಲಿ ಪ್ರಸ್ತಾಪಿಸಲಾಗಿರುವ ಕಾರ್ಯಗಳನ್ನು ಕೈಗೆತ್ತಿಕೊಳ್ಳಲು ಮಾನ್ಯ ಕೆ.ಇ.ಆರ್.ಸಿ ಮತ್ತು ಎಲ್ಲಾ ಎಸ್ಕಾಂಗಳ ಸಮ್ಮತಿ ದೊರಕಿದೆ.

ಘಟಕ 1, 2 ಮತ್ತು 3ರ ಟರ್ಬೈನ್ ಮತ್ತು ಜನರೇಟರ್‌ಗಳ ನವೀಕರಣ ಮತ್ತು ಆಧುನೀಕರಣ ಕೆಲಸಗಳ ಗುತ್ತಿಗೆಯನ್ನು ಮೆ॥ BHEL (OEM) ರವರಿಗೆ 99.25 ಕೋಟಿ ರೂಪಾಯಿಗಳಿಗೆ ನೀಡಲಾಗಿದೆ. ಮೆ॥ BHEL ರವರೊಂದಿಗೆ ಗುತ್ತಿಗೆ ಒಪ್ಪಂದವನ್ನು ಕಾರ್ಯಗತಗೊಳಿಸಲಾಗಿದೆ. ಒಪ್ಪಂದದ ಅನ್ವಯ ಮೆ॥ BHEL ಗೆ 10% ಮುಂಗಡ ಪಾವತಿಯನ್ನು ಬಿಡುಗಡೆ ಮಾಡಲಾಗಿದೆ.

b. ಸೂಪ ವಿದ್ಯುದಾಗರದ ನವೀಕರಣ ಮತ್ತು ಆಧುನೀರಣ

ಐಐಟಿ, ರೂರ್ಕಿ ಯವರ ಸಹಯೋಗದೊಂದಿಗೆ ತಯಾರಿಸಲಾದ 47.91 ಕೋಟಿ ರೂಪಾಯಿ ವೆಚ್ಚದ ಸೂಪ ವಿದ್ಯುದಾಗಾರದ ನವೀಕರಣ ಮತ್ತು ಆಧುನೀಕರಣದ ಕೆಲಸಗಳ ವಿವರವಾದ ಯೋಜನಾ ವರದಿಯನ್ನು ದಿನಾಂಕ 03.01.2018ರಂದು ನಡೆದ ನಿಗಮದ ಮಂಡಳಿಯ ಸಭೆಯಲ್ಲಿ ಅನುಮೋದಿಸಲಾಗಿದೆ.

ವಿವರವಾದ ಯೋಜನಾ ವರದಿಯಲ್ಲಿ ಪ್ರಸ್ತಾವನೆ ಮಾಡಿರುವಂತೆ ಕೆಲಸವನ್ನು ಕೈಗೆತ್ತಿಕೊಳ್ಳಲು ಅನುಮೋದನೆಗಾಗಿ ಮಾನ್ಯ ಕೆ.ಇ.ಆರ್.ಸಿ ಮತ್ತು ಎಲ್ಲಾ ಎಸ್ಕಾಂಗಳಿಗೆ ಕಳುಹಿಸಲಾಗಿದೆ.

c. ಕದ್ರಾ ಮತ್ತು ಕೊಡಸಳ್ಳಿ ವಿದ್ಯುದಾಗಾರಗಳ ನವೀಕರಣ ಮತ್ತು ಆಧುನೀಕರಣ

ಜಲಚಕ್ರ ಮತ್ತು ಜನರೇಟರ್‌ಗಳ ಆಧುನೀಕರಣ ಕಾರ್ಯಗಳನ್ನು ರೂಪಿಸಲಾಗಿದೆ. ಇತ್ತೀಚಿನ ವಿನ್ಯಾಸದ Excitation systemನ್ನು ಅಳವಡಿಸಲಾಗುವುದು. ಹಾಗೂ DVR ನ್ನು ಸಹ ಬದಲಿಸಲಾಗುವುದು. ಹೊಸ 220 ಕೆ.ವಿ/11 ಕೆ.ವಿ Terminal Bay 220 ಕೆ.ವಿ.ಸ್ವಿಚ್‌ಯಾರ್ಡ್‌ಯನ್ನು ODY ಯಲ್ಲಿ ನಿರ್ಮಿಸಿ ಕೊಡಸಳ್ಳಿ ವಿದ್ಯುದಾಗಾರಗಳಿಗೆ ಬದಲಿ Auxiliary supply ಒದಗಿಸಲಾಗುವುದು.

ಐಐಟಿ, ರೂರ್ಕಿಯ ಸಹಯೋಗದೊಂದಿಗೆ ತಯಾರಿಸಲಾದ 50.60 ಕೋಟಿ ರೂಪಾಯಿ ವೆಚ್ಚದ ನವೀಕರಣ ಮತ್ತು ಆಧುನೀಕರಣ ಕೆಲಸಗಳ ಕೊಡಸಳ್ಳಿ ವಿದ್ಯುದಾಗಾರದ ವಿವರವಾದ ಯೋಜನಾ ವರದಿಯನ್ನು ದಿನಾಂಕ 24.06.2017 ರಂದು ನಡೆದ ನಿಗಮದ ಮಂಡಳಿಯ ಸಭೆಯಲ್ಲಿ ಅನುಮೋದಿಸಲಾಗಿದೆ. ಮಾನ್ಯ ಕೆ.ಇ.ಆರ್.ಸಿ, ಚೆಸ್ಕಾಂ, ಬೆಸ್ಕಾಂ ಮತ್ತು ಜೆಸ್ಕಾಂ ವಿವರವಾದ ಯೋಜನಾ ವರದಿಗೆ ಒಪ್ಪಿಗೆ ನೀಡಿದ್ದು ಮೆಸ್ಕಾಂ ಮತ್ತು ಹೆಸ್ಕಾಂಗಳ ಒಪ್ಪಿಗೆಯ ನೀರಿಕ್ಷೆಯಲ್ಲಿದ್ದೇವೆ. ಮೆ॥ BHEL ಯೋಜನಾ ಪ್ರದೇಶಕ್ಕೆ ಭೇಟಿ ನೀಡಿದೆ ಹಾಗೂ ನವೀಕರಣ ಮತ್ತು ಆಧುನೀರಣ ಕೆಲಸಗಳಿಗೆ ತಾಂತ್ರಿಕ-ವಾಣಿಜ್ಯ ಪ್ರಸ್ತಾಪವನ್ನು ಸಲ್ಲಿಸಿದೆ. ಮೆ॥ BHEL, ಸಲ್ಲಿಸಿರುವ ತಾಂತ್ರಿಕ ವಾಣಿಜ್ಯ ಪ್ರಸ್ತಾವನೆಯು ಪರಿಶೀಲನೆ ಹಂತದಲ್ಲಿದೆ.

ಐಐಟಿ, ರೂರ್ಕಿಯ ಸಹಯೋಗದೊಂದಿಗೆ ತಯಾರಿಸಲಾದ 44.47 ಕೋಟಿ ರೂಪಾಯಿ ವೆಚ್ಚದ ನವೀಕರಣ ಮತ್ತು ಆಧುನೀಕರಣ ಕೆಲಸಗಳ ವಿವರವಾದ ಯೋಜನಾ ವರದಿಯನ್ನು ದಿನಾಂಕ 24.06.2017 ರಂದು ನಡೆದ ನಿಗಮದ ಮಂಡಳಿಯ ಸಭೆಯಲ್ಲಿ ಅನುಮೋದಿಸಲಾಗಿದೆ. ಮಾನ್ಯ ಕೆ.ಇ.ಆರ್.ಸಿ, ಚೆಸ್ಕಾಂ, ಬೆಸ್ಕಾಂ ಮತ್ತು ಜೆಸ್ಕಾಂ ವಿವರವಾದ ಯೋಜನಾ ವರದಿಗೆ ಒಪ್ಪಿಗೆ ನೀಡಿದ್ದು ಮೆಸ್ಕಾಂ ಮತ್ತು ಹೆಸ್ಕಾಂಗಳ ಒಪ್ಪಿಗೆಯ ನೀರಿಕ್ಷೆಯಲ್ಲಿದ್ದೇವೆ. ಮೆ॥ BHEL ಯೋಜನಾ ಪ್ರದೇಶಕ್ಕೆ ಭೇಟಿ ನೀಡಿದೆ ಹಾಗೂ ನವೀಕರಣ ಮತ್ತು ಆಧುನೀರಣ ಕೆಲಸಗಳಿಗೆ ತಾಂತ್ರಿಕ-ವಾಣಿಜ್ಯ ಪ್ರಸ್ತಾಪವನ್ನು ಸಲ್ಲಿಸಿದೆ. ಮೆ॥ BHEL, ಸಲ್ಲಿಸಿರುವ ತಾಂತ್ರಿಕ ವಾಣಿಜ್ಯ ಪ್ರಸ್ತಾವನೆಯ ಪರಿಶೀಲನೆ ಮಾಡಲಾಗಿದೆ ಮತ್ತು ಹಣಕಾಸು ಪ್ರಸ್ತಾವನೆ ಸಲ್ಲಿಸಲು ಮೆ॥ BHELಗೆ ಕೋರಲಾಗಿದೆ.

d. ಅಂಗನಮಕ್ಕಿ ವಿದ್ಯುದಾಗಾರದ ನವೀಕರಣ ಮತ್ತು ಆಧುನೀಕರಣ

ಐಐಟಿ, ರೂರ್ಕಿಯ ಸಹಯೋಗದೊಂದಿಗೆ ತಯಾರಿಸಲಾದ 56.20 ಕೋಟಿ ರೂಪಾಯಿ ವೆಚ್ಚದ ಅಂಗನಮಕ್ಕಿ ವಿದ್ಯುದಾಗಾರದ ನವೀಕರಣ ಮತ್ತು ಆಧುನೀಕರಣ ಕೆಲಸಗಳ ವಿವರವಾದ ಯೋಜನಾ ವರದಿಯನ್ನು ದಿನಾಂಕ 24.06.2017 ರಂದು ನಡೆದ ನಿಗಮದ ಮಂಡಳಿಯ ಸಭೆಯಲ್ಲಿ ಅನುಮೋದಿಸಲಾಗಿದೆ. ಮಾನ್ಯ ಕೆ.ಇ.ಆರ್.ಸಿ, ಚೆಸ್ಕಾಂ, ಬೆಸ್ಕಾಂ ಮತ್ತು ಜೆಸ್ಕಾಂ ವಿವರವಾದ ಯೋಜನಾ ವರದಿಗೆ ಒಪ್ಪಿಗೆ ನೀಡಿದ್ದು ಮೆಸ್ಕಾಂ ಮತ್ತು ಹೆಸ್ಕಾಂಗಳ ಒಪ್ಪಿಗೆಯ ನೀರಿಕ್ಷೆಯಲ್ಲಿದ್ದೇವೆ. ಮೆ॥ GE hydro power ಮತ್ತು ಮೆ॥ Voith hydro ಯೋಜನಾ ಪ್ರದೇಶಕ್ಕೆ ಭೇಟಿ ನೀಡಿದೆ ಹಾಗೂ ನವೀಕರಣ ಮತ್ತು ಆಧುನೀರಣ ಕೆಲಸಗಳಿಗೆ ತಾಂತ್ರಿಕ-ವಾಣಿಜ್ಯ ಪ್ರಸ್ತಾಪವನ್ನು ಸಲ್ಲಿಸಿದೆ. ಸಲ್ಲಿಸಿರುವ ತಾಂತ್ರಿಕ ವಾಣಿಜ್ಯ ಪ್ರಸ್ತಾವನೆಯು ಪರಿಶೀಲನೆ ಹಂತದಲ್ಲಿದೆ.

e. ಮಹಾತ್ಮ ಗಾಂಧಿ ವಿದ್ಯುದಾಗಾರದ ನವೀಕರಣ ಮತ್ತು ಆಧುನೀಕರಣ:-

97 ಕೋಟಿ ರೂಪಾಯಿ ವೆಚ್ಚದ ನವೀಕರಣ ಮತ್ತು ಆಧುನೀಕರಣ ಕೆಲಸಗಳ ವಿವರವಾದ ಯೋಜನಾ ವರದಿಯನ್ನು ಐಐಟಿ, ರೂರ್ಕಿಯ ಸಹಯೋಗದೊಂದಿಗೆ ತಯಾರಿಸಲಾಗಿದೆ. ಸ್ವಿಚ್ ಯಾರ್ಡ್‌ನ ಬಲವರ್ಧನೆ, ಟರ್ಬೈನ್ ಮತ್ತು ಇತರೆ ಸಂಬಂಧಿಸಿದ ಉಪಕರಣಗಳ ನವೀಕರಣ

ಮತ್ತು ಆಧುನೀಕರಣ ಕೆಲಸಗಳನ್ನು ಯೋಜಿಸಲಾಗಿದೆ. ತಾಂತ್ರಿಕ ಸಲಹಾ ಸಮಿತಿ/ತಾಂತ್ರಿಕ ಸಮಿತಿಯ ಸಭೆಯು ವಿವರವಾದ ಯೋಜನಾ ವರದಿಗೆ ಅನುಮೋದನೆ ನೀಡಿದೆ ಹಾಗೂ ವಿಷಯವನ್ನು ಮುಂಬರುವ ಮಂಡಳಿಯ ಸಭೆಯಲ್ಲಿ ಪ್ರಸ್ತಾವನೆ ಮಾಡಬೇಕಿದೆ.

f. ಶರಾವತಿ ವಿದ್ಯುದಾಗಾರದ ನವೀಕರಣ ಮತ್ತು ಆಧುನೀಕರಣ

ಐಐಟಿ, ರೂರ್ಕಿ ಯವರ ಸಹಯೋಗದೊಂದಿಗೆ ತಯಾರಿಸಲಾದ 196.56 ಕೋಟಿ ರೂಪಾಯಿ ವೆಚ್ಚದ ನವೀಕರಣ ಮತ್ತು ಆಧುನೀಕರಣದ ಕೆಲಸಗಳ ವಿವರವಾದ ಯೋಜನಾ ವರದಿಯನ್ನು ದಿನಾಂಕ 03.01.2018ರಂದು ನಡೆದ ನಿಗಮದ ಮಂಡಳಿಯ ಸಭೆಯಲ್ಲಿ ಅನುಮೋದಿಸಲಾಗಿದೆ.

ವಿವರವಾದ ಯೋಜನಾ ವರದಿಯ ಪ್ರಕಾರ ಪ್ರಸ್ತಾವನೆ ಮಾಡಿರುವಂತೆ ಕೆಲಸವನ್ನು ಕೈಗೆತ್ತಿಕೊಳ್ಳಲು ಅನುಮೋದನೆಗಾಗಿ ಮಾನ್ಯ ಕೆ.ಇ.ಆರ್.ಸಿ ಮತ್ತು ಎಲ್ಲಾ ಎಸ್ಕಾಂಗಳಿಗೆ ಕಳುಹಿಸಲಾಗಿದೆ. ಮುಂದಿನ 5 ವರ್ಷಗಳಲ್ಲಿ ಕೈಗೆತ್ತಿಕೊಳ್ಳಬೇಕಿರುವ ನವೀಕರಣ ಮತ್ತು ಆಧುನೀಕರಣದ ವಿವರವಾದ ಪ್ರಸ್ತಾವನೆಯನ್ನು ಐಐಟಿ, ರೂರ್ಕಿಯ ಸಹಯೋಗದೊಂದಿಗೆ ತಯಾರಿಸಲಾಗಿತ್ತು. ತಂಡದ ಭೇಟಿಯ ನಂತರ ದಿನಾಂಕ 18.02.2016 ರಂದು ಶರಾವತಿ ವಿದ್ಯುದಾಗಾರದಲ್ಲಿ ಅಗ್ನಿ ಅವಘಡ ಸಂಭವಿಸಿತು. ಪುನಃ ಶ್ವೇತನದ ಸಮಯದಲ್ಲಿ ತಂಡವು ಮುಂಚೆಯೇ ಗುರುತಿಸಿದ್ದ ಕೆಲವು ಕೆಲಸವನ್ನು ಐಐಟಿ, ರೂರ್ಕಿಯ ಸಲಹೆಯಂತೆ ಪೂರ್ಣಗೊಳಿಸಲಾಗಿದೆ. ಪುನಃಶ್ವೇತನದ ವೆಚ್ಚವು ಸಮಾರು 54,10,22,812/- ರೂ ಗಳಾಗಿದೆ. (ಕಾಮಗಾರಿ+E/M)

g. ಗೇರುಸೊಪ್ಪ ವಿದ್ಯುದಾಗಾರದ ನವೀಕರಣ ಮತ್ತು ಆಧುನೀಕರಣ

ಐಐಟಿ, ರೂರ್ಕಿಯ ಸಹಯೋಗದೊಂದಿಗೆ ತಯಾರಿಸಲಾದ 59.66 ಕೋಟಿ ರೂಪಾಯಿ ವೆಚ್ಚದ ನವೀಕರಣ ಮತ್ತು ಆಧುನೀಕರಣ ಕೆಲಸಗಳ ವಿವರವಾದ ಯೋಜನಾ ವರದಿಯನ್ನು ದಿನಾಂಕ 24.06.2017 ರಂದು ನಡೆದ ನಿಗಮದ ಮಂಡಳಿಯ ಸಭೆಯಯಲ್ಲಿ ಅನುಮೋದಿಸಲಾಗಿದೆ. ಮಾನ್ಯ ಕೆ.ಇ.ಆರ್.ಸಿ, ಚೆಸ್ಕಾಂ, ಬೆಸ್ಕಾಂ ಮತ್ತು ಜೆಸ್ಕಾಂ ವಿವರವಾದ ಯೋಜನಾ ವರದಿಗೆ ಒಪ್ಪಿಗೆ ನೀಡಿದ್ದು ಮೆಸ್ಕಾಂ ಮತ್ತು ಹೆಸ್ಕಾಂಗಳ ಒಪ್ಪಿಗೆಯ ನೀರಿಕ್ಷೆಯಲ್ಲಿದ್ದೇವೆ. ಮೆ॥ BHEL, ಯೋಜನಾ ಪ್ರದೇಶಕ್ಕೆ ಭೇಟಿ ನೀಡಿದ್ದು ನವೀಕರಣ ಮತ್ತು ಆಧುನೀರಣದ ಕೆಲಸಗಳಿಗೆ ತಾಂತ್ರಿಕ ವಾಣಿಜ್ಯ ಪ್ರಸ್ತಾಪವನ್ನು ಸಲ್ಲಿಸಬೇಕಿದೆ.

h. ಶಿವಸಮುದ್ರ ವಿದ್ಯುದಾಗಾರದ ನವೀಕರಣ ಮತ್ತು ಆಧುನೀಕರಣ

ಶಿವಸಮುದ್ರ ವಿದ್ಯುದಾಗಾರದ ನವೀಕರಣ ಮತ್ತು ಆಧುನೀಕರಣದ ವಿವರವಾದ ಯೋಜನಾ ವರದಿಯನ್ನು 146 ಕೋಟಿ ರೂಪಾಯಿಗಳಿಗೆ ತಯಾರಿಸಲಾಗಿದೆ. ವಿವರವಾದ ಯೋಜನಾ ವರದಿಯನ್ನು ತಾಂತ್ರಿಕ ಸಮಿತಿಯ ಸಭೆಯಲ್ಲಿ ಆನುಮೋದಿಸಲಾಗಿದ್ದು ಪ್ರಸ್ತಾಪವನ್ನು ಮುಂಬರುವ ಮಂಡಳಿಯ ಸಭೆಯಲ್ಲಿ ಸಲ್ಲಿಸಬೇಕಿದೆ.

i. 2x12 ಮೆ.ವ್ಯಾಟ್ ಭದ್ರಾ ಬಲ ದಂಡೆ ಯೋಜನೆ ಘಟಕಗಳ ನವೀಕರಣ ಮತ್ತು ಆಧುನೀಕರಣ

2x10 ಮೆ.ವ್ಯಾ ಸಾಮರ್ಥ್ಯದ ಭದ್ರಾ ಜಲವಿದ್ಯುತ್ ಯೋಜನೆಗಳ ನವೀಕರಣ ಮತ್ತು ಆಧುನೀಕರಿಸುವ ಯೋಜನೆಯನ್ನು ಕೈಗೆತ್ತಿಕೊಳ್ಳಲಾಗಿದೆ. ಎಲ್ಲಾ ಘಟಕಗಳ ಜನರೇಟರ್ ಭಾಗವನ್ನು ಹೊರತು ಪಡಿಸಿ ಉಳಿದ ಕಾಮಗಾರಿಗಳನ್ನು ನವೀಕರಣ ಮತ್ತು ಆಧುನೀಕರಿಸಲಾಗಿದೆ. ಘಟಕ-2ರ ನವೀಕರಣ ಮತ್ತು ಆಧುನೀಕರಣ ಕಾಮಗಾರಿಯು 2016-17 ನೇ ಸಾಲಿನಲ್ಲಿ ಪೂರ್ಣಗೊಂಡಿದೆ.

ಘಟಕ-1ರ ರೋಟಾರ್ ನವೀಕರಣಕ್ಕಾಗಿ ದಿನಾಂಕ 10.04.2017 ರಂದು ಹಿಂದೆ ಇದ್ದ ಗುತ್ತಿಗೆದಾರರಾದ ಮೆ॥ AndritZ Hydro Pvt.Ltd ಗೆ ಹೆಚ್ಚುವರಿ ಆದೇಶವನ್ನು ನೀಡಲಾಯಿತು. ಘಟಕ-1 ರ ರೋಟಾರ್ ಅನ್ನು ಪಿಟ್‌ನಿಂದ ಹೊರತೆಗೆಯಲಾಯಿತು. ರೋಟಾರ್ ಪೋಲ್‌ಗಳನ್ನು ಕಳಚುವ ಮುನ್ನ ರೋಟಾರ್‌ಗೆ ಸಂಪೂರ್ಣ ವಿದ್ಯುತ್ ಪರೀಕ್ಷೆಯನ್ನು ನಡೆಸಲಾಯಿತು. ಪೋಲ್ ಮತ್ತು ಪೋಲ್ ನಡುವಿನ ಸಂಪರ್ಕಗಳನ್ನು de-soldering/de-brazing ಮಾಡಿದ ನಂತರ ಜನರೇಟರ್ ರೋಟಾರ್ ಶ್ಯಾಫ್ಟ್ ಮತ್ತು ಪೋಲ್‌ಗಳನ್ನು ನವೀಕರಣಕ್ಕಾಗಿ ಗುತ್ತಿಗೆದಾರನ ಚೆನ್ನೈನ ಕಾರ್ಯಗಾರಕ್ಕೆ ಕಳುಹಿಸಲಾಯಿತು. ನವೀಕರಣ ಕೆಲಸದ ನಂತರ, ಜನರೇಟರ್ ರೋಟಾರ್ ಜೋಡಣೆ ಕೆಲಸ, ರೋಟಾರ್, ಪೋಲ್ ಮತ್ತು ಇತರ ಉಪಕರಣಗಳ ಸಂಪೂರ್ಣ ವಿದ್ಯುತ್ ಪರೀಕ್ಷೆ, ಜನರೇಟರ್‌ನ ಸ್ಟೇಟಾರ್‌ಗೆ ಸಂಬಂಧಿಸಿದಂತೆ ಜನರೇಟರ್ ರೋಟಾರ್ ಪೋಲ್‌ನ ಮ್ಯಾಗ್ನೆಟಿಕ್ ಸೆಂಟರ್ ಲೈನ್‌ನ ಹೊಂದಾಣಿಕೆ ಮಾಡಲಾಗಿದೆ.

ಘಟಕ-1 ರ ನಿರ್ಮಾಣವು ಪೂರ್ಣಗೊಂಡಿದ್ದು ಯಾಂತ್ರಿಕ ತಿರುಗುವಿಕೆಯನ್ನು ನಡೆಸಲಾಯಿತು. ತಿರುಗುವಿಕೆ ಸಂದರ್ಭದಲ್ಲಿ ಟರ್ಬೈನ್ ಜೋಡಣೆಯಲ್ಲಿ ಬೇರೆ ರೀತಿಯ ಶಬ್ದ ಗಮನಿಸಲಾಗಿದೆ. ಪರಿಶೀಲನೆಯ ನಂತರ ಟರ್ಬೈನ್ ಗೈಡ್ ಬೇರಿಂಗ್, ರೊಟೇಟಿಂಗ್ ಸಂಪ್ ಮತ್ತು ಫಿಕ್ಸ್‌ಡ್ ಸಂಪ್‌ಗಳನ್ನು ತೆರೆಯಾಲಾಗಿದೆ. ರೊಟೇಟಿಂಗ್ ಮತ್ತು ಫಿಕ್ಸ್‌ಡ್ ಸಂಪ್‌ಗಳ ಕೆಲವು ಭಾಗಗಳಲ್ಲಿ ಸವೆತ ಕಂಡುಬಂದಿದ್ದು ಅದನ್ನು ಸರಿಪಡಿಸಲಾಗಿದೆ. ಘಟಕ-1 ರ ಜೋಡಣೆ ಕೆಲಸ ದಿನಾಂಕ 07.02.2018 ರಂದು ಪೂರ್ಣಗೊಂಡಿದೆ.

ಮೆ॥ KNNL ನಿಂದ ದಿನಾಂಕ 23.03.2018 ರಂದು ಅಣೆಕಟ್ಟಿನಿಂದ ನೀರು ಹೊರಬಿಡಲಾಯಿತು. ಜನರೇಟರ್, ಟರ್ಬೈನ್ ಮತ್ತು ಸಹಾಯಕ ಉಪಕರಣಗಳ ಪೂರ್ವಭಾವಿ ಪರಿಶೀಲನೆ ಮಾಡಲಾಯಿತು. ಘಟಕದ ಯಾಂತ್ರಿಕ ತಿರುಗುವಿಕೆಯನ್ನು ದಿನಾಂಕ 28.03.2018 ರಂದು ಮಾಡಿ ಘಟಕವನ್ನು 250 rpm ಗಳ ರೇಟೆಡ್ ವೇಗಕ್ಕೆ ತರಲಾಯಿತು. ಬೇರಿಂಗ್ ಮತ್ತು ಇತರ ಸಹಾಯಕ ಉಪಕರಣಗಳ ಕಾರ್ಯ ನಿರ್ವಹಣೆಯ ಪರಿಶೀಲನೆಗೆ ಮುಂದುವರೆದಂತೆ ದಿನಾಂಕ 29.03.2018 ರಿಂದ ಮೆ॥ KNNL ನೀರು ನಿಲ್ಲಿಸಿದ್ದರಿಂದ ಹೆಚ್ಚಿನ ಪರೀಕ್ಷೆಗಳನ್ನು ಮತ್ತು ಘಟಕವನ್ನು ಗ್ರಿಡ್‌ಗೆ ಹೊಂದಿಸುವ ಕೆಲಸವನ್ನು ಪೂರ್ಣಗೊಳಿಸಲಾಗಿಲ್ಲ. ಮೆ॥ KNNL ನೀರನ್ನು ಬಿಟ್ಟ ತರುವಾಯದಲ್ಲಿ ಹೆಚ್ಚಿನ ಪರೀಕ್ಷೆಗಳನ್ನು ನಡೆಸಿ ಘಟಕವನ್ನು ಗ್ರಿಡ್‌ಗೆ ಹೊಂದಿಸಲಾಗುವುದು.

8. ಮೆ॥ ಟಿ.ಎಸ್.ಪಿ.ಎಲ್ ರವರಿಂದ 2x1.2 MW=2.4 MW ಮಲಪ್ರಭ ಕಿರು ಜಲ ವಿದ್ಯುದಾಗಾರದ ಸ್ವಾಧೀನ ಪಡಿಸುಕೊಳ್ಳುವಿಕೆ

- 2.4 ಮೆ.ವ್ಯಾಟ್‌ಗಳ ಮಲಪ್ರಭ ಕಿರು ಜಲ ವಿದ್ಯುದಾಗಾರವು (2X12 ಮೆ.ವ್ಯಾ) ಕರ್ನಾಟಕ ರಾಜ್ಯದ ಸೌದತ್ತಿ ಪಟ್ಟಣದಲ್ಲಿ 20,000 Sqm ವಿಸ್ತೀರ್ಣದಲ್ಲಿ ಸ್ಥಾಪನೆ ಮಾಡಲಾಗಿದ್ದು ಅದನ್ನು ಸರ್ವೆ ನಂ. 976,977 ಮತ್ತು 978ರ ಅಡಿಯಲ್ಲಿ 1994 ರಿಂದ 40 ವರ್ಷಗಳ ಕಾಲ ಕರ್ನಾಟಕ ಸರ್ಕಾರದಿಂದ ಮೆ॥ ಟಿ.ಎಸ್.ಪಿ.ಎಲ್‌ಗೆ ಗುತ್ತಿಗೆ ನೀಡಲಾಗಿತ್ತು.
- ಮೆ॥ ಟಿ.ಎಸ್.ಪಿ.ಎಲ್ ಇಂದ ಮಲಪ್ರಭ ಕಿರು ಜಲ ವಿದ್ಯುದಾಗಾರದ ಸ್ವಾಧೀನ ಪಡಿಸುಕೊಳ್ಳುವಿಕೆ ವಿಷಯವನ್ನು ದಿನಾಂಕ 04.05.2017 ರಂದು ನಡೆದ ಕ.ವಿ.ನಿ.ನಿ.ಯ 258ನೇ ಮಂಡಳಿಯ ಸಭೆಯಲ್ಲಿ ಚರ್ಚಿಸಲಾಯಿತು.
- ಮಲಪ್ರಭ ಕಿರು ಜಲ ವಿದ್ಯುದಾಗಾರವನ್ನು ಮೆ॥ ಟಿ.ಎಸ್.ಪಿ.ಎಲ್ ಇಂದ ಅದರ ಎಲ್ಲಾ ಸ್ವತ್ತುಗಳ ಸಹಿತ ಇಂದಿನ 147.21 ಲಕ್ಷ ರೂಪಾಯಿಗಳ ಮುಖ ಬೆಲೆಗೆ ಸ್ವಾಧೀನ ಪಡಿಸಿಕೊಳ್ಳಲು ಒಪ್ಪಿಗೆ ಅನ್ನು ದಿನಾಂಕ 09.06.2017 ರಂದು ಸಹಿ ಮಾಡಲಾಯಿತು.
- ಮಲಪ್ರಭ ಕಿರು ಜಲ ವಿದ್ಯುದಾಗಾರವನ್ನು ಕ.ವಿ.ನಿ.ನಿಯು ಸ್ವಾಧೀನ ಪಡಿಸಿಕೊಂಡಿದೆ ಮತ್ತು ವಿದ್ಯುದಾಗಾರದ ಚಾಲನೆ ಮತ್ತು ನಿರ್ವಹಣೆಯನ್ನು ಮು.ಅ(ಚಾ ಮತ್ತು ನಿ) ಕಾಳಿ ಇವರಿಗೆ ವಹಿಸಲಾಗಿದೆ.
- ದಿನಾಂಕ 15.03.2018 ರಂದು ಕಾರ್ಯನಿರ್ವಹಕ ಅಭಿಯಂತರರು, MRBCC, ಬ್ಯಾಹಟ್ಟಿ ಇವರಿಂದ ಪ್ರತಿನಿಧಿಸಲ್ಪಟ್ಟ ಮೆ॥ ಕೆ.ಎನ್. ಎನ್.ಎಲ್, ಅಧ್ಯಕ್ಷರು ಮತ್ತು ವ್ಯವಸ್ಥಾಪಕ ನಿರ್ದೇಶಕರಿಂದ ಪ್ರತಿನಿಧಿಸಲ್ಪಟ್ಟ ಮೆ॥ ಟಿ.ಎಸ್.ಪಿ.ಎಲ್ ಮತ್ತು ಮುಖ್ಯ ಅಭಿಯಂತರರು (ಚಾ ಮತ್ತು ನಿ)ಕಾಳಿ ಇವರಿಂದ ಪ್ರತಿನಿಧಿಸಲ್ಪಟ್ಟ ಮೆ॥ ಕ.ವಿ.ನಿ.ನಿ.ಯ ನಡುವೆ ಬೆಳಗಾವಿ ಜಿಲ್ಲೆಯ ಸೌದತ್ತಿಯಲ್ಲಿ ತ್ರಿಪಕ್ಷೀಯ ಒಪ್ಪಂದವನ್ನು ಕಾರ್ಯಗತಗೊಳಿಸಲಾಯಿತು.

9. ಮಳವಳ್ಳಿಯಲ್ಲಿ 10 ಮೆವಾ ಸೌರ ವಿದ್ಯುತ್ ಘಟಕ

10 ಮೆ.ವ್ಯಾ. ಸೋಲಾರ್ ಪಿ.ವಿ ಯೋಜನೆ.- ಶಿವನಸಮುದ್ರ- ಬೆಳಕವಾಡಿ ಘಟಕವನ್ನು ದಿನಾಂಕ 22.06.2015 ರಂದು ವಿದ್ಯುತ್ ಜಾಲಕ್ಕೆ ಸೇರಿಸಲಾಗಿದೆ. ಈ ಸೌರವಿದ್ಯುತ್ ಯೋಜನೆಯ ಚಾಲನೆ ಮತ್ತು ನಿರ್ವಹಣೆಯನ್ನು ಬಿ.ಎಚ್.ಇ.ಎಲ್ ಗೆ ವಹಿಸಲಾಗಿದೆ. ಈ ಸೌರವಿದ್ಯುತ್ ಯೋಜನೆಯಿಂದ 2017-18 ರಲ್ಲಿ ಉತ್ಪಾದನೆಯಾದ ವಿದ್ಯುತ್‌ಶಕ್ತಿ 15.8346 ಮಿ.ಯುನಿಟ್‌ಗಳು ಮತ್ತು ಸಾಮರ್ಥ್ಯ ಬಳಕೆಯ ಅಂಶ 18.07% ಆಗಿರುತ್ತದೆ.

10. ಯೋಜನಾ ಸಾಮರ್ಥ್ಯದ ಹೆಚ್ಚಳ

- ವೈ.ಟಿ.ಪಿಎಸ್ ಘಟಕ-2 ರ ವಾಣಿಜ್ಯ ಉತ್ಪಾದನಾ ಆರಂಭವನ್ನು ದಿನಾಂಕ 06.04.2017 ರಿಂದ ಘೋಷಿಸಲಾಗಿದೆ.
- ಮುನಿರಾಬಾದ್ ವಿದ್ಯುದಾಗಾರದ 1x10 ಮೆ.ವ್ಯಾನ ಹೆಚ್ಚುವರಿ ಘಟಕದ ವಾಣಿಜ್ಯ ಉತ್ಪಾದನಾ ಆರಂಭವನ್ನು ದಿನಾಂಕ 28.11.2017 ರಿಂದ ಘೋಷಿಸಲಾಗಿದೆ.
- 2x12 ಮೆ.ವ್ಯಾ (2.4 ಮೆ.ವ್ಯಾ)ನ ಮಲಪ್ರಭಾ ಕಿರು ಜಲ ವಿದ್ಯುದಾಗಾರವನ್ನು ಮೆ॥ ಟಿ.ಎಸ್.ಪಿ.ಎಲ್ ಇಂದ ದಿನಾಂಕ 15.06.2017 ರಂದು ಸ್ವಾಧೀನ ಪಡಿಸಿಕೊಳ್ಳಲಾಗಿದೆ.
- ಹಾವೇರಿ ಜಿಲ್ಲೆ ಚಂದಾಪುರದಲ್ಲಿ 10 ಮೆ.ವ್ಯಾ. ಸೌರ ಸ್ಥಾವರವನ್ನು ದಿನಾಂಕ 26.10.2017 ರಿಂದ ಕಾರ್ಯಾರಂಭ ಮಾಡಲಾಗಿದೆ.

ಕ.ವಿ.ನಿ.ನಿಯ ಇಂದಿನ ಒಟ್ಟು ಅನುಸ್ಥಾಪಿತ ಸಾಮರ್ಥ್ಯ 8,738.31 ಮೆ.ವ್ಯಾಟ್‌ಗಳಾಗಿದೆ.

IX. ಹೊಸದಾದ ಹಾಗೂ ಪ್ರಸ್ತಾವಿತ ವಿದ್ಯುತ್ ಯೋಜನೆಗಳು

1. ಯದ್ಲಾಪುರ ಶಾಖೋತ್ಪನ್ನ ವಿದ್ಯುತ್ ಕೇಂದ್ರ

ಯೋಜನೆಯ ಅಂದಾಜು ವೆಚ್ಚ ರೂ.4960 ಕೋಟಿ ಮತ್ತು ಈ ಯೋಜನೆಯ ವಾರ್ಷಿಕ ಉತ್ಪಾದನಾ ಸಾಮರ್ಥ್ಯ 5,957MU. ಆದಾಗ್ಯೂ, MoEF ಕ್ಲಿಯರೆನ್ಸ್ ಇನ್ನೂ ಪಡೆದಿಲ್ಲ ಮತ್ತು ಈ ಯೋಜನೆಗೆ ಹಂಚಿಕೆಯಾಗಿದ್ದ ಕಲ್ಲಿದ್ದಲು ನಿಕ್ಷೇಪವನ್ನು ಹಿಂತೆಗೆದುಕೊಳ್ಳಲಾಗಿದೆ.

2. 2 x 800 ಮೆ.ವ್ಯಾ. ಶಾಖೋತ್ಪನ್ನ ವಿದ್ಯುತ್ ಕೇಂದ್ರ ಗೊದ್ನ ಜಿಲ್ಲೆ, ಚತ್ತೀಸ್‌ಘಡ ರಾಜ್ಯ

ಈ ಘಟಕವನ್ನು ರೂ.11,333 ಕೋಟಿ ವೆಚ್ಚದಲ್ಲಿ ವಾರ್ಷಿಕ 11,914 ದಲಯೂ ವಿದ್ಯುತ್ ಉತ್ಪಾದಿಸುವ ಉದ್ದೇಶದಿಂದ ಪ್ರಸ್ತಾಪಿಸಿದೆ. ಎಲ್‌ಒಎ ನೀಡಿದ ದಿನಾಂಕದಿಂದ 45 ತಿಂಗಳುಗಳ ಒಳಗಾಗಿ ಈ ಘಟಕ ನಿರ್ಮಾಣ ಕಾರ್ಯವನ್ನು ಮುಗಿಸುವ ನಿರೀಕ್ಷೆ ಇದೆ. ಛತ್ತೀಸ್‌ಗಡ ಸರ್ಕಾರ ಮತ್ತು ಛತ್ತೀಸ್‌ಗಡ ಪವರ್ ಹೋಲ್ಡಿಂಗ್ ಕಂಪನಿ ಇವರೊಂದಿಗೆ ದಿನಾಂಕ 29.06.2010 ರಂದು ಅವಶ್ಯಕ ಒಪ್ಪಂದಗಳನ್ನು ಮಾಡಿಕೊಳ್ಳಲಾಗಿದೆ. ವಿವರವಾದ ಯೋಜನಾ ವರದಿಯನ್ನು ತಯಾರಿಸಲಾಗಿದ್ದು ಏರ್ ಪೋರ್ಟ್ ಪ್ರಾಧಿಕಾರ ಮತ್ತು ರಕ್ಷಣಾ ಮಂತ್ರಾಲಯದಿಂದ ನಿರಾಕ್ಷೇಪಣಾ ಪ್ರಮಾಣ ಪತ್ರಗಳನ್ನು ಪಡೆಯಲಾಗಿದೆ. ಅರಣ್ಯ ಮತ್ತು ಪರಿಸರ ಮಂತ್ರಾಲಯದಿಂದ ಕ್ಲಿಯರೆನ್ಸ್ ನಿರೀಕ್ಷಿಸಲಾಗಿದೆ. ಈ ಘಟಕಕ್ಕಾಗಿ 1,260 ಎಕರೆ ಪ್ರದೇಶದ ಹಂಚಿಕೆ ಪಡೆಯಲಾಗಿದೆ. 1,016.23 ಎಕರೆ ಖಾಸಗಿ ಜಮೀನನ್ನು ವಶಕ್ಕೆ ಪಡೆಯಲಾಗಿದೆ ಮತ್ತು ಬಾಕಿ ಹಂಚಿಕೆ ಆದ ಜಮೀನನ್ನು ವಶಕ್ಕೆ ಪಡೆಯುವ ಕಾರ್ಯ ಪ್ರಗತಿಯಲ್ಲಿದೆ. ಮಹಾನದಿಯಿಂದ ಹಂಚಿಕೆ ಆದ 1.84 ಟಿಎಂಸಿ ನೀರನ್ನು ಸಂಗ್ರಹಿಸಲು ಒಂದು ಬ್ಯಾರೇಜನ್ನು ನಿರ್ಮಾಣ ಮಾಡುವ ಕೆಲಸ ಪ್ರಗತಿಯಲ್ಲಿದೆ. ಒರಿಸ್ಸಾದ ಗೋಗರಪಲ್ಲಿಯಿಂದ ವಾರ್ಷಿಕ 7.56 ಎಂಟಿ ಕಲ್ಲಿದ್ದಲನ್ನು ಪಡೆಯಲು ಕೋರಿಕೆ ಸಲ್ಲಿಸಿದೆ.

ಕಲ್ಲಿದ್ದಲು: ಕರ್ನಾಟಕ ಸರ್ಕಾರವು ಸ್ವದೇಶಿ ಕಲ್ಲಿದ್ದಲಿಗೆ ಮಹತ್ವವನ್ನು ನೀಡಿದ್ದು, ವಾರ್ಷಿಕ ಒಟ್ಟು 7.56 ಮೆ.ಟನ್ ನಷ್ಟು ಕಲ್ಲಿದ್ದಲು ಈ ಯೋಜನೆಗೆ ಅವಶ್ಯಕವಿರುತ್ತದೆ. ಜಂಟಿ ಕಾರ್ಯದರ್ಶಿ, ಕಲ್ಲಿದ್ದಲು ಸಚಿವಾಲಯ/ಭಾರತ ಸರ್ಕಾರ ಇವರು "ಗೋಗರ್‌ಪಲ್ಲಿ ಹಾಗು ಗೋಗರ್‌ಪಲ್ಲಿ ಕಲ್ಲಿದ್ದಲು

ಬ್ಲಾಕ್‌ನ ಇಳಜಾರು ಭಾಗವನ್ನು ಕೋಲ್ ಇಂಡಿಯಾ ಲಿಮಿಟೆಡ್ ಇವರಿಗೆ ಸಂಬಂಧಪಟ್ಟ ಪ್ರಾಧಿಕಾರ ಮಂಜೂರು ಮಾಡಿದ್ದು, ಕೆ.ಪಿ.ಸಿ.ಲ್ ಗೆ ಗೋಗರ್‌ಪಲ್ಲಿ ಕಲ್ಲಿದ್ದಲು ಬ್ಲಾಕ್ ಲಭ್ಯವಿರುವುದಿಲ್ಲವೆಂದು ತಿಳಿಸಿರುತ್ತಾರೆ ಹಾಗು ಕಲ್ಲಿದ್ದಲು ಸಚಿವಾಲಯ/ನಿಯೋಜಿತ ಪ್ರಾಧಿಕಾರವು ಕಲ್ಲಿದ್ದಲು ಬ್ಲಾಕ್ ಮಂಜೂರಾತಿಗೆ ಅರ್ಜಿಯನ್ನು ಆಹ್ವಾನಿಸಿದಾಗ ಮತ್ತೊಮ್ಮೆ ಅರ್ಜಿ ಸಲ್ಲಿಸಲು ಅಪರ ಮುಖ್ಯ ಕಾರ್ಯದರ್ಶಿ,ಕರ್ನಾಟಕ ಸರ್ಕಾರ ಇವರಿಗೆ ದಿನಾಂಕ 20.03.2018 ರ ಪತ್ರದಲ್ಲಿ ತಿಳಿಸಿರುತ್ತಾರೆ". ಮುದುವರೆದಂತೆ, ಶ್ರೀ ಎ.ಕೆ. ಸಹಾಯ್, ತಾಂತ್ರಿಕ ಸಲಹೆಗಾರರ ಶಿಫಾರಸ್ಸಿನ ಮೇರೆಗೆ ಕ.ವಿ.ನಿ.ನಿಯು ಗೋಧ್ನಾ TPS Unit-1&2 (1600 MW) ಯೋಜನೆಗೆ ದುರ್ಗಾಪುರ್-II/ ತರೈಮರ್ ದುರ್ಗಾಪುರ್-II/ ಕೋಲ್ ಮೈನ್ಸ್ (Special Provisions) Act 2015 & MMDR Act 1957 ರ ಸರಿಯಾ ಮತ್ತು ಉತ್ಕಲ್ ಕೋಲ್ ಬ್ಲಾಕ್ಸ್‌ಗಳನ್ನು ಮಂಜೂರು ಮಾಡಲು ಅರ್ಜಿ ಸಲ್ಲಿಸಿದೆ.

ಪವರ್ ಎವಾಕ್ಯುಯೇಷನ್ ಮತ್ತು ವಿದ್ಯುತ್ ಖರೀದಿ ಒಪ್ಪಂದ: ಮೆ: ಪವರ್ ಗ್ರಿಡ್ ಕಾರ್ಪೋರೇಷನ್ ಕೆ.ಪಿ.ಸಿ.ಎಲ್.ಗೆ ವಿದ್ಯುತ್ ಸ್ಥಳಾಂತರಿಸಲು ದೀರ್ಘಾವಧಿಯ ಮುಕ್ತ ಪ್ರವೇಶಕ್ಕೆ ಮಂಜೂರು ನೀಡಿದ್ದು ಹಾಗು ಚತ್ತೀಸ್‌ಘಡ ವಿದ್ಯುತ್ ಕೇಂದ್ರದಿಂದ 763 ಮೆ.ವ್ಯಾ ವಿದ್ಯುತ್‌ನ್ನು ಕರ್ನಾಟಕ ರಾಜ್ಯಕ್ಕೆ ಸ್ಥಳಾಂತರಿಸಲು ದಿನಾಂಕ 06.01.2011 ರಂದು ಪಿ.ಜಿ.ಸಿ.ಐ.ಎಲ್ ನೊಂದಿಗೆ ಒಪ್ಪಂದಕ್ಕೆ ಸಹಿಹಾಕಲಾಗಿದೆ. ಘಟಕ 1 ಮತ್ತು 2 ರನ್ನು ಸಿದ್ಧತೆಪಡಿಸುವ ಮರುವೇಳಾಪಟ್ಟಿಯ ಬಗ್ಗೆ ಪಿ.ಜಿ.ಸಿ.ಐ.ಎಲ್ ಗೆ ಪತ್ರವನ್ನು ಬರೆಯಲಾಗಿದೆ. ದಿನಾಂಕ 05.01.2011 ರಂದು ಚತ್ತೀಸ್‌ಘಡ ಪವರ್ ಟ್ರೇಡಿಂಗ್ ಕಂಪನಿ ಲಿಮಿಟೆಡ್ ಯೊಂದಿಗೆ ವಿದ್ಯುತ್ ಖರೀದಿ ಒಪ್ಪಂದಕ್ಕೆ ಸಹಿಹಾಕಲಾಗಿದೆ. ದಿನಾಂಕ 24.01.2013 ರಂದು ವಿದ್ಯುತ್ ಸರಬರಾಜು ಸೇವೆಗೆ ಪಿ.ಜಿ.ಸಿ.ಐ.ಎಲ್ ನೊಂದಿಗೆ ಒಪ್ಪಂದಕ್ಕೆ ಸಹಿಹಾಕಲಾಗಿದೆ.

ಪ್ರಾಜೆಕ್ಟ್ ಕನ್ಸಲ್ಟೆನ್ಸಿ ವರ್ಕ್ಸ್: ಯೊಜನೆಯ ಸಲಹಾ ಕೆಲಸಕ್ಕೆ (ಪ್ರಾಜೆಕ್ಟ್ ಕನ್ಸಲ್ಟೆನ್ಸಿ ವರ್ಕ್ಸ್) ಟೆಂಡರ್‌ನ್ನು ಆಹ್ವಾನಿಸಲಾಗಿದ್ದು, L1 ಬಿಡ್ಡರ್‌ನ್ನು ಅಂತಿಮಗೊಳಿಸಲಾಗಿತ್ತು ಆದರೆ ಕಲ್ಲಿದ್ದಲು ಬ್ಲಾಕ್ ಮಂಜೂರಾತಿ ವಿಳಂಬವಾದ ಕಾರಣ L1 ಬಿಡ್ಡರ್‌ಗೆ LOA ನ್ನು ನೀಡಿರುವುದಿಲ್ಲ. ಅಂತಿಮವಾಗಿ ಪ್ರಸ್ತುತ ಪ್ರಾಜೆಕ್ಟ್ ಕನ್ಸಲ್ಟೆನ್ಸಿ ವರ್ಕ್ಸ್‌ನ ಟೆಂಡರ್‌ನ್ನು ರದ್ದುಗೊಳಿಸಿ ಕಲ್ಲಿದ್ದಲು ಸಚಿವಾಲಯ/ಭಾರತ ಸರ್ಕಾರದಿಂದ ಕಲ್ಲಿದ್ದಲು ಬ್ಲಾಕ್ ಮಂಜೂರಾತಿಯಾದ ನಂತರ ಮತ್ತೊಮ್ಮೆ ಹೊಸದಾದ ಟೆಂಡರ್‌ನ್ನು ಆಹ್ವಾನಿಸಲು ನಿರ್ಧರಿಸಲಾಗಿದೆ.

3. ತದಡಿ ಸಂಯುಕ್ತ ಆವರ್ತಕ ವಿದ್ಯುತ್ ಸ್ಥಾವರ (2,100 ಮೆ.ವ್ಯಾ)

ಕರ್ನಾಟಕ ಸರ್ಕಾರವು ತನ್ನ ಆದೇಶ ಸಂಖ್ಯೆ ಸಿಐ 222 ಎಸ್‌ಪಿಐ 2009 ದಿನಾಂಕ: 16.11.2009 ರಲ್ಲಿ 2,100 ಮೆವ್ಯಾ ಸಾಮರ್ಥ್ಯದ ಅನಿಲ ಆಧಾರಿತ "ತದಡಿ ಸಂಯುಕ್ತ ಆವರ್ತಕ ವಿದ್ಯುತ್ ಸ್ಥಾವರ" ವನ್ನು ರಾಜ್ಯದಲ್ಲಿ ಸ್ಥಾಪಿಸಲು ಅನುಮತಿ ನೀಡಿದೆ. ಈ ಯೋಜನೆಯ ಅಂದಾಜು ಮೊತ್ತವು 7,350 ಕೋಟಿ ರೂ. ಗಳಾಗಿದ್ದು, ಈ ಯೋಜನೆಯಿಂದ ಪ್ರತಿ ವರ್ಷ 15,637 ದ.ಲ.ಯೂನಿಟ್‌ಗಳಷ್ಟು ವಿದ್ಯುತ್ ಉತ್ಪಾದನೆಯಾಗಲಿದೆ. ಯೋಜನೆಯ ಪೂರ್ವ ಸಾಧ್ಯಾ, ಸಾಧ್ಯತೆಗಳ ವರದಿಯನ್ನು ತಯಾರಿಸಲಾಗಿದ್ದು, ವಿವಿಧ ಇಲಾಖೆಗಳಂದ ಶಾಸನಬದ್ಧ ಒಪ್ಪಿಗೆಯನ್ನು ಪಡೆಯಲು ಕ್ರಮ ಕೈಗೊಳ್ಳಲಾಗಿದೆ. ಈ ಯೋಜನೆಗಾಗಿ ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿಯು 400 ಎಕರೆ ಭೂಮಿಯನ್ನು ಹಂಚಿಕೆಮಾಡಿದೆ. "ಆಫ್ ಶೋರ್" / ಆನ್ ಶೋರ್ ಎಲ್‌ಎನ್‌ಜಿ ಟರ್ಮಿನಲ್ ಕುರಿತು ಅಧ್ಯಯನ ವರದಿ ತಯಾರಿಸಿದ್ದು ವಿವಿಧ ಇಲಾಖೆಗಳ ಅನುಮೋದನೆ ಪಡೆಯುವ ಕಾರ್ಯವು ಪ್ರಗತಿಯಲ್ಲಿದೆ. ದಿನಾಂಕ 18.12.2010 ರಂದು ಎಸ್ಕಾಂಗಳೊಡನೆ ವಿದ್ಯುತ್ ಖರೀದಿ ಒಪ್ಪಂದಕ್ಕೆ ಸಹಿ ಹಾಕಲಾಗಿದೆ. ಗುತ್ತಿಗೆ ಹಾಗೂ ಮಾರಾಟ ಒಪ್ಪಂದದಂತೆ ಭೂಮಿಯ ನೋಂದಣಿ ಪ್ರಕ್ರಿಯೆ ಚಾಲ್ತಿಯಲ್ಲಿದೆ.

4. ಬಿಡದಿ ಸಂಯುಕ್ತ ಆವರ್ತಕ ವಿದ್ಯುತ್ ಸ್ಥಾವರ (700 ಮೆವ್ಯಾ + 20%)

ಕರ್ನಾಟಕ ವಿದ್ಯುತ್ ನಿಗಮ ನಿಯಮಿತವು ಬಿಡದಿಯಲ್ಲಿ 2,500 ಕೋಟಿ ರೂ. ಅಂದಾಜು ವೆಚ್ಚದೊಂದಿಗೆ 700 ಮೆವ್ಯಾ + 20% ಸಾಮರ್ಥ್ಯದ ಅನಿಲ ಆಧಾರಿತ ಸಂಯುಕ್ತ ಆವರ್ತಕ ವಿದ್ಯುತ್ ಸ್ಥಾವರವನ್ನು ಅನುಷ್ಠಾನಗೊಳಿಸಲು ಯೋಜಿಸಿದ್ದು, ಈ ಯೋಜನೆಯಿಂದ ಪ್ರತಿ ವರ್ಷ 5,212 ದ.ಲ.ಯೂನಿಟ್‌ಗಳಷ್ಟು ವಿದ್ಯುತ್ ಉತ್ಪಾದನೆಯಾಗಲಿದೆ. ಪ್ರಾರಂಭಿಕ ಕಾರ್ಯಗಳಾದ ಭೂಸ್ವಾಧೀನ, ಸ್ಥಾವರದ ಸುತ್ತಲಿನ ಕಾಂಪೌಂಡ್ ಗೋಡೆ ನಿರ್ಮಾಣ ಹಾಗೂ ಇತರೆ ಕಾರ್ಯಗಳು ಈಗಾಗಲೇ ಪೂರ್ಣಗೊಂಡಿವೆ. ಭಾರತ ಸರ್ಕಾರದ ಪರಿಸರ ಮತ್ತು ಅರಣ್ಯ ಸಚಿವಾಲಯದ ಒಪ್ಪಿಗೆಯನ್ನೊಳಗೊಂಡಂತೆ ಯೋಜನೆಗೆ ಅವಶ್ಯವಿರುವ ಎಲ್ಲಾ ಶಾಸನಬದ್ಧ ಒಪ್ಪಿಗೆಗಳನ್ನು ಪಡೆಯಲಾಗಿದೆ. ವಿದ್ಯುದಾಗಾರ ಸ್ಥಳದಲ್ಲಿನ ಭೂಮಿಯನ್ನು ಸಮತಟ್ಟುಗೊಳಿಸುವ ಕಾರ್ಯವು ಪೂರ್ಣಗೊಂಡಿದೆ. ಕರ್ನಾಟಕ ಸರ್ಕಾರವು ದಿನಾಂಕ 28.09.2012ರಂದು ಗೇಲ್‌ನೊಂದಿಗೆ ಅನಿಲ ಸಾಗಾಣಿಕೆಗಾಗಿ ಒಪ್ಪಿಗೆ ನೀಡಿದ್ದು ಗೇಲ್‌ರವರು ದಿನಾಂಕ 18.02.2013 ರಂದು ಒಪ್ಪಂದಕ್ಕೆ ಸಹಿ ಹಾಕಿದೆ. ಇಪಿಸಿ ಟೆಂಡರ್ ಪ್ರಕ್ರಿಯೆಗೆ ಗೌರವಾನ್ವಿತ ಉಚ್ಚ ನ್ಯಾಯಾಲಯವು ತಡೆಯಾಜ್ಞೆ ನೀಡಿದ್ದು ತರುವಾಯು ಕ.ವಿ.ನಿ.ನಿ.ಯು ಟೆಂಡರ್ ಪ್ರಕ್ರಿಯೆಯನ್ನು ಕೈಬಿಡಲು ನಿರ್ಧರಿಸಿ ಮುಂದೂಡಲಾದ ಕಾರಣ ವಿಲೇವಾರಿ ಮಾಡಲಾಯಿತು.

5. ಗುಂಡ್ಯಾ ಜಲವಿದ್ಯುತ್ ಯೋಜನೆ : (400 ಮೆವ್ಯಾ)

ಹಾಸನ / ದಕ್ಷಿಣ ಕನ್ನಡ ಜಿಲ್ಲೆಯಲ್ಲಿ 400 ಮೆವ್ಯಾ ಸ್ಥಾಪಿತ ಸಾಮರ್ಥ್ಯದ ಗುಂಡ್ಯಾ ಜಲವಿದ್ಯುತ್ ಯೋಜನೆಯನ್ನು ಪ್ರಾರಂಭಿಸಲು ಉದ್ದೇಶಿಸಲಾಗಿದೆ. 1,333 ಕೋಟಿ ರೂ. ಗಳ ಈ ಯೋಜನೆಯಿಂದ ವಾರ್ಷಿಕ ಒಟ್ಟು 1,002 ದ.ಲ.ಯೂನಿಟ್‌ಗಳಷ್ಟು ವಿದ್ಯುತ್ ಉತ್ಪಾದನೆಯಾಗಲಿದೆ. ಯೋಜನೆಯ ಮೊದಲ ಹಂತಕ್ಕಾಗಿ (1x200 ಮೆವ್ಯಾ) ಕೇಂದ್ರೀಯ ವಿದ್ಯುತ್ ಪ್ರಾಧಿಕಾರದಿಂದ ತಾಂತ್ರಿಕ-ವಾಣಿಜ್ಯ ಒಪ್ಪಿಗೆಯನ್ನು ದಿನಾಂಕ 25.04.2008ರಂದು ಪಡೆಯಲಾಗಿದೆ. ಭಾರತ ಸರ್ಕಾರದ ಅರಣ್ಯ ಮತ್ತು ಪರಿಸರ ಸಚಿವಾಲಯದ ಅನುಮತಿಯನ್ನು ನಿರೀಕ್ಷಿಸಲಾಗುತ್ತಿದೆ. ಎತ್ತಿನಹೊಳೆ ಯೋಜನೆಯನ್ನು ಕೈಗೆತ್ತಿಕೊಂಡಿರುವ ಕಾರಣ ಜಲಾನಯನ ಪ್ರದೇಶದಲ್ಲಿ ದೊರೆಯುವ ನೀರನ್ನು ಕುಡಿಯುವ ನೀರಿಗಾಗಿ ಹರಿಸಲು ಪ್ರಸ್ತಾಪಿಸಿರುವುದರಿಂದ, ವಿದ್ಯುಚ್ಛಕ್ತಿ ಉತ್ಪಾದನೆಗೆ ನೀರು ಲಭ್ಯವಿರುವುದಿಲ್ಲ. ಈ ಕಾರಣದಿಂದ ಗುಂಡ್ಯಾ ಯೋಜನೆಯನ್ನು ಸದ್ಯಕ್ಕೆ ಸ್ಥಗಿತಗೊಳಿಸಲಾಗಿದೆ.

X. ಕವಿನಿನಿಯ ಭವಿಷ್ಯದ ಯೋಜನೆಗಳು:

1. ಶಿವಸಮುದ್ರ ನದಿ ಹರಿವು ಯೋಜನೆ

ಈ ಯೋಜನೆಯನ್ನು 200 ಮೆಗಾವ್ಯಾಟ್ ಸ್ಥಾಪಿತ ಸಾಮರ್ಥ್ಯದೊಂದಿಗೆ ಅನುಷ್ಠಾನಗೊಳಿಸಲು ಪ್ರಸ್ತಾಪಿಸಲಾಗಿದೆ. ಘನ ಕರ್ನಾಟಕ ಸರ್ಕಾರದ ಆದೇಶ ಸಂಖ್ಯೆ EN 11 PPT 2016, ದಿನಾಂಕ 26.12.2016ರ ಅನ್ವಯ 2X100 ಮೆಗಾವ್ಯಾಟ್ ಸಾಮರ್ಥ್ಯದ ಶಿವಸಮುದ್ರಂ ನದಿ ಹರಿವು ಯೋಜನೆಯನ್ನು ಅನುಷ್ಠಾನಗೊಳಿಸಲು ಕ.ವಿ.ನಿ.ನಿ ಗೆ ಸೂಚಿಸಿದೆ. ಎಲೆಕ್ಟ್ರೋ-ಮೆಕ್ಯಾನಿಕಲ್ ಕೆಲಸಗಳ ವಿವರವಾದ ಯೋಜನಾ ವರದಿ ತಯಾರಾಗಿದ್ದು ಯೋಜನೆಯನ್ನು ಅನುಷ್ಠಾನಗೊಳಿಸಲು ಬೇಕಾಗಿರುವ ಶಾಸನಬದ್ಧ ಪರವಾನಗಿಗಳನ್ನು (MOEF ಪರವಾನಗಿಯನ್ನೂ ಒಳಗೊಂಡು) ಪಡೆಯುವ ಕಾರ್ಯ ಪ್ರಗತಿಯಲ್ಲಿದೆ.

2. ರಬ್ಬರ್ ಅಣೆಕಟ್ಟು ಆಧಾರಿತ ಕಿರು ಜಲ ವಿದ್ಯುತ್ ಘಟಕಗಳು

ಸೂಪಾ ಅಣೆಕಟ್ಟು ಮತ್ತು ಬಿಪಿ ಅಣೆಕಟ್ಟಿನ ಮಧ್ಯದಲ್ಲಿರುವ ಕಾಳಿ ನದಿಯ ಕೆಳಬಾಗದಲ್ಲಿ ರಬ್ಬರ್ ಅಣೆಕಟ್ಟು ಆಧಾರಿತ ಕಿರು ಜಲ ವಿದ್ಯುತ್ ಕಾರ್ಯಗತಗೊಳಿಸಲು ಯೋಜಿಸಲಾಗಿದೆ. ಯೋಜನೆಯು ಎಂಟು ರಬ್ಬರ್ ಅಣೆಕಟ್ಟಿನ ಸರಣಿಯನ್ನು ಹೊಂದಿದ್ದು ಇದರೊಂದಿಗೆ 1.5 ಮೆಗವ್ಯಾಟ್‌ನ ಎರಡು ಘಟಕಗಳು ಇರುತ್ತವೆ ಇವುಗಳು 15.74 mu ನ ಸರಾಸರಿ ವಾರ್ಷಿಕ ವಿದ್ಯುತ್ ಶಕ್ತಿಯನ್ನು ಉತ್ಪಾದಿಸುತ್ತವೆ. ಈ ಉದ್ದೇಶಿತ ಯೋಜನೆಯ 24 ಮೆಗಾವ್ಯಾಟ್ ಸಾಮರ್ಥ್ಯವನ್ನು ವಿದ್ಯುತ್ ಜಾಲಕ್ಕೆ ಸೇರಿಸುವುದು ಮತ್ತು ವಾರ್ಷಿಕ ಉತ್ಪಾದನೆಯು ಸುಮಾರು 126 mu ಆಗಿರುತ್ತದೆ ಎಂದು ನಿರೀಕ್ಷಿಸಲಾಗಿದೆ.

ಈ ಸಂಬಂಧ ಇಂಧನ ಇಲಾಖೆಗೆ "ಸುಪಾ ಅಣೆಕಟ್ಟು ಮತ್ತು ಬೊಮ್ಮನಹಳ್ಳಿ ಪಿಕಪ್ ಅಣೆಕಟ್ಟಿನ ನಡುವಿನ ಸರಣಿ ರಬ್ಬರ್ ಡ್ಯಾಂ ಆಧಾರಿತ ಯೋಜನೆಗೆ" ಅನುಮತಿ ನೀಡುವಂತೆ 25.03.2017 ರಂದು ಕೆ.ಪಿ.ಸಿ.ಎಲ್ ಇಂದ ಮನವಿಯನ್ನು ಕೋರಲಾಗಿದೆ. ಈ ಯೋಜನೆಗೆ ಬೇಕಾಗಿರುವ ಸ್ಥಳದ ಸಮೀಕ್ಷೆ ನಡೆಸಿದಾಗ, ಈ ಸ್ಥಳದಲ್ಲಿ ಅನೇಕ ಸಂಸ್ಥೆಗಳು ರಾಫ್ಟಿಂಗ್ ಮತ್ತು ಸಂಬಂಧಿಸಿದ ನೀರಿನ ಕ್ರೀಡಾ ಚಟುವಟಿಕೆಗಳನ್ನು ನಿರ್ವಹಿಸುತ್ತಿದೆ ಎಂದು ತಿಳಿದಿದೆ. ಆದ್ದರಿಂದ ಈ ಯೋಜನೆಯನ್ನು ಮುಂದೂಡಲಾಗಿದೆ.

3. ಕೇಂದ್ರ ಸರ್ಕಾರದಿಂದ ಮಾಡುವ ಅನುದಾನವನ್ನು ಉಪಯೋಗಿಸಿಕೊಂಡು ವಿದ್ಯುದಾಗಾರಗಳ PROTECTION RELATED DEFICIENCIES ಗಳನ್ನು ಹೋಗಲಾಡಿಸಲು ನವೀಕರಣ ಮತ್ತು ಉನ್ನತೀಕರಣ

a) PSDF ಅಡಿಯಲ್ಲಿ ಅನುಮೋದನೆಯಾಗಿದ್ದ ಎಲ್ಲಾ ಕೆಲಸಗಳು ಪೂರ್ಣಗೊಂಡಿದೆ. ಶರಾವತಿ ವಿದ್ಯುದಾಗಾರದ DR ವ್ಯವಸ್ಥೆ ಹೊರತಾಗಿ ಎಲ್ಲಾ ಯೋಜನೆಗಳಿಂದ ಅನುಕ್ರಮವಾಗಿ ಕಾರ್ಯ ಪೂರ್ಣಗೊಳಿಸಿದ ಕುರಿತ ದೃಢೀಕರಣ ಪತ್ರ ದೊರಕಿದೆ. NLDC ರವರಿಂದ ಬಿಡುಗಡೆಯಾಗಬೇಕಾದ ದೇಣಿಗೆ ಪ್ರಸ್ತಾವನೆಯು ಪ್ರಗತಿಯಲ್ಲಿದೆ.

b) ಸಂರಕ್ಷಣಾ ಆಡಿಟ್ ಸಮಿತಿಯು ಕ.ವಿ.ನಿ.ನಿಯ ವಿದ್ಯುದಾಗಾರಗಳಲ್ಲಿ ನಡೆಸಿದ ಇತ್ತೀಚಿನ ಸಂರಕ್ಷಣಾ ಆಡಿಟ್ ಆಧಾರದ ಮೇಲೆ ಕ.ವಿ.ನಿ.ನಿಯ ವಿದ್ಯುದಾಗಾರಗಳ 220/400KV ಸ್ವಿಚ್‌ಯಾರ್ಡ್‌ಗಳ ನವೀಕರಣ, ಆಧುನೀಕರಣ ಮತ್ತು ಉನ್ನತೀಕರಣದ ವಿವರವಾದ ಯೋಜನಾ ವರದಿಯನ್ನು ತಯಾರಿಸಲಾಗಿದೆ. ಶಾಖೋತ್ಪನ್ನ ಮತ್ತು ಜಲ ವಿದ್ಯುದಾಗಾರಗಳ 220/400 KV ಸ್ವಿಚ್‌ಯಾರ್ಡ್‌ನ ನವೀಕರಣ, ಆಧುನೀಕರಣ ಮತ್ತು ಉನ್ನತೀಕರಣವನ್ನು PSDF ಅನುದಾನದಿಂದ ಕಾರ್ಯಗತಗೊಳಿಸಲು ಮಂಡಳಿಯು ಅನುಮೋದನೆ ನೀಡಿದೆ.

c) ಈ ವಿಷಯ ಕುರಿತ ವಿವರವಾದ ಯೋಜನಾ ವರದಿಯನ್ನು KPTCL (STU), SRPC, NLDCಗೆ ಸಲ್ಲಿಸಲಾಗಿದೆ.

d) KPTCL ನ ಬೆಲೆಕಟ್ಟುವಿಕೆ (Appraisal) ವರದಿ ದೊರಕಿದೆ.

e) SRPC ಯ ಬೆಲೆಕಟ್ಟುವಿಕೆ (Appraisal) ವರದಿ ದೊರಕಿದೆ.

f) KPTCL ಮತ್ತು SRPC ಯ ಸಲಹೆ/ಅಭಿಪ್ರಾಯಗಳನ್ನು ವಿವರವಾದ ಯೋಜನಾ ವರದಿಯಲ್ಲಿ, ಸಂಯೋಜಿಸಿ, ಸುಮಾರು 156 ಕೋಟಿ ರೂಗಳ ವೆಚ್ಚದ ಪರಿಷ್ಕೃತ ವರದಿಯನ್ನು PSDF ಅನುದಾನದ ಬಳಕೆಗಾಗಿ NLDC ಮತ್ತು MOP/CEA ಗೆ ಸಲ್ಲಿಸಲಾಗಿದೆ.

4. ಹಾವೇರಿ ಜಿಲ್ಲಾ ಶಿಗ್ಗಾವಿ ತಾಲ್ಲೂಕಿನ ಚಂದಾಪುರ ಗ್ರಾಮದಲ್ಲಿ ಗ್ರಿಡ್ ಸಂಪರ್ಕಿತ 10 ಮೆವ್ಯಾ ಚಂದಾಪುರ ಸೌರ ವಿದ್ಯುತ್ ಘಟಕ

- ಕರ್ನಾಟಕ ಸರ್ಕಾರವು ಕವಿನಿನಿಗೆ ಹಾವೇರಿ ಜಿಲ್ಲಾ ಶಿಗ್ಗಾವಿ ತಾಲ್ಲೂಕಿನ ಚಂದಾಪುರ ಗ್ರಾಮದಲ್ಲಿ 77ಎಕರೆ ಜಮೀನನ್ನು ಮಂಜೂರು ಮಾಡಿದೆ.

- SECIಯು ಕರ್ನಾಟಕ ರಾಜ್ಯದಲ್ಲಿ JNNSM Phase-II, Batch- III, Tranche-V ಅಡಿಯಲ್ಲಿ 1000ಮೆವ್ಯಾ ಸಾಮರ್ಥ್ಯದ ಸೌರ ವಿದ್ಯುತ್ ಘಟಕವನ್ನು ಅನುಷ್ಠಾನಗೊಳಿಸಲು ಆಯ್ಕೆಗಾಗಿ ವಿನಂತಿಸಿ (ಆರ್‌ಎಫ್‌ಎಸ್) ಪ್ರಕಟಣೆಯನ್ನು ದಿನಾಂಕ 15.02.2016ರಂದು ಹೊರಡಿಸಲಾಗಿತ್ತು.

- ಕವಿನಿನಿಯು ಹಾವೇರಿ ಜಿಲ್ಲಾ ಶಿಗ್ಗಾವಿ ತಾಲ್ಲೂಕಿನ ಚಂದಾಪುರ ಗ್ರಾಮದಲ್ಲಿ 10ಮೆವ್ಯಾ ಸೌರ ವಿದ್ಯುತ್ ಸಾಮರ್ಥ್ಯವನ್ನು ಅನುಷ್ಠಾನಗೊಳಿಸಲು ಕವಿನಿನಿ ಮಂಡಳಿಯ ಅನುಮೋದನೆ ಪಡೆದು ಸದರಿ ಯೋಜನೆಯಡಿಯಲ್ಲಿ ಭಾಗ'ವಹಿಸಿ, 10ಮೆವ್ಯಾ ಸೌರ ವಿದ್ಯುತ್ ಯೋಜನೆಯನ್ನು ಪಡೆಯುವಲ್ಲಿ ಯಶಸ್ವಿಯಾಗಿರುತ್ತದೆ. ವಿವರ ಇಂತಿದೆ.

ಅಂದಾಜು ಮೊತ್ತ	ರೂ.60 ಕೋಟಿ
ವಿದ್ಯುತ್ ಉತ್ಪಾದನೆ	ವಾರ್ಷಿಕ 14.892 ದ.ಲ.ಯೂನಿಟ್‌ಗಳು
ಸಾಮರ್ಥ್ಯ ಉಪಯೋಗಿ ಸ್ಥಿರಾಂಕ	17%
ಕಾಮಗಾರಿ ಮುಕ್ತಾಯ	ವಿದ್ಯುತ್ ಖರೀದಿ ಒಪ್ಪಂದದ ದಿನದಿಂದ 13 ತಿಂಗಳು
ವಿದ್ಯುತ್ ದರ	ರೂ.4.43/ಕಿವ್ಯಾ , 25 ವರ್ಷದವರೆಗೆ
ಆರ್ಥಿಕ ಸಹಾಯ ಧನ (VGF)	ರೂ.13.0749 ಕೋಟಿ
ವಿದ್ಯುತ್ ಸ್ಥಳಾಂತರಿಸುವಿಕೆ	33 ಕೆವಿ ಮಾರ್ಗದ ಮೂಲಕ 110/3ಕೆವಿ ಶಿಗ್ಗಾವಿ ಉಪಕೇಂದ್ರಕ್ಕೆ ಸಂಪರ್ಕಿಸಲಾಗಿದೆ

ಟೆಂಡರ್‌ನಲ್ಲಿ ಯಶಸ್ವಿಯಾದ ನಂತರ, SECIಯು JNNSM Phase-II, Batch- III, Tranche-V ಯೋಜನೆಯಡಿಯಲ್ಲಿ ಸ್ಥಾಪಿಸಲು 10ಮೆ. ವ್ಯಾ ಸಾಮರ್ಥ್ಯದ ಸೌರ ವಿದ್ಯುತ್ ಯೋಜನೆಯನ್ನು ಹಾವೇರಿ ಜಿಲ್ಲೆಯ ಶಿಗ್ಗಾವಿ ತಾಲ್ಲೂಕಿನ ಚಂದಾಪುರ ಗ್ರಾಮದಲ್ಲಿ ಕವಿನಿನಿಗೆ ಹಂಚಿಕೆ ಮಾಡಿದೆ.

SECIಯು ದಿ.02.07.2016 ರಂದು ಕವಿನಿನಿಗೆ ಆದೇಶ (ಎಲ್‌ಒಐ) ನೀಡಿ ಆರ್ಥಿಕ ಸಹಾಯ ಧನ ಪ್ರತಿ ಮೆವ್ಯಾಗೆ ರೂ.1,30,74,900/- ಹಾಗೂ ವಿದ್ಯುತ್ ದರ ಪ್ರತಿ ಯೂನಿಟ್‌ಗೆ ರೂ.4.43 ರಂತೆ ನಿಗದಿ ಪಡಿಸಲಾಗಿದೆ. ನಿಯಮಾವಳಿಗಳನುಸಾರ SECIಯವರೊಂದಿಗೆ 02.08.2016ರಂದು ವಿದ್ಯುತ್ ಖರೀದಿ ಒಪ್ಪಂದ'ವನ್ನು ಮಾಡಿಕೊಂಡಿದ್ದು ಈ ಒಪ್ಪಂದದ ಪ್ರಕಾರ ಯೋಜನೆಯನ್ನು 02.09.2017ರೊಳಗಾಗಿ ಪೂರ್ಣಗೊಳಿಸಬೇಕಾಗಿರುತ್ತದೆ.

KTPP ವಿನಾಯಿತಿ ಪಡೆದನಂತರ M/s.BHEL, ಬೆಂಗಳೂರು ರವರಿಗೆ, ಚಂದಾಪುರ 10ಮೆ.ವ್ಯಾ ಸಾಮರ್ಥ್ಯದ ಸೌರ ವಿದ್ಯುತ್ ಯೋಜನೆಯ EPC ಕೆಲಸ ಹಾಗು 5 ವರ್ಷಗಳ ಚಾಲನೆ ಮತ್ತು ನಿರ್ವಹಣೆ ಕೆಲಸವು ಸೇರಿದಂತೆ ಸಂಧಾನ ದರ ರೂ.56.00 ಕೋಟಿಗೆ ವಹಿಸಲಾಗಿದೆ. LOAಯ ಪ್ರಕಾರ ಯೋಜನೆಯನ್ನು ಪೂರ್ಣಗೊಳಿಸಲು ದಿ.05.08.2017 ಹಾಗು ಬಾಕಿ ಕಾಮಗಾರಿಗಳನ್ನು ದಿ.05.11.2017ಕ್ಕೆ ಮುಂಚಿತವಾಗಿ ಪೂರ್ಣಗೊಳಿಸಲು ಸೂಚಿಸಲಾಗಿತ್ತು.

ಸುಮಾರು 9ಕಿಮೀಗಳ ಅಂತರದ 33ಕೆವಿ ಪ್ರಸರಣ ಮಾರ್ಗದ ಕೆಲಸವನ್ನು ಮುಂಗಡ ಪಾವತಿ ಆಧಾರದ ಮೇಲೆ HESCOMರವರಿಗೆ ವಹಿಸಲಾಯಿತು ಮತ್ತು ಶಿಗ್ಗಾವಿಯ 110/33/11ಕೆವಿ ಉಪಕೇಂದ್ರದಲ್ಲಿ 33ಕೆವಿ Terminal Bay ನಿರ್ಮಾಣ ಕಾಮಗಾರಿಯನ್ನು ಮೆ॥ ಸಹ್ಯಾದ್ರಿ ಪವರ್, ಬೆಂಗಳೂರು ಇವರಿಗೆ ನೀಡಲಾಗಿದ್ದು ಈ ಎರಡು ಕೆಲಸಗಳು ಪೂರ್ಣಗೊಂಡಿವೆ.

10ಮೆ.ವ್ಯಾ ಸೌರ ವಿದ್ಯುತ್ ಸ್ಥಾವರಕ್ಕೆ ದಿ.07.10.2017 ರಂದು ಹಾಗು 33ಕೆವಿ ಪ್ರಸರಣ ಮಾರ್ಗ ಮತ್ತು 33ಕೆವಿ ಟರ್ಮಿನಲ್ ಬೇ ಗೆ ದಿ.23.10.2017ರಂದು ಸರ್ಕಾರದ ಮುಖ್ಯ ವಿದ್ಯುತ್ ಪರಿವೀಕ್ಷಣಾಲಯದಿಂದ ಅನುಮೋದನೆಯನ್ನು ಪಡೆಯಲಾಯಿತು.

KPTCLಯವರಿಂದ ಅಂತರಸಂಪರ್ಕ ಅನುಮೋದನೆಯನ್ನು ದಿ.26.10.2017 ರಂದು ಪಡೆಯಲಾಯಿತು ಮತ್ತು ದಿ.31.10.2017 ರಂದು KPTCL ಹಾಗು HESCOM ಅಧಿಕಾರಿಗಳ ಉಪಸ್ಥಿತಿಯಲ್ಲಿ ಈ ಘಟಕವನ್ನು ರಾಜ್ಯ ವಿದ್ಯುತ್ ಜಾಲಕ್ಕೆ ಸೇರ್ಪಡೆಮಾಡಲಾಯಿತು. ಈ ಘಟಕದಿಂದ ನಿರಂತರವಾಗಿ ದಿ. 31.10.2017ರಿಂದ ವಿದ್ಯುತ್ ಉತ್ಪಾದನೆಯಾಗುತ್ತಿದೆ.

ಮುಂದುವರೆದು, SECIಯು ರಚಿಸಿದ KPTCL, KREDL ಮತ್ತು HESCOM ಅಧಿಕಾರಿಗಳನ್ನೊಳಗೊಂಡ ಸಮಿತಿಯ ಸಮಕ್ಷಮದಲ್ಲಿ ದಿ.07.11.2017ರಂದು, ಚಂದಾಪುರ 10ಮೆ.ವ್ಯಾ ಸಾಮರ್ಥ್ಯದ ಸೌರ ವಿದ್ಯುತ್ ಯೋಜನೆಯನ್ನು ರಾಜ್ಯ ವಿದ್ಯುತ್ ಜಾಲಕ್ಕೆ ಸೇರ್ಪಡೆಯನ್ನು ಪೂರ್ಣಗೊಳಿಸಲಾಯಿತು.

SECI ನಿರ್ದೇಶನದಂತೆ ರಾಜ್ಯ ನೋಡಲ್ ಏಜನ್ಸಿ KREDಐರವರು 07.11.2017ರಿಂದ ಅನ್ವಯವಾಗುವಂತೆ "Commissioning Certificate" ಅನ್ನು ನೀಡಿರುತ್ತಾರೆ. 10ಮೆ.ವ್ಯಾ ಚಂದಾಪುರ ಸೌರ ವಿದ್ಯುತ್ ಯೋಜನೆಯ ವಾಣಿಜ್ಯ ಕಾರ್ಯಚರಣೆಯ ದಿನಾಂಕದ ಘೋಷಣೆಯನ್ನು SECIಯಿಂದ ನಿರೀಕ್ಷಿಸಲಾಗಿದೆ.

5. ಪವನ ಶಕ್ತಿಯ ಯೊಜನೆಗಳು

a) ಕಪ್ಪತಗುಡ್ಡ ಪವನ ವಿದ್ಯುತ್ ಯೋಜನೆ

ಕರ್ನಾಟಕ ವಿದ್ಯುತ್ ನಿಗಮವು 1994-95 ರಲ್ಲಿ ಪ್ರಾತ್ಯಕ್ಷಿತೆಗಾಗಿ ಗದಗ ಜಿಲ್ಲೆಯ ಮುಂಡರಗಿ ತಾಲೂಕಿನ ಕಪ್ಪತಗುಡ್ಡದಲ್ಲಿ 2.025 ಮೆವ್ಯಾ ಸಾಮರ್ಥ್ಯದ ತನ್ನ ಮೊಟ್ಟ ಮೊದಲ ಪವನ ವಿದ್ಯುತ್ ಯೋಜನೆಯನ್ನು ಭಾರತ ಸರ್ಕಾರದ ನವೀಕರಿಸಬಹುದಾದ ಇಂಧನ ಯೋಜನೆಯಡಿಯಲ್ಲಿ ಸ್ಥಾಪಿಸಲಾಯಿತು. ಮೊದಲ ಹಂತದ ಈ ಯೋಜನೆಯಲ್ಲಿ 225 ಕಿ.ವ್ಯಾ ಸಾಮರ್ಥ್ಯದ ವೆಸ್ಟಾಸ್ ನಿರ್ಮಿತ 9 ಘಟಕಗಳನ್ನು ಅಳವಡಿಸಲಾಗಿದೆ. ಮುಂದುವರೆದಂತೆ, 2002ರಲ್ಲಿ ನಿಗಮವು ಎರಡನೇ ಹಂತದಲ್ಲಿ 230 ಕಿವ್ಯಾ ಸಾಮರ್ಥ್ಯದ ಎನರ್ಕಾನ್ ನಿರ್ಮಿತ 11 ಘಟಕಗಳನ್ನು ಅಳವಡಿಸಿ 2.530 ಮೆವ್ಯಾ ಸಾಮರ್ಥ್ಯದ ಯೋಜನೆಯನ್ನು ಸ್ಥಾಪಿಸಿ, ಒಟ್ಟಾರೆ ಸಾಮರ್ಥ್ಯವನ್ನು 4.555 ಮೆವ್ಯಾಗೆ ಹೆಚ್ಚಿಸಲಾಯಿತು.

ಕಪ್ಪತಗುಡ್ಡದ ಮೊದಲನೇ ಹಂತದ ಘಟಕಗಳ ಸಾಮರ್ಥ್ಯವನ್ನು ವೃದ್ಧಿಸುವ ಯೋಜನೆ:

ಮೊದಲನೇ ಹಂತದಲ್ಲಿ ಸ್ಥಾಪಿಸಲಾದ 225 ಕಿವ್ಯಾ ಸಾಮರ್ಥ್ಯದ 9 ಘಟಕಗಳು ಸುಮಾರು 20 ವರ್ಷಗಳಿಂದ ಕಾರ್ಯ ನಿರ್ವಹಿಸುತ್ತಿದ್ದು ಜೀವಿತಾವಧಿಯನ್ನು ಪೂರೈಸಿವೆ ಹಾಗೂ ಅವುಗಳ ವಿದ್ಯುತ್ ಉತ್ಪಾದನಾ ಸಾಮರ್ಥ್ಯವು ಕುಂಠಿತಗೊಳ್ಳುತ್ತಿದೆ. ಈ ಹಿನ್ನಲೆಯಲ್ಲಿ ಸದರಿ

ಘಟಕಗಳನ್ನು ಬದಲಿಸಿ ಅದೇ ಸ್ಥಳದಲ್ಲಿ ಹೆಚ್ಚಿನ ಸಾಮರ್ಥ್ಯದ ಘಟಕಗಳನ್ನು ಸ್ಥಾಪಿಸುವ ಸಲುವಾಗಿ NIWE, ಚೆನ್ನೈ ಇವರ ಸಲಹೆಯನ್ನು ಕೋರಲಾಗಿತ್ತು. ಕವಿನಿನಿಯು ಕರ್ನಾಟಕ ಸರ್ಕಾರದಿಂದ ಮೊದಲ ಹಂತದ ಯೋಜನೆಯ ಸಾಮರ್ಥ್ಯವನ್ನು 2.025ಮೆವ್ಯಾದಿಂದ 8.4ಮೆವ್ಯಾಗೆ ಹೆಚ್ಚಿಸಲು ಆದೇಶ ಸಂ. ಇ.ಎನ್22ಎನ್‌ಸಿಇ 2016 ದಿನಾಂಕ 08.03.2016 ರಲ್ಲಿ ಆದೇಶವನ್ನು ಪಡೆಯಲಾಗಿದೆ.

ಮುಂಡರಗಿ ವಲಯದ ಡೋಣಿ ಗ್ರಾಮದ ಅರಣ್ಯ ಸರ್ವೆ ನಂ.219ರಲ್ಲಿ ಪವನ ಶಕ್ತಿಯ ಯೋಜನೆಯನ್ನು ಸ್ಥಾಪಿಸಲು 12.0ಹೆಕ್ಟೇರ್ ಅರಣ್ಯ ಪ್ರದೇಶದ ಗೇಣಿ ಅವಧಿಯು ಆಗಸ್ಟ್ 2004ಕ್ಕೆ ಮುಗಿದಿರುತ್ತದೆ. ಪ್ರಾದೇಶಿಕ ಸಮಿತಿ, ಅರಣ್ಯ ಇಲಾಖೆಯು ದಿ.30.12.2015ರಂದು ಈ ಪ್ರದೇಶದಲ್ಲಿ ಯೋಜನೆಯನ್ನು ಮುಂದುವರೆಸಲು 09.08.2004ರಿಂದ ಅನ್ವಯವಾಗುವಂತೆ 30 ವರ್ಷಗಳವರೆಗೆ ಗೇಣಿ ಅವಧಿಯನ್ನು ವಿಸ್ತರಿಸಿ ಮೊದಲ ಹಂತದ ಅನುಮೋದನೆಯನ್ನು ನೀಡಿದೆ.

ಅದರಂತೆ, ಉಪ ಅರಣ್ಯ ಸಂರಕ್ಷಣಾಧಿಕಾರಿ, ಗದಗ ಇವರಿಗೆ ಹಣ ಸಂದಾಯ ಮಾಡಿದ್ದು, ಬಾಗಶಃ ಕಂಪ್ಲಾಯನ್ಸ್ ವರದಿ ಸಲ್ಲಿಸಲಾಗಿದೆ. ಮೊದಲ ಹಂತದ ಅನುಮೋದನೆಯಲ್ಲಿರುವ ಕಾರ್ಯಗಳು ಪೂರ್ಣಗೊಂಡಿದೆ. ಪಿಸಿಸಿಎಫ್(ಎಫ್.ಸಿ) ರವರು ಅಂತಿಮ (ಹಂತ-2) ಗೆ ಮುಂಡರಗಿ ವಲಯದ ಡೋಣಿ ಗ್ರಾಮದ ಅರಣ್ಯ ಸರ್ವೆ ನಂ.219ರಲ್ಲಿ ಪವನ ಶಕ್ತಿಯ ಯೋಜನೆಯನ್ನು ಸ್ಥಾಪಿಸಲು 12.0ಹೆಕ್ಟೇರ್ ಅರಣ್ಯ ಪ್ರದೇಶದ ಗೇಣಿ ಅವಧಿಯ ಗುತ್ತಿಗೆಯನ್ನು ಮುಂದುವರೆಸಲು MoEF ಅನುಮೋದನೆಗಾಗಿ ವಿನಂತಿಸಲಾಗಿದೆ. ಸದರಿ ಅಂತಿಮ(ಹಂತ-2) ಅನುಮೋದನೆ ದೊರೆತ ನಂತರ ಘಟಕಗಳನ್ನು ಬದಲಾಯಿಸು ಕಾರ್ಯ ಪ್ರಾರಂಭಗೊಳಿಸಲಾಗುವುದು.

ಭಾರತೀಯ ವಿಮಾನಯಾನ ಪ್ರಾದಿಕಾರದಿಂದ ನೀರಾಪೇಕ್ಷಣಾ ಪತ್ರ ಪಡೆದಿದ್ದು ಕೆ.ಪಿ.ಟಿ.ಸಿ.ಎಲ್. ರಿಂದ ಪರಿಸ್ತೃತ 10.93 ಮೆ.ವ್ಯಾ. ವಿದ್ಯುತ್ 110/33/11ಕೆ.ವಿ. ದುಂಬಲ್ ಸಬ್ಸ್ಟೇಷನ್ ನಿಂದ ಸಾಗಿಸಲು ಅನುಮೋದನೆ ಪಡೆಯಲಾಗಿದೆ.

b) ಕಪ್ಪತಗುಡ್ಡದ 52.25 ಮೆವ್ಯಾ ಸಾಮರ್ಥ್ಯದ ಪವನ ವಿದ್ಯುತ್ ಯೋಜನೆ:

ಕರ್ನಾಟಕ ವಿದ್ಯುತ್ ನಿಗಮ ನಿಯಮಿತದ 56.50 ಮೆವ್ಯಾ ಪವನ ಶಕ್ತಿಯ ಯೋಜನೆಯ ಪ್ರಸ್ತಾವನೆಗೆ, ಕರ್ನಾಟಕ ಸರ್ಕಾರವು ತನ್ನ ಆದೇಶ ಸಂಖ್ಯೆ ಇಎನ್ 569 ಎನ್‌ಸಿಇ 2009 ಬೆಂಗಳೂರು ದಿನಾಂಕ 26.11.2009 ರಂತೆ 39.75 ಮೆವ್ಯಾ ಸಾಮರ್ಥ್ಯದ ಯೋಜನೆಯನ್ನು ಹಂಚಿಕೆ ಮಾಡಿ ಕಪ್ಪತಗುಡ್ಡದಲ್ಲಿ ಹೆಚ್ಚುವರಿಯಾಗಿ ಪವನ ಶಕ್ತಿ ಯೋಜನೆಯನ್ನು ಅಭಿವೃದ್ಧಿಪಡಿಸಲು ಸೂಚಿಸಲಾಗಿತ್ತು. ಮುಂದುವರೆದು, ಸರ್ಕಾರವು ತನ್ನ ಆದೇಶ ಸಂಖ್ಯೆ: ಇಎನ್ 162 ಎನ್‌ಸಿಇ 2015 ಬೆಂಗಳೂರು ದಿ.24.08.2015ದಲ್ಲಿ ನಿಗಮಕ್ಕೆ ಈ ಮೊದಲು ಹಂಚಿಕೆ ಮಾಡಿದ್ದ 39.75 ಮೆವ್ಯಾ ಹೊರತುಪಡಿಸಿ, 12.5 ಮೆವ್ಯಾ ಸಾಮರ್ಥ್ಯದ ಪವನ ವಿದ್ಯುತ್ ಯೋಜನೆಯನ್ನು ಹೆಚ್ಚುವರಿಯಾಗಿ ಮರುಹಂಚಿಕೆ ಮಾಡಿ ಒಟ್ಟು 52.25ಮೆವ್ಯಾ ಸಾಮರ್ಥ್ಯದ ಯೋಜನೆಯನ್ನು ನಿಗಮಕ್ಕೆ ಹಂಚಿಕೆ ಮಾಡಲಾಗಿದೆ.

ಸರ್ಕಾರವು ಪವನ ವಿದ್ಯುತ್ ಯೋಜನೆಯ ಅನುಷ್ಠಾನಕ್ಕೆ ಕಾಲಾವಧಿ ವಿಸ್ತರಣಾ ಶುಲ್ಕ ಹಾಗು ಇತರ ಶುಲ್ಕಗಳನ್ನು ಕೆಆರ್‌ಇಡಿಎಲ್ ಸಂಸ್ಥೆಗೆ ಪಾವತಿಸುವ ಷರತ್ತಿಗೊಳಪಟ್ಟು ದಿನಾಂಕ:26.11.2015 ರಿಂದ ಅನ್ವಯವಾಗುವಂತೆ 5 ವರ್ಷಗಳವರೆಗೆ ಕಾಲಾವಧಿ ವಿಸ್ತರಿಸಿ ತನ್ನ ಆದೇಶ ಸಂಖ್ಯೆ: ಇಎನ್ 235 ಎನ್‌ಸಿಇ 2015 ಬೆಂಗಳೂರು ದಿ.11.11.2015 ರಲ್ಲಿ ಆದೇಶ ಹೊರಡಿಸಿದೆ. 65.50 ಹೆಕ್ಟೇರ್ ಅರಣ್ಯ ಭೂಮಿಯನ್ನು ನಿಗಮಕ್ಕೆ ಹಸ್ತಾಂತರಿಸುವ ಬಗ್ಗೆ ಮತ್ತು ಸದರಿ ಪ್ರದೇಶದಲ್ಲಿ ಪವನ ಶಕ್ತಿಯ ಸಂಪನ್ಮೂಲದ ಮೌಲ್ಯಮಾಪನದ ಅಧ್ಯಯನ ಮಾಡುವ ಸಲುವಾಗಿ ಪವನ-ಘಟಸ್ತಂಭ (Wind-Mast) ಸ್ಥಾಪಿಸಲು ಅಗತ್ಯ ಅನುಮತಿಯನ್ನು ಕೋರಿ ಅರಣ್ಯ ಇಲಾಖೆಗೆ ವಿನಂತಿಸಲಾಗಿತ್ತು.

ಈ ಮಧ್ಯೆ ಕರ್ನಾಟಕ ಸರ್ಕಾರವು ಆದೇಶ ಸಂ. ಎಫ್‌ಇಇ 291 ಕೆಡಬ್ಲ್ಯೂಎಲ್ 2015 ದಿನಾಂಕ.19.12.2015 ರಂತೆ ಕಪ್ಪತಗುಡ್ಡ ಪ್ರದೇಶವನ್ನು "ಕಪ್ಪತಗುಡ್ಡ ಮೀಸಲು ಸಂರಕ್ಷಣಾ ಪ್ರದೇಶ" ವೆಂದು ಘೋಷಿಸಿದ್ದು ನಿಗಮಕ್ಕೆ ಹಂಚಿಕೆಯಾದ 52.25 ಮೆವ್ಯಾ ಸಾಮರ್ಥ್ಯದ ಯೋಜನೆಯು ಇದೇ ಅರಣ್ಯ ಪ್ರದೇಶದ ವ್ಯಾಪ್ತಿಯಲ್ಲಿ ಬರುವುದರಿಂದ ಸದರಿ ಪ್ರದೇಶವನ್ನು ನಿಗಮಕ್ಕೆ ಹಸ್ತಾಂತರಿಸುವ ಬಗ್ಗೆ ಅರಣ್ಯ ಇಲಾಖೆಯಿಂದ ಆದೇಶ ನಿರೀಕ್ಷಿಸಲಾಗುತ್ತಿತ್ತು.

ಗದಗ ಜಿಲ್ಲೆಯ ಕಪ್ಪತಗುಡ್ಡದಲ್ಲಿ ಕವಿನಿನಿಗೆ ಹಂಚಿಕೆಯಾಗಿರುವ 52.25 ಮೆವ್ಯಾ ಸಾಮರ್ಥ್ಯದ ಪವನ ವಿದ್ಯುತ್ ಯೋಜನೆಯ ಜಾಗವು ರಕ್ಷಿತಾರಣ್ಯದ ವ್ಯಾಪ್ತಿಯಲ್ಲಿ ಬರುವುದರಿಂದ ಹಾಗು ಅರಣ್ಯ ಇಲಾಖೆಯು ಕವಿನಿನಿಯ ಪ್ರಸ್ತಾವನೆಯನ್ನು ಕೈಬಿಡಲು ಸೂಚಿಸಿ ಕಡತವನ್ನು ಮುಕ್ತಾಯಗೊಳಿಸಲಾಗಿರುವುದರಿಂದ ಈ ಯೋಜನೆಯನ್ನು ಮುಂದುವರಿಸಲು ಕಷ್ಟ ಸಾಧ್ಯವೆಂದು ಇಂಧನ ಇಲಾಖೆ, ಕರ್ನಾಟಕ ಸರ್ಕಾರಕ್ಕೆ ಮಾಹಿತಿ ನೀಡಲಾಗಿದೆ.

XI. ಕಲ್ಲಿದ್ದಲಿನ ನಿರ್ವಹಣೆ

A. ರಾಯಚೂರು ಶಾಖೋತ್ಪನ್ನ ವಿದ್ಯುತ್ ಕೇಂದ್ರಕ್ಕಾಗಿ ಕಲ್ಲಿದ್ದಲು:

ಕರ್ನಾಟಕ ವಿದ್ಯುತ್ ನಿಗಮವು ರಾಯಚೂರು ಸಮೀಪದ ಶಕ್ತಿನಗರದಲ್ಲಿ ಕಲ್ಲಿದ್ದಲು ಆಧಾರಿತ ಶಾಖೋತ್ಪನ್ನ ವಿದ್ಯುತ್ ಕೇಂದ್ರದಲ್ಲಿ ತಲಾ 210 ಮೆ.ವ್ಯಾ ಸಾಮರ್ಥ್ಯದ 7 ಘಟಕಗಳು ಮತ್ತು 250 ಮೆ.ವ್ಯಾ ಸಾಮರ್ಥ್ಯದ 1 ಘಟಕವನ್ನು ಸ್ಥಾಪಿಸಿದೆ. ಈ ಎಂಟು ಘಟಕಗಳಿಂದ ಪೂರ್ಣ ಪ್ರಮಾಣದ ಉತ್ಪಾದನೆಗೆ ಒಂದು ದಿನಕ್ಕೆ ಸುಮಾರು 27,000 ಟನ್‌ಗಳಷ್ಟು ಕಲ್ಲಿದ್ದಲಿನ ಅವಶ್ಯಕತೆ ಇರುತ್ತದೆ. ಕಲ್ಲಿದ್ದಲಿನ ಪೂರೈಕೆಯು (1) ತೆಲಂಗಾಣದ ಸಿಂಗರೇಣಿ ಕೋಲರೀಸ್ ಕಂಪನಿ ಲಿಮಿಟೆಡ್, (ಎಸ್.ಸಿ.ಸಿ.ಎಲ್), (2) ಮಹಾರಾಷ್ಟ್ರದ ವೆಸ್ಟರ್ನ್ ಕೋಲ್‌ಫೀಲ್ಡ್ಸ್ ಲಿಮಿಟೆಡ್, (ಡಬ್ಲ್ಯೂ.ಸಿ.ಎಲ್) (3) ಒಡಿಸ್ಸಾದ ಮಹಾನದಿ ಕೋಲ್‌ಫೀಲ್ಡ್ಸ್ ಲಿಮಿಟೆಡ್, (ಎಂ.ಸಿ.ಎಲ್) ಗಳಿಂದ ಆಗುತ್ತಿದೆ.

2017-18ನೇ ಸಾಲಿನಲ್ಲಿ 72.70 ಲಕ್ಷ ಟನ್ ಕಲ್ಲಿದ್ದಲು (71.35 ಲಕ್ಷ ಟನ್ ಕಚ್ಚಾ ಕಲ್ಲಿದ್ದಲು ಮತ್ತು 1.35 ಲಕ್ಷ ಟನ್ ತೊಳೆದ ಕಲ್ಲಿದ್ದಲು) ಸ್ವೀಕೃತವಾಗಿರುತ್ತದೆ ಮತ್ತು 69.32 ಲಕ್ಷ ಟನ್ ಕಲ್ಲಿದ್ದಲು ಬಳಕೆಯಾಗಿರುತ್ತದೆ. ಕಲ್ಲಿದ್ದಲಿನ ಬಳಕೆಯು ಪ್ರತಿ ಯೂನಿಟ್‌ಗೆ ಸುಮಾರು 0.640 ಕಿಲೋ ಗ್ರಾಂ (ಕೆ.ಜಿ/ಕೆ.ಡಬ್ಲ್ಯೂ.ಹೆಚ್) ರಷ್ಟಿರುತ್ತದೆ. ಕಲ್ಲಿದ್ದಲಿನ ಸ್ವೀಕೃತಿ ವಿವರಗಳು ಈ ಕೆಳಗಿನಂತಿವೆ.

ಪ್ರಮಾಣ (ಲಕ್ಷ ಟನ್‌ಗಳಲ್ಲಿ)

ಕ್ರಮ.ಸಂ.	ಮೂಲಗಳು	ಕಲ್ಲಿದ್ದಲು ಸ್ವೀಕೃತಿ
1	ಎಸ್.ಸಿ.ಸಿ.ಎಲ್.	38.23
2	ಡಬ್ಲ್ಯೂ.ಸಿ.ಎಲ್. (ಕಚ್ಚಾ)	12.10
3	ಡಬ್ಲ್ಯೂ.ಸಿ.ಎಲ್. (ತೊಳೆದ)	1.35
4	ಎಂ.ಸಿ.ಎಲ್.	21.02
	ಒಟ್ಟು	**72.70**

B. ಬಳ್ಳಾರಿ ಶಾಖೋತ್ಪನ್ನ ವಿದ್ಯುತ್ ಕೇಂದ್ರ ಘಟಕ 1,2(2x500ಮೆ.ವ್ಯಾ) ಮತ್ತು 3(1x700 ಮೆ.ವ್ಯಾ)

ಬಳ್ಳಾರಿ ಶಾಖೋತ್ಪನ್ನ ವಿದ್ಯುತ್ ಕೇಂದ್ರಕ್ಕೆ ದಿನಕ್ಕೆ ಸುಮಾರು 25,000 ಟನ್ ಗಳಷ್ಟು ಕಲ್ಲಿದ್ದಲಿನ ಅವಶ್ಯಕತೆ ಇರುತ್ತದೆ. 2017-18 ನೇ ಸಾಲಿನಲ್ಲಿ ಸ್ವೀಕೃತವಾದ ಮತ್ತು ಬಳಕೆಯಾದ ಕಲ್ಲಿದ್ದಲಿನ ಪ್ರಮಾಣ ಕ್ರಮವಾಗಿ 23.79 ಲಕ್ಷ ಟನ್ ಗಳು ಹಾಗು 24.60 ಲಕ್ಷ ಟನ್ ಗಳಷ್ಟಿರುತ್ತದೆ. ಕಲ್ಲಿದ್ದಲಿನ ಬಳಕೆಯು ಪ್ರತಿ ಯೂನಿಟ್‌ಗೆ ಸುಮಾರು 0.612 ಕಿಲೋ ಗ್ರಾಂ (ಕೆ.ಜಿ/ಕೆ.ಡಬ್ಲ್ಯೂ.ಹೆಚ್) ರಷ್ಟಿರುತ್ತದೆ. ಕಲ್ಲಿದ್ದಲಿನ ಸ್ವೀಕೃತಿ ವಿವರಗಳು ಈ ಕೆಳಗಿನಂತಿವೆ.

ಪ್ರಮಾಣ (ಲಕ್ಷ ಟನ್‌ಗಳಲ್ಲಿ)

ಕ್ರಮ.ಸಂ.	ಮೂಲಗಳು	ಕಲ್ಲಿದ್ದಲು ಸ್ವೀಕೃತಿ
1	ಎಸ್.ಸಿ.ಸಿ.ಎಲ್.	17.16
2	ಎಂ.ಸಿ.ಎಲ್.	6.63
	ಒಟ್ಟು	**23.79**

*ಎಂ.ಸಿ.ಎಲ್. ನಿಂದ ರಾಯಚೂರು ವಿದ್ಯುತ್ ಕೇಂದ್ರಕ್ಕೆ ಪೂರೈಸಲಾಗುವ ಪ್ರಮಾಣದಲ್ಲಿ ಸ್ವಲ್ಪ ಪ್ರಮಾಣದ ಕಲ್ಲಿದ್ದಲನ್ನು ಬಳ್ಳಾರಿ ವಿದ್ಯುತ್ ಕೇಂದ್ರದಲ್ಲಿ ಬಳಸಿಕೊಳ್ಳಲಾಗಿದೆ.

ಭಾರತ ಸರ್ಕಾರದ ಕಲ್ಲಿದ್ದಲು ಸಚಿವಾಲಯವು, ದಿನಾಂಕ 31.03.2015 ರ ಆದೇಶದ ಮೂಲಕ ಮಹಾರಾಷ್ಟ್ರ ರಾಜ್ಯದ ಚಂದ್ರಾಪುರ್ ಜಿಲ್ಲೆಯಲ್ಲಿರುವ ಬಾರಂಜ್ I-IV, ಮನೋರದೀಪ್ ಮತ್ತು ಕಿಲೋನಿ ಕಲ್ಲಿದ್ದಲು ಬ್ಲಾಕ್‌ಗಳನ್ನು ಕರ್ನಾಟಕ ವಿದ್ಯುತ್ ನಿಗಮದ ಬಳ್ಳಾರಿ ಶಾಖೋತ್ಪನ್ನ ವಿದ್ಯುತ್ ಕೇಂದ್ರದ ಘಟಕ 1 ಮತ್ತು 2 ರ ಕಲ್ಲಿದ್ದಲು ಅಗತ್ಯತೆಗಳನ್ನು ಪೂರೈಸಲು ಮರು ಹಂಚಿಕೆ ಮಾಡಿರುತ್ತದೆ. ಹೊಸ ಮೈನ್ ಆಪರೇಟರ್ ನೇಮಿಸುವ ಮತ್ತು ಆಯ್ಕೆ ಮಾಡುವ ಸಲುವಾಗಿ ಕರೆಯಲಾದ ಟೆಂಡರ್ ಅನ್ನು ಕರ್ನಾಟಕದ ಗೌರವಾನ್ವಿತ ಉಚ್ಚನ್ಯಾಯಾಲಯ ರದ್ದುಗೊಳಿಸಿರುತ್ತದೆ ಹಾಗೂ ಈ ತೀರ್ಪಿನ ವಿರುದ್ಧ ಸರ್ವೋಚ್ಚ ನ್ಯಾಯಾಲಯದಲ್ಲಿ ಎಸ್.ಎಲ್.ಪಿ.ಯನ್ನು ಸಲ್ಲಿಸಲಾಗಿದೆ. ಮೇಲ್ಮನವಿಯ ಅಂತಿಮ ತೀರ್ಪನ್ನು ನಿರೀಕ್ಷಿಸಲಾಗಿದೆ. ಏತನ್ಮಧ್ಯೆ, ಗಣಿಗಳನ್ನು ಪುನರ್ ಆರಂಭಿಸಲು ಬೇಕಾದ ಎಲ್ಲಾ ಅನುಮತಿಗಳನ್ನು ಪಡೆಯುವ ಕಾರ್ಯ ಪ್ರಗತಿಯಲ್ಲಿದೆ.

ಗಣಿಗಳ ಕಾರ್ಯಾರಂಭ ಮತ್ತು ಅವುಗಳಿಂದ ಕಲ್ಲಿದ್ದಲಿನ ಪೂರೈಕೆ ಬಾಕಿ ಇರುವ ಕಾರಣ, ಎಸ್.ಸಿ.ಸಿ.ಎಲ್.ನಿಂದ ಎಂ.ಓ.ಯು. ಆಧಾರದಲ್ಲಿ ಕಲ್ಲಿದ್ದಲನ್ನು ಪಡೆಯಲಾಗಿದೆ ಮತ್ತು ಎಂ.ಸಿ.ಎಲ್.ನಿಂದ ರಾಯಚೂರು ಶಾಖೋತ್ಪನ್ನ ವಿದ್ಯುತ್ ಕೇಂದ್ರಕ್ಕೆ ಪೂರೈಸಬೇಕಾದ ಪ್ರಮಾಣದಲ್ಲಿ ಸ್ವಲ್ಪ ಪ್ರಮಾಣದ ಕಲ್ಲಿದ್ದಲನ್ನು ಬಳ್ಳಾರಿ ಶಾಖೋತ್ಪನ್ನ ವಿದ್ಯುತ್ ಕೇಂದ್ರದ ವಿದ್ಯುತ್ ಉತ್ಪಾದನೆಯ ಗುರಿಯನ್ನು ಪೂರೈಸಲು ಬಳಸಿಕೊಳ್ಳಲಾಗಿದೆ.

C. ಯರಮರಸ್ ಶಾಖೋತ್ಪನ್ನ ವಿದ್ಯುತ್ ಕೇಂದ್ರ ಘಟಕ 1 ಮತ್ತು 2 (2x800 ಮೆ.ವ್ಯಾ)

ಯರಮರಸ್ ಶಾಖೋತ್ಪನ್ನ ವಿದ್ಯುತ್ ಕೇಂದ್ರದ ಪ್ರತಿದಿನದ ಕಲ್ಲಿದ್ದಲಿನ ಅಗತ್ಯತೆ ಸುಮಾರು 19,000 ಟನ್‌ಗಳು. 2017-18 ನೇ ಸಾಲಿನಲ್ಲಿ ಸ್ವೀಕೃತವಾದ ಮತ್ತು ಬಳಕೆಯಾದ ಕಲ್ಲಿದ್ದಲಿನ ಪ್ರಮಾಣ ಕ್ರಮವಾಗಿ 6.50 ಲಕ್ಷ ಟನ್‌ಗಳು ಹಾಗು 6.34 ಲಕ್ಷ ಟನ್‌ಗಳಷ್ಟಿರುತ್ತದೆ. ಕಲ್ಲಿದ್ದಲಿನ ಬಳಕೆಯು ಪ್ರತಿ ಯೂನಿಟ್‌ಗೆ ಸುಮಾರು 0.637 ಕಿಲೋ ಗ್ರಾಂ (ಕೆ.ಜಿ/ಕೆ.ಡಬ್ಲ್ಯೂ.ಹೆಚ್) ರಷ್ಟಿರುತ್ತದೆ. ವೈ.ಟಿ.ಪಿ.ಎಸ್. ನಲ್ಲಿ ರೈಲ್ವೆ ಮೂಲಸೌಕರ್ಯಗಳು ಪೂರ್ಣಗೊಳ್ಳದಿರುವ ಕಾರಣ ಎಸ್.ಸಿ.ಸಿ.ಎಲ್.ನ ಕಲ್ಲಿದ್ದಲು ಆರ್.ಟಿ.ಪಿ.ಎಸ್. ನಲ್ಲಿ ಸ್ವೀಕೃತವಾಗುತ್ತಿದೆ ಹಾಗೂ ವೈ.ಟಿ.ಪಿ.ಎಸ್.ಗೆ ಈ ಕಲ್ಲಿದ್ದಲನ್ನು ರಸ್ತೆ ಮಾರ್ಗದ ಮೂಲಕ ಸಾಗಣೆ ಮಾಡಲಾಗುತ್ತಿದೆ.

ಬಳ್ಳಾರಿ ಶಾಖೋತ್ಪನ್ನ ವಿದ್ಯುತ್ ಕೇಂದ್ರದ ಘಟಕ-3 (1x700 ಮೆ.ವ್ಯಾ), ಯರಮರಸ್ ಶಾಖೋತ್ಪನ್ನ ವಿದ್ಯುತ್ ಕೇಂದ್ರದ ಘಟಕ-1 ಮತ್ತು 2 (2x800 ಮೆ.ವ್ಯಾ), ಯದ್ಲಾಪುರ್ ಶಾಖೋತ್ಪನ್ನ ವಿದ್ಯುತ್ ಕೇಂದ್ರ (1x800 ಮೆ.ವ್ಯಾ) ಹಾಗೂ ಗೋಧ್ನ ಶಾಖೋತ್ಪನ್ನ ವಿದ್ಯುತ್ ಕೇಂದ್ರದ ಘಟಕ-1 ಮತ್ತು 2 (2x800 ಮೆ.ವ್ಯಾ)ರ ಕಲ್ಲಿದ್ದಲಿನ ಅಗತ್ಯತೆ:

1. ಯರಮರಸ್ ಶಾಖೋತ್ಪನ್ನ ವಿದ್ಯುತ್ ಕೇಂದ್ರ (2x800 ಮೆ.ವ್ಯಾ), ಯದ್ಲಾಪುರ್ ಶಾಖೋತ್ಪನ್ನ ವಿದ್ಯುತ್ ಕೇಂದ್ರ (1x800 ಮೆ.ವ್ಯಾ) ಮತ್ತು ಬಳ್ಳಾರಿ ಶಾಖೋತ್ಪನ್ನ ವಿದ್ಯುತ್ ಕೇಂದ್ರದ ಘಟಕ - 3 (1x700 ಮೆ.ವ್ಯಾ) ರ ಕಲ್ಲಿದ್ದಲು ಅಗತ್ಯತೆಗಳಿಗಾಗಿ ಕರ್ನಾಟಕ ವಿದ್ಯುತ್ ನಿಗಮವು ಕಲ್ಲಿದ್ದಲು ಬ್ಲಾಕ್‌ಗಳ ಹಂಚಿಕೆಗಾಗಿ ಅರ್ಜಿಯನ್ನು ಸಲ್ಲಿಸಿತ್ತು. ದಿಯೋಚಾ-ಪಚಾಮಿ ಕಲ್ಲಿದ್ದಲು ಬ್ಲಾಕ್‌ಗಳನ್ನು ಜಂಟಿಯಾಗಿ 6 ರಾಜ್ಯಗಳಾದ ಪಶ್ಚಿಮ ಬಂಗಾಳ, ಕರ್ನಾಟಕ, ಬಿಹಾರ, ಉತ್ತರ ಪ್ರದೇಶ, ಪಂಜಾಬ್ ಮತ್ತು ತಮಿಳುನಾಡು ರಾಜ್ಯಗಳ ಕಂಪನಿಗಳಿಗೆ ದಿನಾಂಕ 06.09.2013 ರ ಪತ್ರದ ಮುಖಾಂತರ ಕಲ್ಲಿದ್ದಲು ಮಂತ್ರಾಲಯ, ಭಾರತ ಸರ್ಕಾರ ಹಂಚಿಕೆ ಮಾಡಿತ್ತು.

2. ಕಲ್ಲಿದ್ದಲು ಬ್ಲಾಕ್‌ಗಳ ಅಭಿವೃದ್ಧಿಯ ಪ್ರಗತಿಯನ್ನು ಪರಾಮರ್ಶಿಸಲು ದಿಯೋಚಾ-ಪಚಾಮಿ ಕಲ್ಲಿದ್ದಲು ಬ್ಲಾಕ್‌ಗಳ ಜಂಟಿ ಪಾಲುದಾರರ ಜೊತೆ ಕಲ್ಲಿದ್ದಲು ಮಂತ್ರಾಲಯ, ಭಾರತ ಸರ್ಕಾರವು ಸಭೆಯನ್ನು ನಡೆಸಿತ್ತು. ಜಂಟಿಯಾಗಿ ಹಂಚಿಕೆ ಮಾಡಲಾಗಿರುವುದರಿಂದ ಈ ಕಲ್ಲಿದ್ದಲು ಬ್ಲಾಕ್‌ಗಳ ಕಾರ್ಯಾರಂಭಕ್ಕೆ ಅಡೆತಡೆಗಳನ್ನು ಎದುರಿಸಲಾಗುತ್ತಿದೆ ಎಂದು ಕಲ್ಲಿದ್ದಲು ಮಂತ್ರಾಲಯದ ಗಮನಕ್ಕೆ ತರಲಾಯಿತು. ವಿವಿಧ ಜಂಟಿ ಪಾಲುದಾರರ ಸಲಹೆಗಳು ಮತ್ತು ಪಶ್ಚಿಮ ಬಂಗಾಳ ಸರ್ಕಾರದಿಂದ ಸ್ವೀಕೃತವಾಗಿರುವ ಮನವಿಗಳ ಆಧಾರದ ಮೇಲೆ ಸಂಬಂಧಪಟ್ಟ ಅಧಿಕಾರಿಗಳ ಅನುಮೋದನೆಯ ಮೇರೆಗೆ, ಅವರವರ ಅಗತ್ಯತೆಗೆ ಅನುಗುಣವಾಗಿ, ದಿಯೋಚಾ-ಪಚಾಮಿ ಕಲ್ಲಿದ್ದಲು ಬ್ಲಾಕ್‌ಗಳನ್ನು ಒಂದು ರಾಜ್ಯಕ್ಕೆ ಮತ್ತು ಪ್ರತ್ಯೇಕವಾದ ಕಲ್ಲಿದ್ದಲು ಬ್ಲಾಕ್‌ಗಳನ್ನು ಇತರೆ ರಾಜ್ಯಗಳಿಗೆ ಹಂಚಿಕೆ ಮಾಡಲು ನಿರ್ಧರಿಸಲಾಯಿತು.

3. ಈ ಸಂಬಂಧ, ಕಲ್ಲಿದ್ದಲು ಮಂತ್ರಾಲಯ, ಭಾರತ ಸರ್ಕಾರವು ಈ ಮೇಲಿನ ರಾಜ್ಯಗಳಿಂದ ಕಲ್ಲಿದ್ದಲು ಬ್ಲಾಕ್‌ಗಳ ಹಂಚಿಕೆಗಾಗಿ ಅರ್ಜಿಗಳನ್ನು ಆಹ್ವಾನಿಸಿ ದಿನಾಂಕ 03.10.2016 ರಂದು ಸೂಚನೆಯನ್ನು ನೀಡಿತು.

4. ಕಲ್ಲಿದ್ದಲು ಗಣಿಗಳ ಸ್ಪರ್ಧಾತ್ಮಕ ಹರಾಜು ನಿಯಮಗಳು, 2012 ರ ಅಡಿಯಲ್ಲಿ ಈ ಕೆಳಗಿನ ಯೋಜನೆಗಳಿಗಾಗಿ, ಒಡಿಶಾದಲ್ಲಿ 1,163 ಮಿಲಿಯನ್ ಟನ್ ಶೇಖರಣೆ ಹೊಂದಿರುವ 'ಗೋಗರಪಲ್ಲಿ ಮತ್ತು ಡಿಪ್ ಸೈಡ್ ಗೋಗರಪಲ್ಲಿ' ಕಲ್ಲಿದ್ದಲು ಬ್ಲಾಕ್‌ಗಳ ಹಂಚಿಕೆಗಾಗಿ ಕರ್ನಾಟಕ ವಿದ್ಯುತ್ ನಿಗಮವು ದಿನಾಂಕ 20.10.2016 ರಂದು ಅರ್ಜಿಯನ್ನು ಕಲ್ಲಿದ್ದಲು ಮಂತ್ರಾಲಯ, ಭಾರತ ಸರ್ಕಾರಕ್ಕೆ ಸಲ್ಲಿಸಿತು:

ಕ್ರಮ ಸಂಖ್ಯೆ	ಶಾಖೋತ್ಪನ್ನ ವಿದ್ಯುತ್ ಕೇಂದ್ರದ ಹೆಸರು	ಸಾಮರ್ಥ್ಯ (ಮೆಗಾ ವ್ಯಾಟ್ ಗಳಲ್ಲಿ)	ಕಲ್ಲಿದ್ದಲು ಅಗತ್ಯತೆ (ಮಿಲಿಯನ್ ಟನ್ ಪ್ರತಿವರ್ಷಕ್ಕೆ)
1	ಬಳ್ಳಾರಿ ಟಿ.ಪಿ.ಎಸ್ ಘಟಕ – 3	700	3.45
2	ಯರಮರಸ್ ಟಿ.ಪಿ.ಎಸ್ ಘಟಕ-1 & 2	1600	7.88
3	ಯದ್ಲಾಪುರ್ ಟಿ.ಪಿ.ಎಸ್ – 1	800	3.95
4	ಗೋಧ್ನ ಟಿ.ಪಿ.ಎಸ್ ಘಟಕ – 1 & 2C	1600	7.88
	ಒಟ್ಟು	**4700**	**23.16**

5. ಈ ಮಧ್ಯೆ, 1x700 ಮೆ.ವ್ಯಾ ಸಾಮರ್ಥ್ಯದ ಬಳ್ಳಾರಿ ಶಾಖೋತ್ಪನ್ನ ವಿದ್ಯುತ್ ಕೇಂದ್ರದ 3ನೇ ಘಟಕ, 2x800 ಮೆ.ವ್ಯಾ ಸಾಮರ್ಥ್ಯದ ಯರಮರಸ್ ಶಾಖೋತ್ಪನ್ನ ವಿದ್ಯುತ್ ಕೇಂದ್ರದ 1 & 2 ನೇ ಘಟಕಗಳಿಗಾಗಿ ಎಸ್.ಸಿ.ಸಿ.ಎಲ್ ನಿಂದ ಬ್ರಿಡ್ಜ್ ಲಿಂಕೇಜ್ ಅನ್ನು ನೀಡಲು, ಕರ್ನಾಟಕ ವಿದ್ಯುತ್ ನಿಗಮವು ಕಲ್ಲಿದ್ದಲು ಮಂತ್ರಾಲಯ, ಭಾರತ ಸರ್ಕಾರವನ್ನು ಕೋರಿತ್ತು. OM No. 23021/3/2015-CPD, ದಿನಾಂಕ 08.02.2016 ನಲ್ಲಿ ಸೂಚಿಸಿರುವ ನಿಯಮಗಳು ಮತ್ತು ಷರತ್ತುಗಳ ಪ್ರಕಾರ ಕಲ್ಲಿದ್ದಲು ಬ್ಲಾಕ್ ಹಂಚಿಕೆಯಾದ ದಿನಾಂಕ'ದಿಂದ 3 ವರ್ಷಗಳವರೆಗೆ ಎಸ್.ಸಿ.ಸಿ.ಎಲ್ ನಿಂದ ಬ್ರಿಡ್ಜ್ ಲಿಂಕೇಜ್ ಅನ್ನು ನೀಡಲು ಕಲ್ಲಿದ್ದಲು ಮಂತ್ರಾಲಯ, ಭಾರತ ಸರ್ಕಾರ File No. 23014/2/2016/CPD, ದಿನಾಂಕ 11.04.2016 ಪತ್ರದ ಮುಖಾಂತರ ಶಿಫಾರಸ್ಸು ಮಾಡಿತು. ಕಲ್ಲಿದ್ದಲು ಮಂತ್ರಾಲಯವು ದಿನಾಂಕ 26.10.2016 ರ ಪತ್ರದ ಮುಖಾಂತರ, ಬ್ರಿಡ್ಜ್ ಲಿಂಕೇಜ್ ಅವಧಿ ಮುಗಿದ ದಿನಾಂಕದಿಂದ 1 ವರ್ಷದ ವರೆಗೆ ಬ್ರಿಡ್ಜ್ ಲಿಂಕೇಜ್‌ನ ಅವಧಿಯನ್ನು ವಿಸ್ತರಿಸಿದೆ (15.09.2017 ರ ವರೆಗೆ). ಮುಂದುವರೆದು, ಕಲ್ಲಿದ್ದಲು ಮಂತ್ರಾಲಯ ದಿ. 26.09.2017 ರ ಪತ್ರದ ಮೂಲಕ ಬ್ರಿಡ್ಜ್ ಲಿಂಕೇಜ್ ಅವಧಿಯನ್ನು ಮತ್ತೊಂದು ವರ್ಷಕ್ಕೆ ಅಂದರೆ 14.08.2018 ವರೆಗೆ ಮುಂದುವರೆಸಿತು.

6. ಭಾರತ ಸರ್ಕಾರದ ಕಲ್ಲಿದ್ದಲು ಮಂತ್ರಾಲಯ ದಿ. 08.03.2018 ರ ಪತ್ರ ಸಂಖ್ಯೆ 23021/3/2015 CPD/CLD ರಲ್ಲಿ, ಕರ್ನಾಟಕ ಸರ್ಕಾರದ ಮುಖ್ಯ ಕಾರ್ಯದರ್ಶಿ ಇವರಿಗೆ ನಿರ್ದೇಶಿತ ತಮ್ಮ ಪತ್ರ ಸಂಖ್ಯೆ. CBA1-38011/2/2017 ದಿ. 05.12.2017 ರ ಮೂಲಕ, ದಿಯೋಚ ಪಚಾಮಿ ಕಲ್ಲಿದ್ದಲು ಬ್ಲಾಕ್‌ನ ಹಂಚಿಕೆ ರದ್ದಾಗಿದೆ ಎಂದು ತಿಳಿಸಿದ್ದು ಬ್ರಿಡ್ಜ್ ಲಿಂಕೇಜ್‌ನ ಅಡಿಯಲ್ಲಿ ಕಲ್ಲಿದ್ದಲು ಸರಬರಾಜು 31.05.2018 ರ ನಂತರ ಮುಂದುವರೆಸುವುದಿಲ್ಲವೆಂದು ಮತ್ತು SHAKTI Policy ಅಡಿಯಲ್ಲಿ ಕಲ್ಲಿದ್ದಲು ಲಿಂಕೇಜ್‌ಗಾಗಿ ಅಥವಾ ಕಲ್ಲಿದ್ದಲು ಬ್ಲಾಕ್‌ನ ಹಂಚಿಕೆಗಾಗಿ ಅರ್ಜಿ ಸಲ್ಲಿಸಲು ಕರ್ನಾಟಕ ಸರ್ಕಾರ ಮತ್ತು ಕರ್ನಾಟಕ ವಿದ್ಯುತ್ ನಿಗಮಕ್ಕೆ ಸಲಹೆ ನೀಡಿರುತ್ತದೆ.

ಅದರಂತೆ, ಕರ್ನಾಟಕ ವಿದ್ಯುತ್ ನಿಗಮವು, ದಿ. 17.03.2018 ರ ಪತ್ರದ ಮೂಲಕ ಕಲ್ಲಿದ್ದಲು ಮಂತ್ರಾಲಯ ಮತ್ತು ವಿದ್ಯುತ್ ಮಂತ್ರಾಲಯಗಳಿಗೆ, ಹೊಸ ಕಲ್ಲಿದ್ದಲು ಬ್ಲಾಕ್‌ಗೆ ಅರ್ಜಿಗಳು ಬಾಕಿಯಿರುವಂತೆ ಬಳ್ಳಾರಿ ವಿದ್ಯುತ್ ಕೇಂದ್ರದ ಘಟಕ 3 ಕ್ಕೆ 30 ಲಕ್ಷ ಮೆಟ್ರಿಕ್ ಟನ್ ಮತ್ತು ಯರಮರಸ್ ಶಾಖೋತ್ಪನ್ನ ವಿದ್ಯುತ್ ಕೇಂದ್ರಕ್ಕೆ 60 ಲಕ್ಷ ಮೆಟ್ರಿಕ್ ಟನ್ ಕಲ್ಲಿದ್ದಲು ಪೂರೈಸಲು SHAKTI Policy ಅಡಿಯಲ್ಲಿ ಲಿಂಕೇಜ್ ಅನ್ನು ನೀಡಲು ಕೋರಿರುತ್ತದೆ.

7. ಮುಂದುವರೆದು, ಭಾರತ ಸರ್ಕಾರದ ಕಲ್ಲಿದ್ದಲು ಮಂತ್ರಾಲಯವು ದಿ. 20.03.2018 ರ ಪತ್ರದ ಮೂಲಕ 'ಗೋಗರಪಲ್ಲಿ ಮತ್ತು ಡಿಪ್ ಸೈಡ್ ಗೋಗರಪಲ್ಲಿ' ಕಲ್ಲಿದ್ದಲು ಬ್ಲಾಕ್‌ಗಳು ಕರ್ನಾಟಕ ವಿದ್ಯುತ್ ನಿಗಮಕ್ಕೆ ಹಂಚಿಕೆಗೆ ಲಭ್ಯವಿಲ್ಲವೆಂದು ಹಾಗೂ ಮುಂದಿನ ದಿನಗಳಲ್ಲಿ ಕಲ್ಲಿದ್ದಲು ಮಂತ್ರಾಲಯ ಅಥವಾ ನಾಮಿನೇಟೆಡ್ ಅಥಾರಿಟಿಯವರು ಕಲ್ಲಿದ್ದಲು ಬ್ಲಾಕ್‌ಗಳ ಹಂಚಿಕೆಗೆ ಅರ್ಜಿ ಆಹ್ವಾನಿಸಿದಾಗ, ಅದರಲ್ಲಿ ಕರ್ನಾಟಕ ವಿದ್ಯುತ್ ನಿಗಮ ಭಾಗವಹಿಸಲು ಸಲಹೆ ನೀಡಿರುತ್ತಾರೆ ಮತ್ತು ಹಾಗೆ ಸಲ್ಲಿಸಿದ ಅರ್ಜಿಗಳನ್ನು ನಿಯಮಾನುಸಾರ ಪರಿಗಣಿಸುವುದಾಗಿ ತಿಳಿಸಿರುತ್ತಾರೆ.

8. ಭಾರತ ಸರ್ಕಾರದ ಕಲ್ಲಿದ್ದಲು ಸಚಿವಾಲಯವು ದಿ. 10.04.2018 ರಂದು ನಡೆದ ವಿದ್ಯುತ್ ಕ್ಷೇತ್ರಕ್ಕೆ ಸಂಬಂಧಿಸಿದ ಸ್ಟಾಂಡಿಂಗ್ ಅಂಕೇಜ್ ಕಮಿಟಿ (ದೀರ್ಘಾವಧಿ) (SLC(LT)) ಸಭೆಯಲ್ಲಿ, 1x700 ಮೆ.ವ್ಯಾ ಸಾಮರ್ಥ್ಯದ ಬಳ್ಳಾರಿ ವಿದ್ಯುತ್ ಕೇಂದ್ರದ ಘಟಕ-3 ಮತ್ತು 2x800 ಮೆ.ವ್ಯಾ ಸಾಮರ್ಥ್ಯದ ಯರಮರಸ್ ವಿದ್ಯುತ್ ಕೇಂದ್ರದ 1 & 2 ನೇ ಘಟಕಗಳಿಗೆ ಎಸ್.ಸಿ.ಸಿ.ಎಲ್.ನಿಂದ SHAKTI Policy ಅಡಿಯಲ್ಲಿ ಇಂಧನ ಪೂರೈಕೆ ಒಪ್ಪಂದಕ್ಕೆ ಸಹಿ ಮಾಡಿದ ದಿನದಿಂದ 3 ವರ್ಷಗಳ ಅವಧಿಗೆ ಕಲ್ಲಿದ್ದಲಿನ ಅಂಕೇಜ್ ಒದಗಿಸುವಂತೆ ಆದೇಶಿಸಿರುತ್ತಾರೆ ಮತ್ತು ತದನಂತರ ಈ ಎಲ್ಲ ಘಟಕಗಳ ಸಂಪೂರ್ಣ ಅಂಕೇಜ್ ಅನ್ನು ಕೋಲ್ ಇಂಡಿಯಾ ಲಿ. ಗೆ ವರ್ಗಾಯಿಸಲಾಗುವುದು ಎಂದೂ ತಿಳಿಸಿರುತ್ತಾರೆ.

9. ಮುಂದುವರೆದು, ಎಂ.ಸಿ.ಎಲ್. ನಿಂದ ರಾಯಚೂರು ವಿದ್ಯುತ್ ಕೇಂದ್ರಕ್ಕೆ ಪೂರೈಸಲಾಗುವ ಪ್ರಮಾಣದಲ್ಲಿ ಸ್ವಲ್ಪ ಪ್ರಮಾಣದ ಕಲ್ಲಿದ್ದಲನ್ನು ಬಳ್ಳಾರಿ ವಿದ್ಯುತ್ ಕೇಂದ್ರದಲ್ಲಿ ಬಳಸಿಕೊಂಡಿದ್ದರಿಂದ, ರಾಯಚೂರು ವಿದ್ಯುತ್ ಕೇಂದ್ರದ ಉತ್ಪಾದನೆಯ ಗುರಿಯನ್ನು ಪೂರೈಸಲು, 2017-18 ರ ಇಂಧನ ಪೂರೈಕೆ ಒಪ್ಪಂದದ ಪ್ರಮಾಣದ ಹೊರತಾಗಿ ಎಸ್.ಸಿ.ಸಿ.ಎಲ್ ನಿಂದ ಎಂ.ಓ.ಯು ಅಡಿಯಲ್ಲಿ ಹೆಚ್ಚುವರಿ ಕಲ್ಲಿದ್ದಲನ್ನು ಸಹ ಪಡೆದು ರಾಯಚೂರು ವಿದ್ಯುತ್ ಕೇಂದ್ರದಲ್ಲಿ ಬಳಸಿಕೊಳ್ಳಲಾಗಿದೆ.

10. ಈ ಮೇಲಿನ ಅಂಶಗಳನ್ನು ಪರಿಗಣಿಸಿ, ಹಣಕಾಸು ವರ್ಷ 2017-18 ರಲ್ಲಿ ಬಳ್ಳಾರಿ ವಿದ್ಯುತ್ ಕೇಂದ್ರ, ಯರಮರಸ್ ವಿದ್ಯುತ್ ಕೇಂದ್ರ, ರಾಯಚೂರು ವಿದ್ಯುತ್ ಕೇಂದ್ರಗಳಿಗಾಗಿ ಎಸ್.ಸಿ.ಸಿ.ಎಲ್ ನಿಂದ ಎಂ.ಓ.ಯು ಅಡಿಯಲ್ಲಿ ಈ ಕೆಳಗಿನಂತೆ ಕಲ್ಲಿದ್ದಲು ಪೂರೈಕೆ ಮಾಡಲು ಕರ್ನಾಟಕ ವಿದ್ಯುತ್ ನಿಗಮವು ಎಸ್.ಸಿ.ಸಿ.ಎಲ್. ನೊಂದಿಗೆ ಎಂ.ಓ.ಯು ಮಾಡಿಕೊಂಡಿದೆ.

ಕ್ರಮ ಸಂಖ್ಯೆ	ಶಾಖೋತ್ಪನ್ನ ವಿದ್ಯುತ್ ಕೇಂದ್ರ	ಪ್ರಮಾಣ (ಲಕ್ಷ ಮೆಟ್ರಿಕ್ ಟನ್ ಗಳಲ್ಲಿ)
1	ಬಿ.ಟಿ.ಪಿ.ಎಸ್ & ಆರ್.ಟಿ.ಪಿ.ಎಸ್	62.00
2	ವೈ.ಟಿ.ಪಿ.ಎಸ್	30.00
	ಒಟ್ಟು	**92.00**

XII. ರಾಯಚೂರು ಶಾಖೋತ್ಪನ್ನ ವಿದ್ಯುತ್ ಕೇಂದ್ರ, ಬಳ್ಳಾರಿ ಶಾಖೋತ್ಪನ್ನ ವಿದ್ಯುತ್ ಕೇಂದ್ರ ಮತ್ತು ಯರಮರಸ್ ಶಾಖೋತ್ಪನ್ನ ವಿದ್ಯುತ್ ಕೇಂದ್ರಗಳಿಂದ ಹಾರು ಬೂದಿಯನ್ನು ತೆರವು ಮಾಡುವುದು:

ಆರ್.ಟಿ.ಪಿ.ಎಸ್:

ಕರ್ನಾಟಕ ವಿದ್ಯುತ್ ನಿಗಮವು, ಆರ್.ಟಿ.ಪಿ.ಎಸ್ ನಿಂದ ಶೇ.100 ರಷ್ಟು ಹಾರು ಬೂದಿಯನ್ನು ತೆರವು ಮಾಡಲು ಮತ್ತು ಬಳಕೆ ಮಾಡಲು ಹಾರು-ಬೂದಿ ಬಳಕೆದಾರರ ಜೊತೆಗೆ ಒಪ್ಪಂದಗಳನ್ನು ಮಾಡಿಕೊಂಡಿದೆ. ಪರಿಸರ ಮತ್ತು ಅರಣ್ಯ ಸಚಿವಾಲಯದ ನಿಯಮಾನುಸಾರ ಹಾರು ಬೂದಿಯನ್ನು ಸಣ್ಣ ಕೈಗಾರಿಕೆಗಳಿಗೆ ಉಚಿತವಾಗಿ ನೀಡಲಾಗುತ್ತಿದೆ.

ಕರ್ನಾಟಕ ವಿದ್ಯುತ್ ನಿಗಮವು, ಘಟಕ 1 - 6 ಗಳಿಂದ ವಾರ್ಷಿಕ 8 ಲಕ್ಷಟನ್ ಹಾರು ಬೂದಿಯನ್ನು ತೆರವು ಮಾಡಲು ಮೆ: ಎ.ಆರ್.ವಿ. ಸಿಮೆಂಟ್ ಸೊಸೈಟಿ ಜೊತೆ 10 ವರ್ಷಗಳ ದೀರ್ಘಾವಧಿ ಒಪ್ಪಂದವನ್ನು ಮಾಡಿಕೊಂಡಿದೆ ಹಾಗೂ ಘಟಕ 7 ರಿಂದ ವಾರ್ಷಿಕ 2 ಲಕ್ಷ ಟನ್ ಹಾರು ಬೂದಿಯನ್ನು ತೆರವು ಮಾಡಲು ಮೆ: ಕಲಬುರ್ಗಿ ಸಿಮೆಂಟ್ ಪ್ರೈ. ಲಿಮಿಟೆಡ್ ಜೊತೆ 10 ವರ್ಷಗಳ ದೀರ್ಘಾವಧಿ ಒಪ್ಪಂದವನ್ನು ಮಾಡಿಕೊಂಡಿದೆ. ಆರ್.ಟಿ.ಪಿ.ಎಸ್. ನ ಘಟಕ-8 ರಿಂದ ವಾರ್ಷಿಕ 3 ಲಕ್ಷ ಟನ್ ಹಾರು ಬೂದಿಯನ್ನು ತೆರವು ಮಾಡಲು ಕರ್ನಾಟಕ ವಿದ್ಯುತ್ ನಿಗಮವು, ಮೆ: ಎ.ಆರ್.ವಿ. ಸಿಮೆಂಟ್ ಸೊಸೈಟಿ ಜೊತೆ 3 ವರ್ಷಗಳ ಅವಧಿಗೆ ಒಪ್ಪಂದವನ್ನು ಮಾಡಿಕೊಂಡಿದೆ. ದಿ. 23.09.2014 ರ ಮಾನ್ಯ ಉಚ್ಚ ನ್ಯಾಯಾಲಯದ ತಡೆಯಾಜ್ಞೆಗನುಗುಣವಾಗಿ ಮೆ. ಕಲಬುರ್ಗಿ ಸಿಮೆಂಟ್ ಪ್ರೈ. ಲಿಮಿಟೆಡ್ ರವರಿಗೆ ಹಾರುಬೂದಿಯನ್ನು ನೀಡಲಾಗಿದೆ.

2017-18ನೇ ಸಾಲಿನಲ್ಲಿ ತೆರವುಗೊಳಿಸಿದ ಹಾರು ಬೂದಿ ಪ್ರಮಾಣದ ವಿವರಗಳು ಈ ಕೆಳಕಂಡಂತಿವೆ:

ಕ್ರಮ ಸಂಖ್ಯೆ	ಏಜೆನ್ಸೀಸ್	ಆರ್.ಟಿ.ಪಿ.ಎಸ್ ಘಟಕ ಸಂಖ್ಯೆ	ಹಾರು ಬೂದಿಯ ಪ್ರಮಾಣ ಲಕ್ಷ ಟನ್‌ಗಳಲ್ಲಿ
1.	ಮೆ: ಎ.ಆರ್.ವಿ. ಸಿಮೆಂಟ್ ಸೊಸೈಟಿ	1 to 6	8.811
2.	ಮೆ: ಕಲಬುರ್ಗಿ ಸಿಮೆಂಟ್ ಪ್ರೈ. ಲಿಮಿಟೆಡ್	7	1.306
3.	ಮೆ: ಎ.ಆರ್.ವಿ. ಸಿಮೆಂಟ್ ಸೊಸೈಟಿ	8	0.609
4.	ಸಣ್ಣ ಕೈಗಾರಿಕಾ ಘಟಕಗಳು	1 to 8	1.848
5.	ಕೆ.ಪಿ.ಸಿ ನಾಮಿನೀಸ್ / ಖಾಸಗಿ ಗುತ್ತಿಗೆದಾರರು	1 to 8	0.387
	ಒಟ್ಟು		12.961

2017-18 ನೇ ಸಾಲಿನಲ್ಲಿ ಉತ್ಪಾದನೆಯಾದ ಹಾರು ಬೂದಿಯ ಒಟ್ಟು ಪ್ರಮಾಣವು 24.010 ಲಕ್ಷ ಟನ್‌ಗಳು. ಅದರಲ್ಲಿ ಬಳಕೆ ಮಾಡಬಹುದಾದ ಹಾರು ಬೂದಿಯ ಪ್ರಮಾಣವು 17.288 ಲಕ್ಷ ಟನ್‌ಗಳು. ಇದರಲ್ಲಿ 12.961 ಲಕ್ಷ ಟನ್‌ಗಳಷ್ಟು ಹಾರು ಬೂದಿಯನ್ನು ತೆರವುಗೊಳಿಸಲಾಗಿದ್ದು ಮತ್ತು ಶೇ.74.97 ರಷ್ಟು ಉಪಯೋಗ ಮಾಡಿಕೊಳ್ಳಲಾಗಿದೆ. ಕಲ್ಲಿದ್ದಲಿನ ಸರಾಸರಿ ಬೂದಿ ಅಂಶ ಶೇ. 34.66 ರಷ್ಟಿದೆ.

ಬಿ.ಟಿ.ಪಿ.ಎಸ್:

ಕರ್ನಾಟಕ ವಿದ್ಯುತ್ ನಿಗಮವು, ಬಿ.ಟಿ.ಪಿ.ಎಸ್‌ನಿಂದ ಶೇ. 100 ರಷ್ಟು ಹಾರು ಬೂದಿಯನ್ನು ತೆರವು ಮಾಡಲು ಮತ್ತು ಬಳಕೆ ಮಾಡಲು ಹಾರು-ಬೂದಿ ಬಳಕೆದಾರರ ಜೊತೆಗೆ ಒಪ್ಪಂದಗಳನ್ನು ಮಾಡಿಕೊಂಡಿದೆ.

ನಿಗಮವು ಕ್ರಮವಾಗಿ ಘಟಕ 1 ಮತ್ತು 2 ರಿಂದ ಹಾರು ಬೂದಿಯನ್ನು ತೆರವು ಮಾಡಲು ಮೆ: ರೇನ್ ಸಿಮೆಂಟ್ ಲಿಮಿಟೆಡ್, ಹೈದರಾಬಾದ್ ಹಾಗೂ ಮೆ. ಅಲ್ಟ್ರಾಟೆಕ್ ಸಿಮೆಂಟ್ ಲಿಮಿಟೆಡ್, ತಾಡಿಪತ್ರಿಯವರ ಜೊತೆ ದೀರ್ಘಾವಧಿ ಒಪ್ಪಂದಗಳನ್ನು ಮಾಡಿಕೊಂಡಿದೆ.

ನಿಗಮವು ಘಟಕ 3 ರಿಂದ ಹಾರು ಬೂದಿಯನ್ನು ತೆರವು ಮಾಡಲು 3 ವರ್ಷಗಳ ಅವಧಿಗೆ 3 ಏಜೆನ್ಸಿಗಳಾದ ಮೆ: ಏ.ಸಿ.ಸಿ. ಲಿಮಿಟೆಡ್ ರೊಡನೆ ವಾರ್ಷಿಕ 2.5 ಲಕ್ಷಟನ್, ಮೆ: ದಿ.ರ್‍ಯಾಮ್‌ಕೊ ಸಿಮೆಂಟ್ ಲಿ. ರೊಡನೆ ವಾರ್ಷಿಕ 30,000 ಟನ್ ಮತ್ತು ಮೆ: ಜೆ.ಕೆ.ಸಿಮೆಂಟ್ ಲಿ. ರೊಡನೆ ವಾರ್ಷಿಕ 36,000 ಟನ್ ಗಳಿಗೆ ಒಪ್ಪಂದಗಳನ್ನು ಮಾಡಿಕೊಂಡಿದೆ.

2017-18ನೇ ಸಾಲಿನಲ್ಲಿ ತೆರವುಗೊಳಿಸಿದ ಹಾರು ಬೂದಿ ಪ್ರಮಾಣದ ವಿವರಗಳು ಈ ಕೆಳಕಂಡಂತಿವೆ:

ಕ್ರಮ ಸಂಖ್ಯೆ	ಏಜೆನ್ಸೀಸ್	ಬಿ.ಟಿ.ಪಿ.ಎಸ್ ಘಟಕ ಸಂಖ್ಯೆ	ಹಾರು ಬೂದಿಯ ಪ್ರಮಾಣ ಲಕ್ಷ ಟನ್‌ಗಳಲ್ಲಿ
1.	ಮೆ: ರೇನ್ ಸಿಮೆಂಟ್ ಲಿಮಿಟೆಡ್, ಹೈದರಾಬಾದ್	1, 2 & 3	1.255
2.	ಮೆ: ಅಲ್ಟ್ರಾಟೆಕ್ ಸಿಮೆಂಟ್ ಲಿಮಿಟೆಡ್, ತಾಡಿಪತ್ರಿ	1, 2 & 3	1.525
3.	ಮೆ. ರ್‍ಯಾಮ್ಕೋ ಸಿಮೆಂಟ್	3	0.011
4.	ಸಣ್ಣ ಕೈಗಾರಿಕಾ ಘಟಕಗಳು ಮತ್ತು ಇತರೇ ಏಜೆನ್ಸೀಸ್‌ಗಳಿಂದ ಹೊಂಡ ಬೂದಿಯ ವಿಲೇವಾರಿ	1, 2 & 3	1.641
	ಒಟ್ಟು		**4.432**

2017-18 ನೇ ಸಾಲಿನಲ್ಲಿ ಉತ್ಪಾದನೆಯಾದ ಹಾರು ಬೂದಿಯ ಒಟ್ಟು ಪ್ರಮಾಣವು 8.89 ಲಕ್ಷ ಟನ್‌ಗಳು. ಅದರಲ್ಲಿ ಬಳಕೆ ಮಾಡಬಹುದಾದ ಹಾರು ಬೂದಿಯ ಪ್ರಮಾಣವು 7.11 ಲಕ್ಷ ಟನ್‌ಗಳು. ಇದರಲ್ಲಿ 4.43 ಲಕ್ಷ ಟನ್‌ಗಳಷ್ಟು ಹಾರು ಬೂದಿಯನ್ನು ತೆರವುಗೊಳಿಸಲಾಗಿದ್ದು ಮತ್ತು ಶೇ.62.33 ರಷ್ಟು ಉಪಯೋಗಮಾಡಿಕೊಳ್ಳಲಾಗಿದೆ. ಕಲ್ಲಿದ್ದಲಿನ ಸರಾಸರಿ ಬೂದಿ ಅಂಶ ಶೇ. 36.28 ರಷ್ಟಿದೆ.

ವೈ.ಟಿ.ಪಿ.ಎಸ್:

ಕರ್ನಾಟಕ ವಿದ್ಯುತ್ ನಿಗಮವು, ವೈ.ಟಿ.ಪಿ.ಎಸ್ ನಿಂದ ಶೇ. 100 ರಷ್ಟು ಹಾರು ಬೂದಿಯನ್ನು ತೆರವು ಮಾಡಲು ಮತ್ತು ಬಳಕೆ ಮಾಡಲು ಹಾರು ಬೂದಿಯ ಬಳಕೆದಾರರೊಡನೆ ಟೆಂಡರ್ ಪ್ರಕ್ರಿಯೆಯನ್ನು ಅಂತಿಮಗೊಳಿಸಿದೆ. ರಾಯಚೂರು ಪವರ್ ಕಾರ್ಪೋರೇಷನ್ ಸಂಸ್ಥೆಯು ವಾರ್ಷಿಕ ಒಟ್ಟು ಪ್ರಮಾಣ 9 ಲಕ್ಷ ಟನ್ ಗಳಷ್ಟು ಹಾರು ಬೂದಿಯ ತೆರವಿಗೆ 3 ವರ್ಷಗಳ ಅವಧಿಗೆ 9 ಏಜೆನ್ಸಿಗಳೊಡನೆ ಒಪ್ಪಂದಗಳನ್ನು ಮಾಡಿಕೊಳ್ಳುವ ಪ್ರಕ್ರಿಯೆಯು ಪ್ರಗತಿಯಲ್ಲಿದೆ.

<u>ಕಲ್ಲಿದ್ದಲು ಕಂಪನಿಗಳು ಕಲ್ಲಿದ್ದಲಿನ ಬೂದಿ ಅಂಶವು 34% ಗಿಂತ ಕಡಿಮೆ ಇರುವಂತೆ ಪೂರೈಸುವ ಕುರಿತು:</u>

ತ್ರೈಮಾಸಿಕ ಸರಾಸರಿ ಕಲ್ಲಿದ್ದಲಿನಲ್ಲಿ ಬೂದಿ ಅಂಶ 34% ಗಿಂತ ಕಡಿಮೆ ಇರಬೇಕೆನ್ನುವ ಎಮ್.ಒ.ಇ.ಎಫ್. ಷರತ್ತುಗಳಿಗೆ ಅನುಗುಣವಾಗಿ ತೊಳೆದ ಕಲ್ಲಿದ್ದಲನ್ನು ಸಹ ಒಳಗೊಂಡಂತೆ ವಿವಿಧ ದರ್ಜೆಯ ಕಲ್ಲಿದ್ದಲನ್ನು ಪೂರೈಸಲು ಎಸ್.ಸಿ.ಸಿ.ಎಲ್, ಡಬ್ಲ್ಯೂ.ಸಿ.ಎಲ್ ಮತ್ತು ಎಂ.ಸಿ.ಎಲ್ ರವರನ್ನು ಕೋರಲಾಗಿದೆ.

XIII. ವಿದ್ಯುತ್ ಉಳಿತಾಯ ಆವಿಷ್ಕಾರ ಮತ್ತು ಅಭಿವೃದ್ಧಿ, ತಂತ್ರಜ್ಞಾನದ ಒಳಗೂಡಿಕೆ, ವಿದೇಶಿ ವಿನಿಮಯ ಗಳಿಕೆ ಹಾಗೂ ಕಳಿಕೆ:

1) ಸಂಶೋದನೆ ಮತ್ತು ಅಭಿವೃದ್ಧಿ (R&D)-ಜಲ ವಿದ್ಯುತ್

ನವೀನ ಚಟುವಟಿಕೆಗಳು:

a) ಶರಾವತಿ ವಿದ್ಯುದಾಗಾರದ ಡಿಸ್ಟರ್ಬೆನ್ಸ್ ರೇಕಾರ್ಡರ್ ಮತ್ತು ಜಿ.ಪಿ.ಎಸ್ ವ್ಯವಸ್ಥೆಯ ಪೂರೈಕೆ, ರೆಟ್ರೋಫಿಟ್, ಪರೀಕ್ಷೆ ಮತ್ತು ಕಾರ್ಯಾರಂಭ ಕೆಲಸ ಪೂರ್ಣಗೊಳಿಸಲಾಗಿದೆ.

b) ಆರ್.ಟಿ.ಪಿ.ಎಸ್, ಗೇರುಸೊಪ್ಪ, ಕದ್ರಾ ಮತ್ತು ಕೊಡಸಳ್ಳಿ ವಿದ್ಯುದಾಗಾರದ 220 ಏಗಿ ಲೈನ್‌ಗಳಲ್ಲಿ ಆಟೋರಿಕ್ಲೋಸರ್ ವ್ಯವಸ್ಥೆಯನ್ನು ಅಳವಡಿಸುವ ಕೆಲಸ ಪೂರ್ಣಗೊಂಡಿದೆ.

c) PSDF ಅಡಿಯಲ್ಲಿ ಅನುಮೋದನೆಯಾಗಿದ್ದ ಎಲ್ಲಾ ಕೆಲಸಗಳು ಪೂರ್ಣಗೊಂಡಿದೆ. ಶರಾವತಿ ವಿದ್ಯುದಾಗಾರದ DR ವ್ಯವಸ್ಥೆ ಹೊರತಾಗಿ ಎಲ್ಲಾ ಯೋಜನೆಗಳಿಂದ ಅನುಕ್ರಮವಾಗಿ ಕಾರ್ಯ ಪೂರ್ಣಗೊಳಿಸಿದ ಕುರಿತ ದೃಢೀಕರಣ ಪತ್ರ ದೊರಕಿದೆ. 3ನೇ ಕಂತಿನ (ಬಾಕಿ ಪಾವತಿ) ವಿವರದ ಸಹಿತ ಪತ್ರವನ್ನು NLDCಗೆ ಬರೆಯಬೇಕಿದೆ.

d) ಮಹಾತ್ಮ ಗಾಂಧಿ ವಿದ್ಯುದಾಗಾರದಲ್ಲಿ ಬಿಡುಗಡೆ ಮಾಡಿರುವ ಉಪಕರಣ ಮತ್ತು ರಚನೆಗಳ ಮರು ಕೊಳ್ಳುವಿಕೆಯ ಅಡಿಯಲ್ಲಿ ಏರ್ ಇನ್ಸುಲೇಟೆಡ್ ಹೊರಾಂಗಣ ಸ್ವಿಚ್‌ಯಾರ್ಡ್ ರಚನೆ ಹಾಗೂ ಸ್ವಿಚ್‌ಯಾರ್ಡ್ ಉಪಕರಣಗಳು ಮತ್ತು ಸಂಖ್ಯಾತ್ಮಕ ಲೈನ್ ಸಂರಕ್ಷಣಾ ರಿಲೇಗಳ ಪೂರೈಕೆ, ರೆಟ್ರೋಫಿಟ್, ಪರೀಕ್ಷೆ ಮತ್ತು ಕಾರ್ಯಾರಂಭದ ಕೆಲಸಗಳಿಗೆ ಕಾರ್ಯಾದೇಶವನ್ನು ನೀಡಲಾಗಿದೆ.

e) ದಿನಾಂಕ: 29.02.2016ರ ಸರ್ಕಾರ ಆದೇಶ ಸಂಖ್ಯೆ: EN 4 PPT 2016, ಬೆಂಗಳೂರು ಇದರಿಂದ ರಚಿಸಲಾದ ವಿಚಾರಣಾ ಸಮಿತಿಯ ಶಿಫಾರಸ್ಸಿನಂತೆ ಶರಾವತಿ ವಿದ್ಯುದಾಗಾರದ 220 ಏಗಿ ಸ್ವಿಚ್‌ಯಾರ್ಡ್‌ನ ಅರ್ಥಿಂಗ್/ ಅರ್ಥ್ ಮ್ಯಾಟ್‌ನ ಬಲವರ್ಧನೆ/ನವೀಕರಣ ಕೆಲಸ ಪೂರ್ಣಗೊಳಿಸಲಾಗಿದೆ.

f) ಸಿ.ಇ.ಎ ಮತ್ತು ಎಸ್.ಆರ್.ಪಿ.ಸಿ ನಿಯಮಗಳ ಪ್ರಕಾರ ಸೂಪ ವಿದ್ಯುದಾಗಾರದ 110 KV ಸ್ವಿಚ್‌ಯಾರ್ಡ್‌ನಿಂದ ಗಣೇಶಗುಡಿಯ ಕ.ವಿ.ನಿ.ನಿ ಕಾಲೋನಿಗೆ ವಿದ್ಯುತ್ ಪೂರೈಕೆ ಮತ್ತು ವಿದ್ಯುದಾಗಾರಕ್ಕೆ ಆಕ್ಸಿಲಿಯರಿ ವಿದ್ಯುತ್ ಪೂರೈಕೆಗೆ ಕಾರ್ಯಾದೇಶ ನೀಡಲಾಗಿದೆ.

g) ಸಂರಕ್ಷಣಾ ಆಡಿಟ್ ಸಮಿತಿಯು ಕ.ವಿ.ನಿ.ನಿಯ ವಿದ್ಯುದಾಗಾರಗಳಲ್ಲಿ ನಡೆಸಿದ ಇತ್ತೀಚಿನ ಸಂರಕ್ಷಣಾ ಆಡಿಟ್ ಆಧಾರದ ಮೇಲೆ ಕ.ವಿ.ನಿ.ನಿಯ ವಿದ್ಯುದಾಗಾರಗಳ 220/400KV ಸ್ವಿಚ್‌ಯಾರ್ಡ್‌ಗಳ ನವೀಕರಣ, ಆಧುನೀಕರಣ ಮತ್ತು ಉನ್ನತೀಕರಣದ ವಿವರವಾದ ಯೋಜನಾ ವರದಿಯನ್ನು ತಯಾರಿಸಲಾಗಿದೆ. ಶಾಖೋತ್ಪನ್ನ ಮತ್ತು ಜಲ ವಿದ್ಯುದಾಗಾರಗಳ 220/400 KV ಸ್ವಿಚ್‌ಯಾರ್ಡ್‌ನ ನವೀಕರಣ, ಆಧುನೀಕರಣ ಮತ್ತು ಉನ್ನತೀಕರಣವನ್ನು PSDF ಅನುದಾನದಿಂದ ಕಾರ್ಯಗತಗೊಳಿಸಲು ಮಂಡಳಿಯು ಅನುಮೋದನೆ ನೀಡಿದೆ.

h) ವಿಷಯ ಕುರಿತ ವಿವರವಾದ ಯೋಜನಾ ವರದಿಯನ್ನು KPTCL (STU), SRPC, NLDCಗೆ ಸಲ್ಲಿಸಲಾಗಿದೆ.

i) KPTCL ನ ಬೆಲೆಕಟ್ಟುವಿಕೆ (Appraisal) ವರದಿ ದೊರಕಿದೆ.

j) SRPC ಯ ಬೆಲೆಕಟ್ಟುವಿಕೆ (Appraisal) ವರದಿ ದೊರಕಿದೆ.

k) KPTCL ಮತ್ತು SRPC ಯ ಸಲಹೆ/ಅಭಿಪ್ರಾಯಗಳನ್ನು ವಿವರವಾದ ಯೋಜನಾ ವರದಿಯಲ್ಲಿ, ಸಂಯೋಜಿಸಿ, ಸುಮಾರು 156 ಕೋಟಿ ವೆಚ್ಚದ ಪರಿಷ್ಕೃತ ವರದಿಯನ್ನು PSDF ಅನುದಾನದ ಬಳಕೆಗಾಗಿ NLDC ಮತ್ತು MOP/CEA ಗೆ ಸಲ್ಲಿಸಲಾಗಿದೆ.

l) ಯೋಜಿಸಲಾಗಿರುವ ಪ್ರಮುಖ ಕೆಲಸಗಳು:

a. ಜಿ. ಆರ್.ಟಿ.ಪಿ.ಎಸ್, ಶರಾವತಿ, ಆಲಮಟ್ಟಿ, ಗೇರುಸೊಪ್ಪ, ಕದ್ರಾ ಮತ್ತು ಕೊಡಸಳ್ಳಿ ವಿದ್ಯುದಾಗಾರಗಳ ಸ್ವಿಚ್‌ಯಾರ್ಡ್‌ನಲ್ಲಿ 220 KV ಲೈನ್‌ಗಳಲ್ಲಿ ಅಸ್ತಿತ್ವದಲ್ಲಿರುವ ರಿಲೇಗಳನ್ನು ಬದಲಾಯಿಸಿ Main-1 ಮತ್ತು Main-2 ವ್ಯವಸ್ಥೆಯ ಸಂಖ್ಯಾತ್ಮಕ ಡಿಸ್ಟೆನ್ಸ್ ಸಂರಕ್ಷಣಾ ರಿಲೇಗಳ, ಬಸ್ ಕಪಲರ್, ಬಸ್ ಬಾರ್ ಸಂರಕ್ಷಣೆ, SF6 ಬ್ರೇಕರ್, CVTs, PTs ಮತ್ತು ವೇವ್ ಟ್ರಾಪ್‌ನ ಪೂರೈಕೆ ಮತ್ತು ರೆಟ್ರೋಫಿಟ್.

b. ಬಿ.ಟಿ.ಪಿ.ಎಸ್ ಮತ್ತು ಆರ್.ಟಿ.ಪಿ.ಎಸ್ ಗಳ 400 KV ಸ್ವಿಚ್‌ಯಾರ್ಡ್‌ನಲ್ಲಿ ಡಿಸ್ಟೆನ್ಸ್ ಸಂರಕ್ಷಣಾ ರಿಲೇಗಳು, SF6 ಬ್ರೇಕರ್‌ಗಳು, CVTಗಳು, CTಗಳು, ಐಸೊಲೇಟರ್‌ಗಳು ಮತ್ತು ವೇವ್ ಟ್ರಾಪ್‌ಗಳ ಪೂರೈಕೆ ಮತ್ತು ರೆಟ್ರೋಫಿಟ್

A) ಹೊಸ ಪ್ರಸ್ತಾಪಗಳು:

i. ಶಿವನಸಮುದ್ರಂ ಸಮೀಪದ ಕಾವೇರಿ ಬಲದಂಡೆ ನಾಲೆಯಲ್ಲಿ 2x100 ಮೆವ್ಯಾಟ್ ಸಾಮರ್ಥ್ಯದ ಭೂಗತ ವಿದ್ಯುದಾಗಾರ ಒಳಗೊಂಡಿರುವ ನದಿ ಯೋಜನೆಯನ್ನು ರೂಪಿಸಲಾಗಿದೆ ಮತ್ತು ಡಿ.ಪಿ.ಆರ್ ಕರ್ನಾಟಕ ಸರಕಾರಕ್ಕೆ ಸಲ್ಲಿಸಲಾಗಿದೆ. ನಿರಾಪೇಕ್ಷಣಾ ಪತ್ರವನ್ನು ಮೀನುಗಾರಿಕೆ ಇಲಾಖೆ, ಕರ್ನಾಟಕ ಸರಕಾರದ, ಭಾರತ ಸರಕಾರದ ಬುಡಕಟ್ಟು ವ್ಯವಹಾರಗಳ ಸಚಿವಾಲಯ. ಭಾರತ ಸರಕಾರದ ಸಾಮಾಜಿಕ ಕಲ್ಯಾಣ ಸಚಿವಾಲಯ ಮತ್ತು ನ್ಯಾಯ ಭಾರತ ಸರಕಾರ ಗಳಿಂದ ಸ್ವೀಕರಿಸಲಾಗಿದೆ. ಅನುಮೋದನೆಯನ್ನು ಅರಣ್ಯ ಪರ್ಯಾವರಣ ಮತ್ತು ವಾತವರಣ ಬದಲಾವಣೆ ಸಚಿವಾಲಯ ಖಾತೆ ಭಾರತ ಸರಕಾರದಿಂದ 2009ರಲ್ಲಿ ಬಿಡುಗಡೆಯಾದ TOR ಗಾಗಿ ಸಮಯ ವಿಸ್ತರಣೆಗಾಗಿ ವಿನಂತಿಸಿದೆ ಆದರೆ MOEF & CC TOR ಮಾನ್ಯತೆಯ ವಿಸ್ತರಣೆಯ ಪ್ರಸ್ತಾಪವನ್ನು ತಿರಸ್ಕರಿಸಿದೆ. ಕೆಪಿಸಿಎಲ್ ಈ ಯೋಜನೆಗೆ ಹೊಸದಾಗಿ TOR ಅನ್ನು ಆನ್‌ಲೈನ್ ಅರ್ಜಿ ಮೂಲಕ MOEF & CC ರವರಿಗೆ ಸಲ್ಲಿಸಲಾಗಿದೆ. EAC ಸಮಿತಿಯು ಪ್ರಸ್ತುತ ರೂಪದಲ್ಲಿ ಯೋಜನೆಗೆ TOR ಅನ್ನು ಶಿಫಾರಸು ಮಾಡುವುದಿಲ್ಲ ಮತ್ತು ಈ ಯೋಜನೆಯು ಕಾವೇರಿ ವನ್ಯಜೀವಿ ಅಭಯಾರಣ್ಯ ESZ ಪ್ರದೇಶದ ಒಳಗೆ ಇರುವುದರಿಂದು, ಯೋಜನೆಯನ್ನು ಅನುಷ್ಠಾನ ಗೊಳಿಸಲು, ವಿಷಯವನ್ನು GOI ದೊಂದಿಗೆ ತೆಗೆದುಕೊಳ್ಳುವಂತೆ ಆದೇಶಿಸಿದೆ. SRRP ಯೋಜನೆಗೆ MOEF ರವರಿಂದ ವಿನಾಯತಿ ದೊರಕಿಸಿ ಕೊಡಬೇಕೆಂದು ACS ಅರಣ್ಯ ಇಲಾಖೆ ಕರ್ನಾಟಕ ಸರ್ಕಾರ ಇವರಿಗೆ ಪತ್ರವನ್ನು ಬರೆಯಲು ACS ಇಂಧನ ಇಲಾಖೆ ಇವರಿಗೆ ಈಗಾಗಲೇ ಪತ್ರವನ್ನು ಬರೆಯಲಾಗಿದೆ. ಕೋರಲಾಗಿದೆ. ಡಿ.ಸಿ.ಎಫ್, ಕಾವೇರಿ ವನ್ಯಜೀವಿ ಅಭಯಾರಣ್ಯ ರವರು SRRP ಸ್ಥಳವನ್ನು ದಿನಾಂಕ 21.06.2018 ರಂದು ESZ ಪ್ರದೇಶದಲ್ಲಿ ಪ್ರಸ್ತಾವಿತ ಘಟಕಗಳ ಜಂಟಿ ಪರಿಶೀಲನೆಗೆ ಭೇಟಿನೀಡಿದ್ದು, ಯೋಜನೆಯ ವರದಿ ಮತ್ತು DPR ಗಳನ್ನು ಪಡೆದಿರುತ್ತಾರೆ. ESZ ಪ್ರದೇಶದಿಂದ ವಿನಾಯತಿಗಾಗಿ ಸಮ್ಮತಿ ನಿರೀಕ್ಷಿಸಲಾಗಿದೆ.

ii. ಶರಾವತಿ ಕಣಿವೆಯಲ್ಲಿ ಒಂದು ಪಂಪ್ ಶೇಖರಣಾ ಯೋಜನೆ ಹಾಗು ವರಾಹಿಯಲ್ಲಿ ಮತ್ತೊಂದು ಯೋಜನೆಯನ್ನು ಪ್ರಸ್ತಾಪಿಸಲಾಗಿದೆ. ಈ ಎರಡೂ ಯೋಜನೆಗಳಿಗೆ ಡಿಪಿಆರ್ ತಯಾರಿಸಲು ಮಂಡಳಿಯು ಅನುಮೋದನೆ ನೀಡಿದೆ.

a) **ಶರಾವತಿ ಪಂಪ್ಡ್ ಶೇಖರಣಾ ಯೋಜನೆ:** ಪಿಎಫ್‌ಆರ್ ಮತ್ತು ಡಿಪಿಆರ್ ತಯಾರಿಸಲು ಮೇ// WAPOCS ಅನ್ನು ಕನ್ಸಲ್ಟೆಂಟ್ ಆಗಿ ನೇಮಿಸಲಾಗಿದೆ. M/s. WAPOCS 2000MW ಸಾಮರ್ಥ್ಯದ ಪಂಪ್ ಸ್ಟೋರೇಜ್ ಸ್ಕೀಮ್ ಅನುಷ್ಠಾನಕ್ಕೆ PFR ಅನ್ನು ಸಲ್ಲಿಸಿದೆ ಮತ್ತು MOEF&CC ಯ EAC EIA ಮತ್ತು EMP ಅಧ್ಯಯನಗಳು ನಡೆಸಲು ಸ್ಕೋಪಿಂಗ್ ಕ್ಲಿಯರೆನ್ಸ್ (TOR) ಅನ್ನು ನೀಡಿದೆ. DPR ನ ತಯಾರಿ ತೆಗೆದುಕೊಳ್ಳಲಾಗಿದೆ.

b) **ವರಾಹಿ ಪಂಪ್ಡ್ ಶೇಖರಣಾ ಯೋಜನೆ:** 1500 ಮೆವ್ಯಾ ಸಾಮರ್ಥ್ಯದ ವರಾಹಿ ಪಂಪ್ಡ್ ಸ್ಟೋರೇಜ್ ಯೋಜನೆಯ ಪೂರ್ವ ಕಾರ್ಯಸಾಧ್ಯತಾ ವರದಿಯನ್ನು ಆಂತರಿಕವಾಗಿ ನಮ್ಮ ಸಂಸ್ಥೆಯಲ್ಲಿಯೇ ತಯಾರಿಸಲಾಗಿದೆ. ಈ ವಿಷಯವನ್ನು ತಾಂತ್ರಿಕ

ಸಮಿತಿಯು 1500 ಮೆ.ವ್ಯಾ. ಉತ್ಪಾದನಾ ಸಾಮರ್ಥ್ಯದ ವರಾಹಿ ಪಂಪ್ಡ್ ಶೇಖರಣಾ ವಿದ್ಯುತ್ ಯೋಜನೆಯನ್ನು ಕ.ವಿ.ನಿ.ನಿ ಯ ಆಡಳಿತ ಮಂಡಳಿಯ ಅನುಮೋದನೆ ಪಡೆದು ಯೋಜನೆಯನ್ನು ಕ.ವಿ.ನಿ.ನಿಗೆ ಹಂಚಿಕೆ ಮಾಡುವಂತೆ ಇಂಧನ ಇಲಾಖೆ, ಕರ್ನಾಟಕ ಸರ್ಕಾರವನ್ನು ಕೋರಲು ಸಮ್ಮತಿಸಿರುತ್ತಾರೆ. ಪ್ರಸ್ತಾವಿತ ಯೋಜನೆಯು ಘೋಶಿತ ಸೋಮೇಶ್ವರ ಮತ್ತು ಮೂಕಾಂಬಿಕ ವನ್ಯಜೀವಿ ಅಭಯಾರಣ್ಯದೊಳಗೆ ಇರುವಂತೆ, ವೈಲ್ಡ್ ಲೈಫ್ ನ್ಯಾಷನಲ್ ಬೋರ್ಡ್ ನಿಂದ ಮತ್ತಷ್ಟು ಸಮಿಕ್ಷೆ ಮತ್ತು ತನಿಖಾ ಕಾರ್ಯಗಳನ್ನು ಕೈಗೊಳ್ಳಲು ಕಡ್ಡಾಯವಾಗಿದೆ. ಇದು DPR ತಯಾರಿಕೆಯಲ್ಲಿ ಅಗತ್ಯವಾಗಿರುತ್ತದೆ. ಈ ಯೋಜನೆಯನ್ನು ಕೆಪಿಸಿಎಲ್ ಗೆ ಕರ್ನಾಟಕ ಸರ್ಕಾರದಿಂದ ಪಡೆಯಲು ACS, (ಇಂಧನ ಇಲಾಖೆ) ರವರಿಗೆ ದಿನಾಂಕ 21.07.2018 ರಂದು ಪತ್ರವನ್ನು ಸಲ್ಲಿಸಲಾಗಿದೆ ಮತ್ತು ಆನ್ ಲೈನ್ ಅರ್ಜಿಯ ಮೂಲಕ ವೈಲ್ಡ್ ಲೈಫ್ ಕ್ಲಿಯರೆನ್ಸ ಅನ್ನು ರಾಷ್ಟ್ರೀಯ ವೈಲ್ಡ್ ಲೈಫ್ ರವರಿಂದ ಒಪ್ಪಿಗೆಯನ್ನು ಪಡೆಯಲು ಅರ್ಜಿ ಸಲ್ಲಿಸಲಾಗುವುದು.

B) SGS ನಲ್ಲಿ ಉತ್ಪಾದಿಸುವ ಘಟಕಗಳ ಮರುಸ್ಥಾಪನೆ:

ದಿನಾಂಕ 18.02.2016 ರಂದು ಶರಾವತಿ ವಿದ್ಯುದಾಗಾರದಲ್ಲಿ ಅಗ್ನಿ ಅವಘಡ ಸಂಭವಿಸಿತು. ಕರ್ನಾಟಕ ಸರ್ಕಾರವು ಕೆ.ಟಿ.ಪಿ.ಪಿ ಕಾಯ್ದೆಯ 4(ಎ) ವಿಭಾಗದ ಅಡಿಯಲ್ಲಿ ಶರಾವತಿ ವಿದ್ಯುದಾಗಾರದ ಪುನಃಶ್ಚೇತನವನ್ನು ತುರ್ತು ಎಂದು ಘೋಷಿಸಿತು.

2017-18ರಲ್ಲಿ ಈ ಕೆಳಗಿನ ಕೆಲಸಗಳನ್ನು ನಿರ್ವಹಿಸಲಾಗಿದೆ.

1. ಮೇನ್-1, ಮೇನ್-2 ಮತ್ತು ಚೆಕ್ ವಲಯ ಲಕ್ಷಣಗಳನ್ನು ಒಳಗೊಂಡ ಬಸ್ ಬಾರ್ ಸಂರಕ್ಷಣಾ ವ್ಯವಸ್ಥೆಯನ್ನು ಎರಡೂ ಕಿಯೋಸ್ಕ್‌ಗಳಲ್ಲಿ ಸೇರಿಸಲಾಗಿದೆ.
2. ಘಟಕಗಳಿಗೆ ಶ್ರವಣಾತೀತ ಹರಿವು ಮಾಪನ.
3. ಬೇರಿಂಗ್‌ನ ವಿವಿಧ ಸ್ಥಳಗಳಲ್ಲಿ ಕಂಪನ ಸಂವೇದಕ ಮತ್ತು ಕೇಂದ್ರೀಕೃತ ಸ್ಥಳದಲ್ಲಿ ಆನ್ಲೈನ ಕಂಪನ ಮಾನಿಟರ್ ಅನ್ನು ಬೇರಿಂಗ್‌ಗಳ ಸ್ಥಿತಿಯನ್ನು ಮೇಲ್ವಿಚಾರಣೆ ಮಾಡಲು ಸ್ಥಾಪಿಸಲಾಗಿದೆ.
4. ಘಟಕಗಳು ಮತ್ತು ಲೈನ್‌ಗಳ ನಿಯಂತ್ರಣಾ ಮತ್ತು ಮೇಲ್ವಿಚಾರಣೆ ಮಾಡಲು LVS ಸ್ಕ್ರೀನ್ ಮತ್ತು ಕಾರ್ಯಚಾರಣಾ ಕಾರ್ಯಸ್ಥಳ, ತಾಂತ್ರಿಕ ಕಾರ್ಯಸ್ಥಳ, ಹಿಸ್ಟೋರಿಯನ್, ಸರ್ವರ್‌ಗಳನ್ನು ಒಳಗೊಂಡ ಕನ್‌ಸೋಲ್‌ಗಳನ್ನು ಆಧುನೀಕೃತ ನಿಯಂತ್ರಣಾ ಕೊಠಡಿಯಲ್ಲಿ ಸ್ಥಾಪಿಸಲಾಗಿದೆ.
5. ಎರಡು ಸ್ಥಳಗಳಲ್ಲಿ ವಿದ್ಯುದಾಗಾರದ ಮೇಲ್ವಿಚಾರಣೆಗೆ CCTV ಕಣ್ಗಾವಲು.
6. ನಿಯಂತ್ರಣಾ ಕೊಠಡಿ ಮತ್ತು ಕಿಯೋಸ್ಕ್‌ಗಳಲ್ಲಿ ಜಡ ಅನಿಲ IG-55ನ ಅಗ್ನಿ ಸಂರಕ್ಷಣಾ ವ್ಯವಸ್ಥೆ ಮತ್ತು ಕೇಬಲ್ ಡಕ್ಟ್‌ಗಳಲ್ಲಿ M.V.W.S ವ್ಯವಸ್ಥೆಯ ಅಳವಡಿಕೆ.
7. ಎಲ್ಲಾ ಹಳೆಯ DC ಪವರ್, ನಿಯಂತ್ರಣಾ ಮತ್ತು ಇನ್ಸ್ಟ್ರುಮೆಂಟೇಷನ್ ಕೇಬಲ್‌ಗಳನ್ನು Z.H.FRLS ಕೇಬಲ್‌ಗಳಿಂದ ಬದಲಾವಣೆ.
8. ಡಿಸ್ಟರ್ಬೆನ್ಸ್ ರೆಕಾರ್ಡರ್‌ನ ಅಳವಡಿಕೆ.

C) R&D ಮೇಲಿನ ಪರಿಣಾಮವಾಗಿ ಪಡೆದ ಪ್ರಯೋಜನಗಳು ಹೀಗಿವೆ:

R&M ಜಲವಿದ್ಯುತ್ ಕೇಂದ್ರಗಳು ಕಡಿಮೆ ಬಂಡವಾಳ ಹೂಡಿಕೆಗಳಲ್ಲಿ 10 ರಿಂದ 15 ವರ್ಷಗಳವರೆಗೆ ಘಟಕಗಳ PAF ಮತ್ತು ಕಾರ್ಯಅವಧಿ ಹೆಚ್ಚಿಸುತ್ತದೆ. ಬೇ ನಿಯಂತ್ರಣದ ಆಧಾರದ ಮೇಲೆ ಲೈನ್ ಪ್ರೊಟೆಕ್ಷನ್ ಸಿಸ್ಟಮ್ ಜೊತೆಗೆ ಹಂಚಿಕೆ ನಿಯಂತ್ರಣ ವ್ಯವಸ್ಥೆ ಮತ್ತು ವಿದ್ಯುದಾಗಾರಕ್ಕೆ SCADA ಅಳವಡಿಸಿಕೊಳ್ಳುವುದು ಅಪಘಾತಗಳ ಸಂಭವವನ್ನು ಕಡಿಮೆಗೊಳಿಸಿದೆ.

D) ಶಕ್ತಿ ಬಳಕೆ, ತಂತ್ರಜ್ಞಾನ ಅಳವಡಿಸುವಿಕೆ, ರೂಪಾಂತರ ಮತ್ತು ಆವಿಷ್ಕಾರ:

ಸಹಾಯಕ ಶಕ್ತಿ ಬಳಕೆ ಕಡಿತಗೊಳ್ಳುವುದು, PAF ಹೆಚ್ಚಳ ಮತ್ತು ಶಾಖದ ದರದಲ್ಲಿ ಸುಧಾರಣೆಗಾಗಿ ನಿರಂತರವಾಗಿ ಆದ್ಯತೆ ನೀಡಲಾಗಿದೆ.

E) ವಿದ್ಯುತ್ ಉತ್ಪಾದನೆಯ ಮುಖ್ಯಾಂಶಗಳು:

1. 08.08.2017 ರಂದು ದಿನಕ್ಕೆ 39.076 mu ನಷ್ಟು ಗರಿಷ್ಠ ಜಲ ವಿದ್ಯುತ್ ಉತ್ಪಾದನೆ ಸಾಧಿಸಿದೆ.
2. 04.04.2017 ರಂದು ದಿನಕ್ಕೆ 68.378 mu ನಷ್ಟು ಗರಿಷ್ಠ ಜಲ ವಿದ್ಯುತ್ ಉತ್ಪಾದನೆ ಸಾಧಿಸಿದೆ.
3. 04.04.2017 ರಂದು RTPS ನಲ್ಲಿ ದಿನಕ್ಕೆ 38.170 mu ನಷ್ಟು ಗರಿಷ್ಠ (ನೆಟ್) ವಿದ್ಯುತ್ ಉತ್ಪಾದನೆಯನ್ನು ಸಾಧಿಸಿದೆ.
4. 25.01.2018 ರಂದು BTPS ನಲ್ಲಿ ದಿನಕ್ಕೆ 25.050 mu ನಷ್ಟು ಗರಿಷ್ಠ (ನೆಟ್) ವಿದ್ಯುತ್ ಉತ್ಪಾದನೆಯನ್ನು ಸಾಧಿಸಿದೆ.
5. 04.04.2017 ರಂದು YTPS ನಲ್ಲಿ ದಿನಕ್ಕೆ 19.365 mu ನಷ್ಟು ಗರಿಷ್ಠ (ನೆಟ್) ವಿದ್ಯುತ್ ಉತ್ಪಾದನೆಯನ್ನು ಸಾಧಿಸಿದೆ.
6. YTPS ಘಟಕ -2 (800 MW)COD achieved on 06.04.2017
7. RTPS ನ ಘಟಕಗಳು 100 ದಿನಗಳಿಗೂ ಅಧಿಕ ಅವಧಿ ನಿರಂತರ ಕಾರ್ಯನಿರ್ವಹಿಸಿ ದಾಖಲೆಯನ್ನು ಮಾಡಿವೆ. ಅದರ ವಿವರಗಳು ಈ ಕೆಳಗಿನಂತಿದೆ:

Raichur Thermal Power Station		
ಘಟಕ	ನಿರಂತರ ಕಾರ್ಯನಿರ್ವಹಣಾ ಅವಧಿ ದಿನಗಳಲ್ಲಿ	ನಿರಂತರ ಕಾರ್ಯನಿರ್ವಹಣಾ ಅವಧಿ
ಘಟಕ 2	102	31.05.2017 ರಿಂದ 10.09.2017
ಘಟಕ 3	168	03.11.2017 ರಿಂದ 20.04.2018
ಘಟಕ 4	103	09.08.2017 ರಿಂದ 20.11.2017
ಘಟಕ 5	209 (13.09.2018ರವರೆಗೆ)	16.02.2018 ರಿಂದ ಇನ್ನೂ ಚಾಲನೆಯಲ್ಲಿದೆ

2. ಸಂಶೋದನೆ ಮತ್ತು ಅಭಿವೃದ್ಧಿ (R&D) – ಶಾಖೋತ್ಪನ್ನ ಘಟಕಗಳು (ಆರ್‌ಟಿಪಿಎಸ್):

A) ಎ) ನವೀನ ಚಟುವಟಿಕೆಗಳು

a. ಪರಿವರ್ತಕಗಳ ವಸ್ತುಸ್ಥಿತಿಯ ತಿಳುವಳಿಕೆಗಾಗಿ ಪರಿವರ್ತಕಗಳ ಚಾಲನಾಸ್ಥಿತಿಯಲ್ಲಿಯೇ ತೈಲದ ಪರೀಕ್ಷೆಯನ್ನು ಮೆ॥ ಸಿ.ಪಿ.ಆರ್.ಐ ಬೆಂಗಳೂರು ಇವರಿಂದ' ಪರೀಕ್ಷಾ ವ್ಯವಸ್ಥೆ ಮುಖಾಂತರ ಕೈಗೊಳ್ಳಲಾಗಿದೆ.

b. ಉನ್ನತೀಕರಿಣಗೊಂಡ ಸುರಕ್ಷತಾ ಸಾಧನಗಳನ್ನು ವಿದ್ಯುತ್ ಸಾಗಣೆ ಮಾರ್ಗಗಳ ಸುರಕ್ಷಕಗಳಾಗಿ ಅಳವಡಿಸಲಾಗುತ್ತಿದೆ ಅಂದರೆ ವಿವಿಧ ಚಾಲನಾ ತತ್ವಗಳ /ವಿವಿಧ ಉತ್ಪಾದಕರ ಮುಖ್ಯ ಹಾಗೂ ಬದಲಿ ಸುರಕ್ಷತಾ ವ್ಯವಸ್ಥೆ ಅಳವಡಿಸಲಾಗುತ್ತಿದೆ.

B) ಜಲವಿದ್ಯುತ್ ಘಟಕಗಳ R,M&U ಮತ್ತು R&M ಕೆಲಸಗಳು– NA

C) ಶಾಖೋತ್ಪನ್ನ ಘಟಕಗಳ R,M&U ಮತ್ತು R&M ಕೆಲಸಗಳು

a) ಹಳೆಯ ಘಟಕಗಳ ನವೀಕರಣ ಮತ್ತು ಆಧುನೀಕರಣ

- ಎಲ್.ಪಿ.ಟರ್ಬೈನ್ ನ 5 ಕಾಂಪನ್ಸೇಟರಬೆಲ್ಲೊಗಳನ್ನು ಹೊಸ ಕಾಂಪನ್ಸೇಟರ ಬೆಲ್ಲೊಗಳಿಂದ ಬದಲಾಯಿಸಲಾಗಿದೆ.
- ಹೆಚ್.ಪಿ.ಹೀಟರ್ –5 ರ ಶೆಲ್ ಮೇಕಪ್‌ಪೀಸನ್ನು ಲಭ್ಯ ಬದಲಿ ಬಿಡಿಭಾಗದಿಂದ ಬದಲಾಯಿಸಲಾಗಿದೆ.
- ಪಿ.ಎಲ್.ಎಸ್.ಎಚ್, ಎಫ್.ಎಸ್.ಎಚ್. ಮತ್ತು ಆರ್.ಎಚ್.ಕ್ವಾಯಿಲ್ ಗಳನ್ನು ಬದಲಾಯಿಸಲಾಗಿದೆ.
- ಏರ್ ಪ್ರಿ ಹೀಟರ್ ಮೊಡ್ಯೂಲ್ ಗಳನ್ನು ಬದಲಾಯಿಸಲಾಗಿದೆ.
- ಎಲ್ಲಾ 6 ಮಿಲ್‌ಗಳ ಬಿಸಿ ಗಾಳಿಯ ಹಾಗೂ ತಂಗಾಳಿಯ ಡಕ್ಟ್‌ಗಳನ್ನು, ಡ್ಯಾಂಪರ್‌ಗಳನ್ನು, ಗೇಟ್‌ಗಳನ್ನು, ಎಕ್ಸ್‌ಪ್ಯಾನ್ಷನ್ ಜಾಯಿಂಟ್ ಗಳನ್ನು ಬದಲಾಯಿಸಲಾಗಿದೆ.
- ಎಕ್ಸೈಟೇಶನ್ ಫೀಲ್ಡ್ ಬ್ರೇಕರನ್ನು ಬದಲಾಯಿಸಲಾಗಿದೆ. (ಘಟಕ–1)
- ಘಟಕ 1&2 ಟರ್ಬೋಜನರೇಟರ್‌ನ ಸಿ&ಐ ವ್ಯವಸ್ಥೆಯನ್ನು ಆಧುನಿಕ ವ್ಯವಸ್ಥೆಯಿಂದ ಬದಲಾಯಿಸಲಾಗಿದೆ
- ಘಟಕ 1 ರಿಂದ 7ಕ್ಕೆ ವಾತಾವರಣದ ವ್ಯಾಪಿತ ವಾಯು ಪರಿಶುದ್ಧತೆಯ ನೇರ ಪರಿವೀಕ್ಷಣೆ ಘಟಕಗಳ ಸ್ಥಾಪನೆಗಾಗಿ ಕಾರ್ಯಾದೇಶ ನೀಡಲಾಗಿದೆ

ತ್ಯಾಜ್ಯ ನಿಯಂತ್ರಣ ನೇರ ಪರಿವೀಕ್ಷಣಾ ಘಟಕಗಳನ್ನು ಸ್ಥಾಪಿಸಲಾಗಿದೆ.

- ಘಟಕ–1 ಮತ್ತು 2ರಲ್ಲಿ ನವೀನತಂತ್ರಜ್ಞಾನದ ಮೈಕ್ರೊ ಪ್ರೊಸೆಸರ್ ಆಧಾರಿತ ಅಗ್ನಿಸೂಚಕ ವ್ಯವಸ್ಥೆಯನ್ನು (ಫೈರ್ ಅಲರಾಂ) ಅಳವಡಿಕೆ ಕಾರ್ಯ ಪೂರ್ಣಗೊಂಡಿದೆ.
- ಕ.ರಾ.ಮಾ.ನಿ.ಮಂಡಳಿಯ ವಿಧಿಸಿದ ಶಾಸನಾತ್ಮಕ ಮಿತಿಗನುಸಾರವಾಗಿ ಹಾರು ಬೂದಿಯನ್ನು ಶೇಖರಿಸಲು ಘಟಕ–3ರ ಇ.ಎಸ್.ಪಿಗಳ ಅನಲಾಗ್ ನಿಯಂತ್ರಕಗಳ ಬದಲಾಗಿ ಮೈಕ್ರೋಪ್ರೊಸೆಸ್ಸರ್ ಆಧಾರಿತ ನಿಯಂತ್ರಕಗಳನ್ನು ಅಳವಡಿಸಲಾಗಿದೆ.
- ವಿದ್ಯುತ್ ಮಿತವ್ಯಯ ಸಾಧಿಸಲು ಘಟಕ 1&2 ರಲ್ಲಿ ಎಲ್.ಇ.ಡಿ. ದೀಪಗಳನ್ನು ಅಳವಡಿಸಲಾಗಿದೆ.

  400ಕೆವಿ ಸ್ವಿಚ್‌ಯಾರ್ಡನಲ್ಲಿರುವ ಎಸ್.ಇ.ಆರ್‌ನ್ನು ನವೀನ ಕ್ಯೂನೆಟ್ 4100 ವ್ಯವಸ್ಥೆ (ಟೈಮ್ ಸಿಂಕ್ರೋನೈಷೇಶನ್ ನೊಂದಿಗೆ) ಮರುಜೋಡಿಸುವ ಕಾರ್ಯ ಮುಗಿದಿದೆ.

  400 ಕೆವಿ ಸ್ವಿಚ್‌ಯಾರ್ಡ್‌ನಲ್ಲಿ 'ಅನ್‌ಲೈನ್' ಇನ್ಸಲೇಷನ್ ಮಾನಿಟರಿಂಗ್ ಮತ್ತು ಡಿ.ಸಿ ಅರ್ಥ್‌ಫಾಲ್ಟ್ ಲೊಕೇಷನ್ (ಡಿಸಿಡಿಬಿ)ಗೆ ವ್ಯವಸ್ಥೆಯನ್ನುಸಂಸ್ಥಾಪಿಸಲಾಗಿದೆ.
- ಘಟಕ–5&6 ಮತ್ತು 7ರಲ್ಲಿ ವಿದ್ಯುತ್‌ಜನಕ (ಜನರೇಟರ್), ವಿದ್ಯುಜನಕ ಪರಿವರ್ತಕ (ಜಿ.ಟಿ.) ಘಟಕದ ಆ್ಯಕ್ಸಿಲರಿ ಪರಿವರ್ತಕಗಳ ಸಂರಕ್ಷಣಾ ವ್ಯವಸ್ಥೆಯನ್ನು ಎಲೆಕ್ಟ್ರೋ ಮೆಕ್ಯಾನಿಕಲ್/ಸ್ಟಾಟಿಕ್ ರಿಲೇಯಿಂದ ನ್ಯೂಮಾರಿಕಲ್ ರಿಲೇಗೆ ಬದಲಾಯಿಸಲಾಗಿದೆ. ಘಟಕ–5,6,7ರ ಕಂಟ್ರೋಲ್ ರೂಮ್‌ಗೆ ಜಿಪಿಎಸ್ ಆಳವಡಿಸಲಾಗಿದೆ. ಘಟಕ–5,6,7 & 8ರ ನ್ಯೂಮಾರಿಕಲ್ ರಿಲೇಗಳ ಚಾಲ ವ್ಯವಸ್ಥೆಯನ್ನು ಪೂರ್ಣವಾಗಿ, 'ಜಿಪಿಎಸ್' ದೊಂದಿಗೆ, ಟೈಮ್ ಸಿಂಕ್ರೋನೈಷೇಶನ್ ಮಾಡಲಾಗಿದೆ.

b) ಪ್ರಸ್ತಾಪಿತ ಯೋಜನೆಗಳು

- ವಿದ್ಯುತ್ ಮಿತವ್ಯಯದ ಹಾಗೂ ಹೆಚ್ಚು ಬಲ ಸಾಮರ್ಥ್ಯದ ಎಲ್.ಇ.ಡಿ ವಿದ್ಯುತ್ ದೀಪಗಳ ಅಳವಡಿಕೆ.
- 220 ಕೆ.ವಿ. ಮತ್ತು 400 ಕೆ.ವಿ. ಸರ್ಕ್ಯೂಟ್ ಬ್ರೆಕರ್‌ಗಳು ಮತ್ತು ಕರೆಂಟ್ ಪರಿವರ್ತಕಗಳನ್ನು ಹೆಚ್ಚಿನ ಬಲಕ್ಕೆ ಉನ್ನತೀಕರಿಸಲಾಗುವುದು.
- ಹೆಚ್ಚಿನ ದಕ್ಷತೆಯ ಬಿ.ಎಫ್.ಪಿ ಪಂಪುಗಳ ಖರೀದಿಗೆ ಪ್ರಸ್ತಾಪಿಸಲಾಗಿದೆ.
- ಘಟಕ 1 ರಿಂದ 8 ರವರಗೆ ಎಲ್ಲಾ ಘಟಕಗಳಿಗೆ 'ಎನರ್ಜಿ ಮ್ಯಾನೇಜಮೆಂಟ್' ವ್ಯವಸ್ಥೆಯನ್ನು ಅಳವಡಿಸುವ ಕಾರ್ಯವನ್ನು ಶೀಘ್ರವೇ ಪ್ರಾರಂಭಿಸಲಾಗುವುದು.
- ಐಎಸ್‌ಓ-45001 ಅನುಷ್ಠಾನವು ಪ್ರಗತಿಯಲ್ಲಿದೆ.
- ರಾ.ಶಾ.ವಿ. ಕೇಂದ್ರದ ಸ್ಥಾವರದಲ್ಲಿ ಹಾಗೂ ಅತಿಥಿಗೃಹದಲ್ಲಿ ಸಿ.ಸಿ.ಟಿ.ವಿ ಅಳವಡಿಕೆಯ ಕಾರ್ಯ ಚಾಲನೆಯಲ್ಲಿದೆ.
- 400ಕೆವಿ ಮೆಹಬೂಬನಗರ ಮಾರ್ಗ/40ಕೆವಿ ಮುನಿರಾಬಾದ ಮಾರ್ಗದ ಟೈ ಬ್ರೇಕರ್-ಬೇ, ಬಿಟಿಪಿಎಸ್ ಮಾರ್ಗದ ಐಸಿಟಿ-1, ಐಸಿಟಿ-2 ಮತ್ತು ಎಲ್.ಬಿ.ಬಿ ರೀಲೆಗಳು (ಟ್ರಪ್ಪಿಂಗ್) ರಿಲೇಗಳೊಂದಿಗೆ, ಆ್ಯಕ್ಸಿಲರಿ ರೀಲೇಗಳು, ಟ್ರಪ್ ಸರ್ಕೂಟ್ ಸೂಪರ್‌ವಿಷನ್ ರೀಲೆಗಳನ್ನು ಹಾಲಿ ಸ್ಟಾಟಿಕ್ / ಇಲೆಕ್ಟ್ರೋ / ಮೆಕ್ಯಾನಿಕಲ್ ರಿಲೇಗಳನ್ನು ನ್ಯೂಮಾರಿಕಲ್ ರೀಲೇಗಳಿಂದ ಬದಲಾಯಿಸಲಾಗಿದೆ.
- ಘಟಕ 1 ರಿಂದ 8, 400ಕೆವಿ ಲೈನ್‌ಗಳು, 220ಕೆವಿ ಲೈನ್‌ಗಳು 220ಕೆವಿ ಬಸ್ ಕಪ್ಲರಗಳಿಗೆ ಎಬಿಟಿ ನಿರ್ವಹಣಾ ವ್ಯವಸ್ಥೆ ಪೂರ್ಣಗೊಳಿಸಲು 69 ಸಂಖ್ಯೆಯ 0.2 ವರ್ಗದ 3 ಫೇಸುಗಳ, 4 ವಾಯರ್ ಎನರ್ಜಿ ಮೀಟರ್‌ಗಳ (ಎಬಿಟಿ ವ್ಯವಸ್ಥೆಯುಳ್ಳ) ಬದಲಾಯಿಸಲಾಗಿದೆ.
- ಬೀರೇಶ್ವರ ದೇವಸ್ಥಾನದಿಂದ ಹಳೆಯ ರೈಲ್ವೆಗೇಟ್‌ವರೆಗೆ ಕಾಂಕ್ರೀಟ್ ಒದಗಿಸುವುದು ಅಂದಾಜು ಪಟ್ಟಿ ತಯಾರಿಸುವ ಹಂತದಲ್ಲಿದೆ
- ಉಗ್ರಾಣ ಸಂಖ್ಯೆ-2 ರ ಜಂಕ್ಷನ್ ರಸ್ತೆಯಲ್ಲಿ 275.0 ನಾರ್ಥ್ ರಸ್ತೆಗೆ ಜೋಡಣೆ ಮಾಡಿ ಕಾಂಕ್ರೀಟಿಕರಣ ಗೊಳಿಸುವುದು ಅಂದಾಜು ಪಟ್ಟಿಯನ್ನು ಇ.ಡಿ. (ಆರ್.ಟಿ.ಪಿ.ಎಸ್.) ಕಛೇರಿಗೆ ಸಲ್ಲಿಸಲಾಗಿದೆ.
- ಆರ್.ಟಿ.ಪಿ.ಎಸ್. ನ ವಸಾಹತು ಪ್ರದೇಶಕ್ಕೆ ಆರ್‌ಸಿಸಿ/ ಸಿಸಿ ಚರಂಡಿ ಒದಗಿಸುವುದು - ಸೈಟ್ ತಪಾಸಣೆಗಾಗಿ ಸಿ.ಎಮ್.ಜಿ. ಅಭಿಪ್ರಾಯ ಪಟ್ಟಿದೆ.
- ಉತ್ಕರ್ಷಣ ಕೊಳದ ನೆಲಕ್ಕೆ ಕಾಂಕ್ರೀಟ್ ಒದಗಿಸುವುದು ಮತ್ತು ಒಳಪದರು ಗಿಲಾವು ಮಾಡುವುದು ಈ ಕಾಮಗಾರಿಯನ್ನು ಹೊಲಸು ನೀರು ಸೋರುವಿಕೆ ತಡೆಯಲು ಕೈಗೆತ್ತಿಕೊಳ್ಳಲಾಗಿದೆ ಮಾಲಿನ್ಯ ನಿಯಂತ್ರಣ ಮಂಡಳಿ ಷರತ್ತಿನ ಅನ್ವಯ ಕೈಗೆತ್ತಿಕೊಳ್ಳಲಾಗಿದೆ.
- ವಸಾಹತು ಪ್ರದೇಶದ ರಸ್ತೆಗಳನ್ನು ಅಭಿವೃದ್ಧಿಗೊಳಿಸುವುದು ಉತ್ತಮ ರಸ್ತೆಗಳನ್ನು ಒದಗಿಸುವ ಸಲುವಾಗಿ
- ವಸಾಹತು ಮನೆಗಳನ್ನು ನವೀಕರಣಗೊಳಿಸುವುದು ವಸತಿ ಮನೆಗಳ ಬಳಕೆಯನ್ನು ಹೆಚ್ಚಿಸಲು ಮತ್ತು ವಾಸಿಸುವಂತೆ ಮಾಡಲು.
- ಯು.ಜಿ.ಡಿ. ಸಾಲುಗಳ ಚಾಲನೆ ಮತ್ತು ನಿರ್ವಹಣೆ ಯು.ಜಿ.ಡಿ. ವ್ಯವಸ್ತೆಯನ್ನು ಉತ್ತಮಗೊಳಿಸಲು ಕೃಷ್ಣ ಮತ್ತು ಶಕ್ತಿ ಅತಿಥಿ ಗೃಹಗಳನ್ನು ನವೀಕರಣಗೊಳಿಸುವುದು ಕಾಮಗಾರಿ ಪ್ರಗತಿಯಲ್ಲಿದೆ.
- ನೀರು ಪೂರೈಕೆ ವ್ಯವಸ್ಥೆಯನ್ನು ವೃದ್ಧಿಗೊಳಿಸುವುದು 300 ಮಿ.ಮಿ. ಪ್ಲಾನ್ ಡಿಜೆ ಕೊಳವೆ ಮಾರ್ಗವನ್ನು ಪಂಪ್‌ಹೌಸ್ ನಿಂದ ಒಹೆಚ್‌ಟಿ ಸಂಖ್ಯೆ 5 ತನಕ ಮಾಡುವುದು ಸಿಎಸ್‌ಆರ್ ಕಾಮಗಾರಿ ಅಡಿಯಲ್ಲಿ ಕುಡಿಯುವ ನೀರಿನ ವ್ಯವಸ್ಥೆಯನ್ನು ಉನ್ನತೀಕರಣಗೊಳಿಸುವುದು.
- ಆಸ್ಪತ್ರೆಯನ್ನು ನವೀಕರಣಗೊಳಿಸುವುದು - ಕಾರ್ಯಾದೇಶವನ್ನು ನೀಡಲಾಗಿದೆ.
- ಎಸ್.ಟಿ.ಪಿ.ಯ ಚಾಲನೆ ಮತ್ತು ನಿರ್ವಹಣೆ - ಕಾರ್ಪೊರೇಟ್ ಸಾಮಾಜಿಕ ಜವಬ್ದಾರಿ ಅಡಿಯಲ್ಲಿ ಆಧುನೀಕರಣಗೊಳಿಸುವುದು.
- ವಸಾಹತು ಪ್ರದೇಶದಲ್ಲಿ ಷಟಲ್ ಅಂಕಣ ಒದಗಿಸುವುದು - ಅಂದಾಜು ಪಟ್ಟಿಯನ್ನು ಕೇಂದ್ರ ಕಛೇರಿಗೆ ಸಲ್ಲಿಸಲಾಗಿದೆ.
- ಕ್ರಿಕೇಟ್ ಮೈದಾನದಲ್ಲಿ ಕ್ರೀಡಾಮಂಟಪ ಮತ್ತು ದ್ವಾರಮಂಟಪವನ್ನು ನಿರ್ಮಾಣ ಮಾಡುವುದು - ಅಂದಾಜು ಪಟ್ಟಿಯನ್ನು ಇ.ಡಿ. (ಆರ್.ಟಿ.ಪಿ.ಎಸ್.) ಕಛೇರಿಗೆ ಸಲ್ಲಿಸಲಾಗಿದೆ
- ಆರ್.ಟಿ.ಪಿ.ಎಸ್. ವಸಾಹತುವಿನ ಶಕ್ತಿ ಅತಿಥಿ ಗೃಹದ ಹತ್ತಿರ ವಿ.ವಿ.ಐ.ಪಿ. ಸೂಟ್ ಕೋಣೆಗಳ ನಿರ್ಮಾಣ
- ವಸಾಹತುವಿನ ಮೊದಲನೇ ಕ್ರಾಸ್ ಪ್ರವೇಶ ದ್ವಾರದಿಂದ ಡಾ. ಬಿ.ಆರ್. ಅಂಬೇಡ್ಕರ್ ಉದ್ಯಾನದವರೆಗೆ ಮುಖ್ಯ ರಸ್ತೆಯ ಪಾದಚಾರಿ ಮಾರ್ಗವನ್ನು ಉನ್ನತೀಕರಿಸುವುದು.
- ಆರ್.ಟಿ.ಪಿ.ಎಸ್. ವಸಾಹತುವಿನ ಓಹೆಚ್‌ಟಿ ಗಳಿಗೆ ಬಣ್ಣಗಾರಿಕೆ ಮತ್ತು ಓಹೆಚ್‌ಟಿ ಸಂಖ್ಯೆ 1 ಮತ್ತು 2 ಮೆಟ್ಟಿಲುಗಳನ್ನು ರಿಪೇರಿ ಮಡುವುದು ಓಹೆಚ್‌ಟಿಗಳನ್ನು ವೃದ್ಧಿಗೊಳಿಸುವುದು.
- ಮಿಲ್ ರಿಜೆಕ್ಟ್ ಸಾಗಿಸಲು ಕಲ್ಲಿದ್ದಲು ಭವನದಿಂದ ಮಿಲ್ ರಿಜೆಕ್ಟ್ ಯಾರ್ಡ್ ತನಕ ಕಾಂಕ್ರೀಟ್ ರಸ್ತೆ ಮಾಡುವುದು.
- ಆರ್.ಟಿ.ಪಿ.ಎಸ್.ನಲ್ಲಿ ಹಾನಿಗೊಳಗಾದ ಚಿಮಣಿ ಬೇಡಿಕೆಯ ಭಾಗವನ್ನು ಮರು ನಿರ್ಮಾಣಗೊಳಿಸುವುದು. (ಇಎಲ್ 45.00ಮಿ.) - ಅಂದಾಜು ಪಟ್ಟಿ ಸಲ್ಲಿಸಲಾಗಿದೆ.
- ಆಡಳಿತ ಕಛೇರಿಯಲ್ಲಿರುವ ಡಿ.ಜಿ.ಎಂ.(ಹೆಚ್.ಆರ್.ಡಿ.) ಆರ್.ಟಿ.ಪಿ.ಎಸ್., ಸಿಸ್ಟಮ್ಸ್, ಡಿ.ಜಿ.ಎಂ.(ಎಫ್.) ಆರ್.ಟಿ.ಪಿ.ಎಸ್. ಮತ್ತು ಡಿ.ಜಿ.ಎಂ.(ಐ.ಎ.) ಕಛೇರಿಗಳನ್ನು ನವೀಕರಣಗೊಳಿಸುವುದು - ಅಂದಾಜು ಪಟ್ಟಿ ತಯಾರಿಕೆಯ ಹಂತದಲ್ಲಿದೆ.

- ಆರ್.ಟಿ.ಪಿ.ಎಸ್.ನ ಯು.ಸಿ.ಬಿ. 1 ರಿಂದ 4 ಕ್ಕೆ ಫಾಲ್ಸ್ ಸೀಲಿಂಗ್ ಒದಗಿಸುವುದು – ಅಂದಾಜು ಪಟ್ಟಿ ತಯಾರಿಕೆಯ ಹಂತದಲ್ಲಿದೆ.
- ಬಾಯ್ಲರ್ ಘಟಕ 1 ರಿಂದ 4 ರವರೆಗೆ ಗ್ಯಾಲ್ವನಿಯಮ್ ಶೀಟ್ ಛಾವಣಿಯನ್ನು ಒದಗಿಸುವುದು.
- ಸ್ಟೇಷನ್ ಬಿಲ್ಡಿಂಗ್, ಸಿಹೆಚ್‌ಪಿ, ಎಹೆಚ್‌ಪಿ ಕಂಟ್ರೋಲ್ ರೂಮ್‌ಗಳಿಗೆ ನೀರು ಸೋರುವಿಕೆಯ ತಡೆಗಟ್ಟುವ ಚಿಕಿತ್ಸೆ ಕಾಮಗಾರಿ – ಅಂದಾಜು ಪಟ್ಟಿ ಅಂತಿಮ ಹಂತದಲ್ಲಿದೆ.
- ಆರ್.ಟಿ.ಪಿ.ಎಸ್.ನಲ್ಲಿ ಓಡಿವೈ ಸ್ವಿಚ್ ಯಾರ್ಡ್ ಅಂಗಳದಲ್ಲಿ ಮತ್ತು ಟ್ರಾನ್ಸ್‌ಫಾರ್ಮರ್ ಪ್ರದೇಶದಲ್ಲಿ 40 ಮಿ.ಮಿ. ಜೆಲ್ಲಿಯನ್ನು ಸರಬರಾಜು ಮಾಡಿ ಹರಡುವುದು – ಅಂದಾಜು ಪಟ್ಟಿ ಅಂತಿಮ ಹಂತದಲ್ಲಿದೆ.
- ಓಡಿವೈ ಪ್ರದೇಶದಲ್ಲಿ ತೆರೆದ ಶೆಡ್ ನಿರ್ಮಾಣ ಕಾಮಗಾರಿ – ಪ್ರಗತಿಯಲ್ಲಿದೆ.
- ಸ್ಟೇಷನ್ ಬಿಲ್ಡಿಂಗ್ ಪ್ರದೇಶದಲ್ಲಿ ವಾಹನ ಪಾರ್ಕಿಂಗ್ ಶೆಡ್‌ಗಳ ನಿರ್ಮಾಣ – ಅಂದಾಜು ಪಟ್ಟಿ ತಯಾರಿಸಲಾಗಿದೆ, ಸ್ಥಳವನ್ನು ಅಂತಿಮಗೊಳಿಸಲಾಗುವುದು.

c) R & D ಮೇಲಿನ ಪರಿಣಾಮವಾಗಿ ಪಡೆದ ಪ್ರಯೋಜನಗಳು ಹೀಗಿವೆ:

- ಪರಿವರ್ತಕಗಳಲ್ಲಿಯ ಸಮಸ್ಯೆಗಳ ತಿಳುವಳಿಕೆ ಪರಿವರ್ತಕಗಳ ಚಾಲನಾಸ್ಥಿತಿಯಲ್ಲಿಯೇ ತೈಲದ ಪರೀಕ್ಷೆಯನ್ನುಚರ ಪರೀಕ್ಷಾ ವ್ಯವಸ್ಥೆ ಮುಖಾಂತರ ಸಾಧ್ಯವಾಗುತ್ತದೆ.
- ಓ.ಡಿ.ವೈ& ಸಂಚಾರಣೆ ವ್ಯವಸ್ಥೆಯ ಸುಧಾರಿತ ಸಂರಕ್ಷಣೆ ವಿಶ್ಲೇಷಣೆಗಾಗಿ ನ್ಯೂಮ್ಯಾರಿಕಲ್ ರೀಲೆ ಅಳವಡಿಸಲಾಗಿದೆ.
- ವಿದ್ಯುತ್ ಮಾರ್ಗಗಳ ನಡುವೆ ವಿದ್ಯುತ್ ಬಲದ ಹಂಚಿಕೆಗಾಗಿ ಹೆಚ್ಚುವರಿ ಇಂಟರ್‌ಕನೆಕ್ಟಿಂಗ್ ವಿದ್ಯುತ್ ಪರಿವರ್ತಕ ಸ್ಥಾಪನೆಯಿಂದ ಪಿ.ಎಲ್.ಎಫ ನಲ್ಲಿ ಹೆಚ್ಚಳ.
- ಮಾ.ನಿ.ಮಂಡಳಿಯ ವಿಧಿಸಿದ ಮಿತಿಗನುಸಾರವಾಗಿ ಅನಲಾಗ್ ನಿಯಂತ್ರಕಗಳ ಬದಲಾಗಿ ಮೈಕ್ರೋಪ್ರೊಸೆಸ್ಸರ್ ಆಧಾರಿತ ನಿಯಂತ್ರಕಗಳನ್ನು ಬದಲಾಯಿಸಿ, ತ್ಯಾಜ್ಯ ನಿಯಂತ್ರಣ ಸಾಧಿಸಲಾಗಿದೆ.
- ಬಾಯ್ಲರ್ ಘಟಕದ ಅನುಕೂಲತಮ ನಿಯಂತ್ರಣ ಸಾಧಿಸುವ ಮೂಲಕ ಗರಿಷ್ಟ ಮಿತಿಗೆ ಕೊಂಡೊಯ್ಯುವುದು.
- ಆವಿ ಘನೀಕರಣಘಟಕ (ಕಂಡೆನ್ಸರ)ಕ್ಕೆ ಶುದ್ಧೀಕರಿಸಿದ ನೀರನ್ನು ಪೂರೈಸಿ ಆವಿ ಘನೀಕರಣ ಘಟಕ (ಕಂಡೆನ್ಸರ)ದ ಕೊಳವೆಗಳ ಒಳ ಮೈಮೇಲೆ ಪದರಕಟ್ಟುವುದನ್ನು ತಡೆಗಟ್ಟಿ ಆವಿ ಘನೀಕರಣ ಘಟಕ (ಕಂಡೆನ್ಸರ)ನಲ್ಲಿ ನಿರ್ವಾತದ ಪ್ರಮಾಣದ ಹೆಚ್ಚಳ ತನ್ಮೂಲಕ ಉತ್ಪಾದನೆಯಲ್ಲಿ ಹೆಚ್ಚಳ ಸಾಧ್ಯವಾಗುತ್ತದೆ.
- 400ಕೆವಿ ವ್ಯವಸ್ಥೆಯಲ್ಲಿ ದೋಷಕಂಡು ಬಂದಲ್ಲಿ ಜಿಪಿಎಸ್ ಆಧಾರಿತ ಮಾಹಿತಿಯಿಂದ ಪರಿಶೀಲನೆಗೆ ಅನುಕೂಲವಾಗಿದೆ.
- ಇನ್ಸುಲೇಷನ್ ಮೊನಿಟರಿಂಗ್ ವ್ಯವಸ್ಥೆಯಿಂದ ಡಿ.ಸಿ ಅರ್ಥಫಾಲ್ಟ್‌ನ್ನು ಕಂಡು ಹಿಡಿಯಲು ಈ ವ್ಯವಸ್ಥೆ ಅನುಕೂಲಕರವಾಗಿದೆ.
- ದೋಷಪೂರ್ವ ಹಾಗೂ ದೋಷ ಕಂಡುಬಂದ ನಂತರದ ಮಾಹಿತಿಯು ನ್ಯೂಮಾರಿಕಲ್ ರಿಲೇಗಳಲ್ಲಿ ಶೇಖರವಾಗಿರುವುದರಿಂದ ಗ್ರಿಡ್ ದೋಷದಿಂದ ಘಟಕಗಳು/ಲೈನ್‌ಗಳು ಸ್ಥಗಿತಗೊಂಡಾಗ ಮಾಹಿತಿಯ ಪರಿಶೀಲನೆಗೆ ಹಾಗೂ ನಿರ್ಣಯ ಕೈಗೊಳ್ಳುವಲ್ಲಿ ತುಂಬಾ ಸಹಕಾರಿಯಾಗಿದೆ ಇದರಿಂದ ವೇಳೆಯು ಉಳಿತಾಯ ಉಂಟಾಗಿದೆ.
- ಘಟಕ 1 ಮತ್ತು 2 ರ ಕೂಲಿಂಗ್ ಟವರ್ ಮತ್ತು ಚಿಮಣಿಗಳ ಉಳಿದಿರುವ ಜೀವಾವಧಿಯನ್ನು ಹೆಚ್ಚಿಸುವುದು.

3. ಶಕ್ತಿ ಸಂರಕ್ಷಣೆ, ತಂತ್ರಜ್ಞಾನ ಅಂಗೀಕರಿಸುವುದು, ಅಳವಡಿಸುವುದು ಮತ್ತು ನವೀನತೆ:

a) ಉಪೋಪಕರಣಗಳ ಬಳಕೆಯ ವಿದ್ಯುತ್‌ನ್ನು ಕಡಿಮೆಗೊಳಿಸಿ, ಉಷ್ಣತಾ ಪರಿಮಾಣ (ಹೀಟ್ ರೇಟ್) ದಲ್ಲಿ ಸುಧಾರಣೆತರಲು ಆದ್ಯತೆ ನೀಡಲಾಗಿದೆ. ಬ್ಯೂರೂ ಆಫ್ ಎನರ್ಜಿ ಎಫೀಶಿಯನ್ಸಿಯ, ಪ್ಯಾಟ್‌ನ ಅನುಸರಣೆಗಳಿಗೆ ಉತ್ತರಿಸುವ ಪ್ರಯತ್ನದಲ್ಲಿದ್ದೇವೆ ಮತ್ತು ನಿಶ್ಚಿತ ವಿದ್ಯುತ್ ಬಳಕೆಯ ಇಳಿಕೆಗೆ ಪ್ರಯತ್ನಿಸುತ್ತಿದ್ದೇವೆ.

b) ಹಾರು ಬೂದಿಯ ಸಂಪೂರ್ಣ ಬಳಕೆಯ ಕಡೆ ವಿಶೇಷ ಗಮನ ಹರಿಸಲಾಗಿದೆ. ಇದರಿಂದ ನೀರು ಹಾಗೂ ವಿದ್ಯುತ್ಶಕ್ತಿಯ ಉಳಿತಾಯವೂ ಆಗಲಿದೆ.

c) ಹಾಲಿ ಇರುವ ವಿದ್ಯುತ್‌ಬಲ್ಬ್‌ಗಳನ್ನು ಹೊಸದಾದ ಎಲ್.ಇ.ಡಿ ಬಲ್ಬ್ ಗಳಿಂದ ಬದಲಾಯಿಸಲಾಗುತ್ತದೆ.

ಈ ಸಾಲಿನಲ್ಲಿ ವಿದ್ಯುತ್ ಉತ್ಪಾದನೆಯ ಮುಖ್ಯಾಂಶಗಳು

B)ಆರ್‌ಟಿಪಿಎಸ್ ಕಾರ್ಯ ನಿರ್ವಹಣೆ	
ವಿವರ	2017-18
ಉತ್ಪಾದನೆ ದಲಯೂಗಳಲ್ಲಿ	10834.55
ಪೂರಕ ಬಳಕೆ ದಲಯೂಗಳಲ್ಲಿ	1000.86
ಪೂರಕ ಬಳಕೆ ಶೇಕಡಾ	9.24
ಪಿಎಲ್ ಎಫ್ ಶೇಕಡಾ	71.91
ಕಲ್ಲಿದ್ದಲು ಬಳಕೆ – MT	6932319

B)ಆರ್‌ಟಿಪಿಎಸ್ ಕಾರ್ಯ ನಿರ್ವಹಣೆ	
ವಿವರ	2017-18
ನಿರ್ದಿಷ್ಟ ಕಲ್ಲಿದ್ದಲು ಬಳಕೆ (kcal/kWh)	0.640
ನಿರ್ದಿಷ್ಟ ತೈಲ ಬಳಕೆ (kl/kWh)	0.90
Plant Availability factor in %	79.68
ಕಾರ್ಯಾಚರಣೆಯಲ್ಲಿರುವ ಘಟಕಗಳು	8

1. ವಿದೇಶಿ ವಿನಿಮಯ : ಅನ್ವಯಿಸುವುದಿಲ್ಲ

2. ಉದ್ಯೋಗಿಗಳ ಸಂಖ್ಯೆ

	ಆರ್‌ಟಿಪಿಎಸ್	ವೈಟಿಪಿಎಸ್
ಕಾರ್ಪೋರೇಟ್	662	179
ನಾನ್– ಕಾರ್ಪೋರೇಟ್	994	42
ಮಹಿಳಾ ಉದ್ಯೋಗಿಗಳು	254	-
SC/ST ಉದ್ಯೋಗಿಗಳು	423	-

3. ಬಂಡವಾಳ ವೆಚ್ಚ

- ರಾ.ಶಾ.ವಿ.ಕೇಂದ್ರದ ಶಕ್ತಿನಗರದಲ್ಲಿ ಹೊಸ ಕಛೇರಿ ಸಂಕೀರ್ಣ/ಆಡಳಿತ ಕಟ್ಟಡ ನಿರ್ಮಾಣ– ಎಲ್.ಇ.ಇ.ಡಿ ವ್ಯವಸ್ಥೆಯನ್ನು ಅಳವಡಿಸಿಕೊಂಡು ಗ್ರೀನ್ ಬಿಲ್ಡಿಂಗ್ ನಿರ್ಮಾಣ–16.45 ಕೋಟಿಗಳು
- ಗೇಟೆಡ್ ಬ್ಯಾರೇಜ ಮತ್ತು ಸಂಬಂದಪಟ್ಟಂತಹ ಕೆಲಸಗಳ ನಿರ್ಮಾಣವನ್ನು ಗಿರಿಜಾಪುರ ಗ್ರಾಮದಲ್ಲಿ ಕೃಷ್ಣಾ ನದಿಗೆ ಅಡ್ಡಲಾಗಿ ಭೀಮ ಮತ್ತು ಕೃಷ್ಣಾ ನದಿಯ ಸಂಗಮವಾಗುವಲ್ಲಿ ನಿರ್ಮಾಣ – 90.95 ಕೋಟಿಗಳು

XIV. ಆಡಳಿತ ಸುಧಾರಣೆಗೆ ಉಪಕ್ರಮ

1) ತರಬೇತಿ:

ನಿಗಮದ ಉದ್ಯೋಗಿಗಳ ಸಕ್ಷಮತೆಯನ್ನು ಉನ್ನತೀಕರಿಸುವ ಸಲುವಾಗಿ ಹಾಗೂ ಇತ್ತೀಚಿನ ಕೈಗಾರಿಕ ಬೆಳವಣಿಗೆಗಳನ್ನು ಅರಿಯಲು ಒತ್ತು ನೀಡಲಾಗಿದೆ. ಇದರಿಂದಾಗಿ ಆರ್ಥಿಕ ತತ್ವಗಳ ದೃಷ್ಟಿಕೋನ ಹಾಗೂ ಸ್ಪರ್ಧಾತ್ಮಕ ವಾತಾವರಣದಲ್ಲಿ ಕೌಶಲ್ಯತೆ ಮತ್ತು ಒತ್ತಡಗಳಲ್ಲಿ ಕಾರ್ಯ ನಿರ್ವಹಣೆಯನ್ನು ಉದ್ಯೋಗಿಗಳಲ್ಲಿ ಬೆಳೆಯಲು ಪೂರಕವಾಗಿದೆ. ಈ ಹಿನ್ನೆಲೆಯಲ್ಲಿ ನಿಗಮವು ವ್ಯವಸ್ಥಿತವಾದ ತರಬೇತಿ ಕಾರ್ಯಕ್ರಮವನ್ನು ಎಲ್ಲಾ ವರ್ಗಗಳ ಉದ್ಯೋಗಿಗಳಿಗೆ ತಲುಪುವಂತೆ ಕಾರ್ಯಕ್ರಮ ಹಮ್ಮಿಕೊಂಡಿದೆ.

2017–18ನೇ ಸಾಲಿನಲ್ಲಿ 10 ಆಂತರಿಕ ತರಬೇತಿ ಕಾರ್ಯಕ್ರಮಗಳನ್ನು ನಡೆಸಲಾಗಿದೆ. ಅಂತೆಯೇ ಆಂತರಿಕ ತರಬೇತಿ ಕಾರ್ಯಕ್ರಮದ ಜತೆಗೆ ಬಾಹ್ಯ ತರಬೇತಿ ಕಾರ್ಯಕ್ರಮಗಳನ್ನು ಸಹ ಗಮನದಲ್ಲಿಟ್ಟುಕೊಂಡು ವಿವಿಧ ಸಂಸ್ಥೆಗಳು ಏರ್ಪಡಿಸಿದ್ದ 16 ಬಾಹ್ಯತರಬೇತಿ ಕಾರ್ಯಕ್ರಮಗಳಿಗೆ ಉದ್ಯೋಗಿಗಳನ್ನು ನಿಯೋಜಿಸಲಾಗಿದೆ.

ಈ ಸಾಲಿನಲ್ಲಿ ನಿಗಮದ ಉದ್ಯೋಗಿಗಳು ಭಾಗವಹಿಸಿದ್ದ ಮುಖ್ಯವಾದ ತರಬೇತಿಗಳು ಈ ಕೆಳಗಿನಂತಿವೆ.

ಆಂತರಿಕ ತರಬೇತಿ ಕಾರ್ಯಕ್ರಮಗಳು	
Sl. No.	Name of the Programme
1.	ಎಫೆಕ್ಟಿವ್ ಲೀಡರ್‌ಶಿಪ್/ಇಂಟರ್‌ಪರ್ಸನಲ್ ಸ್ಕಿಲ್ಸ್
2.	ಫಿಸಿಕಲ್ ಫಿಟ್‌ನೆಸ್& ಗುಡ್ ಹೆಲ್ತ್ ಹ್ಯಾಬಿಟ್ಸ್
3.	ಪರ್ಸಾನಾಲಿಟಿ ಡೆವಲಪ್‌ಮೆಂಟ್ ಆಸ್ ಎ ಟೂಲ್ ಫಾರ್ ಅಚಿವಿಂಗ್ ಯುವರ್ ಡ್ರೀಮ್
4.	ಫೈನಾನ್ಸ್ ಫಾರ್ ನಾನ್‌ಫೈನಾನ್ಸ್ ಎಕ್ಸಿಕ್ಯೂಟಿವ್ಸ್
5.	ಡೆವಲಪ್‌ಮೆಂಟ್ ಆಫ್ ವಿಂಡ್ /ಸೋಲಾರ್ ಪವರ್ ಪ್ರಾಜೆಕ್ಟ್
6.	ಓ&ಎಂ ಆಫ್ ಇಹೆಚ್‌ವಿ ಸ್ಟೇಷನ್‌ಎಕ್ಯೂಪ್‌ಮೆಂಟ್ ಅರ್ಥಿಂಗ್
7.	ಪ್ಲಾನ್ ಫಾರ್ ಬೆಟರ್‌ರಿಟೈರ್ಡ್ ಲೈಫ್/ಮ್ಯಾನೇಜ್‌ಯುವರ್ ಫೈನಾನ್ಸ್ ಫಾರ್ ಬೆಟರ್ ಫ್ಯೂಚರ್
8.	ಹೌ ಟು ಲೀಡ್ ಎ ಸ್ಯಾಟಿಸ್ಫೈಯಿಂಗ್ ಲೈಫ್ ಎಟ್ ಎನಿ ಏಜ್
9.	ಇನ್‌ಸ್ಟ್ರುಮೆಂಟ್ ಟ್ರಾನ್ಸ್‌ಫಾರ್ಮರ್ & ಪ್ರೊಟೆಕ್ಷನ್ ಆಫ್ ಜನರೇಟರ್
10.	ಫೈನಾನ್ಸ್ ಇನ್ ಟರ್ಮ್ಸ್ ಆಫ್ ಪ್ರೋಪೋಸಲ್ಸ್ ಸೇವಿಂಗ್ಸ್ ಇನ್ವೆಸ್ಟ್‌ಮೆಂಟ್ & ಸಾಫ್ಟ್ ಸ್ಕಿಲ್ಸ್

ಬಾಹ್ಯತರಬೇತಿ	
Sl. No.	**Name of the Programme**
1.	ಸ್ಟಡಿ ಫಾರ್ ಆಪ್ಟಿಮೆಜೇಷನ್ ಆಫ್ ಹೈಡ್ರೋ ಪವರ್‌ರಿಸೋರ್ಸ್ ಇನ್ ದ ಸ್ಟೇಟ್ ಆಫ್ ಕರ್ನಾಟಕ ವರ್ಕ್‌ಶಾಪ್ ಫಾರ್ ಮೊಡೆಲ್ ಡೆಮೋನ್ಸ್ಟ್ರೆಷನ್
2.	ಕಾನ್ಸೆಪ್ಟ್ ಟೂ ಕಮೀಷನಿಂಗ್ ಆಫ್ ಸೋಲಾರ್ ಪವರ್ ಪ್ಲಾಂಟ್ಸ್ ಇನ್‌ಕ್ಲುಡಿಂಗ್ ಓ&ಎಂ
3.	ಪಬ್ಲಿಕ್ ಪ್ರೊಕ್ಯೂರ್‌ಮೆಂಟ್ & ಕಂಟ್ರ್ಯಾಕ್ಟ್ ಮ್ಯಾನೇಜ್‌ಮೆಂಟ್
4.	ಪ್ಲೇಕ್ಸಿಬಿಲಿಜೆಷನ್ ಆಫ್ ಥರ್ಮಲ್ ಪವರ್ ಪ್ಲಾಂಟ್ಸ್ ಲರ್ನಿಂಗ್ ಫಾರ್ ಜರ್ಮನ್ ಎಕ್ಸ್‌ಪೀರಿಯನ್ಸ್ ಆನ್ 1ನೇ ಡಿಸೆಂಬರ್ 2017
5.	2 ದಿನಗಳ ಇನ್‌ಡೋರ್ ಹೌಸ್ ವರ್ಕ್‌ಶಾಪ್ ಆನ್ ರಿವಿಸಿಟಿಂಗ್ ಇಂಡಸ್ಟ್ರಿಯಲ್ ಕೆಮಿಕಲ್ ಡಿಸಸ್ಟರ್
6.	3 ದಿನಗಳ ವರ್ಕ್‌ಶಾಪ್ ಅನ್ ವಿಜಿಲೆನ್ಸ್ ಅವೇರ್ನೆಸ್ & ಪ್ರಿವೆಂಟಿವ್ ವಿಜಿಲೆನ್ಸ್ ಫಾರ್ ಕಂಟ್ರೈನಿಂಗ್ ಕರಪ್‌ಷನ್ ಮಾಲ್‌ಪ್ರಾಕ್ಟಿಸ್ & ಡೆಪಸಿಟ್ ಇನ್‌ಗವರ್ನೆನ್ಸ್
7.	ರಿಸೆಂಟ್ ಟ್ರೆಂಡ್ಸ್ ಇನ್ ಇನ್ಸುಲೆಟಿಂಗ್ ಫ್ಲಡ್ಸ್ ಫಾರ್ ಎಲೆಕ್ಟ್ರಿಕಲ್ ಎಕ್ವಿಪ್‌ಮೆಂಟ್
8.	ವರ್ಕ್‌ಶಾಪ್ ಆನ್ ಪರ್‌ಫಾರ್ಮೆನ್ಸ್ & ರಿಲಿಯಬಿಲಿಟಿ ಆಡಿಟ್ ಬಾಯ್ಲರ್ & ವಾಟರ್ ಟ್ರೀಟ್‌ಮೆಂಟ್ ಸಿಸ್ಟಂ
9.	ಅವೇರ್ನೆಸ್ ಟ್ರೈನಿಂಗ್ ಪ್ರೋಗಾಂ ಅನ್ ಬಯೋ-ಮೆಡಿಕಲ್ ವೇಸ್ಟ್ ಮ್ಯಾನೇಜ್‌ಮೆಂಟ್
10.	ಸೆಕ್ಸ್ಯುಲ್ ಹರಾಸ್ಮೆಂಟ್ ಆಫ್ ವುಮನ್ ಎಟ್ ವರ್ಕ ಪ್ಲೆಸ್ ಆಕ್ಟ್-2013
11.	ಟ್ರೈನಿಂಗ್ ಪ್ರೋಗ್ರಾಮ್ ಅನ್ ಎಲೆಕ್ಟ್ರಿಸಿಟಿ ಅಕ್ಟ್ ಟರಿಫ್ ಗ್ರಿಡ್ ರೆಗ್ಯೂಲೇಷನ್ಸ್ & ಪವರ್ ಮಾರ್ಕೆಟ್
12.	ಟ್ರೈನಿಂಗ್ ಪ್ರೋಗ್ರಾಮ್ ಫಾರ್ ಫಸ್ಟ್ ಆಫಿಲೆಟ್ ಆಥೋರಿಟಸ್/ ಪಬ್ಲಿಕ್‌ಇನ್‌ಫರ್ಮೆಷನ್ ಆಫೀಸರ್/ ಆಲ್ಟರ್‌ನೆಟ್ ಪಬ್ಲಿಕ್ ಇನ್‌ಫರ್ಮೆಷನ್ ಆಫೀಸರ್/ ಆಸಿಸ್ಟೆಂಟ್ ಪಬ್ಲಿಕ್ ಇನ್‌ಫರ್ಮೆಷನ್ & ನೋಡಲ್ ಆಫೀಸರ್ಸ್ ಆನ್ ದ ರೈಟ್ ಟೂ ಇನ್‌ಫರ್ಮೆಷನ್ ಆಕ್ಟ್ 2005
13.	ಕಂಟ್ರ್ಯಾಕ್ಟ್ ಮ್ಯಾನೇಜ್‌ಮೆಂಟ್ ಪಬ್ಲಿಕ್ ಪಾಲಿಸಿ ಆಪ್ ಇಂಡಿಯಾ & ಬೈ ಪಾರ್ಟ್ ಇನ್ ಆರ್ಬಿಟೇಷನ್
14.	ವರ್ಕ್‌ಶಾಪ್ ಅನ್ ಪವರ್ ಟ್ರಾನ್ಸ್‌ಫಾರ್ಮರ್ ಟೇಸ್ಟಿಂಗ್ ಕಮೀಷನಿಂಗ್ ಪ್ರೋಟೆಕ್ಷನ್ & ಮೈಂಟೆನೆನ್ಸ್
15.	ಅಟೆಂಡಿಂಗ್ & ಪ್ರಸೆಂಟಿಂಗ್ ಪೇಪರ್ ಎಟ್ ದ ಇಂಟರ್‌ನ್ಯಾಷನಲ್ ಓ&ಎಂ ಕಾನ್‌ಫೆರೆನ್ಸ್ ಈಪಿಎಸ್-2018, ಆರ್ಗನೈಸ್ಡ್ ಬೈ ಎನ್‌ಟಿಪಿಸಿ ಅಟ್ ನ್ಯೂಡೆಲ್ಲಿ ರಿರ್ಗಾಡಿಂಗ್ (ಎನ್ವಿರೋನ್‌ಮೆಂಟಲ್ ಮ್ಯಾನೇಜ್‌ಮೆಂಟ್ ಟೂಲ್ಸ್ & ಎನ್ವಿರೋನ್‌ಮೆಂಟಲ್ ಸೌಂಡ್ ಟೆಕ್ನಾಲೋಜಿಸ್ ಫಾರ್ ಕೋಲ್ ಬೇಸ್ಡ್ ಥರ್ಮಲ್ ಪವರ್ ಪ್ಲಾಂಟ್)
16.	ಎನ್‌ಪಿಟಿಸಿ ಇಂಟರ್‌ನ್ಯಾಷನಲ್ ಓ & ಎಂ ಕಾನ್‌ಫೆರೆನ್ಸ್ ಪ್ರಜೆನ್ಸ್‌ಟೇಷನ್ ಆಪ್ ಟೆಕ್ನಿನಿಕಲ್ ಪೇಪರ್ ರಿರ್ಗಾಡಿಂಗ್ ಪೋಸ್ಟ್ ಕಮೀಷನಿಂಗ್ ಸ್ಟಬಿಲಿಜೆಷನ್ ಇಷ್ಯೂಸ್ & ಎಫೆಕ್ಟಿವ್) ಓ & ಎಂ ಎಟ್‌ಎಸ್‌ಟಿಆರ್‌ಪಿ ಹೈಡ್ರೋ ಯುನಿಟ್ ಆಫ್ ಕೆಪಿಸಿಎಲ್ ಇನ್ ದ ಇಂಡಿಯಾ ಸ್ಟೇಟ್ ಆಪ್ ಕರ್ನಾಟಕ

2) ವೃತ್ತಿ ವಿಕಾಸ ಯೋಜನೆ:

2017-2018 ವರ್ಷದಲ್ಲಿ ವೃತ್ತಿ ವಿಕಾಸ ಯೋಜನೆಯಡಿ ಉದ್ಯೋಗಿಗಳು ಪದೋನ್ನತಿ ಹಾಗೂ ಪುನರ್ ಪದನಾಮಗಳನ್ನು ಈ ಕೆಳಗೆ ವಿವರಿಸಿದಂತೆ ಪಡೆದಿದ್ದಾರೆ.

ಕಾರ್ಯನಿರ್ವಾಹಕ ಇಂಜಿನಿಯರ್ ಮತ್ತು ಸಮಾನ ಹುದ್ದೆಗಳು	-
ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್ ಮತ್ತು ಸಮಾನ ಹುದ್ದೆಗಳು	-
ಸಹಾಯಕ ಇಂಜಿನಿಯರ್ ಮತ್ತು ಸಮಾನ ಹುದ್ದೆಗಳು	-
ಸಹಾಯಕ ಲೆಕ್ಕಾಧಿಕಾರಿ ಮತ್ತು ಕಛೇರಿ ವ್ಯವಸ್ಥಾಪಕ ಮಟ್ಟದಲ್ಲಿ	-
ಕಾರ್ಮಿಕರ ವೃಂದದ ಮಟ್ಟದಲ್ಲಿ	460

ಡಿಪಿಎಆರ್ ರವರ ಪತ್ರ ಸಂಖ್ಯೆ ಸಿಆಸುಇ 182 ಸೆನೆನಿ 2011 ದಿನಾಂಕ: 22.03.2017 ರ ಪ್ರಕಾರ, ಸದರಿ ವರ್ಷದಲ್ಲಿ ಯಾವುದೇ ಕಾರ್ಪೋರೇಟ್ ವೃಂದದ ಉದ್ಯೋಗಿಗಳಿಗೆ ಪದೋನ್ನತಿ ಹಾಗೂ ಪುನರ್ ಪದನಾಮಗಳನ್ನು ನೀಡಿರುವುದಿಲ್ಲ.

XV. ಉದ್ಯೋಗಿಗಳ ಬಲ:

ಉದ್ಯೋಗಿಗಳ ವಿವರ	31.03.2018 ರಲ್ಲಿದ್ದಂತೆ	31.03.2017 ರಲ್ಲಿದ್ದಂತೆ
ಒಟ್ಟು ಉದ್ಯೋಗಿಗಳ ಸಂಖ್ಯೆ	4807	4930
ಅಧಿಕಾರಿ ವರ್ಗದವರು	2267	2348
ಕಾರ್ಮಿಕ ವೃಂದದವರು	2540	2582
ಉದ್ಯೋಗಿಗಳ ಸೇರ್ಪಡೆ	234	49
ಉದ್ಯೋಗಿಗಳ ನಿರ್ಗಮನ*	101	377
ಸ್ವಯಂ ನಿವೃತ್ತಿ ಯೋಜನೆಯಡಿ ಉದ್ಯೋಗಿಗಳ ನಿರ್ಗಮನ	03	0
ಪರಿಶಿಷ್ಟ ಜಾತಿ ಉದ್ಯೋಗಿಗಳು ಶೇಕಡಾವಾರು	18.71%	17.58%

ಪರಿಶಿಷ್ಟ ಪಂಗಡದ ಉದ್ಯೋಗಿಗಳು ಶೇಕಡಾವಾರು	4.33%	4.19%
ಅಂಗವಿಕಲ ಉದ್ಯೋಗಿಗಳು ಶೇಕಡಾವಾರು	1.37%	1.13%
ಮಾಜಿ ಸೈನಿಕರು	07	08
ಒಟ್ಟು ಸ್ಥಾಪಿತ ಯೋಜನೆಯ ಸಾಮರ್ಥ್ಯ (ಮೆ.ವ್ಯಾ)	8823.905	8023.905
ವ್ಯಕ್ತಿ/ಮೆ.ವ್ಯಾ. ಪ್ರಮಾಣ.	0.5447	0.6144

* 01.04.2017 ರಿಂದ 31.03.2018 ರ ಅವಧಿಯಲ್ಲಿ ನಿವೃತ್ತಿ/ಸಯಂ ನಿವೃತ್ತಿ/ರಾಜೀನಾಮೆ /ಮರಣ ಹೊಂದಿದ ಉದ್ಯೋಗಿಗಳ ಅಂಕಿ ಅಂಶ.

ವಿಭಜೀಕೃತ ಅಧಿಕಾರಿ ಹುದ್ದೆಗಳು

ಇಂಜನಿಯರಿಂಗ್ ಅಧಿಕಾರಿಗಳು – 1943 ಇತರ ಅಧಿಕಾರಿಗಳು – 324

XVI. ಸಾರ್ವಜನಿಕ ಠೇವಣಿಗಳು:

ನಿಗಮವು ಜನಸಾಮಾನ್ಯರಿಂದ ಠೇವಣಿಗಳನ್ನು ಸ್ವೀಕರಿಸುವುದನ್ನು ನವಂಬರ್ 2002 ರಿಂದ ಸ್ಥಗಿತಗೊಳಿಸಿದೆ. ಸೆಪ್ಟಂಬರ್ 2005 ರ ವರೆಗೆ ಹಿಂದಿನ ಮತ್ತು ಇಂದಿನ ಉದ್ಯೋಗಿಗಳಿಂದ ಠೇವಣಿಗಳನ್ನು ಸ್ವೀಕಾರ / ನವೀಕರಣಗಳನ್ನು ಮಾಡಲಾಯಿತು. ಈ ವರ್ಷದ ಕೊನೆಗೆ ಕೇಳಿಕೆ ಬಾರದ / ಪಾವತಿಯಾಗದ ಮೊತ್ತ ರೂ.12.82 ಲಕ್ಷ ರೂ ಇತ್ತು. ವಿವಿಧ ನ್ಯಾಯಾಲಯಗಳಲ್ಲಿ ವಾರಸುದಾರರ ವಿಚಾರಣೆಯ ಕಾರಣ ಇವುಗಳು ಬಾಕಿ ಉಳಿದಿವೆ.

XVII. ಲೆಕ್ಕ ಪರಿಶೋಧಕರು

(i) ಶಾಸನ ಬದ್ಧ ಲೆಕ್ಕ ಪರಿಶೋಧಕರು

ಸಿ. ಮತ್ತು ಎ.ಜಿ ಯವರು ಮೆ: ಗುರು ಮತ್ತು ಜಾನ, ಚಾರ್ಟರ್ಡ್ ಅಕೌಂಟೆಂಟ್ಸ್ ಇವರನ್ನು 2017–18ನೇ ವರ್ಷದ ಶಾಸನಬದ್ಧ ಲೆಕ್ಕಪರಿಶೋಧಕರನ್ನಾಗಿ ನೇಮಿಸಿದೆ. ಆ ಸಂಸ್ಥೆಯು ನಿಗಮದ ಎಲ್ಲಾ ಲೆಕ್ಕ ವಿಭಾಗಗಳಿಗೆ ಭೇಟಿ ನೀಡಿ ದಾಖಲೆಗಳನ್ನು ಪರಿಶೀಲಿಸಿ ವಿವರಣೆಗಳನ್ನು ಪಡೆದುಕೊಂಡು ಲೆಕ್ಕ ಪರಿಶೋಧನಾ ಕೆಲಸಗಳನ್ನು ಸರಿಯಾದ ಸಮಯಕ್ಕೆ ಮುಗಿಸಿಕೊಟ್ಟಿದೆ.

(ii) ಆಂತರಿಕ ಲೆಕ್ಕ ಪರಿಶೋಧಕರು

ಆರ್‌ಟಿಪಿಎಸ್, ಬಿಟಿಪಿಎಸ್ ಮತ್ತು ಜಲ ವಿದ್ಯುತ್ ಯೋಜನೆಗಳ ಆಂತರಿಕ ಲೆಕ್ಕ ಪರಿಶೋಧನೆಯನ್ನು ಬಲಗೊಳಿಸಲು ಚಾರ್ಟರ್ಡ್ ಅಕೌಂಟೆಂಟ್ಸರನ್ನು ನೇಮಿಸಲಾಗಿದೆ.

(iii) ವೆಚ್ಚಲೆಕ್ಕ ಪರಿಶೋಧಕರು:

ಭಾರತ ಸರ್ಕಾರವು ಉತ್ಪಾದನಾ ಕಂಪನಿಗಳಿಗೆ ವೆಚ್ಚಲೆಕ್ಕ ಪರಿಶೋಧನೆಯನ್ನು ಆರ್ಥಿಕ ವರ್ಷ 2005–06 ರಿಂದ ಜಾರಿಗೆ ತಂದಿರುತ್ತದೆ. ಕಂಪನಿಯು 2017–18ನೇ ಸಾಲಿಗೆ ಮೆ॥ ಜೆ.ಹೆಚ್ ಎಂಡ್ ಅಸೋಸಿಯೇಟ್ಸ್ ಸಂಸ್ಥೆಯನ್ನು ವೆಚ್ಚಲೆಕ್ಕ ಪರಿಶೋಧಕರಾಗಿ ನೇಮಕಾತಿ ಮಾಡಿದೆ. ವೆಚ್ಚಲೆಕ್ಕ ಪರಿಶೋಧಕರು ವೆಚ್ಚಲೆಕ್ಕ ಪರಿಶೋಧನೆಯನ್ನು ಮಾಡಿ, ವರದಿಯನ್ನು ಸಲ್ಲಿಸಿರುತ್ತಾರೆ. ಈ ವರದಿಯನ್ನು ದಾಖಲಿಸಿದ ನಂತರ ಒಅಂಗೆ ಸಲ್ಲಿಸಲಾಗುವುದು.

(iv) ಸೆಕ್ರೆಟರಿಯಲ್ ಆಡಿಟರ್‌ಗಳು

ಮೆ.ಕೆ.ನಾರಾಯಣ ಸ್ವಾಮಿ ಮತ್ತು ಕಂಪನಿ, ಕಂಪನಿ ಸೆಕ್ರೆಟರಿಯವರನ್ನು 2017–18ನೇ ಸಾಲಿಗೆ ಸೆಕ್ರೆಟರಿಯಲ್ ಆಡಿಟರ್‌ಗಳಾಗಿ ಕಂಪನಿ ಕಾಯ್ದೆ 2013 ರ ಕಲಂ 204 ರ ಹಾಗೂ ಸಂಬಂಧಿಸಿದ ಕಾಯ್ದೆಗಳ ಪ್ರಕಾರ (ಮ್ಯಾನೆಜೀರಿಯಲ್ ಪರ್ಸ್‌ನಲ್‌ಗಳ ನೇಮಕಾತಿ – ಸಂಭಾವನೆ). ಸೆಕ್ರೆಟರಿಯಲ್ ಆಡಿಟರ್‌ಗಳ ವರದಿಯನ್ನು ಅನುಬಂಧ– 'ಬಿ' ನಲ್ಲಿ ನೀಡಲಾಗಿದೆ.

XVIII. ಕಂಪ್ಟ್ರೋಲರ್ ಮತ್ತು ಆಡಿಟರ್ ಜನರಲ್‌ರವರಿಂದ ಪರಿಶೀಲನ

ಕಂಪ್ಟ್ರೋಲರ್ ಮತ್ತು ಆಡಿಟರ್ ಜನರಲ್ ಆಫ್ ಇಂಡಿಯಾ ಇವರು ನಡೆಸುವ ಪರಿಶೀಲನೆಯ ಭಾಗವಾದ ನಿಗಮದ ಕಾರ್ಯಾಚರಣೆಯ ಫಲಿತಾಂಶದ ಮೇಲಿನ ಟಿಪ್ಪಣಿಯನ್ನು ಅನುಬಂಧ– ' ಸಿ' ನಲ್ಲಿ ಲಗತ್ತಿಸಲಾಗಿದೆ.

XIX. 1975ರ ಕಂಪನಿ ಕಾಯ್ದೆಯನ್ವಯ ವಿವರಗಳು: ನೌಕರರ ವಿವರಗಳು ಮತ್ತು ತಿದ್ದುಪಡಿಯಾದಂತೆ

ಸದರಿ ಆರ್ಥಿಕ ವರ್ಷದಲ್ಲಿ ವರ್ಷಕ್ಕೆ 1,02,00,000 ರೂಪಾಯಿಗಳು ಮತ್ತು ಅದಕ್ಕಿಂತ ಮೇಲ್ಪಟ್ಟ ಅಥವಾ ತಿಂಗಳಿಗೆ 8,50,000 ರೂಪಾಯಿಗಳ ಮೇಲ್ಪಟ್ಟ ಸಂಭಾವನೆಯನ್ನು ತೆಗೆದುಕೊಂಡ ಯಾವ ಉದ್ಯೋಗಿಯೂ ಇರುವುದಿಲ್ಲ.

XX. ಅಧೀನ ಸಂಸ್ಥೆ

ನಿಗಮವು ಕೆಪಿಸಿ ಗ್ಯಾಸ್ ಪವರ್ ಕಾರ್ಪೋರೇಷನ್ ಲಿಮಿಟೆಡ್(ಈ ಹಿಂದೆ ಕೆಪಿಸಿ ಬಿಡದಿ ಪವರ್ ಕಾರ್ಪೋರೇಷನ್ ಪ್ರೈ ಲಿಮಿಟೆಡ್) ಎಂಬ ಅಂಗ ಸಂಸ್ಥೆಯನ್ನು ಹೊಂದಿದ್ದು, ಬೆಂಗಳೂರು ಸಮೀಪವಿರುವ ಯಲಹಂಕದ'ಲ್ಲಿ ಅನಿಲ ಆಧಾರಿತ ಘಟಕವನ್ನು ಅನುಷ್ಠಾನಗೊಳಿಸಲು

ಸ್ಥಾಪಿಸಲಾಗಿದೆ.

ಈ ನಿಗಮವು ಈ ಕೆಳ ಕಾಣಿಸಿದ ಜಂಟಿ ಸಹಭಾಗಿತ್ವ ಕಂಪನಿಗಳಲ್ಲಿ ಪಾಲನ್ನು ಹೊಂದಿರುತ್ತದೆ.

a) ರಾಯಚೂರು ವಿದ್ಯುತ್ ನಿಗಮ ನಿಯಮಿತ

b) ಕರ್ನಾಟಕ ಇಎಂಟಿಎ ಕೋಲ್ ಮೈನ್ಸ್ ಲಿಮಿಟೆಡ್

c) ಬೆಂಗಾಲ್ ಭೀರ್‌ಭೂಮ್ ಕೋಲ್ ಫೀಲ್ಡ್ಸ್ ಲಿಮಿಟೆಡ್

ಕಂಪನಿ ಕಾಯ್ದೆ 2013 ರ ವಿಧಿ 129 ರ ಅನ್ವಯ ಅಗತ್ಯವಿರುವ ನಿರೂಪಣೆಗಳನ್ನು ***ಅನುಬಂಧ-ಇ*** ರಲ್ಲಿ ಲಗತ್ತಿಸಿದೆ.

XXI. ಮಾಹಿತಿ ತಂತ್ರಜ್ಞಾನ ಮತ್ತು ಗಣಕೀಕರಣ

ನಿಗಮವು ತನ್ನ ವ್ಯವಹಾರಿಕ ಬದ್ಧತೆಯನ್ನು ನಿರ್ವಹಿಸಲು ಅನೇಕ ಮಾಹಿತಿ ತಂತ್ರಜ್ಞಾನದ ಉಪಕ್ರಮಗಳನ್ನು ಅಳವಡಿಸಿಕೊಂಡಿದೆ. ಅವುಗಳಲ್ಲಿ ಕೆಲವು ಐ.ಟಿ. ವ್ಯವಸ್ಥೆಗಳು ಈ ಕೆಳಕಂಡಂತಿವೆ.

1) **ಯಂತ್ರಾಂಶಗಳು**: ಆಪರೇಟಿಂಗ್ ಸಿಸ್ಟಮ್ಸ ವಿಂಡೋಸ್ 2008ನ್ನು ಅಳವಡಿಸಿದ ಬ್ಲೇಡ್ ಸರ್ವರ್ ಮತ್ತು ರ್‍ಯಾಕ್ ಸರ್ವರ್‌ಗಳನ್ನು ಕಾರ್ಪೊರೇಟ್ ಮತ್ತು ಯೋಜನಾ ಪ್ರದೇಶಗಳಿಗೆ ಒದಗಿಸಿಕೊಡಲಾಗಿದೆ. ನಿಗಮದಲ್ಲಿಯ ಎಲ್ಲಾ ಕಛೇರಿಗಳಿಗೆ ವಿಂಡೋಸ್-7/8/10 ಹಾಗೂ ಎಂ.ಎಸ್. ಆಫೀಸ್ 2010/2013/2016 ತತ್ರಾಂಶಗಳನ್ನು ಅಳವಡಿಸಿರುವ ಕೋರ್-2-ಡಿಯೋ/ಐ3/ಐ5/ಐ7 ಪಿ.ಸಿ.ಗಳನ್ನು ಹಾಗೂ ಪ್ರಿಂಟರ್‌ಗಳನ್ನು ಕಾರ್ಯನಿರ್ವಾಹಕ ಅಭಿಯಂತರರಿಗೆ ಹಾಗೂ ಅಗತ್ಯವಿರುವ ಅಧಿಕಾರಿಗಳಿಗೆ ಒದಗಿಸಿಕೊಡಲಾಗಿದೆ.

2) **ಸಂಪರ್ಕತೆ**: ಬೆಂಗಳೂರಿನಿಂದ ಪ್ರಮುಖವಾದ ಯೋಜನಾ ಪ್ರದೇಶಗಳಿಗೆ ವೈಡ್ ಏರಿಯಾ ನೆಟ್‌ವರ್ಕ್‌ನ್ನು ಬಿ.ಎಸ್.ಎನ್. ಎಲ್‌ನ ಎಂ.ಪಿ.ಎಲ್.ಎಸ್/ ಎಂ.ಎಲ್.ಎಲ್.ಎನ್ ಮುಖಾಂತರ ಕಲ್ಪಿಸಲಾಗಿದೆ. ವಿವಿಧ ಯೋಜನಾ ಪ್ರದೇಶಗಳಲ್ಲಿಯ ಬಹುತೇಕ ವಿದ್ಯುದಾಗರಗಳಿಂದ ಸಂಬಂಧಿಸಿದ ಆಯಾ ಆಡಳಿತ ಕಛೇರಿಗಳಿಗೆ ಓ.ಎಫ್.ಸಿ ಸಂಪರ್ಕವನ್ನು ಅಳವಡಿಸಲಾಗಿದೆ. ನಿಗಮದ ಎಲ್ಲಾ ಕಛೇರಿಗಳಿಗೆ ಲೋಕಲ್ ಏರಿಯಾ ನೆಟ್‌ವರ್ಕ್‌ನ್ನು ಸಂಪರ್ಕವನ್ನು ಕಲ್ಪಿಸಲಾಗಿದೆ. ಇ-ಮೇಲ್ ಮತ್ತು ಇಂಟರ್‌ನೆಟ್ ಸೌಲಭ್ಯವನ್ನು ಕಾರ್ಯನಿರ್ವಾಹಕ ಅಭಿಯಂತರರ ಹಂತದವರೆಗೆ ಹಾಗೂ ಅಗತ್ಯತೆಯುಳ್ಳ ಉದ್ಯೋಗಿಗಳಿಗೆ ಒದಗಿಸಲಾಗಿವೆ.

3) **ಆಪ್ಲೀಕೇಷನ್ ತಂತ್ರಾಂಶ**: ಈ ಕೆಳಕಂಡ ಅಪ್ಲೀಕೇಷನ್ ತಂತ್ರಾಂಶಗಳನ್ನು ನಿಗಮದ ಸಿಸ್ಟಮ್ಸ ಅಭಿಯಂತರರ ತಂಡವು ಅಭಿವೃದ್ಧಿಪಡಿಸಿ ಅಳವಡಿಸಿರುತ್ತಾರೆ.

   a) ಇಂಧನ ನಿರ್ವಹಣಾ ವ್ಯವಸ್ಥೆ.

   b) ಇಂಟಿಗ್ರೇಟೆಡ್ ಇನ್‌ವೆಂಟರಿ ಮ್ಯಾನೇಜ್‌ಮೆಂಟ್ ವ್ಯವಸ್ಥೆ.

   c) ಬ್ಯಾಂಕ್ ಗ್ಯಾರಂಟಿ ಮ್ಯಾನೇಜ್‌ಮೆಂಟ್ ವ್ಯವಸ್ಥೆ.

   d) ಕ್ಯಾಷ್ ಮತ್ತು ಕಂಪ್ಯೆಲೇಷನ್ ಮ್ಯಾನೇಜ್‌ಮೆಂಟ್ ವ್ಯವಸ್ಥೆ.

   e) ಸ್ಥಿರಾಸ್ತಿ ನಿರ್ವಹಣಾ ವ್ಯವಸ್ಥೆ.

   f) ವೇತನ ಮತ್ತು ಪಿಂಚಣಿ.

   g) ಪ್ರಾವಿಡೆಂಟ್ ಫಂಡ್.

   h) ವಿದ್ಯುತ್ ಉತ್ಪಾದನಾ ನಿರ್ವಹಣೆ.

   i) ಪ್ಲಾಂಟ್ ಮಾನಿಟರಿಂಗ್ ವ್ಯವಸ್ಥೆ.

   j) ಡ್ರಾಯಿಂಗ್ ನಿರ್ವಹಣಾ ವ್ಯವಸ್ಥೆ.

   k) ಮಾನವ ಸಂಪನ್ಮೂಲ ಮಾಹಿತಿ ವ್ಯವಸ್ಥೆ.

   l) ಶಿಸ್ತು ನಡಾವಳಿ ವ್ಯವಸ್ಥೆ.

   m) ತರಬೇತಿ ವ್ಯವಸ್ಥೆ.

   n) ಆಸ್ಪತ್ರೆ ನಿರ್ವಹಣಾ ವ್ಯವಸ್ಥೆ.

   o) ನಿರ್ವಹಣಾ ಮಾಹಿತಿ ವ್ಯವಸ್ಥೆ.

   p) ಇನ್‌ವಾರ್ಡ್ ಹಾಗೂ ಔಟ್‌ವಾರ್ಡ್ ವ್ಯವಸ್ಥೆ.

4) **ವೆಬ್‌ಸೈಟ್**: ವೆಬ್‌ಸೈಟ್ ದ್ವಿಭಾಷೆಗಳಲ್ಲಿ (ಇಂಗ್ಲೀಷ್ ಮತ್ತು ಕನ್ನಡ) ಮರುವಿನ್ಯಾಸಗೊಳಿಸಲಾಗಿದೆ. ಜಂಟಿ ಉದ್ಯಮಗಳ, ಟೆಂಡರ್, ಮಾಧ್ಯಮ ಕೇಂದ್ರ, ರಾಷ್ಟ್ರೀಯ ಸೌರ ತಂತ್ರಜ್ಞಾನ ತರಬೇತಿ ಕೇಂದ್ರ ಇತ್ಯಾದಿಗಳು ಎಲ್ಲಾ ಯೋಜನಾ ಪ್ರದೇಶಗಳ ಮತ್ತು ಬೆಂಗಳೂರು ಕಛೇರಿಗಳ ಟೆಂಡರ್‌ಗಳನ್ನು ಅಪ್ಲೋಡ್ ಮಾಡಲು ಹೊಸ ಕೊಂಡಿಗಳನ್ನು ಒದಗಿಸಲಾಗಿದೆ.

5) **ಇತರೆ ಸಾಫ್ಟ್‌ವೇರ್ ಪ್ಯಾಕೇಜುಸ್**: ಇತ್ತೀಚಿನ ಮಾದರಿಯ ಆಟೋಕ್ಯಾಡ್ ಮತ್ತು ಸ್ಟ್ಯಾಡ್, ಅಡೋಬ್ ಮತ್ತು ಇ-ಟ್ಯಾಬ್ ಸಾಫ್ಟ್‌ವೇರ್‌ಗಳನ್ನು ಸಿವಿಲ್ ಡಿಸೈನ್ ಕಛೇರಿಗಳಲ್ಲಿ ವಿಸ್ತೃತವಾಗಿ ಬಳಸಲಾಗುತ್ತಿದೆ. ಓರೆಕಲ್ 9i /11g ಡೆಟಾಬೆಸ್ ಮತ್ತು ಓರೆಕಲ್

10g ಅಪ್ಲಿಕೇಶನ್ ಸರ್ವರ್ ಓರೆಕಲ್ ಫಾರ್ಮ್ಸ್ 6i ಮತ್ತು ರಿಪೋರ್ಟ್ಸ್ 6i ಬಳಕೆ ಮಾಡಲಾಗುತ್ತಿದೆ.

6) **ಇ-ಆಡಳಿತ**: ಪಾರದರ್ಶಕ ಕಾಯ್ದೆ ಪ್ರಕಾರ ಕರ್ನಾಟಕ ಇ-ಪ್ರೊಕ್ಯೂರ್ಮೆಂಟ್ ಮೂಲಕ ಕಾರ್ಪೊರೇಟ್ ಕಛೇರಿ ಹಾಗೂ ಯೋಜನಾ ಪ್ರದೇಶಗಳಲ್ಲಿ ಗೂಡ್ಸ್ ಮತ್ತು ಸೇವೆಯ ಟೆಂಡರ್‌ಗಳನ್ನು ಕೆ.ಟಿ.ಪಿ.ಪಿ ಕಾಯಿದೆಯನ್ವಯ ಕರೆಯಲಾಗುತ್ತಿದೆ.

7) **ಉದ್ಯಮ ಸಂಪನ್ಮೂಲ ಯೋಜನೆ**: ಗಣಕೀಕರಣ ಅಭಿವೃದ್ಧಿ ಮತ್ತು ಸಾಫ್ಟ್‌ವೇರ್ ಅನುಷ್ಠಾನಕ್ಕೆ ಆಂತರಿಕ ತಂಡವು ನಿಗಮದ ಕೆಲವು ಅಗತ್ಯಗಳನ್ನು ಪೂರೈಸಲು ಹಂತ ಹಂತವಾಗಿ ವಿವಿಧ ಕಾರ್ಯಕ್ಷೇತ್ರಗಳಾದ, ಹಣಕಾಸು, ಲೆಕ್ಕ ಪರಿಶೋದನೆ, ಆಸ್ತಿ ನಿರ್ವಹಣೆ, ವೇತನ ಮತ್ತು ನಿವೃತ್ತಿ ವೇತನ ನಿರ್ವಹಣೆ, ಮಾನವ ಸಂಪನ್ಮೂಲ ನಿರ್ವಹಣೆ, ಇಂಧನ ನಿರ್ವಹಣೆ, ಖರೀದಿ ಮತ್ತು ದಾಸ್ತಾನು ನಿರ್ವಹಣೆ, ಚಾಲನೆ ಮತ್ತು ನಿರ್ವಹಣೆ, ಉತ್ಪಾದನ ನಿರ್ವಹಣೆ, ಭವಿಷ್ಯ ನಿಧಿ ನಿರ್ವಹಣೆ, ಆಸ್ಪತ್ರೆ ನಿರ್ವಹಣೆ ಮುಂತಾದವುಗಳನ್ನು ನಿಗಮದಲ್ಲಿ ಅಳವಡಿಸಲಾಗಿದೆ. ಈ ತಂತ್ರಾಂಶವು ಸೀಮಿತ ರೀತಿಯಲ್ಲಿ ಪರಸ್ಪರ ಸಂಹವನ ಮೂಲಕ ನಿಗಮದ ವ್ಯವಹಾರ ಪ್ರಕ್ರಿಯೆಯಲ್ಲಿ ದತ್ತಾಂಶವನ್ನು ಒದಗಿಸುತ್ತಿದೆ. ಆದರೆ, ಈ ಪ್ರಕ್ರಿಯೆಯನ್ನು ತಂತ್ರಾಂಶ ಸುಧಾರಣೆಯ ಮೂಲಕ ಒಂದು ನಿರ್ದಿಷ್ಟ ಹಂತಕ್ಕೆ ಸುಧಾರಿಸಬೇಕಾಗಿದೆ. ಆದ್ದರಿಂದ ಉದ್ಯಮ ಸಂಪನ್ಮೂಲ ಯೋಜನಾ ಪರಿಹಾರವನ್ನು ಕಾರ್ಯಗತಗೊಳಿಸಲು ನಿಗಮದಲ್ಲಿ ನಿರ್ದರಿಸಲಾಗಿದೆ. ಉದ್ಯಮ ವ್ಯಾಪಕ ಯೋಜನೆಯನ್ನು ಅನುಷ್ಠಾನಗೊಳಿಸಲು ಬೇಕಾಗುವ ಉತ್ತಮ ನೈಪುಣ್ಯದ ಅಗತ್ಯತೆಗಳಾದ ಪರವಾನಿಗೆ, RFP ಸಿದ್ಧತೆ, ಯೋಜನೆ ಕಾರ್ಯಗತಗೊಳಿಸುವಿಕೆ ಮತ್ತು ರೋಲ್‌ಔಟ್ ERP ಪರಿಹಾರ ಮುಂತಾದವುಗಳನ್ನು ನಿಗಮದಲ್ಲಿ ಅನುಷ್ಠಾನಗೊಳಿಸಲು ERP ಪರಿಹಾರ ಸಲಹಾ ಸಹಾಯವನ್ನು ಮೆ॥ ಪಿ.ಡಬ್ಲ್ಯೂ.ಸಿ ಪ್ರೈವೇಟ್ ಲಿಮಿಟೆಡ್ ನಿಂದ ಪಡೆಯಲಾಗುತ್ತಿದೆ.

ಮೆ॥ ಪಿ.ಡಬ್ಲ್ಯೂ.ಸಿ ಪ್ರೈವೇಟ್ ಲಿಮಿಟೆಡ್ ನವರು ಉದ್ಯಮ ಸಂಪನ್ಮೂಲ ಯೋಜನೆಯ ವಿವರವಾದ ಯೋಜನಾ ವರದಿಯನ್ನು (DPR) ಸಲ್ಲಿಸಿರುತ್ತಾರೆ. ಕರ್ನಾಟಕ ವಿದ್ಯುತ್ ನಿಗಮ ನಿಯಮಿತವು ERP ತಂತ್ರಾಂಶವನ್ನು ತಮ್ಮ ನಿಗಮದಲ್ಲಿಯೇ ಇರುವ ಸಿಸ್ಟಮ್ಸ್ ಇಂಜಿನಿಯರ್‌ಗಳ ಮುಖಾಂತರ ಅಭಿವೃದ್ಧಿಪಡಿಸಲು ನಿರ್ಧರಿಸಲಾಗಿದೆ. ಇದಕ್ಕಾಗಿ ಅಗತ್ಯ ಟೀಂಗಳನ್ನು ರಚಿಸಲಾಗಿದೆ. ಈಗ ಮಾನವ ಸಂಪನ್ಮೂಲ ಮಾಹಿತಿ ವ್ಯವಸ್ಥೆ (HRMS), ಇಂಟಿಗ್ರೇಟೆಡ್ ವರ್ಕ್ಸ್ ಮ್ಯಾನೆಜ್‌ಮೆಂಟ್ ಸಿಸ್ಟಮ್ಸ್ ಮತ್ತು ಫೈನಾನ್ಸ್ ಮತ್ತು ಅಕೌಂಟ್ಸ್ ತಂತ್ರಾಂಶಗಳನ್ನು ನಿಗಮದಲ್ಲಿ ಅಭಿವೃದ್ಧಿಪಡಿಸಿ ಎಲ್ಲಾ ಕಛೇರಿಗಳಲ್ಲಿ ಅಳವಡಿಸಲಾಗುತ್ತಿದೆ. ನಿಗಮವು ERP ಅಳವಡಿಸಲು ಬೇಕಾದ ಒರೇಕಲ್ ತಂತ್ರಾಂಶ, ಸರ್ವರ್, ಮೈಗ್ರೇಶನ್ ಮತ್ತು ತರಬೇತಿ ಸೇವೆಯನ್ನು ಖರೀದಿಸಲು ಟೆಂಡರ್ ಕರೆಯಲಾಗಿದ್ದು, ಅಂತಿಮ ಘಟ್ಟದಲ್ಲಿ ಇದೆ.

XXII. ವಾರ್ಷಿಕ ರಿಟರ್ನ್ಸ್‌ನ ಉಧೃತ

ಕಂಪನಿಯ ವಾರ್ಷಿಕ ರಿಟರ್ನ್ಸ್‌ನ ಉಧೃತ ಭಾಗವನ್ನು MGT-9 ಪ್ರಪತ್ರದಲ್ಲಿ ***ಅನುಬಂಧ-ಡಿ*** ಆಗಿ ಲಗತ್ತಿಸಲಾಗಿದೆ.

XXIII. ಸಾಂಸ್ಥಿಕ ಸಂವಹನ

ಮಾಧ್ಯಮಗಳೊಡನೆ ಸಂಬಂಧ: ಮುದ್ರಣ ಹಾಗೂ ದೃಶ್ಯ ಮಾಧ್ಯಮಗಳೊಡನೆ ಉತ್ತಮ ಬಾಂಧವ್ಯಗಳನ್ನು ಸಂವಹನ ನಿರ್ವಹಿಸಿದ್ದು, ನಿಗಮವು ಕೈಗೊಂಡ ಅನೇಕ ಕಾರ್ಯಚಟುವಟಿಕೆಗಳ ಸುದ್ದಿಗಳನ್ನು ಪತ್ರಿಕೆಗಳಲ್ಲಿ ಪ್ರಕಟಿಸಲಾಗುತ್ತಿದೆ.

- ವಿವಿಧ ಸಭೆಗಳನ್ನು, ಕಾರ್ಯಕ್ರಮಗಳನ್ನು ಮತ್ತು ವಿಚಾರ ಸಂಕಿರಣಗಳನ್ನು ಹಾಗೂ ಬುದ್ಧಿ ಪ್ರಚೋದನಾ ಸಮಾವೇಶಗಳು ಹಾಗೂ ಇತ್ಯಾದಿ ಕಾರ್ಯಕ್ರಮಗಳನ್ನು ಸಂಘಟಿಸಲಾಗುತ್ತಿದೆ.
- ನಿಗಮದ ಯೋಜನೆಗಳ ಸಾಕ್ಷ್ಯಚಿತ್ರಗಳ ನಿರ್ಮಾಣ ಹಾಗು ಪ್ರದರ್ಶನವಲ್ಲದೆ ಲೇಸರ್ ಷೋ ಗಳನ್ನು ಮಾಡಿಸಿ ಅವುಗಳನ್ನು ನಿಗಮದ ಸಂಸ್ಥಾಪನಾ ದಿನಾಚರಣೆ ಮತ್ತು ಇತರ ಕಾರ್ಯಕ್ರಮಗಳಲ್ಲಿ ಪ್ರದರ್ಶಿಸಿ ಸಾರ್ವಜನಿಕರಲ್ಲಿ ಅರಿವು ಮೂಡಿಸುವುದು.
- ಕಾಲಕಾಲಕ್ಕೆ ವಾರ್ಷಿಕ ವರದಿಯನ್ನು ಪ್ರಕಟಿಸುವುದು, ನಿಗಮದ ಕಾರ್ಪೋರೇಟ್ ಬ್ರೋಚರ್ ಮತ್ತು ಇತರ ಕಾನೂನು ಮಾಹಿತಿಗಳು, ಮತ್ತು ಇತರ ಅಗತ್ಯ ಪ್ರಕಟಣೆಗಳನ್ನು ಪ್ರಕಟಿಸುವುದು.
- ಪತ್ರಿಕೆಗಳಲ್ಲಿ ಸಾಂಸ್ಥಿಕ ಹಿರಿಮೆಯನ್ನು ಉನ್ನತೀಕರಿಸುವುದು ಮತ್ತು ಪ್ರಮುಖ ಸಂದರ್ಭಗಳಲ್ಲಿ ನಿಯತಕಾಲಿಕೆಗಳನ್ನು ಬಿಡುಗಡೆಗೊಳಿಸುವುದು.
- ಸಂಸ್ಥೆಯ ಮಾಹಿತಿಗಳ ಸಾಹಿತ್ಯವನ್ನು ಅಭಿವೃದ್ಧಿ ಗೊಳಿಸುವುದು ಮತ್ತು ದಾಖಲಿಸುವುದು.
- ಸಮುದಾಯ ಸೇವೆಯ ಅಂಗವಾಗಿ ದೇವಸ್ಥಾನಗಳು ಶೈಕ್ಷಣಿಕ ಸಂಸ್ಥೆಗಳು ಮತ್ತು ಆಸ್ಪತ್ರೆಗಳು, ಜಿಲ್ಲಾ ಉತ್ಸವಗಳು, ಅನಾಥಾಲಯಗಳು ಹಾಗೂ ಅಂಧರ/ ಕ್ರೀಡಾ ಸಂಘಗಳಿಗೆ ಆರ್ಥಿಕ ನೆರವು ಮತ್ತು ಪ್ರಾಯೋಜಕತ್ವ ನೀಡುವುದರ ಮೂಲಕ ನಿಗಮ ತನ್ನ ಪ್ರತಿಷ್ಠೆಯನ್ನು ಹೆಚ್ಚಿಸಿಕೊಂಡಿದೆ.
- ಅಭಿಪ್ರಾಯ ರೂಪಕರು ಮತ್ತು ಒತ್ತಡ ಸಮೂಹಗಳು ಇವರುಗಳೊಂದಿಗೆ ಸೌಹಾರ್ದ ಯುತವಾದ ಆತ್ಮೀಯ ಸಂಬಂಧವನ್ನು ನಿರ್ವಹಿಸುವುದರ ಮೂಲಕ ಸಂಸ್ಥೆಯ ಹಿರಿಮೆಯನ್ನು ಉನ್ನತೀಕರಿಸುವುದು.

XXIV. ಪ್ರಮುಖ ಘಟನೆಗಳು

26.01.2017	ಗಣರಾಜ್ಯೋತ್ಸವ ದಿನಾಚರಣೆ.
05.04.2017	ತುಂಗಭದ್ರ ಸ್ಟೀಲ್ ಪವರ್ ಲಿ., ನ CMD ರವರೊಂದಿಗೆ ಸಭೆ.
06.04.2017	ಯರಮರಸ್ ಶಾಖೋತ್ಪನ್ನ ವಿದ್ಯುತ್ ಕೇಂದ್ರದ 2ನೇ ಘಟಕದ ವಾಣಿಜ್ಯ ಉತ್ಪಾದನೆಗೆ ಚಾಲನೆ.

20.04.2017	ಮಂಡ್ಯದ ಶಿವನಸಮುದ್ರಂನಲ್ಲಿನ 10 ಮೆ.ವಾ ಸಾಮರ್ಥ್ಯದ ಸೋಲಾರ್ ವಿದ್ಯುತ್ ಘಟಕದ ಲೋಕಾರ್ಪಣೆ.
24.06.2017	ಯಲಹಂಕ ಸಂಯುಕ್ತ ಆವರ್ತ ವಿದ್ಯುತ್ ಘಟಕಕ್ಕೆ ಅನಿಲದ ಸಾಗಣೆ ಮತ್ತು ಸರಬರಾಜು ಕುರಿತು ಗ್ಯಾಸ್ ಅಥಾರಿಟ್ ಆಫ್ ಇಂಡಿಯಾ ಲಿ., ನವರೊಂದಿಗೆ, ನಿಗಮದ ಅಧ್ಯಕ್ಷರು ಹಾಗೂ ರಾಜ್ಯದ ಸನ್ಮಾನ್ಯ ಮುಖ್ಯ ಮಂತ್ರಿಗಳಾದ ಶ್ರೀ ಸಿದ್ದರಾಮಯ್ಯ ಹಾಗೂ ಉಪಾಧ್ಯಕ್ಷರು ಹಾಗೂ ಸನ್ಮಾನ್ಯ ಇಂಧನ ಸಚಿವರಾದ ಶ್ರೀ ಡಿ.ಕೆ ಶಿವಕುಮಾರ್, ಇಂಧನ ಇಲಾಖೆಯ ಅಪರ ಮುಖ್ಯ ಕಾರ್ಯದರ್ಶಿಗಳಾದ ಡಾ॥ ರಜನೀಶ್‌ಗೋಯೆಲ್ ಭಾ.ಆ.ಸೇ, ನಿಗಮದ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಜಿ.ಕುಮಾರ ನಾಯಕ ಭಾ.ಆ.ಸೇ ಇವರ ಸಮ್ಮುಖದಲ್ಲಿ ನಿಗಮದ ಪರವಾಗಿ ಶ್ರೀ ಡಿ.ಚಂದ್ರಕಾಂತ್ ದೊಂಡಿಬಾ ಸಿಇ (ಜಿಎಸ್‌ಡಬ್ಲ್ಯೂ) ಹಾಗೂ ಮೆ. ಗ್ಯಾಸ್ ಅಥಾರಿಟೀಸ್ ಆಫ್ ಇಂಡಿಯಾ ಪರವಾಗಿ ಶ್ರೀ ಕಿಶೋರ್ ಡಿಜಿಎಂ (ಮಾರುಕಟ್ಟೆ) ಇವರು ಒಪ್ಪಂದಕ್ಕೆ ಸಹಿ ಹಾಕಿದರು.
28.12.2018	47ನೇ ವಾರ್ಷಿಕ ಸಾಮಾನ್ಯ ಸಭೆ, ಕ.ವಿ.ನಿ.ನಿ. ಯ ನೊಂದಾಯಿತ ಕಛೇರಿ, ಬೆಂಗಳೂರು
02.01.2018	2016-2017ನೇ ಸಾಲಿನ ರೂ.47.69 ಕೋಟಿಯ ಡೆವಿಡೆಂಡ್ ಅನ್ನು ಕರ್ನಾಟಕ ಸರ್ಕಾರಕ್ಕೆ ನೀಡಲಾಯಿತು
03.01.2018	ಮುಖ್ಯಮಂತ್ರಿಗಳ ಪರಿಹಾರ ನಿಧಿಗೆ ರೂ.3 ಕೋಟಿಗಳ ಕೊಡುಗೆ ನೀಡಲಾಯಿತು
27.02.2018	ನಿಗಮದ ಅಧ್ಯಕ್ಷರು ಹಾಗೂ ರಾಜ್ಯದ ಸನ್ಮಾನ್ಯ ಮುಖ್ಯ ಮಂತ್ರಿಗಳಾದ ಶ್ರೀ ಸಿದ್ದರಾಮಯ್ಯ ಹಾಗೂ ಉಪಾಧ್ಯಕ್ಷರು ಹಾಗೂ ಸನ್ಮಾನ್ಯ ಇಂಧನ ಸಚಿವರಾದ ಶ್ರೀ ಡಿ.ಕೆ ಶಿವಕುಮಾರ್, ರವರ ಉಪಸ್ಥಿತಿಯಲ್ಲಿ 1600 ಮೆ.ವ್ಯಾ ಸಾಮರ್ಥ್ಯದ ಯರಮರಸ್ ಶಾಖೋತ್ಪನ್ನ ವಿದ್ಯುತ್ ಕೇಂದ್ರದ ಲೋಕಾರ್ಪಣೆ.
02.03.2018	ನವೀಕೃತ ಶರಾವತಿ ವಿದ್ಯುತ್ ಕೇಂದ್ರದ ಲೋಕಾರ್ಪಣೆ ಹಾಗೂ ಭಾರತ ರತ್ನ ಶ್ರೀ ಲಾಲ್ ಬಹದ್ದೂರ್ ಶಾಸ್ತ್ರಿ, ಭಾರತದ ಮಾಜಿ ಪ್ರಧಾನ ಮಂತ್ರಿಗಳು ಮತ್ತು ಭಾರತ ರತ್ನ ಸರ್.ಎಂ.ವಿ ವಿಶ್ವೇಶ್ವರಯ್ಯ ನವರ ಪುತ್ಥಳಿ ಅನಾವರಣ.
23.3.2018	ವಿಶ್ವ ಮಹಿಳಾ ದಿನಾಚರಣೆ ಸಮಾರಂಭ.
28.06.2018	ಡಾ॥ ಬಿ.ಆರ್ ಅಂಬೇಡ್ಕರ್ ರವರ 127ನೇ ಜನ್ಮ ದಿನಾಚರಣೆ, ಬೆಂಗಳೂರು
20.07.2018	ನಿಗಮದ 49ನೇ ಸಂಸ್ಥಾಪನಾ ದಿನಾಚರಣೆ.

XXV. ನಿರ್ದೇಶಕರ ಹೊಣೆಗಾರಿಕೆ ಹೇಳಿಕೆಗಳು

2013 ರ ಕಂಪನಿ ಕಾಯ್ದೆ ಪರಿಚ್ಛೇದ 134(5) ಪ್ರಕಾರ ಅವರಿಗೆ ತಿಳಿಸಿರುವಂತೆ ನಿರ್ದೇಶಕರು ಹೇಳಲು ಇಚ್ಛೆ ಪಡುವುದೇನೆಂದರೆ,

i. 2017-18ನೇ ಸಾಲಿನ ವಾರ್ಷಿಕ ಲೆಕ್ಕವನ್ನು ಸಿದ್ಧಪಡಿಸುವಲ್ಲಿ ಏನಾದರೂ ಬದಲಾವಣೆಗಳಿದ್ದಲ್ಲಿ ಅದಕ್ಕೆ ವಿವರಣೆ ಕೊಡುವುದರ ಜೊತೆಗೆ ಅನ್ವಯಿಸತಕ್ಕ ಲೆಕ್ಕ ಮಾದರಿ ಸೂತ್ರ ಅನುಸರಿಸಲಾಗಿದೆ.

ii. ಆರ್ಥಿಕ ವರ್ಷದ ಕೊನೆಯಲ್ಲಿ ಕಂಪನಿಯು ಆ ವರ್ಷದ ಲಾಭ ಮತ್ತು ನಷ್ಟಗಳು ಮತ್ತು ಕಂಪನಿ ಸ್ಥಿತಿ-ಗತಿಗಳ ನೈಜ ಚಿತ್ರವನ್ನು ಬಿಂಬಿಸುವಂತೆ ಲೆಕ್ಕಗಳ ನೀತಿಯನ್ನು ಆರಿಸಿ ಇವನ್ನು ಏಕರೂಪವಾಗಿ ಅಳವಡಿಸಿ ತೀರ್ಮಾನ ಮತ್ತು ಜಮಾ ಖರ್ಚಿನ ಅಂದಾಜು ಮಾಡಲಾಗಿದೆ.

iii. ಈ ಕಾಯ್ದೆಯ ನಿಯಮದನ್ವಯ ಕಂಪನಿಯ ಆಸ್ತಿಯನ್ನು ಕಾಪಾಡಲು ಹಾಗೂ ಮೋಸ ಮತ್ತು ಅಕ್ರಮಗಳನ್ನು ತಡೆಗಟ್ಟಲು ಲೆಕ್ಕಗಳ ದಾಖಲೆಗಳನ್ನು ಸರಿಯಾಗಿ ಇಡಲು ಸಾಕಷ್ಟು ನಿಗಾವಹಿಸಲಾಗಿದೆ.

iv. ಆಂತರಿಕ ಹಣಕಾಸಿನ ನಿಯಂತ್ರಣಗಳು ಯೋಗ್ಯವಾಗಿದೆ ಹಾಗೂ ಪರಿಣಾಮಕಾರಿಯಾಗಿ ಕಾರ್ಯ ನಿರ್ವಹಿಸುತ್ತಿದೆ.

v. ಅನ್ವಯವಾಗುವ ಎಲ್ಲಾ ಕಾಯ್ದೆಗಳಿಗೆ ಅನುಪಾಲನೆಯನ್ನು ಖಾತ್ರಿ ಮಾಡಿಕೊಳ್ಳಲು ಸರಿಯಾದ ವ್ಯವಸ್ಥೆಗಳು ಹಾಗೂ ಆ ವ್ಯವಸ್ಥೆಗಳು ಪರ್ಯಾಪ್ತವಾಗಿವೆ ಮತ್ತು ಪರಿಣಾಮಕಾರಿಯಾಗಿ ಕಾರ್ಯಮಾಡುತ್ತಿವೆ

vi. ದಿನಾಂಕ 31.03.2018 ಕ್ಕೆ ಕೊನೆಗೊಳ್ಳುವ ವಾರ್ಷಿಕ ಲೆಕ್ಕಪತ್ರಗಳನ್ನು ಮುಂದುವರೆಯುವ ಆಧಾರದಲ್ಲಿ ತಯಾರಿಸಲಾಗಿದೆ.

vii. ನಿಗಮದಲ್ಲಿ ಅನುಸರಿಸಲು ಆಂತರಿಕ ನಿಯಂತ್ರಣಗಳನ್ನು ನಿಗದಿಗೊಳಿಸಲಾಗಿದೆ ಮತ್ತು ಆ ಆಂತರಿಕ ನಿಯಂತ್ರಣಗಳು ಪರ್ಯಾಪ್ತವಾಗಿವೆ ಮತ್ತು ಪರಿಣಾಮಕಾರಿಯಾಗಿದೆ.

viii. ಅನ್ವಯವಾಗುವ ಎಲ್ಲಾ ಕಾಯ್ದೆಗಳ ಉಪನಿಯಮಗಳನ್ನು ಅನುಪಾಲನೆ ಮಾಡಲು ಸೂಕ್ತ ವ್ಯವಸ್ಥೆ ಗಳಿವೆ ಹಾಗೂ ಅವುಗಳು ಪರಿಣಾಮಕಾರಿಯಾಗಿವೆ

XXVI. ಸಾಮಾನ್ಯ ಅಂಶಗಳು

ನಿರ್ದೇಶಕ ಮಂಡಳಿಯು ಶ್ಲಾಘನೆಯನ್ನು ದಾಖಲೆಯ ರೂಪದಲ್ಲಿಡಲು ಇಚ್ಛಿಸುತ್ತದೆ, ವಿವರಗಳು ಕೆಳಗಿನಂತಿವೆ;

- ಭಾರತ ಸರ್ಕಾರ, ಕರ್ನಾಟಕ ಸರ್ಕಾರ, ಭಾರತ ಸರ್ಕಾರದ ಕಂಪ್ಟ್ರೋಲರ್ ಮತ್ತು ಆಡಿಟರ್ ಜನರಲ್ ಆಫ್ ಇಂಡಿಯಾ ಹಾಗೂ ಇತರೆ ಏಜೆನ್ಸಿಗಳಾದ ಸಿ.ಇ.ಎ. ಸಿ.ಡಬ್ಲ್ಯೂ.ಸಿ ಮತ್ತು ರಿಜಿಸ್ಟ್ರಾರ್ ಆಫ್ ಕಂಪನೀಸ್, ಕೆಇಆರ್‌ಸಿ, ಶಾಸನಬದ್ಧ ಆಡಿಟರ್ಸ್ ಮತ್ತು ಕಾಸ್ಟ್ ಆಡಿಟರ್ಸ್, ಸೆಕ್ರೆಟರಿಯಲ್ ಆಡಿಟರ್ಸ್ ಇವರುಗಳು ನೀಡಿರುವ ಸಹಾಯ, ಸಹಕಾರ ಹಾಗೂ ಮಾರ್ಗದರ್ಶನ.
- ವಾಣಿಜ್ಯ ಬ್ಯಾಂಕುಗಳಾದ ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ, ಕೆನರಾ ಬ್ಯಾಂಕ್, ಸಿಂಡಿಕೇಟ್ ಬ್ಯಾಂಕ್, ಸ್ಟೇಟ್ ಬ್ಯಾಂಕ್ ಆಫ್ ಮೈಸೂರು, ವಿಜಯ ಬ್ಯಾಂಕ್, ಯೂನಿಯನ್ ಬ್ಯಾಂಕ್ ಆಫ್ ಇಂಡಿಯಾ, ಐ.ಸಿ.ಐ.ಸಿ.ಐ ಬ್ಯಾಂಕ್, ಐ.ಡಿ.ಬಿ.ಐ ಬ್ಯಾಂಕ್, ಬ್ಯಾಂಕ್ ಆಫ್ ಬರೋಡಾ, ಪಂಜಾಬ್ ನ್ಯಾಷನಲ್ ಬ್ಯಾಂಕ್,ಇಂಡಿಯನ್ ಒವರ್ ಸೀಸ್ ಬ್ಯಾಂಕ್, ಸೆಂಟ್ರಲ್ ಬ್ಯಾಂಕ್ ಆಫ್ ಇಂಡಿಯಾ,

ಫೆಡರಲ್ ಬ್ಯಾಂಕ್, ಅಲಹಾಬಾದ್ ಬ್ಯಾಂಕ್, ಬ್ಯಾಂಕ್ ಆಫ್ ಇಂಡಿಯಾ, ಐಎನ್‌ಜಿ ವೈಶ್ಯ ಬ್ಯಾಂಕ್, ಸ್ಟೇಟ್ ಬ್ಯಾಂಕ್ ಆಫ್ ಪಟಿಯಾಲಾ, ಸ್ಟೇಟ್ ಬ್ಯಾಂಕ್ ಆಫ್ ಟ್ರಾಂವಕೂರ್, ಆಂಧ್ರ ಬ್ಯಾಂಕ್, ಕಾರ್ಪೋರೇಷನ್ ಬ್ಯಾಂಕ್, ಸ್ಟೇಟ್ ಬ್ಯಾಂಕ್ ಆಫ್ ಹೈ–ದರಾಬಾದ್, ಯೂಕೋ ಬ್ಯಾಂಕ್, ಯುನೈಟೆಡ್ ಬ್ಯಾಂಕ್ ಆಫ್ ಇಂಡಿಯಾ, ಇಂಡಿಯನ್ ಬ್ಯಾಂಕ್, ದೇನಾ ಬ್ಯಾಂಕ್, ಸ್ಟೇಟ್ ಬ್ಯಾಂಕ್ ಆಫ್ ಬಿಕಾನೇರ್ ಮತ್ತು ಜೈಪುರ. ಸೌತ್ ಇಂಡಿಯನ್ ಬ್ಯಾಂಕ್,ಒರಿಯಂಟಲ್ ಬ್ಯಾಂಕ್ ಆಫ್ ಕಾಮರ್ಸ, ಕರ್ನಾಟಕ ಬ್ಯಾಂಕ್, ಜಮ್ಮು ಮತ್ತು ಕಾಶ್ಮೀರ ಬ್ಯಾಂಕ್, ಲಕ್ಷ್ಮಿ ವಿಲಾಸ್ ಬ್ಯಾಂಕ್, ಕರ್ನಾಟಕ ಸ್ಟೇಟ್ ಕೋ–ಆಪರೇಟಿವ್ ಅಫೆಕ್ಸ್ ಬ್ಯಾಂಕ್, ಧನಲಕ್ಷ್ಮಿ ಬ್ಯಾಂಕ್, ಕೊಟಕ್ ಮಹೀಂದ್ರ ಭ್ಯಾಂಕ್ ಲಿ., ಪಂಜಾಬ್ ಅಂಡ್ ಸಿಂಧ್ ಬ್ಯಾಂಕ್, ಕರೂರು ವೈಶ್ಯ ಬ್ಯಾಂಕ್, ಡೆವಲಪ್‌ಮೆಂಟ್ ಕ್ರೆಡಿಟ್ ಬ್ಯಾಂಕ್, ಬ್ಯಾಂಕ್ ಆಫ್ ಮಹಾರಾಷ್ಟ್ರ ಮತ್ತು ಹಣಕಾಸಿನ ಸಂಸ್ಥೆಗಳಾದ ಎಲ್‌ಐಸಿ, ಪಿ.ಎಫ್.ಸಿ., ಆರ್.ಇ.ಸಿ., ಐ.ಡಿ.ಎಫ್.ಸಿ., ಎಸ್.ಐ.ಡಿ.ಬಿ.ಐ., ಹುಡಕೋ, ಎಸ್.ಎ.ಐ.ಎಲ್., ಐ.ಸಿ.ಐ.ಸಿ.ಐ., ಹೋಂ ಫೈನಾನ್ಸ್, ಹೆಚ್.ಡಿ.ಎಫ್.ಸಿ., ಇವರುಗಳು ನೀಡಿರುವ ಆರ್ಥಿಕ ಬೆಂಬಲ.

- ಕೆ.ಪಿ.ಟಿ.ಸಿ.ಎಲ್., ಎಸ್ಕಾಂಗಳು, ಪಿ.ಸಿ.ಕೆ.ಎಲ್, ಎಸ್.ಎಲ್.ಡಿ.ಸಿ., ಆರ್.ಎಲ್.ಡಿ.ಸಿ ಮತ್ತು ಎಲೆಕ್ಟ್ರಿಕಲ್ ಇನ್ಸ್‌ಪೆಕ್ಟೋರೇಟ್ ಇವರುಗಳ ಸಹಕಾರ
- ಸಾಮಾನ್ಯ ಜನತೆ ಕಂಪನಿಯ ಚಟುವಟಿಕೆಗಳಿಗೆ ನೀಡಿರುವ ಸಹಕಾರ ಹಾಗೂ ಬೆಂಬಲ
- ಎಂಪ್ಲಾಯೀಸ್ ಯೂನಿಯನ್ ಮತ್ತು ಸಂಘಗಳ ಸಾಮೂಹಿಕ ಪಾಲ್ಗೊಳ್ಳುವಿಕೆ ಮಂಡಳಿಯ ನಿಗಮದ ಉದ್ಯೋಗಿಗಳು ಸಲ್ಲಿಸಿದ ಉತ್ತಮ ಸೇವೆಯನ್ನು ಮೆಚ್ಚಿ ದಾಖಲೆಯ ರೂಪದಲ್ಲಿಡಲು ಇಚ್ಛಿಸುತ್ತದೆ.
- ಮಾಧ್ಯಮಗಳು: ವಿದ್ಯುನ್ಮಾನ ಮತ್ತು ಮುದ್ರಣ ಮಾಧ್ಯಮಗಳು (ಪತ್ರಿಕೆಗಳು) ನಿಗಮದ ಪ್ರಗತಿಯ ಬಗ್ಗೆ ಉತ್ತಮ ಮಾಹಿತಿಗಳನ್ನು ನೀಡಿ ಹಿತಾಸಕ್ತಿ ಉಳ್ಳವರಲ್ಲಿ ಅರಿವು ಮೂಡಿಸುವಲ್ಲಿ ನೀಡಿರುವ ಸಹಕಾರ.

ಮಂಡಳಿಯ ನಿಗಮದ ಉದ್ಯೋಗಿಗಳು ಸಲ್ಲಿಸಿದ ಉತ್ತಮ ಸೇವೆಯನ್ನು ಮೆಚ್ಚಿ ದಾಖಲೆಯ ರೂಪದಲ್ಲಿಡಲು ಇಚ್ಛಿಸುತ್ತದೆ.

ನಿರ್ದೇಶಕ ಮಂಡಳಿಯ ಪರವಾಗಿ

(ಹೆಚ್ ಡಿ ಕುಮಾರಸ್ವಾಮಿ)
ಅಧ್ಯಕ್ಷರು

ಸ್ಥಳ : ಬೆಂಗಳೂರು
ದಿನಾಂಕ : 29.09.2018

COMMENTS OF THE COMPTROLLER AND AUDITOR GENERAL OF INDIA UNDER SECTION 143(6)(b) OF THE COMPANIES ACT, 2013 ON THE FINANCIAL STATEMENTS OF KARNATAKA POWER CORPORATION LIMITED, BANGALORE, FOR THE YEAR ENDED 31 MARCH 2018

The preparation of financial statements of **Karnataka Power Corporation Limited, Bangalore** for the year ended 31 March 2018 in accordance with the financial reporting framework prescribed under the Companies Act, 2013 (Act) is the responsibility of the management of the Company. The statutory auditor appointed by the Comptroller and Auditor General of India under Section 139(5) of the Act is responsible for expressing opinion on the financial statements under Section 143 of the Act based on independent audit in accordance with the standards on auditing prescribed under Section 143(10) of the Act. This is stated to have been done by them vide their Audit Report dated **08 August 2018.**

I, on behalf of the Comptroller and Auditor General of India, have conducted a supplementary audit of the financial statements of **Karnataka Power Corporation Limited, Bangalore** for the year ended 31 March 2018 under Section 143(6)(a) of the Act. This supplementary audit has been carried out independently without access to the working papers of the statutory auditors and is limited primarily to inquiries of the statutory auditors and company personnel and a selective examination of some of the accounting records.

Based on my supplementary audit, I would like to highlight the following significant matters under Section 143(6)(b) of the Act which have come to my attention and which in my view are necessary for enabling better understanding of the financial statements and the related audit report.

A. Comments on Profitability

1. Statement of Profit and Loss for the period ended 31 March 2018

(i) Note -32- Revenue from Operations - Rs.679178.26 lakh

Revenue recognised in respect of Operation and Maintenance expenses recoverable from ESCOMs under primary charges in the Tariff includes the following overheads and expenditure which were not in the nature of Operation and Maintenance expenses:

(a) Expenditure amounting to Rs.609.95 lakh incurred towards Corporate Social Responsibility (CSR) activity (Rs.552.20 lakh), Loss of stock (Rs.6.68 lakh) and Loss on sale of assets (Rs.51.07 lakh);

(b) Expenditure amounting to Rs.134.21 lakh, incurred towards Ceremonial functions;

(c) Expenditure amounting to Rs.915.17 lakh, incurred towards purchase of Energy Saving Certificates. These certificates were purchased on account of non-achievement of energy saving targets fixed under PAT Cycle – 1 by Bureau of Energy Efficiency (BEE), MoP.

These resulted in overstatement of Revenue, Trade Receivables and Profit by Rs.1659.33 lakh.

(ii) Interest on working capital to be claimed as revenue from ESCOMs includes Operation and Maintenance expenses for one month. The Operation and Maintenance expenses include non-production overheads and expenditure not in the nature of operation and maintenance expenses, viz. expenditure incurred towards CSR activity, Ceremonial functions and Energy saving certificates as mentioned in comment No.1. Claiming of interest on such non-production overheads has resulted in overstatement of Revenue, Trade Receivables and Profit by Rs.21.38 lakh ;

(iii) Power Purchase Agreements (PPA) signed with ESCOMs specify recovery of Depreciation @7.84 *percent* for RTPS Units 1-7 and 3.44 *percent* for Hydro Units. However, the recovery of Depreciation is accounted at the actual rates of depreciation as per P&L Account which are not in line with the depreciation rates specified in the PPA in respect of Hydro stations (overstatement by Rs.4388.61 lakh) and RTPS Units 1 to 7 (understatement by Rs.1654.16 lakh), resulting in net overstatement of Revenue and Trade Receivables and Profit by Rs. 2734.45 lakh.

For and on the behalf of the
Comptroller & Auditor General of India
Sd/-
(E.P NIVEDITA)
PRINCIPAL ACCOUNTANT GENERAL
(GENERAL & SOCIAL SECTOR AUDIT)
KARNATAKA, BENGALURU

Place: Bangalore
Date: 27 September, 2018

2013ನೇ ಕಂಪನಿ ಕಾಯ್ದೆಯ ಕಲಂ 143 (6) (ಬಿ)ರ ಮೇರೆಗೆ ಕರ್ನಾಟಕ ವಿದ್ಯುತ್ ನಿಗಮದ 31ನೇ ಮಾರ್ಚ್ 2018ಕ್ಕೆ ಅಂತ್ಯಗೊಂಡ ಆರ್ಥಿಕ ವಿವರಣಾ ಪಟ್ಟಿಗಳ ಮೇಲೆ ಭಾರತದ ನಿಯಂತ್ರಕ ಮತ್ತು ಮಹಾಲೆಕ್ಕ ಪರಿಶೋಧಕರ ಟೀಕೆಗಳು

ಕರ್ನಾಟಕ ವಿದ್ಯುತ್ ನಿಗಮ ನಿಯಮಿತ, ಬೆಂಗಳೂರು ಸಂಸ್ಥೆಯ 31ನೇ ಮಾರ್ಚ್ 2018ಕ್ಕೆ ಅಂತ್ಯಗೊಂಡ ಹಣಕಾಸು ವರ್ಷದ ಆರ್ಥಿಕ ವಿವರಣಾ ಪಟ್ಟಿಗಳನ್ನು ಕಂಪನಿ ಕಾಯ್ದೆ 2013ರಲ್ಲಿ ನಿಗದಿಪಡಿಸಿದ ಚೌಕಟ್ಟಿನಂತೆ ತಯಾರಿಸಿ, ನಿರೂಪಿಸುವ ಜವಾಬ್ದಾರಿಯು ಕಂಪನಿಯ ಆಡಳಿತ ಮಂಡಳಿಯದ್ದಾಗಿರುವುದು. ಕಂಪನಿ ಕಾಯ್ದೆ, 2013ರ ಕಲಂ 139(5)ರನ್ವಯ ಭಾರತದ ನಿಯಂತ್ರಕ ಮತ್ತು ಮಹಾಲೆಕ್ಕಪರಿಶೋಧಕರು ನೇಮಿಸಿದ ಶಾಸನಬದ್ಧ ಲೆಕ್ಕಪರಿಶೋಧಕರು, ಕಂಪನಿ ಕಾಯ್ದೆ 2013ರ ಕಲಂ 143ರ ಅಡಿಯಲ್ಲಿ ಆರ್ಥಿಕ ವಿವರಣಾ ಪಟ್ಟಿಗಳ ಕುರಿತಾಗಿ ಕಂಪನಿ ಕಾಯ್ದೆಯ ಕಲಂ 143(10)ರಲ್ಲಿ ವಿಧಿಸಲಾದ ಲೆಕ್ಕಪರಿಶೋಧನೆಯ ಮಾನದಂಡಗಳ ಅನುಗುಣವಾಗಿ ನಿರ್ವಹಿಸಿದ ಸ್ವತಂತ್ರ ಲೆಕ್ಕಪರಿಶೋಧನೆಯನ್ನು ಆಧಾರಿಸಿ ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸುವ ಜವಾಬ್ದಾರಿಯನ್ನು ಹೊಂದಿರುತ್ತಾರೆ. **ಆಗಸ್ಟ್ 8 2018ರ** ಲೆಕ್ಕಪರಿಶೋಧನಾ ವರದಿಯಲ್ಲಿ ಈ ಕಾರ್ಯನಿರ್ವಹಿಸಿರುವುದಾಗಿ ಲೆಕ್ಕಪರಿಶೋಧಕರು ಸ್ಪಷ್ಟೀಕರಿಸಿದ್ದಾರೆ.

ನಾನು, ಭಾರತದ ನಿಯಂತ್ರಕ ಮತ್ತು ಮಹಾಲೆಕ್ಕಪರಿಶೋಧಕರ ಪರವಾಗಿ ಕಂಪನಿ ಕಾಯ್ದೆಯ ಕಲಂ 143(6)(ಎ)ಯಡಿಯಲ್ಲಿ ಕರ್ನಾಟಕ ವಿದ್ಯುತ್ ನಿಗಮ ನಿಯಮಿತ, ಬೆಂಗಳೂರು, ಸಂಸ್ಥೆಯ 31ನೇ ಮಾರ್ಚ್ 2018ರ ಅಂತ್ಯಕ್ಕೆ ತಯಾರಿಸಿರುವ ಆರ್ಥಿಕ ವಿವರಣಾ ಪಟ್ಟಿಯ ಪೂರಕ ಪರಿಶೋಧನೆ ಮಾಡಿರುತ್ತೇನೆ. ಈ ಪೂರಕ ಪರಿಶೀಲನೆಯನ್ನು ಸ್ವತಂತ್ರವಾಗಿ ನಿರ್ವಹಿಸಿದ್ದು ಶಾಸನಬದ್ಧ ಲೆಕ್ಕಪರಿಶೋಧಕರ ಯಾವುದೇ ಕಾಗದ ಪತ್ರ ದಾಖಲೆಗಳನ್ನು ಬಳಸಿಕೊಳ್ಳದೇ; ಪ್ರಾಥಮಿಕವಾಗಿ ಲೆಕ್ಕ ಪರಿಶೋಧಕರು ಹಾಗೂ ಕಂಪನಿ ಸಿಬ್ಬಂದಿಯೊಂದಿಗೆ ಕೇಳಿ ತಿಳಿದುಕೊಂಡ ಮಾಹಿತಿ ಹಾಗೂ ಲೆಕ್ಕಪತ್ರ ದಾಖಲೆಗಳ ಆಯ್ದ ತಪಾಸಣೆಗೆ ಮಿತಿಗೊಳಿಸಲಾಗಿದೆ.

ನನ್ನ ಪೂರಕ ಲೆಕ್ಕಪರಿಶೋಧನೆಯನ್ನು ಆಧರಿಸಿ, ಕಲಂ143(6)(ಬಿ)ನ ಅಡಿಯಲ್ಲಿ ಈ ಕೆಳಗಿನ ಮಹತ್ವದ ವಿಷಯಗಳು ನಮ್ಮ ಗಮನಕ್ಕೆ ಬಂದಿರುತ್ತವೆ ಹಾಗೂ ನನ್ನ ಅಭಿಪ್ರಾಯದಂತೆ ಈ ವಿಷಯಗಳು ಆರ್ಥಿಕ ವಿವರಣಾ ಪಟ್ಟಿ ಮತ್ತು ಅದಕ್ಕೆ ಸಂಬಂಧಿತ ಲೆಕ್ಕಪರಿಶೋಧನಾ ವರದಿಯ ಉತ್ತಮ ತಿಳುವಳಿಕೆಗಾಗಿ ಅಗತ್ಯವಾಗಿರುತ್ತವೆ.

ಎ. ಲಾಭದಾಯಕತೆಯ ಮೇಲಿನ ವಿಮರ್ಶೆಗಳು

1. 31 ಮಾರ್ಚ್ 2018ಕ್ಕೆ ಅಂತ್ಯವಾಗುವ ಅವಧಿಗೆ ಲಾಭ ಮತ್ತು ನಷ್ಟ ವಿವರಣಾ ಪಟ್ಟಿ

(i) ಟಿಪ್ಪಣಿ 32-ಕಾರ್ಯಾಚರಣೆಯಿಂದ ಬಂದ ಆದಾಯ-ರೂ.679178.26 ಲಕ್ಷಗಳು

ಮಾರಾಟ ಬೆಲೆಯಲ್ಲಿ ಪ್ರಾಥಮಿಕ ವೆಚ್ಚಗಳ ಅಡಿಯಲ್ಲಿನ ಎಸ್ಕಾಂಗಳಿಂದ ವಸೂಲಾಗಬೇಕಾದ ಕಾರ್ಯಾಚರಣೆ ಹಾಗೂ ನಿರ್ವಹಣಾ ವೆಚ್ಚಕ್ಕೆ ಸಂಬಂಧಿಸಿದಂತೆ ಗುರುತಿಸಲಾದ ಆದಾಯವು ಕಾರ್ಯಾಚರಣೆ ಹಾಗೂ ನಿರ್ವಹಣಾ ವೆಚ್ಚದ ಸ್ವಭಾವವನ್ನು ಹೊಂದಿರದ ಈ ಕೆಳಗಿನ ಪರೋಕ್ಷಖರ್ಚು (ಓವರ್‌ಹೆಡ್) ಹಾಗೂ ವೆಚ್ಚಗಳನ್ನು ಒಳಗೊಂಡಿರುತ್ತದೆ:

(ಎ) ಸಾಂಸ್ಥಿಕ ಸಾಮಾಜಿಕ ಜವಾಬ್ದಾರಿ (ಸಿಎಸ್‌ಆರ್) (ರೂ.552.20 ಲಕ್ಷಗಳು), ಸರಕು ನಷ್ಟ (ರೂ.6.68 ಲಕ್ಷಗಳು) ಹಾಗೂ ಆಸ್ತಿಗಳ ಮಾರಾಟದಿಂದಾದ ನಷ್ಟಕ್ಕೆ (ರೂ.51.07 ಲಕ್ಷಗಳು) ಸಂಬಂಧಿಸಿದ ವೆಚ್ಚ ಒಟ್ಟು ರೂ.609.95 ಲಕ್ಷಗಳು

(ಬಿ) ಸಮಾರಂಭಗಳಿಗೆ ಸಂಬಂಧಿಸಿದ ವೆಚ್ಚ ರೂ. 134.21 ಲಕ್ಷಗಳು

(ಸಿ) ಇಂಧನ ಉಳಿತಾಯ ಪ್ರಮಾಣ ಪತ್ರಗಳಿಗೆ ಸಂಬಂಧಿಸಿದಂತೆ ಭರಿಸಲಾದ ವೆಚ್ಚ ರೂ.915.17 ಲಕ್ಷಗಳು.ಇಂಧನ ಇಲಾಖೆಯ ಎನರ್ಜಿ ಎಫೀಷಿಯನ್ಸಿ ಬ್ಯುರೋದವರು ಕಾರ್ಯನಿರ್ವಹಣೆ, ಸಾಧನೆ ಹಾಗೂ ವಿನಿಮಯ ಸುತ್ತು-1 ಕಾರ್ಯ ಯೋಜನೆಯಡಿಯಲ್ಲಿ ನಿಗದಿಪಡಿಸಿದ ಇಂಧನ ಉಳಿತಾಯದ ಗುರಿಯನ್ನು ಸಾಧಿಸದಿರುವುದಕ್ಕಾಗಿ ಈ ಪ್ರಮಾಣ ಪತ್ರಗಳನ್ನು ಖರೀದಿಸಲಾಗಿದೆ.

ಇದರ ಪರಿಣಾಮವಾಗಿ ಆದಾಯ, ವ್ಯಾಪರ ಸಂಬಂಧ ಬರತಕ್ಕದ್ದು ಹಾಗೂ ಲಾಭವು ರೂ.1659.33 ಲಕ್ಷಅಧಿಕ ವರದಿಯಾಗಿರುತ್ತದೆ.

(ii) ಎಸ್ಕಾಂಗಳಿಂದ ಆದಾಯವೆಂದು ಹಕ್ಕುಬೇಡಿಕೆಯನ್ನಿಡುವ ದುಡಿಯುವ ಬಂಡವಾಳದ ಮೇಲಿನ ಬಡ್ಡಿಯು ಒಂದು ತಿಂಗಳಿನ ಕಾರ್ಯಾಚರಣೆ ಹಾಗೂ ನಿರ್ವಹಣಾ ವೆಚ್ಚವನ್ನು ಒಳಗೊಂಡಿರುತ್ತದೆ. ಕಾರ್ಯಾಚರಣೆ ಹಾಗೂ ನಿರ್ವಹಣಾ ವೆಚ್ಚಗಳು ಉತ್ಪಾದನೆಗೆ ಸಂಬಂಧಿಸದ ಪರೋಕ್ಷ ವೆಚ್ಚಗಳು ಹಾಗೂ ವಿಮರ್ಶೆ ಸಂಖ್ಯೆ 1 ರಲ್ಲಿ ಉಲ್ಲೇಖಿಸಲಾದ ಕಾರ್ಯಾಚರಣೆ ಹಾಗೂ ನಿರ್ವಹಣಾ ವೆಚ್ಚದ ಸ್ವಭಾವವನ್ನು ಹೊಂದಿರದ ಸಾಂಸ್ಥಿಕ ಸಾಮಾಜಿಕ ಜವಾಬ್ದಾರಿ ವೆಚ್ಚ, ಸಮಾರಂಭ ವೆಚ್ಚ ಹಾಗೂ ಇಂಧನ ಉಳಿತಾಯ ಪ್ರಮಾಣಪತ್ರಗಳ ವೆಚ್ಚವನ್ನು ಒಳಗೊಂಡಿರುತ್ತದೆ.ಇಂತಹ ಉತ್ಪಾದನೆಗೆ ಸಂಬಂಧಿಸದ ಪರೋಕ್ಷ ವೆಚ್ಚಗಳ ಮೇಲಿನ ಬಡ್ಡಿಯ ಹಕ್ಕುಬೇಡಿಕೆಯ ಪರಿಣಾಮವಾಗಿ ಆದಾಯ, ವ್ಯಾಪಾರ ಸಂಬಂಧ ಬರತಕ್ಕದ್ದು ಹಾಗೂ ಲಾಭವು ರೂ.21.38 ಲಕ್ಷ ಅಧಿಕ ವರದಿಯಾಗಿರುತ್ತದೆ.

(iii) ಎಸ್ಕಾಂಗಳೊಂದಿಗೆ ಮಾಡಿಕೊಂಡ ವಿದ್ಯುತ್ ಮಾರಾಟದ ಒಪ್ಪಂದವು ಆರ್‌ಟಿಪಿಎಸ್ ಘಟಕ1–7ಕ್ಕೆ ಶೇ.7.84ರಂತೆ ಹಾಗೂ ಜಲವಿದ್ಯುತ್ ಕೇಂದ್ರಗಳಿಗೆ ಶೇ.3.44ರಂತೆ ಸವಕಳಿಯನ್ನು ವಸೂಲು ಮಾಡಲು ಸೂಚಿಸುತ್ತದೆ. ಆದಾಗ್ಯೂ, ಸವಕಳಿಯ ವಸೂಲಾತಿಯನ್ನು ಲಾಭ ಮತ್ತು ನಷ್ಟ ತಃಖ್ತೆಯ ಅನುಸಾರ ವಾಸ್ತವಿಕ ದರಗಳಿಗೆ ಲೆಕ್ಕಿಸಲಾಗಿದೆ. ಇದು ಜಲವಿದ್ಯುತ್ ಕೇಂದ್ರಗಳಿಗೆ (ರೂ.4388.61 ಲಕ್ಷಗಳು ಅಧಿಕ ವರದಿಯಾಗಿರುತ್ತದೆ) ಹಾಗೂ ಆರ್‌ಟಿಪಿಎಸ್ 1–7 ಘಟಕಗಳಿಗೆ (ರೂ.1654.16 ಲಕ್ಷಕಡಿಮೆ ವರದಿಯಾಗಿರುತ್ತದೆ). ಸಂಬಂಧಿಸಿದ ವಿದ್ಯುತ್ ಮಾರಾಟ ಒಪ್ಪಂದದಲ್ಲಿ ಸೂಚಿಸಲಾದ ಸವಕಳಿ ದರಗಳಿಗೆ ಅನುಗುಣವಾಗಿರುವುದಿಲ್ಲ. ಇದರ ಪರಿಣಾಮವಾಗಿ ಆದಾಯ, ವ್ಯಾಪಾರ ಸಂಬಂಧ ಬರತಕ್ಕದ್ದು ಹಾಗೂ ಲಾಭವು ರೂ.2734.45 ಲಕ್ಷ ಅಧಿಕ ವರದಿಯಾಗಿರುತ್ತದೆ.

ಭಾರತದ ನಿಯಂತ್ರಕ ಮತ್ತು
ಮಹಾಲೆಕ್ಕಪರಿಶೋಧಕರ ಪರವಾಗಿ

ಸಹಿ/–
(ಇ. ಪಿ. ನಿವೇದಿತಾ)
ಪ್ರಧಾನ ಮಹಾ ಲೇಖಪಾಲಕರು
(ಸಾಮಾನ್ಯ ಹಾಗೂ ಸಾಮಾಜಿಕ ವಲಯದ ಲೆಕ್ಕಪರಿಶೋಧನೆ)
ಕರ್ನಾಟಕ, ಬೆಂಗಳೂರು

ಸ್ಥಳ: ಬೆಂಗಳೂರು
ದಿನಾಂಕ: 27 ಸೆಪ್ಟೆಂಬರ್ 2018

COMMENTS OF THE COMPTROLLER AND AUDITOR GENERAL OF INDIA UNDER SECTION 143(6)(b) OF THE COMPANIES ACT, 2013 ON THE CONSOLIDATED FINANCIAL STATEMENTS OF KARNATAKA POWER CORPORATION LIMITED, BANGALORE, FOR THE YEAR ENDED 31 MARCH 2018

The preparation of consolidated financial statements of **Karnataka Power Corporation Limited, Bangalore** for the year ended 31 March 2018 in accordance with the financial reporting framework prescribed under the Companies Act, 2013 (Act) is the responsibility of the management of the company. The statutory auditor appointed by the Comptroller and Auditor General of India under Section 139(5) of the Act is responsible for expressing opinion on the financial statements under Section 143 read with Section 129(4) of the Act based on independent audit in accordance with the standards on auditing prescribed under Section 143(10) of the Act. This is stated to have been done by them vide their Audit Report dated **08 August 2018.**

I, on behalf of the Comptroller and Auditor General of India, have conducted a supplementary audit of the consolidated financial statements of **Karnataka Power Corporation Limited, Bangalore** for the year ended 31 March 2018 under Section 143(6)(a) read with Section 129(4) of the Act. We conducted a supplementary audit of the financial statements of **KPC Gas Power Corporation Limited (Subsidiary), Raichur Power Corporation Limited (Joint Venture), but didnot conduct supplementary audit of the financial statements of Karnataka EMTA Coal Mines Ltd(Joint Venture), Bengal Birbhum Coalfields Limited(Joint Venture)** for the year ended on that date. This supplementary audit has been carried out independently without access to the working papers of the statutory auditors and is limited primarily to inquiries of the statutory auditors and company personnel and a selective examination of some of the accounting records.

Based on my supplementary audit, I would like to highlight the following significant matters under Section 143(6)(b) read with Section 129(4) of the Act which have come to my attention and which in my view are necessary for enabling better understanding of the financial statements and the related audit report.

A. Comments on KPCL Profitability

1. Consolidated Statement of Profit and Loss for the period ended 31 March 2018

(i) Note -32- Revenue from Operations – Rs.679178.26 lakh

Revenue recognised in respect of Operation and Maintenance expenses recoverable from ESCOMs under primary charges in the Tariff includes the following overheads and expenditure which were not in the nature of Operation and Maintenance expenses:

(a) Expenditure amounting to Rs.609.95 lakh incurred towards Corporate Social Responsibility (CSR) activity (Rs.552.20 lakh), Loss of stock (Rs.6.68 lakh) and Loss on sale of assets (Rs.51.07 lakh);

(b) Expenditure amounting to Rs.134.21 lakh, incurred towards Ceremonial functions;

(c) Expenditure amounting to Rs.915.17 lakh, incurred towards purchase of Energy Saving Certificates. These certificates were purchased on account of non-achievement of energy

saving targets fixed under PAT Cycle – 1 by Bureau of Energy Efficiency (BEE), MoP.

These resulted in overstatement of Revenue,Trade Receivables and Profit by Rs.1659.33 lakh.

(ii) Interest on working capital to be claimed as revenue from ESCOMs includes Operation and Maintenance expenses for one month. The Operation and Maintenance expenses include non-production overheads and expenditure not in the nature of operation and maintenance expenses,viz. expenditure incurred towards CSR activity, Ceremonial functions and Energy saving certificates as mentioned in comment No.1. Claiming of interest on such non-production overheads has resulted in overstatement of Revenue, Trade Receivables and Profit by Rs.21.38 lakh;

(iii) Power Purchase Agreements (PPA) signed with ESCOMs specify recovery of Depreciation @7.84 percent for RTPS Units 1-7 and 3.44 percent for Hydro Units. However, the recovery of Depreciation is accounted at the actual rates of depreciation as per P&L Account which are not in line with the depreciation rates specified in the PPA in respect of Hydro stations (overstatement by Rs.4388.61 lakh) and RTPS Units 1 to 7 (understatement by Rs.1654.16 lakh), resulting in net overstatement of Revenue and Trade Receivables and Profit by Rs.2734.45 lakh.

B. Consolidated Financials- RPCL

(i) Share of profit /(Loss) in Joint Venture- Rs.(82,686.74) lakh

A reference is invited to Comment No. 1 on the Financial Statement of the Company for the year 2016-17 wherein capitalisation of interest on delayed payment of Entry Tax to an extent of Rs.1078 lakh was commented upon.

During the year, Government of Karnataka under Kara Samadhan Scheme (March 2017) agreed for 90% waiver of penalty and interest liability for Entry Tax was re-assessed (24.05.2018) at Rs. 389 lakh, i.e 10% of the total interest demand and refund orders were issued for Rs. 718 lakh.

The Company made adjustment in respect of the above transaction by withdrawing only Rs.689 lakh against refund order of Rs.718 lakh from the fixed assets and retained Rs.389 lakh in the value of the asset.

The capitalization of interest retaining the amount of Rs.389 lakh in fixed asset is not in order. This has resulted in overstatement of Fixed Asset in Standalone financial statement of RPCL by Rs.389 lakh and understatement expenses and loss in the JV to an extent of Rs.389 lakh. As a result, the share of loss in JV is under stated to the extent of Rs.206 lakh. (52.58% for 266 days and 53.80% for 99 days share of loss in RPCL accounted using equity method).

For and on behalf of the
Comptroller and Auditor General of India

Sd/-

(E.P NIVEDITA)
PRINCIPAL ACCOUNTANT GENERAL
(GENERAL & SOCIAL SECTOR AUDIT)
KARNATAKA, BENGALURU

BENGALURU
Date:27 September 2018

2013ನೇ ಕಂಪನಿ ಕಾಯ್ದೆಯ ಕಲಂ 143(6)(ಬಿ)ರ ಮೇರೆಗೆ ಕರ್ನಾಟಕ ವಿದ್ಯುತ್ ನಿಗಮದ 31ನೇ ಮಾರ್ಚ್ 2018ಕ್ಕೆ ಅಂತ್ಯಗೊಂಡ ಕ್ರೋಡಿಕೃತ ಲೆಕ್ಕಪತ್ರಗಳಮೇಲೆ ಭಾರತದ ನಿಯಂತ್ರಕ ಮತ್ತು ಮಹಾಲೆಕ್ಕಪರಿಶೋಧಕರ ಟೀಕೆಗಳು.

ಕರ್ನಾಟಕ ವಿದ್ಯುತ್ ನಿಗಮ ನಿಯಮಿತ, ಬೆಂಗಳೂರು ಸಂಸ್ಥೆಯ 31ನೇ ಮಾರ್ಚ್ 2018ಕ್ಕೆ ಅಂತ್ಯಗೊಂಡ ಹಣಕಾಸು ವರ್ಷದ ಕ್ರೋಡಿಕೃತ ಆರ್ಥಿಕ ವಿವರಣಾ ಪಟ್ಟಿಗಳನ್ನು ಕಂಪನಿ ಕಾಯ್ದೆ 2013ರಲ್ಲಿ ನಿಗದಿಪಡಿಸಿದ ಚೌಕಟ್ಟಿನಂತೆ ತಯಾರಿಸಿ, ನಿರೂಪಿಸುವ ಜವಾಬ್ದಾರಿಯು ಕಂಪನಿಯ ಆಡಳಿತ ಮಂಡಳಿಯದ್ದಾಗಿರುವುದು. ಕಂಪನಿ ಕಾಯ್ದೆ, 2013ರ ಕಲಂ 139(5)ರನ್ವಯ ಭಾರತದ ನಿಯಂತ್ರಕ ಮತ್ತು ಮಹಾಲೆಕ್ಕಪರಿಶೋಧಕರು ನೇಮಿಸಿದ ಶಾಸನಬದ್ಧ ಲೆಕ್ಕಪರಿಶೋಧಕರು, ಕಂಪನಿ ಕಾಯ್ದೆ 2013ರ ಕಲಂ 129(4)ರಜೊತೆಗೆಕಲಂ 143ರ ಅಡಿಯಲ್ಲಿ ಆರ್ಥಿಕ ವಿವರಣಾ ಪಟ್ಟಿಗಳ ಕುರಿತಾಗಿಕಂಪನಿ ಕಾಯ್ದೆಯ ಕಲಂ 143(10)ರಲ್ಲಿ ವಿಧಿಸಲಾದ ಲೆಕ್ಕಪರಿಶೋಧನೆಯ ಮಾನದಂಡಗಳ ಅನುಗುಣವಾಗಿ ನಿರ್ವಹಿಸಿದ ಸ್ವತಂತ್ರ ಲೆಕ್ಕಪರಿಶೋಧನೆಯನ್ನು ಆಧಾರಿಸಿ ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸುವ ಜವಾಬ್ದಾರಿಯನ್ನು ಹೊಂದಿರುತ್ತಾರೆ. ಆಗಸ್ಟ್ 8 2018ರ ಲೆಕ್ಕಪರಿಶೋಧನಾ ವರದಿಯಲ್ಲಿ ಈ ಕಾರ್ಯನಿರ್ವಹಿಸಿರುವುದಾಗಿ ಲೆಕ್ಕಪರಿಶೋಧಕರು ಸ್ಪಷ್ಟೀಕರಿಸಿದ್ದಾರೆ.

ನಾನು, ಭಾರತದ ನಿಯಂತ್ರಕ ಮತ್ತು ಮಹಾಲೆಕ್ಕಪರಿಶೋಧಕರ ಪರವಾಗಿ ಕಂಪನಿ ಕಾಯ್ದೆಯ ಕಲಂ 143(6)(ಎ) ಮತ್ತು 129(4)ರಡಿಯಲ್ಲಿ ಕರ್ನಾಟಕ ವಿದ್ಯುತ್ ನಿಗಮ ನಿಯಮಿತ, ಬೆಂಗಳೂರು, ಸಂಸ್ಥೆಯ 31ನೇ ಮಾರ್ಚ್ 2018ರ ಅಂತ್ಯಕ್ಕೆ ತಯಾರಿಸಿರುವ ಕ್ರೋಢಿಕೃತ ಆರ್ಥಿಕ ವಿವರಣಾಪಟ್ಟಿಯ ಪೂರಕ ಪರಿಶೋಧನೆ ಮಾಡಿರುತ್ತೇನೆ. ನಾವು ಕೆಪಿಸಿ ಗ್ಯಾಸ್ ಪವರ್ ಕಾರ್ಪೋರೇಷನ್ ಲಿಮಿಟೆಡ್(ಅಧೀನ ಸಂಸ್ಥೆ), ರಾಯಚೂರು ಪವರ್ ಕಾರ್ಪೋರೇಷನ್ ಲಿಮಿಟೆಡ್ (ಜಂಟಿಸಹಭಾಗಿತ್ವ) ಸಂಸ್ಥೆಯ ಆರ್ಥಿಕ ವಿವರಣಾ ಪಟ್ಟಿಗಳ ಪೂರಕ ಪರಿಶೋಧನೆಯನ್ನು ಮಾಡಿರುತ್ತೇವೆ, ಆದರೆ 31ನೇ ಮಾರ್ಚ್ 2018ರ ಅಂತ್ಯಕ್ಕೆ ಕರ್ನಾಟಕ ಎಮ್ಟಾಕೋಲ್ ಮೈನ್ಸ್ ಲಿಮಿಟೆಡ್ (ಜಂಟಿಸಹಭಾಗಿತ್ವ) ಹಾಗೂ ಬೆಂಗಾಲ್ ಬೀರ್‌ಭುಮ್ ಕೋಲ್ ಫೀಲ್ಡ್ಸ್ ಲಿಮಿಟೆಡ್ (ಜಂಟಿಸಹಭಾಗಿತ್ವ) ಸಂಸ್ಥೆಗಳ ಆರ್ಥಿಕ ವಿವರಣಾ ಪಟ್ಟಿಗಳ ಪೂರಕ ಪರಿಶೀಲನೆಯನ್ನು ಮಾಡಿರುವುದಿಲ್ಲ. ಈ ಪೂರಕ ಪರಿಶೀಲನೆಯನ್ನು ಸ್ವತಂತ್ರವಾಗಿ ನಿರ್ವಹಿಸಿದ್ದು ಶಾಸನಬದ್ಧ ಲೆಕ್ಕಪರಿಶೋಧಕರ ಯಾವುದೇಕಾಗದ ಪತ್ರ ದಾಖಲೆಗಳನ್ನು ಬಳಸಿಕೊಳ್ಳದೇ; ಪ್ರಾಥಮಿಕವಾಗಿ ಲೆಕ್ಕ ಪರಿಶೋಧಕರು ಹಾಗೂ ಕಂಪನಿ ಸಿಬ್ಬಂದಿಯೊಂದಿಗೆ ಕೇಳಿ ತಿಳಿದುಕೊಂಡ ಮಾಹಿತಿ ಹಾಗೂ ಲೆಕ್ಕಪತ್ರ ದಾಖಲೆಗಳ ಆಯ್ದತಪಾಸಣೆಗೆ ಮಿತಿಗೊಳಿಸಲಾಗಿದೆ.

ನನ್ನ ಪೂರಕ ಲೆಕ್ಕಪರಿಶೋಧನೆಯನ್ನು ಆಧರಿಸಿ, ಕಲಂ 129(4)ರ ಜೊತೆಗೆ ಕಲಂ143(6)(ಬಿ)ನ ಅಡಿಯಲ್ಲಿ ಈ ಕೆಳಗಿನ ಮಹತ್ವದ ವಿಷಯಗಳು ನಮ್ಮ ಗಮನಕ್ಕೆ ಬಂದಿರುತ್ತವೆ ಹಾಗೂ ನನ್ನ ಅಭಿಪ್ರಾಯದಂತೆ ಈ ವಿಷಯಗಳು ಆರ್ಥಿಕ ವಿವರಣಾ ಪಟ್ಟಿ ಮತ್ತುಅದಕ್ಕೆ ಸಂಬಂಧಿತ ಲೆಕ್ಕಪರಿಶೋಧನಾ ವರದಿಯ ಉತ್ತಮ ತಿಳುವಳಿಕೆಗಾಗಿ ಅಗತ್ಯವಾಗಿರುತ್ತವೆ.

ಎ. ಲಾಭದಾಯಕತೆಯ ಮೇಲಿನ ವಿಮರ್ಶೆಗಳು

1. **31 ಮಾರ್ಚ್ 2018ಕ್ಕೆ ಅಂತ್ಯವಾಗುವ ಅವಧಿಗೆ ಕ್ರೋಢಿಕೃತ ಲಾಭ ಮತ್ತು ಹಾನಿ ವಿವರಣಾ ಪಟ್ಟಿ**

   (i) ಟಿಪ್ಪಣಿ 32–ಕಾರ್ಯಾಚರಣೆಯಿಂದ ಬಂದ ಆದಾಯ–ರೂ.679178.26 ಲಕ್ಷಗಳು

   ಮಾರಾಟ ಬೆಲೆಯಲ್ಲಿ ಪ್ರಾಥಮಿಕ ವೆಚ್ಚಗಳ ಅಡಿಯಲ್ಲಿನ ಎಸ್ಕಾಂಗಳಿಂದ ವಸೂಲಾಗಬೇಕಾದ ಕಾರ್ಯಾಚರಣೆ ಹಾಗೂ ನಿರ್ವಹಣಾ ವೆಚ್ಚಕ್ಕೆ ಸಂಬಂಧಿಸಿದಂತೆ ಗುರುತಿಸಲಾದ ಆದಾಯವು ಕಾರ್ಯಾಚರಣೆ ಹಾಗೂ ನಿರ್ವಹಣಾ ವೆಚ್ಚದ ಸ್ವಭಾವವನ್ನು ಹೊಂದಿರದ ಈ ಕೆಳಗಿನ ಪರೋಕ್ಷ ಖರ್ಚು(ಓವರ್‌ಹೆಡ್) ಹಾಗೂ ವೆಚ್ಚಗಳನ್ನು ಒಳಗೊಂಡಿರುತ್ತದೆ:

Financial assets comprise of investments in equity and debt securities, trade receivables, cash and cash equivalents and other financial assets.

ಹಣಕಾಸಿನ ಆಸ್ತಿಗಳು ಇಕ್ವಿಟಿಯಲ್ಲಿನ ಹೂಡಿಕೆ, ಮತ್ತು ಸಾಲ ಪತ್ರಗಳು, ವ್ಯಾಪಾರಿ ಸಂಬಂಧ ಬರತಕ್ಕವುಗಳು, ನಗದು ಮತ್ತು ನಗದು ಸಮಾನತೆಗಳು ಮತ್ತು ಇತರೆ ಹಣಕಾಸಿನ ಸ್ವತ್ತುಗಳನ್ನು ಒಳಗೊಂಡಿರುತ್ತದೆ.

Initial recognition / ಆರಂಭಿಕ ಗುರುತಿಸುವಿಕೆ

All financial assets are recognised initially at fair value plus, in the case of financial assets not recorded at fair value through profit and loss (FVTPL), transaction cost that are attributable to the acquisition of the financial asset. Purchase or sales of financial asset that require delivery of assets within a time frame established by regulation or convention in the market place are recognised on the trade date, i.e., the date that the Corporation commits to purchase or sell the asset.

ಎಲ್ಲಾ ಹಣಕಾಸಿನ ಆಸ್ತಿಗಳು ಆರಂಭದಲ್ಲಿ ನ್ಯಾಯೋಜಿತ ಮೌಲ್ಯದ ಅನ್ವಯ ಗುರುತಿಸಲ್ಪಡುತ್ತವೆ. ಒಂದು ವೇಳೆ, ಹಣಕಾಸಿನ ಆಸ್ತಿಗಳು ಲಾಭ ಮತ್ತು ನಷ್ಟದ ಮುಖಾಂತರ ನ್ಯಾಯೋಜಿತ ಮೌಲ್ಯದ [Fair Value Through Profit and Loss (FVTPL)] ಅನ್ವಯ ಗುರುತಿಸಲ್ಪಡದೆಯಿದ್ದಲ್ಲಿ, ಹಣಕಾಸಿನ ಆಸ್ತಿಯ ಸ್ವಾಧೀನಕ್ಕೆ ಸಂಬಂಧಿಸಿದ ವ್ಯವಹಾರದ ವೆಚ್ಚದಲ್ಲಿ ತೋರ್ಪಡಿಸಲಾಗುವುದು. ಮಾರುಕಟ್ಟೆಯ ನಿಬಂಧನೆಗಳ ಅಥವಾ ಆಚರಣೆಗಳ ಅನುಸಾರ ನಿಗದಿಪಡಿಸಲಾದ ಕಾಲ ಮಿತಿಯೊಳಗೆ ಗೊತ್ತುಪಡಿಸಿದ ಹಣಕಾಸು ಆಸ್ತಿಯನ್ನು ವಶಕ್ಕೆ ಕೊಡುವುದಾದಲ್ಲಿ / ಪಡೆಯುವುದಾದಲ್ಲಿ ಹಣಕಾಸಿನ ಆಸ್ತಿಯ ಖರೀದಿ ಅಥವಾ ಮಾರಾಟವನ್ನು ವ್ಯವಹಾರದ ದಿನಾಂಕದಂದು (ಅರ್ಥಾತ್, ನಿಗಮವು ಆಸ್ತಿಯನ್ನು ಖರೀದಿಸಲು ಅಥವಾ ಮಾರಾಟ ಮಾಡಲು ಬದ್ಧತೆಗೊಳಪಟ್ಟ ದಿನಾಂಕ) ಗುರುತಿಸಲ್ಪಡುವುದು.

Subsequent measurement / *ತರುವಾಯದ ಮೌಲ್ಯಮಾಪನ*

(i) Financial asset measured at amortized cost

(i) ಹಣಕಾಸು ಆಸ್ತಿಗಳ ಮೂಲ ಬೆಲೆಯನ್ನು (ಪ್ರಾರಂಭಿಕ ವೆಚ್ಚವನ್ನು) ಕ್ರಮೇಣ ವಜಾಗೊಳಿಸಿದ ನಂತರದ ಮೌಲ್ಯದಲ್ಲಿ (Amortised Cost) ಮೌಲ್ಯ ನಿರ್ಧರಣೆ:

Financial assets held within a business model whose objective is to hold financial assets in order to collect contractual cash flows and the contractual terms of the financial asset give rise to specified dates to cash flows that are solely payments of principal and interest on the principal amount outstanding are measured at amortized cost using effective interest rate (EIR) method.

The EIR amortization is recognised as finance income in the Statement of Profit and Loss.

ವ್ಯವಹಾರದ ಮಾದರಿಯಲ್ಲಿ ಹೊಂದಿದ ಹಣಕಾಸು ಆಸ್ತಿಗಳನ್ನು, ಒಪ್ಪಂದದ ಮೇರೆಗೆ ಲಭಿಸುವ ನಗದು ಹರಿವನ್ನು ಸಂಗ್ರಹಿಸುವ ಉದ್ದೇಶಗಳಾಗಿ ಹೊಂದಲಾಗಿರುವುದು. ಹಣಕಾಸು ಆಸ್ತಿಯ ಒಪ್ಪಂದದ ನಿಬಂಧನೆಗಳು, ನಿರ್ದಿಷ್ಟ ದಿನಾಂಕಗಳಂದು ಅಸಲಿನ ಮರುಪಾವತಿ ಮತ್ತು ಬಾಕಿ ಉಳಿದಿರುವ ಅಸಲಿನ ಮೇಲೆ ಪರಿಣಾಮಕಾರಿ ಬಡ್ಡಿದರ [Effective Interest Rate (EIR)] ವಿಧಾನವನ್ನು ಅನುಸರಿಸಿ ಆಕರಿಸಿದ ಬಡ್ಡಿ ಸ್ವೀಕೃತಿಯಿಂದ ಲಭಿಸುವ ನಗದು ಹರಿವಿನ ಸ್ವೀಕೃತಿಗೆ ಅವಕಾಶ ಮಾಡಿಕೊಡುವವು.

ಪರಿಣಾಮಕಾರಿ ಬಡ್ಡಿ ದರವನ್ನು (EIR), ಕ್ರಮೇಣ ಮೊಟಕುಗೊಳಿಸಿ ಲಭಿಸುವ ಮೊಬಲಗುವನ್ನು ಆರ್ಥಿಕ ಚಟುವಟಿಕೆಯ ಆದಾಯವೆಂದು ಲಾಭ ಮತ್ತು ನಷ್ಟ ತಃಖ್ತೆಯಲ್ಲಿ ಗುರುತಿಸಲಾಗುವುದು.

(ii) Financial assets at fair value through other comprehensive income (FVTOCI)

(ii) ಹಣಕಾಸು ಆಸ್ತಿಗಳನ್ನು ಇತರ ವಿಸ್ತೃತ ಆದಾಯ ವಿವರಣ ಪಟ್ಟಿಯ (Other Comprehensive Income) ಮೂಲಕ ನ್ಯಾಯೋಚಿತ ಮೌಲ್ಯ (Fair Value) ದಲ್ಲಿ ಉಲ್ಲೇಖಿಸಲಾಗುವುದು:

Financial assets held within a business model whose objective is achieved by both collecting contractual cash flows and selling financial asset and the contractual terms of the financial asset give rise to specified dates to cash flows that are solely payments of principal and interest on the principal amount outstanding are subsequently measured at FVTOCI. Fair value movements in financial assets at FVTOCI are recognised in other comprehensive income. Equity instruments held for trading are classified as at FVTPL. For other equity instruments the Corporation classifies the same as at FVTOCI. The classification is made on initial recognition and is irrevocable. Fair value changes on equity instruments at FVTOCI, excluding dividends, are recognised in OCI.

ವ್ಯವಹಾರದ ಮಾದರಿಯಲ್ಲಿ ಹೊಂದಿದ ಹಣಕಾಸು ಆಸ್ತಿಗಳನ್ನು ಒಪ್ಪಂದದ ಮೇರೆಗೆ ಲಭಿಸುವ ನಗದು ಹರಿವನ್ನು ಸಂಗ್ರಹಿಸುವ ಮತ್ತು ಹಣಕಾಸು ಆಸ್ತಿಗಳ ಮಾರಾಟದ ಉದ್ದೇಶಗಳಾಗಿ ಹೊಂದಲಾಗಿರುವುದು. ಹಣಕಾಸು ಆಸ್ತಿಯ ಒಪ್ಪಂದದ ನಿಬಂಧಗಳು, ನಿರ್ದಿಷ್ಟ ದಿನಾಂಕಗಳಂದು ಅಸಲಿನ ಮರುಪಾವತಿ ಮತ್ತು ಬಾಕಿ ಉಳಿದಿರುವ ಅಸಲಿನ ಮೇಲೆ ಆಕರಿಸಿದ ಬಡ್ಡಿಯನ್ನು ತರುವಾಯ ಇತರ ವಿಸ್ತೃತ ಆದಾಯ ವಿವರಣ ಪಟ್ಟಿಯ ಮೂಲಕ ನ್ಯಾಯೋಚಿತ ಮೌಲ್ಯದಲ್ಲಿ [Fair Value through other Comprehensive Income (FVTOCI)] ಲೆಕ್ಕಿಸಲಾಗುವುದು. ಹಣಕಾಸು ಆಸ್ತಿಗಳಲ್ಲಿನ ನ್ಯಾಯೋಚಿತ ಬೆಲೆಯ ಚಲನ ವಲನವನ್ನು ಇತರೆ ವಿಸ್ತೃತ ಆದಾಯ ಪಟ್ಟಿಯಲ್ಲಿ ಉಲ್ಲೇಖಿಸಲಾಗುವುದು. ವ್ಯಾಪಾರ ವಹಿವಾಟಿಗಾಗಿ ಹೊಂದಿರುವ ಇಕ್ವಿಟಿ ಲಿಖಿತ ಪತ್ರಗಳನ್ನು ಲಾಭ ಮತ್ತು ಹಾನಿ ತಖ್ತೆಯ ಮುಖಾಂತರ ನ್ಯಾಯೋಚಿತ ಮೌಲ್ಯದಲ್ಲಿ [Fair Value through Profit and Loss (FVTPL)] ವರ್ಗಿಕರಿಸಲಾಗುವುದು, ನಿಗಮವು ಇತರೆ ಇಕ್ವಿಟಿ ಲಿಖಿತ ಪತ್ರಗಳನ್ನು 'ಹಣಕಾಸು ಆಸ್ತಿಗಳನ್ನು ಇತರ ವಿಸ್ತೃತ ಆದಾಯ ವಿವರಣ ಪಟ್ಟಿಯ ಮೂಲಕ ನ್ಯಾಯೋಚಿತ ಮೌಲ್ಯದ (FVTOCI) ಅನ್ವಯ ವರ್ಗಿಕರಿಸಲಾಗುವುದು. ಈ ವರ್ಗಿಕರಣವನ್ನು ಆರಂಭಿಕ ಗುರುತಿಸುವಿಕೆ ಯಲ್ಲಿ ಮಾಡಬಹುದಾಗಿದ್ದು ಹಾಗೂ ಇದನ್ನು ರದ್ದುಪಡಿಸಲಾಗದು. 'ಹಣಕಾಸು ಆಸ್ತಿಗಳನ್ನು ಇತರ ವಿಸ್ತೃತ ಆದಾಯ ವಿವರಣ ಪಟ್ಟಿಯ ಮೂಲಕ ನ್ಯಾಯೋಚಿತ ಮೌಲ್ಯದ (FVTOCI)' ಮೇರೆಗೆ ವರ್ಗಿಕೃತ ಇಕ್ವಿಟಿ ಲಿಖಿತ ಪತ್ರಗಳ ನ್ಯಾಯೋಚಿತ ಮೌಲ್ಯದ ಬದಲಾವಣೆಗಳನ್ನು, ಲಾಭಾಂಶವನ್ನು (Dividend) ಹೊರತು ಪಡಿಸಿ ಇತರೆ ವಿಸ್ತೃತ ಆದಾಯ ಪಟ್ಟಿ [Other Comprehensive Income (OCI)] ಯಲ್ಲಿ ಗುರುತಿಸಲಾಗುವುದು.

(iii) Financial assets at fair value through profit and loss (FVTPL) / ಹಣಕಾಸು ಆಸ್ತಿಗಳ ಲಾಭ ಮತ್ತು ನಷ್ಟ ತಃಖ್ತೆಯ ಮೂಲಕ ನ್ಯಾಯೋಚಿತ ಮೌಲ್ಯದಲ್ಲಿ ಉಲ್ಲೇಖ:

Financial asset is measured at fair value through profit or loss if it does not meet the criteria for classification as measured at amortized cost or at FVTOCI. All the fair value changes are recognised in the Statement of Profit or Loss.

ಒಂದು ವೇಳೆ ಹಣಕಾಸು ಆಸ್ತಿಯು ಪ್ರಾರಂಭಿಕ ವೆಚ್ಚವನ್ನು (ಮೂಲ ಬೆಲೆಯನ್ನು) ಕ್ರಮೇಣ ವಜಾಗೊಳಿಸಿದ ನಂತರದ ಮೌಲ್ಯ (Amortised cost) ಅಥವಾ 'ಹಣಕಾಸು ಆಸ್ತಿಗಳನ್ನು ಇತರ ವಿಸ್ತೃತ ಆದಾಯ ವಿವರಣ ಪಟ್ಟಿಯ ಮೂಲಕ ನ್ಯಾಯೋಚಿತ ಮೌಲ್ಯದ (FVTOCI)' ವರ್ಗಿಕರಣಗಳ ನಿರ್ಣಾಯಕ ಅಂಶ (ಮಾನದಂಡ) ಗಳನ್ನು ಪೂರೈಸದಿದ್ದಲ್ಲಿ, ಅಂತಹ ಹಣಕಾಸು ಆಸ್ತಿಗಳನ್ನು ಲಾಭ ಮತ್ತು ನಷ್ಟ ತಃಖ್ತೆಯ ಮುಖಾಂತರ ನ್ಯಾಯೋಚಿತ ಮೌಲ್ಯದಲ್ಲಿ ಲೆಕ್ಕಿಸಲಾಗುವುದು.

Derecognition of financial assets / ಹಣಕಾಸು ಆಸ್ತಿಗಳ ಅಮಾನ್ಯಗೊಳಿಸುವಿಕೆ

Financial assets are derecognized when the contractual rights to the cash flows from the financial asset expire or the financial asset is transferred and the transfer qualifies for derecognition. On derecognition of financial assets in its entirety, the difference between the carrying amount (measured at the date of derecognition) and the consideration received (including any new asset obtained less any new liability assumed) shall be recognised in the Statement of Profit or Loss.

ಹಣಕಾಸು ಆಸ್ತಿಗಳಿಂದ ಲಭಿಸಬಹದಾದ ನಗದು ಹರಿವನ್ನು ಸ್ವೀಕರಿಸಲು ಒಪ್ಪಂದದನ್ವಯ ಅಧಿಕಾರವು ಮೊಟಕುಗೊಂಡಾಗ ಅಥವಾ ಹಣಕಾಸು ಆಸ್ತಿಗಳನ್ನು ವರ್ಗಾಯಿಸಿದಾಗ ಅಥವಾ ಅಂತಹ ವರ್ಗಾವಣೆಯು ಅಮಾನ್ಯಕರಣಕ್ಕೊಳಗಾದ ಸಂದರ್ಭಗಳಲ್ಲಿ ಹಣಕಾಸು ಆಸ್ತಿಗಳನ್ನು ಅಮಾನ್ಯಕರಣಗೊಳಿಸಲಾಗುವುದು. ಹಣಕಾಸು ಆಸ್ತಿಗಳನ್ನು ಸಂಪೂರ್ಣವಾಗಿ ಅಮಾನ್ಯಕರಣಗೊಳಿಸಿದಾಗ, ಅಂತಹ ಆಸ್ತಿಗಳು ಲೆಕ್ಕಪುಸ್ತಕದಲ್ಲಿ ಹೊಂದಿರುವ ಮೌಲ್ಯ [ಅಮಾನ್ಯಕರಣ ದಿನಾಂಕದಂದು ಲೆಕ್ಕಾಚಾರ ಮಾಡಿದ ಮೌಲ್ಯ] ಮತ್ತು ವರ್ಗಾವಣೆಯಿಂದ ಲಭಿಸಿದ ಮೌಲ್ಯ (ಅಥವಾ ಯಾವುದೇ ಹೊಸ ಆಸ್ತಿಗಳನ್ನು ಪಡೆದ ಮೊಬಲಗುವಿನಲ್ಲಿ ಯಾವುದೇ ಜವಾಬ್ದಾರಿಗಳನ್ನು ಸ್ವೀಕರಿಸಿದ ಮೊಬಲಗುವನ್ನು ಕಳೆದು ಲಭಿಸಿದ ಮೌಲ್ಯ) ದ ವ್ಯತ್ಯಾಸವನ್ನು ಲಾಭ ಮತ್ತು ನಷ್ಟ ತಃಖ್ತೆಯಲ್ಲಿ ಗುರುತಿಸಲಾಗುವುದು.

Impairment of financial asset / ಹಣಕಾಸು ಆಸ್ತಿಗಳ ದುರ್ಬಲತೆ

Trade receivables, contract assets, lease receivables under Ind AS 109, investments in debt instruments that are carried at amortized cost, investments in debt instruments that are carried at FVTOCI are tested for impairment based on the expected credit losses for the respective financial asset.

ವ್ಯಾಪಾರಿ ಸಂಬಂಧ ಬರತಕ್ಕವುಗಳು, ಒಪ್ಪಂದದ ಮೇರೆಗೆ ಪಡೆದ ಆಸ್ತಿಗಳು, ಭಾರತೀಯ ಲೆಕ್ಕಾಚಾರ ಮಾನದಂಡ – ೧೦೨ (IND AS - 109) ರನ್ವಯ ಗುತ್ತಿಗೆಯಿಂದ ಪಡೆಯಬಹುದಾದವುಗಳು, ಸಾಲ ಪತ್ರಗಳಲ್ಲಿ ಮಾಡಿದ ಗುಂತಾವಣೆ (Investments in Debt Instruments) ಗಳನ್ನು ಮೂಲ ಬೆಲೆಯ ಕ್ರಮೇಣ ವಜಾಗೊಳಿಸಿದ ನಂತರದ ಮೌಲ್ಯದಲ್ಲಿ ಲೆಕ್ಕಿಸಲಾಗಿರುವುದು ಮತ್ತು 'ಹಣಕಾಸು ಆಸ್ತಿಗಳನ್ನು ಇತರ ವಿಸ್ತೃತ ಆದಾಯ ವಿವರಣ ಪಟ್ಟಿಯ ಮೂಲಕ ನ್ಯಾಯೋಚಿತ ಮೌಲ್ಯ'ದ (FVTOCI) ಆಧಾರದ ಮೇರಗೆ ಲೆಕ್ಕಿಸಲಾದ ಸಾಲ ಪತ್ರಗಳನ್ನು, ಸಂಬಂಧಿತ ಹಣಕಾಸು ಆಸ್ತಿಗಳಿಂದ ನಿರೀಕ್ಷಿತ ಜಮೆಯ ಹಾನಿಗಳನ್ನು (Expected Credit Losses) ಆಧರಿಸಿ ಆಸ್ತಿಗಳ ದುರ್ಬಲತೆಯನ್ನು ಪರೀಕ್ಷಿಸಲಾಗುವುದು.

(i) Trade receivables / ವ್ಯಾಪಾರಿ ಸಂಬಂಧ ಬರತಕ್ಕವುಗಳು

An impairment analysis is performed at each reporting date. The expected credit losses over lifetime of the asset are estimated by adopting the simplified approach using a provision matrix which is based on historical loss rates reflecting current condition and forecast of future economic conditions. In this approach assets are grouped on the basis of similar credit characteristics such as industry, customer segment, past due status and other factors which are relevant to estimate the expected cash loss from these assets.

ಪ್ರತಿ ಲೆಕ್ಕಪತ್ರ ವರದಿಯ ದಿನಾಂಕದಂದು ಆಸ್ತಿಗಳ ದುರ್ಬಲತೆಯ ವಿಶ್ಲೇಷಣೆಯನ್ನು ಕೈಗೊಳ್ಳಲಾಗುವುದು. ಭವಿಷ್ಯತ್ತಿನ ಆರ್ಥಿಕ ಸ್ಥಿತಿಗತಿಗಳ ಮುನ್ಸೂಚನೆ ಮತ್ತು ವಾಸ್ತವಿಕ ಸ್ಥಿತಿಗತಿಗಳನ್ನು ಪ್ರತಿಫಲಿಸುವ ಪೂರ್ವವಧಿಯ ಹಾನಿಯ ದರಗಳನ್ನಾಧರಿಸಿ ಅವಕಾಶಗಳ ಮ್ಯಾಟ್ರಿಕ್ಸ್ (ಅಣಿಮಣಿ) ನ್ನು ಉಪಯೋಗಿಸಿ ಸರಳೀಕರಿಸಿದ ವಿಧಾನವನ್ನು ಅಳವಡಿಸಿಕೊಂಡು, ಆಸ್ತಿಯ ಜೀವಿತಾವಧಿಯಲ್ಲಿ (Life Time of Asset) ನಿರೀಕ್ಷಿತ ಜಮೆಯ ಹಾನಿಗಳನ್ನು ಅಂದಾಜಿಸಲಾಗುವುದು. ಪ್ರಸ್ತುತ ವಿಧಾನದಲ್ಲಿ ಇಂತಹ ಆಸ್ತಿಗಳಿಂದಾಗಬಹುದಾದ ನಿರೀಕ್ಷಿತ ನಗದು ಹಾನಿಗಳನ್ನು ಅಂದಾಜಿಸಲು ಪೂರಕವಾಗುವಂತೆ, ಆಸ್ತಿಗಳನ್ನು ಸಮಾನ ರೂಪದ ವಿಶ್ವಾಸಾರ್ಹತೆಯ ಗುಣಲಕ್ಷಣಗಳಾದ ಉದ್ಯಮ, ಗ್ರಾಹಕರ ವಿಭಾಗ, ಹಳೆಯ ಬಾಕಿಯ ಸ್ಥಿತಿಗತಿ ಮತ್ತು ಇತರೆ ಅಂಶಗಳನ್ನಾಧರಿಸಿ ವರ್ಗೀಕರಣಗೊಳಿಸಲಾಗುವುದು.

(ii) Other financial asset / ಇತರೆ ಹಣಕಾಸು ಆಸ್ತಿಗಳು

Other financial assets are tested for impairment based on significant change in credit risk since initial recognition and impairment is measured based on probability of default over the lifetime when there is a significant increase in credit risk

ಜಮೆಯ ಗಂಡಾಂತರದಲ್ಲಿ ಮಹತ್ತರವಾದ ಏರಿಕೆಯಾದಲ್ಲಿ ಅಂತಹ ಆಸ್ತಿಗಳ ಜೀವಿತಾವದಿಯಲ್ಲಿ ಉಪೇಕ್ಷೆಗೊಳಗಾಗುವ ಸಂಭವನೀಯತೆಯನ್ನಾಧರಿಸಿ ಇತರ ಹಣಕಾಸು ಆಸ್ತಿಗಳ ಆರಂಭಿಕ ಗುರುತಿಸುವಿಕೆ ಮತ್ತು ಆಸ್ತಿಗಳ ದುರ್ಬಲತೆಯನ್ನು ಲೆಕ್ಕಿಸಲಾಗುವುದರಿಂದ ಜಮೆಯ ಗಂಡಾಂತರದಲ್ಲಿಯ ಮಹತ್ತರವಾದ ಬದಲಾವಣೆಗಳನ್ನು ಪರಿಗಣಿಸಿ, ಇತರೆ ಆರ್ಥಿಕ ಆಸ್ತಿಗಳ ದುರ್ಬಲತೆಯನ್ನು ಪರೀಕ್ಷಿಸಲಾಗುವುದು.

b. Financial liabilities / ಆರ್ಥಿಕ ಹೊಣೆಗಾರಿಕೆಗಳು

Initial recognition and measurement / ಆರಂಭಿಕ ಗುರುತಿಸುವಿಕೆ ಮತ್ತು ಮೌಲ್ಯಮಾಪನ

Financial liabilities are initially recognised at fair value plus any transaction cost that are attributable to the acquisition of the financial liabilities except financial liabilities at FVTPL which are initially measured at fair value.

ಆರ್ಥಿಕ ಹೊಣೆಗಾರಿಕೆಗಳನ್ನು ಆರಂಭಿಕವಾಗಿ ನ್ಯಾಯೋಚಿತ ಮೌಲ್ಯದಲ್ಲಿ ಲೆಕ್ಕಿಸಿದ್ದು, ಸದ್ಯದಲ್ಲಿ (ಪ್ರಸ್ತುತ) ಲಾಭ ಮತ್ತು ನಷ್ಟ ತಃಖ್ತೆಯ ಮುಖಾಂತರ ನ್ಯಾಯೋಚಿತ ಮೌಲ್ಯದಲ್ಲಿ [Fair Value Through Profit and Loss (FVTPL)] ತೋರಿಸಿರುವುದನ್ನು ಹೊರತುಪಡಿಸಿ ಉಳಿದೆಲ್ಲ ಆರ್ಥಿಕ ಹೊಣೆಗಾರಿಕೆಗಳ ನ್ಯಾಯೋಚಿತ ಮೌಲ್ಯದೊಂದಿಗೆ ಹೊಂದಲು ವ್ಯಯಿಸಿದ ಎಲ್ಲ ತರಹದ ವ್ಯವಹಾರಿಕ ವೆಚ್ಚಗಳನ್ನು ಸೇರಿಸಿ ಆರ್ಥಿಕ ಹೊಣೆಗಾರಿಕೆಗಳನ್ನು ಆರಂಭಿಕವಾಗಿ ಗುರುತಿಸಲಾಗುವುದು.

Subsequent measurement / ತರುವಾಯದ ಮೌಲ್ಯಮಾಪನ

The financial liabilities are classified for subsequent measurement into following categories;

ಆರ್ಥಿಕ ಜವಾಬ್ದಾರಿಗಳನ್ನು ತರುವಾಯದ ಮೌಲ್ಯಮಾಪನಕ್ಕಾಗಿ ಈ ಕೆಳಗಿನಂತೆ ಗುಂಪುಗಳಲ್ಲಿ ವರ್ಗೀಕರಿಸಲಾಗುವುದು.

- At amortized cost / ಆರಂಭಿಕ ಹೊಣೆಗಾರಿಕೆಯನ್ನು ಕ್ರಮೇಣ ವಜಾಗೊಳಿಸಿ ಉಳಿದ ಮೌಲ್ಯ (Amortised Cost) ದಲ್ಲಿ ತೋರಿಸಲಾಗುವುದು.
- At FVTPL / ಲಾಭ ಮತ್ತು ನಷ್ಟ ತಃಖ್ತೆಯ ಮುಖಾಂತರ ನ್ಯಾಯೋಚಿತ ಮೌಲ್ಯದಲ್ಲಿ ತೋರಿಸಲಾಗುವುದು (FVTPL)

(i) Financial liability at amortized cost / ಕ್ರಮೇಣ ವಜಾಗೊಳಿಸಿ ಉಳಿದ ಮೌಲ್ಯಕ್ಕೆ ಆರ್ಥಿಕ ಹೊಣೆಗಾರಿಕೆಗಳು:

Amortized cost for financial liabilities represents amount at which liability is measured at initial recognition minus the principal repayments, plus or minus the cumulative amortization using the effective interest method of any difference between that initial amount and the maturity amount.

ಆರ್ಥಿಕ ಹೊಣೆಗಾರಿಕೆಗಳ ಆರಂಭಿಕ ಮೊಬಲಗುವನ್ನು ಕ್ರಮೇಣ ವಜಾಗೊಳಿಸಿ ಉಳಿದ ಮೌಲ್ಯವು (Amortised Cost) ಆರಂಭಿಕ ಗುರುತಿಸುವಿಕೆಯಲ್ಲಿ ಅಂತಹ ಜವಾಬ್ದಾರಿಗಳನ್ನು ಲೆಕ್ಕಿಸಿದ ಮೊಬಲಗುವಿನಲ್ಲಿ ಅಸಲು ಮರುಪಾವತಿಗಳನ್ನು ಕಳೆದು ಬಂದ ಮೊಬಲಗುವಿನಲ್ಲಿ ಪರಿಣಾಮಕಾರಿ ಬಡ್ಡಿ ವಿಧಾನವನ್ನು ಅನುಸರಿಸಿ ಕಂಡುಕೊಂಡ ಆರಂಭಿಕ ಮೊಬಲಗು ಮತ್ತು ಅವಧಿ ಮುಕ್ತಾಯದಲ್ಲಿನ ಮೌಲ್ಯದಲ್ಲಿನ ವ್ಯತ್ಯಾಸದಲ್ಲಿರುವ ಸಂಚಿತ ಮೊಬಲಗುವನ್ನು ಕೂಡಿಸಿದಾಗ ಅಥವಾ ಕಳೆದಾಗ ಲಭಿಸಿದ ಮೌಲ್ಯವಾಗಿರುವುದು.

(ii) Financial liability at FVTPL / ನ್ಯಾಯೋಚಿತ ಮೌಲ್ಯಕ್ಕೆ ಆರ್ಥಿಕ ಹೊಣೆಗಾರಿಕೆಗಳು:

Financial liabilities held for trading are measured at FVTPL / ವ್ಯಾಪಾರ ವಹಿವಾಟಿಗಾಗಿ ಹೊಂದಿರುವ ಆರ್ಥಿಕ ಜವಾಬ್ದಾರಿಗಳನ್ನು ಲಾಭ ಮತ್ತು ನಷ್ಟ ತಃಖ್ತೆಯ ಮುಖಾಂತರ ನ್ಯಾಯೋಚಿತ ಮೌಲ್ಯ (FVTPL) ದಲ್ಲಿ ಲೆಕ್ಕಿಸಲಾಗಿದೆ.

Derecognition of financial liabilities / ಆರ್ಥಿಕ ಜವಾಬ್ದಾರಿಗಳ ಅಮಾನ್ಯೀಕರಣ

A financial liability is derecognized when and only when, it is extinguished i.e. when the obligation specified in the contract is discharged or cancelled or expires.

ಆರ್ಥಿಕ ಜವಾಬ್ದಾರಿಗಳನ್ನು ಅಳಿಸಿದಾಗ ಮಾತ್ರ (ಅರ್ಥಾತ್ ಒಪ್ಪಂದಗಳಲ್ಲಿನ ಬಾಧ್ಯತೆಗಳ ಹೊರೆ ಇಳಿಸಿದಾಗ ಅಥವಾ ಬಾಧ್ಯತೆಗಳನ್ನು ರದ್ದುಗೊಳಿಸಿದಾಗ ಅಥವಾ ಬಾಧ್ಯತೆಗಳ ಅವಧಿ ಮೀರಿದಾಗ) ಅವುಗಳನ್ನು ಅಮಾನ್ಯೀಕರಣಗೊಳಿಸಲಾಗುವುದು.

c. Offsetting of financial assets and financial liabilities / ಆರ್ಥಿಕ ಆಸ್ತಿಗಳ ಮತ್ತು ಆರ್ಥಿಕ ಬಾಧ್ಯತೆಗಳ ಸರಿದೂಗಿಸುವಿಕೆ

Financial assets and liabilities are offset and the net amount is presented in Balance Sheet when, and only when, the Corporation has a legal right to offset the recognised amounts and intends either to settle on a net basis or to realize the assets and settle the liability simultaneously.

ಆರ್ಥಿಕ ಆಸ್ತಿ ಹಾಗೂ ಬಾಧ್ಯತೆಗಳಿಗೆ ಸಂಭಂದಿಸಿದಂತೆ ನಿಗಮವು ಗುರುತಿಸಲ್ಪಟ್ಟ ಮೊಬಲಗುವನ್ನು ಅಳಿಸಿ ಹಾಕಲು ಕಾನೂನುಬದ್ಧ ಅಧಿಕಾರ ಹೊಂದಿದ್ದರೆ ಮತ್ತು ಆಸ್ತಿ ಹಾಗೂ ಬಾಧ್ಯತೆಗಳ ನಿವ್ವಳತೆಯನ್ನು ಆಧರಿಸಿ ಇತ್ಯರ್ಥಗೊಳಿಸಲು ಉದ್ದೇಶಿಸಿದ್ದರೆ ಅಥವಾ ಆಸ್ತಿಗಳ ಮಾರಾಟ ಹಾಗೂ ಬಾಧ್ಯತೆಗಳ ಇತ್ಯರ್ಥವನ್ನು ಏಕಕಾಲದಲ್ಲಿ ಮಾಡುವುದಾದಲ್ಲಿ ಮಾತ್ರ ಹಣಕಾಸು ಆಸ್ತಿಗಳನ್ನು ಮತ್ತು ಬಾಧ್ಯತೆಗಳನ್ನು ಸರಿದೂಗಿಸಬಹುದು ಮತ್ತು ನಿವ್ವಳ ಮೊಬಲಗುವನ್ನು ಆರ್ಥಿಕ ಸ್ಥಿತಿ ವಿವರಣಾ ಪಟ್ಟಿಯಲ್ಲಿ ತೋರಿಸಬಹುದಾಗಿದೆ.

d. Reclassification of financial asset / ಆರ್ಥಿಕ ಆಸ್ತಿಗಳ ಮರುವರ್ಗೀಕರಣ

The Corporation determines the classification of financial assets and liabilities on initial recognition. After initial recognition no reclassification is made for financial assets which are categorized as equity instruments at FVTOCI and financial assets or liabilities that are specifically designated as FVTPL. For financial assets which are debt instruments, a reclassification is made only if there is a change in the business model for managing those assets. Changes to the business model are expected to be

very infrequent. The management determines change in the business model as a result of external or internal changes which are significant to the Corporation's operations. A change in the business model occurs when the Corporation either begins or ceases to perform an activity that is significant to its operations. If the Corporation reclassifies financial assets, it applies reclassification prospectively from the reclassification date which is the first date of the immediately next reporting period following the change in business model. The Corporation does not restate any previously recognised gains, losses (including impairment gains or losses) or interest.

ಆರ್ಥಿಕ ಆಸ್ತಿ ಮತ್ತು ಬಾಧ್ಯತೆ (ಹೊಣೆಗಾರಿಕೆ) ಗಳ ಆರಂಭಿಕ ಗುರುತಿಸುವಿಕೆಯಲ್ಲಿ, ನಿಗಮವು ಅವುಗಳ ವರ್ಗೀಕರಣವನ್ನು ನಿರ್ಧರಿಸುತ್ತದೆ. ಆರಂಭಿಕ ಗುರುತಿಸುವಿಕೆಯ ನಂತರ ಆರ್ಥಿಕ ಆಸ್ತಿಯಾದ ಇಕ್ವಿಟಿ ಲಿಖಿತ ಪತ್ರಗಳನ್ನು ಹಣಕಾಸು ಆಸ್ತಿಗಳನ್ನು ಇತರ ವಿಸ್ತೃತ ಆದಾಯ ವಿವರಣ ಪಟ್ಟಿಯ ಮೂಲಕ ನ್ಯಾಯೋಚಿತ ಮೌಲ್ಯದ (FVTOCI) ವಿಧಾನದಲ್ಲಿ ವರ್ಗೀಕರಿಸಿದ್ದರೆ ಮತ್ತು ಆರ್ಥಿಕ ಆಸ್ತಿಗಳು ಮತ್ತು ಹೊಣೆಗಾರಿಕೆ (ಬಾಧ್ಯತೆ) ಗಳನ್ನು ನಿರ್ದಿಷ್ಟವಾಗಿ ವ್ಯಾಪಾರ ವಹಿವಾಟಿಗಾಗಿ ಹೊಂದಿರುವ ಆರ್ಥಿಕ ಜವಾಬ್ದಾರಿಗಳನ್ನು ಲಾಭ ಮತ್ತು ನಷ್ಟ ತಃಖ್ತೆಯ ಮುಖಾಂತರ ನ್ಯಾಯೋಚಿತ ಮೌಲ್ಯ (FVTPL) ವರ್ಗದಲ್ಲಿ ವಿಂಗಡಿಸಿದ್ದರೆ; ಅಂತಹುವಗಳ ಮರುವರ್ಗೀಕರಣ ಮಾಡಲು ಅವಕಾಶವಿರುವುದಿಲ್ಲ. ಸಾಲಪತ್ರಗಳನ್ನು (Debt instruments) ಹೊಂದಿದ ಆರ್ಥಿಕ ಆಸ್ತಿಗಳನ್ನು, ಕೇವಲ ಇಂತಹ ಆಸ್ತಗಳನ್ನು ನಿರ್ವಹಿಸುವ ವ್ಯವಹಾರ ಮಾದರಿಯಲ್ಲಿ ಬದಲಾವಣೆಯಾದಾಗ ಮಾತ್ರ ಮರುವರ್ಗೀಕರಣ ಮಾಡಬಹುದು. ವ್ಯವಹಾರ ಮಾದರಿಯ ಬದಲಾವಣೆಯು ವಿರಳವಾಗಿ ಸಂಭವಿಸುವುದು. ಬಾಹ್ಯ ಮತ್ತು ಆಂತರಿಕ ಬದಲಾವಣೆಗಳು ನಿಗಮದ ಕಾರ್ಯಾಚರಣೆಯ ಮೇಲೆ ಮಹತ್ತರವಾದ ಪರಿಣಾಮ ಬೀರುವುದಾದಲ್ಲಿ, ನಿಗಮದ ಆಡಳಿತ ಮಂಡಳಿಯು ವ್ಯವಹಾರದ ಮಾದರಿಯ ಬದಲಾವಣೆಯನ್ನು ಮಾಡಬಹುದು. ನಿಗಮದ ಕಾರ್ಯಾಚರಣೆಗಳಾಗಾಗಿ ಮಹತ್ವವಾದ ಚಟುವಟಿಕೆಯನ್ನು ಒಂದು ವೇಳೆ ಆರಂಭಿಸಿದ್ದರೆ, ಇಲ್ಲವೇ ಸ್ಥಗಿತಗೊಳಿಸಿದ್ದರೆ ಅಂತಹ ಸಂದರ್ಭದಲ್ಲಿ ವ್ಯವಹಾರದ ಮಾದರಿಯಲ್ಲಿ ಬದಲಾವಣೆ ಮಾಡುವ ಸಾಧ್ಯತೆಯಿದೆ. ಒಂದು ವೇಳೆ ನಿಗಮವು ಆರ್ಥಿಕ ಆಸ್ತಿಗಳ ಮರುವರ್ಗೀಕರಣ ಮಾಡಿದ್ದಾದಲ್ಲಿ, ಅಂತಹ ಮರುವರ್ಗೀಕರಣವು, ಮರುವರ್ಗೀಕರಿಸಿದ ದಿನಾಂಕದಿಂದ ಮುಂಬರುವ ಅವಧಿಗೆ ಅನ್ವಯಿಸುವುದು. ಅಲ್ಲದೇ ವ್ಯವಹಾರದ ಮಾದರಿಯ ಬದಲಾವಣೆ ಮಾಡಿದ ಅವಧಿಯ ತಕ್ಷಣದ ಮುಂದಿನ ಅವಧಿಯ ಮೊದಲನೆಯ ದಿನಾಂಕವೇ ಮರುವರ್ಗೀಕರಿಸಿದ ದಿನಾಂಕವಾಗಿರುವುದು. ಇಂತಹ ಸಂಧರ್ಭಗಳಲ್ಲಿ ನಿಗಮವು ಹಿಂದಿನ ಅವಧಿಗಳಲ್ಲಿ ಗುರುತಿಸಿದ ಲಾಭಗಳನ್ನು,ಹಾನಿಗಳನ್ನು (ದುರ್ಬಲತೆಯ ಲಾಭ ಅಥವಾ ಹಾನಿಗಳನ್ನೊಳಗೊಂಡು) ಅಥವಾ ಬಡ್ಡಿಗಳನ್ನು ಮಾರ್ಪಡಿಸಿ ತೋರಿಸುವುದಿಲ್ಲ.

Investment in subsidiaries, Joint Venture and associate companies / ಅಧೀನ ಸಂಸ್ಥೆಗಳು, ಸಹಭಾಗಿತ್ವ ಸಂಸ್ಥೆಗಳು ಮತ್ತು ಸಹವರ್ತಿ ಸಂಸ್ಥೆಗಳಲ್ಲಿ ಹೂಡಿಕೆಗಳು

Investment in subsidiaries, Joint Venture and associate companies are measured at cost.

ಅಧೀನ ಸಂಸ್ಥೆಗಳು, ಸಹಬಾಗಿತ್ವ ಸಂಸ್ಥೆಗಳು ಮತ್ತು ಸಹವರ್ತಿ ಸಂಸ್ಥೆಗಳಲ್ಲಿನ ಹೂಡಿಕೆಗಳನ್ನು ವೆಚ್ಚದಲ್ಲಿ ಲೆಕ್ಕಿಸಲಾಗಿದೆ.

17 Fair value measurement / ನ್ಯಾಯೋಚಿತ ಮೌಲ್ಯಮಾಪನ

'Fair value' is the price that would be received to sell an asset or paid to transfer a liability in an orderly transaction between market participants at the measurement date in the principal or, in its absence, the most advantageous market to which the Corporation has access at that date. The fair value of a liability reflects its non-performance risk.

ಮೌಲ್ಯ ನಿರ್ಧರಣೆಯ ದಿನಾಂಕದಂದು ಪ್ರಧಾನ ಮಾರುಕಟ್ಟೆಯಲ್ಲಿ ಅಥವಾ ಇದರ ಅನುಪಸ್ಥಿತಿಯಲ್ಲಿ ನಿಗಮವು ಪ್ರವೇಶ ಹೊಂದಿರುವ ತುಂಬಾ ಅನುಕೂಲವನ್ನುಂಟು ಮಾಡುವ ಮಾರುಕಟ್ಟೆ ಪಾಲುದಾರರ ಮಧ್ಯೆ ಕ್ರಮಬದ್ಧವಾಗಿ ಜರುಗಿದ ವ್ಯವಹಾರದಲ್ಲಿ ಆಸ್ತಿಗಳ ಮಾರಾಟದಿಂದ ಪಡೆಯಬಹುದಾದ ಅಥವಾ ಭಾಧ್ಯತೆಗಳ ವರ್ಗಾವಣೆಗಾಗಿ ಸಂದಾಯಿಸಿದ ದರವನ್ನು 'ನ್ಯಾಯೋಚಿತ ಮೌಲ್ಯ' ಎಂದು ಹೇಳಲಾಗುವುದು. ಬಾಧ್ಯತೆಗಳ ನ್ಯಾಯೋಚಿತ ಮೌಲ್ಯವು ಅವುಗಳನ್ನು ನೆರವೇರಿಸದಿರುವದರಿಂದ ಆಗಬಹುದಾದ ಹಾನಿಸಂಭವವನ್ನು ಪ್ರತಿಬಿಂಬಿಸುತ್ತದೆ.

When quoted price is available, the Corporation measures the fair value of an instrument using the quoted price in an active market for that instrument. A market is regarded as active if transactions for the asset or liability take place with sufficient frequency and volume to provide pricing information on an ongoing basis.

ಆರ್ಥಿಕ ಆಸ್ತಿಗಳ ಉಲ್ಲೇಖಿತ ಬೆಲೆ ಲಭ್ಯವಿದ್ದಲ್ಲಿ, ನಿಗಮವು ಅಂತಹ ಲಿಖಿತಪತ್ರಗಳ (ಇಂಸ್ಟ್ರುಮೆಂಟ್ಸ್) ಕಾರ್ಯಾನಿರತ ಮಾರುಕಟ್ಟೆಯಲ್ಲಿನ ಉಲ್ಲೇಖಿತ ಬೆಲೆಯನ್ನಾಧರಿಸಿ ನ್ಯಾಯೋಚಿತ ಮೌಲ್ಯಮಾಪನ ಮಾಡಲಾಗುವುದು. ಒಂದು ವೇಳೆಮಾರುಕಟ್ಟೆಯಲ್ಲಿ ಆಸ್ತಿ ಅಥವಾ ಬಾಧ್ಯತೆಗಳ ವ್ಯವಹಾರಗಳು ಸಾಕಷ್ಟು ಸಲ ಮತ್ತು ಹೆಚ್ಚಿನ ಗಾತ್ರದಲ್ಲಿ ಜರುಗಿದ ಬೆಲೆಗಳ ಮಾಹಿತಿಯನ್ನು ನಿರಂತರವಾಗಿ ಒದಗಿಸುತ್ತಿದ್ದರೆ ಅಂತಹ ಮಾರುಕಟ್ಟೆಯು ಕ್ರಿಯಾಶೀಲವಾಗಿರುವುದೆಂದು ಪರಿಗಣಿಸಬಹುದಾಗಿದೆ.

If there is no quoted price in an active market, then the Corporation uses valuation techniques that maximize the use of relevant observable inputs and minimize the use of unobservable inputs. The chosen valuation technique incorporates all the factors that market participants would take into account in pricing a transaction.

ಒಂದು ವೇಳೆ ಕ್ರಿಯಾಶೀಲ ಮಾರುಕಟ್ಟೆಯಲ್ಲಿ ಉಲ್ಲೇಖಿತ ಬೆಲೆ ಲಭ್ಯವಾಗದಿದ್ದಲ್ಲಿ, ಆಗ ನಿಗಮವು ಪ್ರಸ್ತುತ ಗ್ರಹಿಸಬಹುದಾದ ಮಾಹಿತಿ (ಇನ್‌ಪುಟ್ಸ್) ಗಳ ಗರಿಷ್ಟ ಬಳಕೆ ಮತ್ತು ಗ್ರಹಿಸಲು ಅಸಾಧ್ಯವಾದ ಮಾಹಿತಿಗಳ ಕನಿಷ್ಟ ಬಳಕೆಯ ಮೌಲ್ಯಮಾಪನ ವಿಧಾನಗಳನ್ನು ಬಳಸುವುದು.

ವ್ಯವಹಾರದ ಮೌಲ್ಯಮಾಪನಕ್ಕಾಗಿ ಆಯ್ದುಕೊಂಡ ಮೌಲ್ಯಮಾಪನದ ವಿಧಾನವು ಮಾರುಕಟ್ಟೆಯ ಭಾಗಿದಾರರು ಪರಿಗಣಿಸುವ ಎಲ್ಲಾ ಅಂಶಗಳನ್ನು ಒಳಗೊಂಡಿರುತ್ತದೆ.

When measuring the fair value of an asset or a liability, the Corporation uses observable market data as far as possible. Fair values are categorized into different levels in a fair value hierarchy based on the inputs used in the valuation techniques as follows.

ಆಸ್ತಿಗಳ ಅಥವಾ ಭಾದ್ಯತೆಗಳ ನ್ಯಾಯೋಚಿತ ಮೌಲ್ಯವನ್ನು ನಿರ್ಧರಿಸುವಾಗ ನಿಗಮವು ಗ್ರಹಿಸಬಹುದಾದ ಮಾರುಕಟ್ಟೆಯ ಅಂಕಿ ಅಂಶಗಳನ್ನು ಸಾಧ್ಯವಾದಷ್ಟು ಮಟ್ಟಿಗೆ ಬಳಸುತ್ತದೆ. ಮೌಲ್ಯ ಮೌಲ್ಯಮಾಪನ ವಿಧಾನಗಳಲ್ಲಿ ಬಳಸಿದ ಅಂಕಿ ಅಂಶ ಅಥವಾ ಮಾಹಿತಿಗಳನ್ನು ಆಧರಿಸಿ, ನ್ಯಾಯೋಚಿತ ಮೌಲ್ಯವನ್ನು, ನ್ಯಾಯೋಚಿತ ಮೌಲ್ಯದ ವರ್ಗಶ್ರೇಣಿ (fair value hierarchy) ಗಳನ್ನು ವಿವಿಧ ಹಂತಗಳಲ್ಲಿ ಈ ಕೆಳಗಿನಂತೆ ವರ್ಗೀಕರಿಸಲಾಗಿದೆ.

- Level 1: quoted prices (unadjusted) in active markets for identical assets or liabilities.
- ಹಂತ 1: ಸಾಮ್ಯತೆ ಹೊಂದಿದ ಆಸ್ತಿಗಳ ಅಥವಾ ಬಾಧ್ಯತೆಗಳ ಕ್ರೀಯಾಶೀಲ ಮಾರುಕಟ್ಟೆಗಳಲ್ಲಿನ ಉಲ್ಲೇಖಿತ ಬೆಲೆಗಳು (ಮಾರ್ಪಡಿಸದ).
- Level 2: inputs other than quoted prices included in Level 1 that are observable for the asset or liability, either directly (i.e. as prices) or indirectly (i.e. derived from prices).
- ಹಂತ 2: ಹಂತ 1 ರಲ್ಲಿ ಸೇರಿಸಲಾದ ಉಲ್ಲೇಖಿತ ಬೆಲೆಗಳನ್ನೊಳಗೊಳ್ಳದ, ಆದರೆ ಆಸ್ತಿ ಹಾಗೂ ಬಾಧ್ಯತೆಗಳ ಕುರಿತಾಗಿ ಪ್ರತ್ಯಕ್ಷವಾಗಿ (ಅರ್ಥಾತ್ ಬೆಲೆಗಳನ್ನಾಧರಿಸಿ) ಇಲ್ಲವೇ ಪರೋಕ್ಷವಾಗಿ (ಅರ್ಥಾತ್ ಬೆಲೆಗಳಿಂದ ಉಗಮವಾದುದು) ಗ್ರಹಿಸಬಹುದಾದ ಮಾಹಿತಿಗಳು (ಅಂಕಿ ಅಂಶಗಳು).
- Level 3: inputs for the asset or liability that are not based on observable market data (unobservable inputs).
- ಹಂತ 3: ಆಸ್ತಿ ಅಥವಾ ಬಾಧ್ಯತೆಗಳ ಕುರಿತು ಮಾರುಕಟ್ಟೆಯ ಗ್ರಹಿಸಬಹುದಾದ ಅಂಕಿ ಅಂಶಗಳನ್ನಾಧರಿಸದೇ ಇರುವ ಮಾಹಿತಿ (ಇನ್‌ಪುಟ್ಸ್) [ಗ್ರಹಿಸಲು ಅಸಾಧ್ಯವಾದ ಮಾಹಿತಿ (ಇನ್‌ಪುಟ್ಸ್)].

  If the inputs used to measure the fair value of an asset or a liability fall into different levels of the fair value hierarchy, then the fair value measurement is categorized in its entirety in the same level of the fair value hierarchy as the lowest level input that is significant to the entire measurement.

  ಆಸ್ತಿ ಅಥವಾ ಬಾಧ್ಯತೆಗಳ ನ್ಯಾಯೋಚಿತ ಮೌಲ್ಯದ ನಿರ್ಧರಣೆ ಮಾಡಲು ಬಳಸಿದ ಮಾಹಿತಿಗಳು (ಅಂಕಿ ಅಂಶಗಳು) ನ್ಯಾಯೋಚಿತ ಮೌಲ್ಯದ ನಿರ್ದಿಷ್ಟವಾದ ವರ್ಗಶ್ರೇಣಿಗಳಲ್ಲಿ ಸರಿಹೊಂದದಿದ್ದರೆ ಅಥವಾ ವಿವಿಧ ಶ್ರೇಣಿಗಳಲ್ಲಿ ಸೇರಿದ್ದರೆ, ಆಗ ಸಂಪೂರ್ಣ ಮೌಲ್ಯ ನಿರ್ಧರಣೆಗೆ ಮಹತ್ತರವಾದ ಕನಿಷ್ಟ ಶ್ರೇಣಿಯ ಅಂಕಿ ಅಂಶಗಳಿಗೆ ಸಂಬಂಧಿಸಿದ ನ್ಯಾಯೋಚಿತ ಮೌಲ್ಯದ ವರ್ಗಶ್ರೇಣಿಯಲ್ಲಿ ಸಮಗ್ರವಾಗಿ ವರ್ಗೀಕರಿಸಲಾಗುವುದು.

18 Revenue recognition / ಆದಾಯ ಗುರುತಿಸುವಿಕೆ

Revenue is recognized on its accrual. / ಪ್ರಾಪ್ತತತೆಯ ಆಧಾರದ ಮೇಲೆ ಆದಾಯವನ್ನು ಪರಿಗಣಿಸಲಾಗುವುದು.

Revenue from sale of energy (Conventional and Non-conventional) is recognized in accordance with Electricity Regulatory Commission's regulations, at the tariff rates of PPA executed/PPA initialled/ specified by Government of Karnataka/ provisional tariff admitted.

ವಿದ್ಯುತ್ ಮಾರಾಟದ ಆದಾಯವನ್ನು (ಸಾಂಪ್ರದಾಯಿಕ ಮತ್ತು ಸಾಂಪ್ರದಾಯಿಕವಲ್ಲದ) ವಿದ್ಯುತ್ ನಿಯಂತ್ರಣ ಆಯೋಗದ ನಿಯಮಗಳನುಸಾರವಾಗಿ ಮತ್ತು ಒಪ್ಪಂದಗಳಲ್ಲಿಯ ದರದಂತೆ / ಖರೀದಿ ಒಪ್ಪಂದಗಳಲ್ಲಿಯ ಸಹಿಹಾಕಿದ ದರದಂತೆ / ಕರ್ನಾಟಕ ಸರ್ಕಾರವು ನಿಗದಿಪಡಿಸಿದ ದರಗಳಂತೆ ಪ್ರಾಪ್ತವಾಗುವ ಆಧಾರದ ಮೇರೆಗೆ ಮಾನ್ಯಮಾಡಲಾಗಿದೆ.

Advance against Depreciation recovered through tariff is accrued as revenue in the relatable year of adjustment.

ಬಿಲ್ಲುಗಳಿಂದ ಮುಂಗಡವಾಗಿ ಪಡೆದ ಸವಕಳಿಯ ವೆಚ್ಚವನ್ನು ಹೊಂದಾಣಿಕೆಗೊಳಪಟ್ಟ ಸಂಬಂಧಿತ ವರ್ಷಕ್ಕೆ ಪ್ರಾಪ್ತವಾದ ಆದಾಯವೆಂದು ಗುರುತಿಸಲಾಗುವುದು.

Revenue from contracts and consultancy services is accounted on the basis of progress of work executed and billing milestones, as per the relevant contracts / agreements.

ಸಲಹಾ ಸೇವೆಗಳಿಂದಾದ ಮತ್ತು ಗುತ್ತಿಗೆಗಳಿಂದಾದ ಆದಾಯವನ್ನು ಕಾರ್ಯ ನಿರ್ವಹಣೆಯ ಪ್ರಗತಿಯನ್ನು ಆಧರಿಸಿ ಮತ್ತು ತತ್ಸಂಬಂಧಿತ ಗುತ್ತಿಗೆ / ಒಪ್ಪಂದಗಳಲ್ಲಿಯ ಬಿಲ್ಲು ತಯಾರಿಕೆಯ ಮೈಲಿಗಲ್ಲುಗಳನ್ನು (ಒಪ್ಪಂದಗಳಲ್ಲಿಯ) ಆಧರಿಸಿ ಲೆಕ್ಕಾಚಾರ ಮಾಡಲಾಗಿದೆ.

Interest on outstanding energy dues beyond the prescribed period is recognized on accrual basis.

ತಡವಾಗಿ ವಿಲೇವಾರಿಯಾದ ವಿದ್ಯುತ್ ಮಾರಾಟದ ಬಾಕಿ ಬಾಬ್ತು ಮೇಲಿನ ಬಡ್ಡಿಯನ್ನು ಪ್ರಾಪ್ತವಾಗುವ ಆಧಾರದ ಮೇರೆಗೆ ಗುರುತಿಸಲಾಗಿದೆ.

Rental income / licence fees, insurance claims, and claims on collieries and railways for quality and quantity variation, sale of scrap, spares and coal mill rejects, claim for stones and shales in coal supplies from the collieries are reckoned as accrued on realization / acceptance.

ಬಾಡಿಗೆ ಆದಾಯ / ಪರವಾನಿಗೆ ಶುಲ್ಕ, ಸಿಬ್ಬಂದಿ ಮುಂಗಡಗಳ ಮೇಲಿನ ಬಡ್ಡಿ, ವಿಮಾಹಕ್ಕು ಕೋರಿಕೆಗಳು, ಇಂಧನ ಪೂರೈಕೆ ಒಪ್ಪಂದಕ್ಕಿಂತ ಮುಂಚಿತ ಅವಧಿಯಲ್ಲಾದ ಕಲ್ಲಿದ್ದಲು ಸರಬರಾಜಿನ ಗುಣಮಟ್ಟ ಹಾಗೂ ಪರಿಮಾಣದಲ್ಲಾದ ವ್ಯತ್ಯಾಸದ ಕುರಿತು ರೈಲ್ವೇ ಮತ್ತು ಕಲ್ಲಿದ್ದಲು ಪೂರೈಕೆದಾರರಿಗೆ ಸಲ್ಲಿಸಿರುವ ಹಕ್ಕು ಕೋರಿಕೆಗಳನ್ನು ಕೆಲಸಕ್ಕೆ ಬಾರದ ಉಳಿಕೆ (CRSP) ಯ ಮಾರಾಟ, ತಿರಸ್ಕೃತವಾದ ಕೋಲ್ ಮಿಲ್ ಮತ್ತು ಕಲ್ಲಿದ್ದಲು ಸರಬರಾಜಿನಲ್ಲಿರುವ ಕಲ್ಲುಗಳು ಮತ್ತು ಪುಡಿಯಾಗದ ಕಲ್ಲುಗಳು ಹಕ್ಕು ಕೋರಿಕೆಗಳನ್ನು ಒಪ್ಪಿಗೆಯ ಸ್ವೀಕೃತಿ ನಂತರ ಲೆಕ್ಕಾಚಾರ ಮಾಡಲಾಗಿದೆ.

Interest on staff advance is reckoned as accrued in accordance with the terms of sanction.

ಸಿಬ್ಬಂದಿಗೆ ನೀಡಿದ ಮುಂಗಡದ ಮೇಲಿನ ಬಡ್ಡಿಯನ್ನು ಮೋಜೂರಾತಿಯ ನಿಯಮಗಳನುಸಾರ ಪ್ರಾಪ್ತತೆಯ ಆಧಾರದ ಮೇಲೆ ಲೆಕ್ಕಿಸಲಾಗುವುದು.

Interest income is recognised on time proportionate method, based on underlying interest rates.

ಅಂತರ್ನಿಹಿತ ಬಡ್ಡಿದರಗಳನ್ನಾಧರಿಸಿ ಬಡ್ಡಿ ಆದಾಯವನ್ನು ಕಾಲಾನುಪಾತ ವಿಧಾನದ ಮುಖಾಂತರ ಗುರುತಿಸಲಾಗುತ್ತದೆ.

Revenue from any source other than those mentioned above is recognised on transfer of risk and rewards of ownership and it is probable that the economic benefits associated with the transactions will flow to the entity. Revenue is measured at the fair value of the consideration received or receivable.

ಮೇಲೆ ಉಲ್ಲೇಖಿಸಿದವುಗಳನ್ನು ಹೊರತುಪಡಿಸಿ ಬೇರೆ ಯಾವುದೇ ಇತರೆ ಮೂಲಗಳಿಂದ ಆದಾಯವನ್ನು ಗಳಿಸಿದ್ದಲ್ಲಿ, ಇದನ್ನು ಮಾಲಿಕತ್ವದ ಹಾನಿ ಹಾಗೂ ಪ್ರತಿಫಲ ವರ್ಗಾವಣೆಯಾದಾಗ ಹಾಗೂ ವ್ಯವಹಾರಕ್ಕೆ ಸಂಬಂಧಿಸಿದ ಆರ್ಥಿಕ ಅನುಕೂಲಗಳು ಸಂಸ್ಥೆಗೆ ಬರುವ ಸಾಧ್ಯತೆಯಿರುವಾಗ ಗುರುತಿಸಲಾಗಿದೆ. ಆದಾಯವನ್ನು ಪಡೆದ ಅಥವಾ ಪಡೆಯಬೇಕಾದ ಪರಿಗಣನೆಯ ನ್ಯಾಯೋಚಿತ ಬೆಲೆಗೆ ಅಳೆಯಲಾಗಿದೆ.

19 Accounting for expenditure/ claims under certain heads / ಕೆಲವು ಮುಂಖಡರ ಅಡಿಯಲ್ಲಿ ಖರ್ಚು / ಹಕ್ಕುಗಳಿಗಾಗಿ ಲೆಕ್ಕಪರಿಶೋಧನೆ

Expenditure on municipal and vehicle taxes, insurance premium, membership and subscription, AMC of office equipment is charged to revenue and reckoned as accrued on payment being in the nature of irretrievably incurred

Claims by the corporation on the contractors for liquidated damages and penalties specifically covered under the respective contracts are accounted on accrual basis subject to mutual contractual obligations.

Claims by the contractors/suppliers on the corporation for liquidated damages, escalation, bonus and revision in rates which are not specifically covered under the respective contracts are reckoned as accrued on admittance.

ಮುನ್ಸಿಪಲ್ ಮತ್ತು ವಾಹನ ತೆರಿಗೆ ವಿಮೆಯ ಕುಂತು, ಸದಸ್ಯತ್ವ ಶುಲ್ಕ ಮತ್ತು ಚಂದಾ ಹಣ ಮತ್ತು ಕಛೇರಿಯ ಸಲಕರಣೆಗಳ ವಾರ್ಷಿಕ ಉಸ್ತುವಾರಿ ಖರ್ಚುಗಳನ್ನು ಹಿಂಪಡೆಯಲಾಗದ ವ್ಯಯಿಸಿದ ವೆಚ್ಚವನ್ನು ಪಾವತಿಮಾಡಿದ ಆಧಾರದ ಮೇರೆಗೆ ಲೆಕ್ಕಾಚಾರ ಮಾಡಲಾಗುವುದು.

ಪ್ರತ್ಯೇಕ ಕಾಮಗಾರಿಗೆ ಸಂಭಂಧಿಸಿದ ಗುತ್ತಿಗೆ ಒಪ್ಪಂದಗಳಲ್ಲಿ ನಮೂದಿಸಿದ ಹಾನಿ ತೀರಿಕೆ ಮತ್ತು ದಂಡಗಳ ಕುರಿತು ಪರಸ್ಪರ ಒಪ್ಪಂದದ ನಿಬಂಧನೆಗೆ ಒಳಪಟ್ಟು ಗುತ್ತಿಗೆದಾರರ ಮೇಲೆ ನಿಗಮವು ಹೊಂದಿರುವ ಹಕ್ಕು ಕೋರಿಕೆಗಳನ್ನು ಪ್ರಾಪ್ತವಾಗುವ ಆಧಾರದ ಮೇರೆಗೆ ಲೆಕ್ಕಾಚಾರ ಮಾಡಲಾಗಿರುವುದು.

ಒಪ್ಪಂದಗಳಲ್ಲಿ ನಿರ್ದಿಷ್ಟವಾಗಿ ಒಳಗೊಂಡಿರದ ಹಾನಿ ತೀರಿಕೆ, ಬೆಲೆ ಏರಿಕೆ, ಬೋನಸ್ ಮತ್ತು ದರಗಳ ಪರಿಷ್ಕರಣೆಗಳ ಕುರಿತಾಗಿ ಗುತ್ತಿಗೆದಾರರು / ಪೂರೈಕೆದಾರರು ನಿಗಮದ ಮೇಲೆ ಹೊಂದಿರುವ ಹಕ್ಕು ಕೋರಿಕೆಗಳನ್ನು ನಿಗಮವು ಒಪ್ಪಿದ ತರುವಾಯ ಲೆಕ್ಕಾಚಾರ ಮಾಡಲಾಗುವುದು.

Note No. 41 / ಟಿಪ್ಪಣಿ ಸಂಖ್ಯೆ 41

II: OTHERS / ಇತರೆ

A. By an order dated 24.09.2015 the Hon'ble Supreme Court of India ordered for cancellation of the captive coal mines allotted to the Corporation and directed the central government to conduct a fresh auction of the coal mines. The central government by its Coal mines (Special Provisions), Ordinance 2014 dated 21.10.2014 stipulated certain condition for any prospective bidder to participate in auction.

ಭಾರತದ ಸರ್ವೋಚ್ಚ ನ್ಯಾಯಾಲಯವು ದಿನಾಂಕ 24.09.2014 ರ ಆದೇಶದ ಮೂಲಕ ನಿಗಮಕ್ಕೆ ಹಂಚಿಕೆಯಾದ ಕ್ಯಾಪ್ಟಿವ್ ಕಲ್ಲಿದ್ದಲಿನ ಗಣಿಗಳನ್ನು ರದ್ದುಗೊಳಿಸಲು ಹಾಗೂ ಕೇಂದ್ರ ಸರ್ಕಾರಕ್ಕೆ ಹೊಸ ಹರಾವುಗಳನ್ನು ನಡೆಸಲು ನಿರ್ದೇಶಿಸಿದೆ. ಕೇಂದ್ರ ಸರ್ಕಾರವು ದಿನಾಂಕ 21.10.2014ರ ತನ್ನ ಕಲ್ಲಿದ್ದಲು ಗಣಿಗಳ (ವಿಶೇಷ ಉಪಬಂಧಗಳು) ಅಧ್ಯಾದೇಶ, 2014 ರ ಮೂಲಕ ಭಾವಿ ಸವಾಲುಗಾರರಿಗೆ, ಸವಾಲಿನಲ್ಲಿ ಭಾಗವಹಿಸಲು ಕೆಲವು ಷರತ್ತುಗಳನ್ನು ವಿಧಿಸಿದೆ.

The Hon'ble Supreme Court of India by its order dated 24.09.2014 has also ordered the prior allottee of the coal mines to pay additional levy of INR 295/MT on excavated coal from mines originally allotted from the date of commencement of mining operations till 24.09.2014. The amount payable for the coal mined by Karnataka EMTA coal mines limited (KECML) till 31.03.2015 aggregating to INR 44,820 lakhs. The Corporation is of the view the liability is fastened on KECML being the prior allottee and hence no provision made.

ಮಾನ್ಯ ಸರ್ವೋಚ್ಚ ನ್ಯಾಯಾಲಯವು ದಿನಾಂಕ 24.09.2014ರ ಆದೇಶದ ಮೂಲಕ ಪೂರ್ವದ ಕಲ್ಲಿದ್ದಲು ಗಣಿಗಳ ಭಾಗಸ್ಥರಿಗೆ ಗಣಿಗಾರಿಕೆ ಪ್ರಾರಂಭವಾದ ದಿನಾಂಕದಿಂದ 24.09.2014ರ ವರೆಗೆ ಗಣಿಗಳಿಂದ ಅಗೆದ ಕಲ್ಲಿದ್ದಲಿನ ಮೇಲೆ ರೂ.295/- ಮೆಟ್ರಿಕ್‌ಟನ್‌ನಂತೆ ಹೆಚ್ಚುವರಿ ಲೆವಿಯನ್ನು ಪಾವತಿಸಲು ಆದೇಶಿಸಿದೆ. ಮೆ॥ಕರ್ನಾಟಕ ಕೋಲ್ ಮೈನ್ಸ್ ಲಿಮಿಟೆಡ್ ದಿನಾಂಕ 31.03.2015 ರವರೆಗೆ ಅಗೆದ ಕಲ್ಲಿದ್ದಿಲಿನ ಒಟ್ಟು ಬಾಕಿ ಮೊತ್ತ ರೂ. 44,820 ಲಕ್ಷಗಳು. ನಿಗಮದ ಅಭಿಪ್ರಾಯದಲ್ಲಿ ಇದು ಪೂರ್ವದ ಹಂಚಿದಾರರಾದ ಮೆ॥ಕೆಇಸಿಎಮ್‌ಎಲ್‌ನ ಜವಾಬ್ದಾರಿಯಾಗಿರುವುದರಿಂದ, ಯಾವುದೇ ಅವಕಾಶವನ್ನು ಕಲ್ಪಿಸಿರುವುದಿಲ್ಲ.

The Hon'ble Supreme court of India had directed reauction and re-allotment of coal blocks as per the stipulations contained in that order and the Corporation participated in the reauction in respect of allotment of same blocks at Baranj I-IV, Manoradeep and Kiloni which were earlier allotted and in order to ensure the participation in the reauction a sum of INR 11,043 lakhs being 26% of the dues was paid by the Corporation. In the process of reauction, the same blocks were allotted to the Corporation and while considering its petition for selection and appointment of mine operator, the Hon'ble Supreme court of India directed the remittance of balance amount of INR 33,777 lakhs and accordingly this sum was also deposited by the Corporation.

ಭಾರತದ ಮಾನ್ಯ ಸರ್ವೋಚ್ಚ ನ್ಯಾಯಾಲಯವು ಆದೇಶದಲ್ಲಿ ವಿಧಿಸಲಾದ ಷರತ್ತುಗಳ ಅನ್ವಯ ಕಲ್ಲಿದ್ದಲು ಗಣಿಗಳ ಮರುಹರಾವು ಮತ್ತು ಮರುಹಂಚಿಕೆಯನ್ನು ನಿರ್ದೇಶಿಸಿರುತ್ತದೆ. ಹಿಂದಿನ ಅವಧಿಯಲ್ಲಿ ಹಂಚಿಕೆಯಾದ ಬಾರಂಜ್I-IV, ಮನೋರ್‌ದೀಪ್ ಮತ್ತು ಕಿಲೋನಿ ಕಲ್ಲಿದ್ದಲು ಗಣಿಗಳ ಹಂಚಿಕೆಗೆ ಸಂಬಂಧಿಸಿದಂತೆ ನಿಗಮವು ಮರುಹರಾವಿನಲ್ಲಿ ಭಾಗವಹಿಸಿರುತ್ತದೆ ಹಾಗೂ ಮರುಹರಾವಿನಲ್ಲಿ ಭಾಗವಹಿಸಲು ರೂ.11,043 ಲಕ್ಷಗಳನ್ನು (ಒಟ್ಟು ಬಾಕಿಯ ಶೇ.26) ಪಾವತಿಸಿರುತ್ತದೆ. ಮರುಹರಾವಿನ ಪ್ರಕ್ರಿಯೆಯಲ್ಲಿ, ನಿಗಮಕ್ಕೆ ಅದೇ ಹಿಂದಿನ ಕಲ್ಲಿದ್ದಲು ಗಣಿಗಳು ಹಂಚಿಕೆಯಾಗಿರುತ್ತವೆ ಹಾಗೂ ಗಣಿ ಆಯೋಜಕರ ಆಯ್ಕೆ ಮತ್ತು ನೇಮಕಾತಿಯ ಅರ್ಜಿಯನ್ನು ಪರಿಗಣಿಸುವಾಗ, ಮಾನ್ಯ ಸರ್ವೋಚ್ಚ ನ್ಯಾಯಾಲಯವು ಬಾಕಿ ಮೊತ್ತವಾದ ರೂ.33,777 ಲಕ್ಷಗಳನ್ನು ಪಾವತಿಸುವಂತೆ ನಿರ್ದೇಶಿಸಿರುತ್ತದೆ. ಇದರಾನುಸಾರವಾಗಿ, ನಿಗಮವು ಈ ಮೊತ್ತವನ್ನು ಠೇವಣಿಯಾಗಿ ನೀಡಿರುತ್ತದೆ.

The Corporation initiated the process of selection and appointment of mine operator which was challenged by KECML and EMTA Coal mines Limited (EMTA) before the Hon'ble High court of Karnataka contending that they have the first right for being appointed as mine operator and the Hon'ble High Court of Karnataka directed the Corporation to consider their right to novation as per the Coal Mines (Special Provisions), Act 2015. The Corporation had taken up the matter further before the Hon'ble Supreme court of India, which directed appointment of an expert committee to arrive at the best price for charge. While considering the expert committee report, before the Hon'ble Supreme court of India, during the year 2016-17, EMTA/KECML has submitted agreeing to the mining charge determined by the expert committee and prayed for allotment of the work. The Hon'ble Supreme court of India had directed the State of Karnataka to file an affidavit and as per the MoC,

GoI directions in the meeting dated 23.05.2017, State of Karnataka had filed an affidavit stating that it is more appropriate to go for 'competitive bidding' for MDO contract and; not novating the contract under Section 11 (1) of the Act, unless otherwise directed by the Hon'ble Court. The matter is pending before the Hon'ble Supreme Court of India.

ನಿಗಮವು ಗಣಿ ಆಯೋಜಕರ ಆಯ್ಕೆ ಮತ್ತು ನೇಮಕಾತಿಯ ಪ್ರಕ್ರಿಯೆಯನ್ನು ಪ್ರಾರಂಭಿಸಿರುತ್ತದೆ. ಮೆ॥ಕೆಇಸಿಎಮ್‌ಎಲ್ ಹಾಗೂ ಮೆ॥ಎಮ್ಟಾಕೋಲ್ ಮೈನ್ಸ್ ಲಿಮಿಟೆಡ್‌ನವರು ಗಣಿ ಆಯೋಜಕರಾಗಿ ನೇಮಿತವಾಗಲು ಅವರು ಮೊದಲ ಹಕ್ಕುದಾರರೆಂಬ ವಾದವನ್ನು ಮಾನ್ಯ ಕರ್ನಾಟಕ ಉಚ್ಚ ನ್ಯಾಯಾಲಯದಲ್ಲಿ ಮಂಡಿಸಿರುತ್ತಾರೆ ಹಾಗೂ ಮಾನ್ಯ ಕರ್ನಾಟಕ ಉಚ್ಚ ನ್ಯಾಯಾಲಯವು ಕಲ್ಲಿದ್ದಲು ಗಣಿ (ವಿಶೇಷ ನಿಬಂಧನೆಗಳು), ಕಾಯ್ದೆ 2015ರ ಅನ್ವಯ ಅವರ ನೋವೇಶನ್ ಹಕ್ಕನ್ನು ಪರಿಗಣಿಸಲು ನಿಗಮಕ್ಕೆ ನಿರ್ದೇಶಿಸಿರುತ್ತದೆ. ನಿಗಮವು ಈ ವಿಷಯನ್ನು ಮಾನ್ಯ ಸರ್ವೋಚ್ಚ ನ್ಯಾಯಾಲಯಕ್ಕೆ ಸಲ್ಲಿಸಿರುತ್ತದೆ ಹಾಗೂ ವಿಧಿಸುವ ಸೂಕ್ತ ಬೆಲೆಯನ್ನು ನಿರ್ಧರಿಸಲು ತಜ್ಞರ ಸಮಿತಿಯನ್ನು ರಚಿಸಬೇಕೆಂಬ ನಿರ್ದೇಶನವನ್ನು ಪಡೆದುಕೊಂಡಿರುತ್ತದೆ. ಮಾನ್ಯ ಸರ್ವೋಚ್ಚ ನ್ಯಾಯಾಲಯದ ಸಮ್ಮುಖದಲ್ಲಿ ತಜ್ಞರ ಸಮಿತಿಯ ವರದಿಯನ್ನು ಪರಿಗಣಿಸುವಾಗ ಮೆ॥ಎಮ್ಟಾ ಕೆಇಸಿಎಂಎಲ್ ಸಂಸ್ಥೆಯು ತಜ್ಞರ ಸಮಿತಿಯು ನಿರ್ಧರಿಸಿದ ಗಣಿಯ ಬೆಲೆಯನ್ನು ಸ್ವೀಕರಿಸಿರುತ್ತದೆ ಹಾಗೂ ಕಾರ್ಯವನ್ನು ಅವರಿಗೆ ನೀಡುವಂತೆ ವಿನಂತಿಸಿಕೊಂಡಿರುತ್ತದೆ. ಭಾರತದ ಸರ್ವೋಚ್ಚ ನ್ಯಾಯಾಲಯವು ಕರ್ನಾಟಕ ರಾಜ್ಯಕ್ಕೆ ಅಫಿಡವಿಟ್ ಸಲ್ಲಿಸುವಂತೆ ನಿರ್ದೇಶಿಸಿದೆ ಹಾಗೂ ಎಂಒಸಿ ಹಾಗೂ ದಿನಾಂಕ 23.05.2017ರ ಸಭೆಯಲ್ಲಿ ಭಾರತ ಸರ್ಕಾರದ ನಿರ್ದೇಶನಗಳ ಅನುಸಾರ ಕರ್ನಾಟಕ ಸರ್ಕಾರವು ಮಾನ್ಯ ನ್ಯಾಯಾಲಯವು ನಿರ್ದೇಶಿಸಿದಾಗ ಹೊರತುಪಡಿಸಿ, ಕಾಯ್ದೆಯ ಕಲಂ 11(1)ರಡಿಯಲ್ಲಿ ಎಂಡಿಒ ಒಪ್ಪಂದವನ್ನು ನವೀಕರಿಸದೆ; 'ಸ್ಪರ್ಧಾತ್ಮಕ ಬಿಡ್ಡಿಂಗ್' ಮಾಡುವುದು ಸೂಕ್ತ ಎಂದು ಅಫಿಡವಿಟ್ ಸಲ್ಲಿಸಿದೆ. ಈ ವಿಷಯದ ಇತ್ಯರ್ಥವು ಭಾರತದ ಮಾನ್ಯ ಸರ್ವೋಚ್ಚ ನ್ಯಾಯಾಲಯದಲ್ಲಿ ಬಾಕಿಯಿರುತ್ತದೆ.

The Corporation is of the view that the entire amount of additional levy paid aggregating to INR 44,820 lakhs is recoverable from KECML as they are the prior allottee. Accordingly this sum is shown as amount recoverable under the head other current assets (Note 15) of the financial statements.

ನಿಗಮದ ಅಭಿಪ್ರಾಯದಲ್ಲಿ ಹೆಚ್ಚುವರಿ ಲೆವಿಯ ಒಟ್ಟು ಮೊತ್ತವಾದ ರೂ.44,820 ಲಕ್ಷಗಳು ಮೆ॥ಕೆಇಸಿಎಮ್‌ಎಲ್‌ನವರು ಪೂರ್ವದ ಹಂಚಿಕೆದಾರರಾದ ಕಾರಣ ಅವರಿಂದ ಬರಬೇಕಾದ ಬಾಕಿಯಾಗಿರುತ್ತದೆ. ಇದರಾನುಸಾರ ಈ ಮೊತ್ತವನ್ನು ಆರ್ಥಿಕ ವಿವರಣಾ ಪಟ್ಟಿಗಳ ಇತರೆ ಚಾಲ್ತಿ ಆಸ್ತಿ (ಟಿಪ್ಪಣಿ 15) ಶೀರ್ಷಿಕೆಯಡಿಯಲ್ಲಿ ಬರಬೇಕಾದ ಬಾಕಿಯೆಂದು ತೋರಿಸಲಾಗಿದೆ.

The Corporation having remitted the additional levy per tonne of coal mined had raised invoices aggregating to INR 44,820 lakhs on ESCOM's during the year 2016-17. Further, the amount of invoices raised was not recognised as income because of the disputed nature of the transaction which was pending before the Hon'ble High Court of Karnataka and had treated as a liability and classified under the head other current liabilities (Note 28) in the financial statements. During the current year, the case has been referred to a third judge and the matter is pending before the third judge of the Hon'ble High Court of Karnataka.

2016–17 ನೇ ಸಾಲಿನಲ್ಲಿ ನಿಗಮವು ಅಗೆದ ಪ್ರತಿ ಟನ್ ಕಲ್ಲಿದ್ದಿಲಿಗೆ ಹೆಚ್ಚುವರಿ ಲೆವಿಯನ್ನು ಪಾವತಿಸಿ, ಎಸ್ಕಾಂಗಳಿಗೆ ರೂ.44,820 ಲಕ್ಷಗಳ ಬಿಲ್ಲನ್ನು ಮಾಡಿರುತ್ತದೆ. ಮಾನ್ಯ ಕರ್ನಾಟಕ ಉಚ್ಚ ನ್ಯಾಯಾಲಯದಲ್ಲಿ ಈ ವ್ಯವಹಾರದ ಇತ್ಯರ್ಥವು ಬಾಕಿ ಇರುತ್ತದೆ ಹಾಗೂ ವಿವಾದಾತ್ಮಕ ಸ್ವರೂಪದ ಕಾರಣದಿಂದಾಗಿ ಬಿಲ್ಲಿನ ಮೊತ್ತವನ್ನು ಆದಾಯವೆಂದು ಗುರುತಿಸದೇ, ಹೊಣೆಗಾರಿಕೆಯೆಂದು ಪರಿಗಣಿಸಿ ಆರ್ಥಿಕ ವಿವರಣಾ ಪಟ್ಟಿಗಳಲ್ಲಿ ಇತರೆ ಚಾಲ್ತಿ ಆಸ್ತಿಗಳು (ಟಿಪ್ಪಣಿ 28) ಶೀರ್ಷಿಕೆಯಡಿಯಲ್ಲಿ ವರ್ಗೀಕರಿಸಲಾಗಿರುತ್ತದೆ. ಪ್ರಸ್ತುತ ಸಾಲಿನಲ್ಲಿ, ಪ್ರಕರಣವನ್ನು ಮೂರನೇ ನ್ಯಾಯಾಧೀಶರಿಗೆ ಶಿಫಾರಸ್ಸು ಮಾಡಲಾಗಿದೆ ಹಾಗೂ ವಿಷಯದ ಇತ್ಯರ್ಥವು ಮೂರನೇ ನ್ಯಾಯಾಧೀಶರಿಂದ ಕರ್ನಾಟಕದ ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ಬಾಕಿಯಿರುತ್ತದೆ.

KPCL had withheld an amount of INR 16,000 Lakhs payable to KECML on account of cost of rejects cleared by KECML belonging to KPCL and for supply of low quality coal. The Directorate of Enforcement Bengaluru Zonal Office ("ED") drawing an attention to the investigation under the provisions of Prevention of Money Laundering Act, 2002 advised not to release the amount to the extent of INR 4,900 Lakhs out of INR 16,000 Lakhs payable to KECML. KPCL, to comply with the directions created an interest bearing fixed deposit dated: 12.04.2018 with State Bank of India amounting to INR. 4,900 Lakhs and to not encash the same until the instructions of ED. A provisional attachment order was issued by ED for the above fixed deposit under the provisions of Prevention of Money-Laundering Act, 2002.

ಕವಿನಿನಿಗೆ ಸಂಬಂಧಿತ ತಿರಸ್ಕೃತಗಳ ವೆಚ್ಚ ಹಾಗೂ ಕೆಳದರ್ಜೆಯ ಕಲ್ಲಿದ್ದಲಿನ ಪೂರೈಕೆಗೆ ಸಂಬಂಧಿಸಿದಂತೆ ಕವಿನಿನಿಯು ಮೆ॥ಕೆಇಸಿಎಮ್‌ಎಲ್‌ಗೆ ಪಾವತಿಸಬೇಕಾದ ರೂ.16,000 ಲಕ್ಷಗಳನ್ನು ತಡೆಹಿಡಿದಿರುತ್ತದೆ. ಬೆಂಗಳೂರು ವಲಯ ಕಛೇರಿಯ ಡೈರೆಕ್ಟೋರೇಟ್ ಆಫ್ ಎನ್‌ಫೋರ್ಸ್‌ಮೆಂಟ್ ("ಇಡಿ") ಇವರು ಪ್ರಿವೆಂಶನ್ ಆಫ್ ಮನಿ ಲಾಂಡರಿಂಗ್ ಕಾಯ್ದೆ, 2002ರ ನಿಬಂಧನೆಗಳ ಅನುಸಾರದ ತನಿಖೆಯಡಿಯಲ್ಲಿ ಮೆ॥ಕೆಇಸಿಎಮ್‌ಎಲ್‌ಗೆ

ಪಾವತಿಸಬೇಕಾದ ಒಟ್ಟು ರೂ.16,000 ಲಕ್ಷಗಳಲ್ಲಿ ರೂ.4,900 ಲಕ್ಷಗಳನ್ನು ಬಿಡುಗಡೆಗೊಳಿಸದಂತೆ ಸಲಹೆ ನೀಡಿದೆ. ನಿರ್ದೇಶನಗಳನ್ನು ಪಾಲಿಸಲು, ಕವಿನಿನಿಯು ದಿನಾಂಕ 12.04.2018ರಂದು ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾದಲ್ಲಿ ರೂ.4,900 ಲಕ್ಷಗಳ ಬಡ್ಡಿ ತರುವ ಠೇವಣಿಯನ್ನು ಮಾಡಿದೆ ಹಾಗೂ ಇಡಿಯವರ ಮುಂದಿನ ಸೂಚನೆಯವರೆಗೂ ಇದನ್ನು ನಗದೀಕರಿಸಲಾಗುವುದಿಲ್ಲ. ಪ್ರಿವೆಂಶನ್ ಆಫ್ ಮನಿ ಲಾಂಡರಿಂಗ್ ಕಾಯ್ದೆ, 2002ರ ನಿಬಂಧನೆಗಳ ಅಡಿಯಲ್ಲಿ ಇಡಿಯವರು ಮೇಲಿನ ಠೇವಣಿಗೆ ತಾತ್ಕಾಲಿಕ ಲಗತ್ತಿಸುವಿಕೆಯ ಆದೇಶವನ್ನು ಹೊರಡಿಸಿದ್ದಾರೆ.

KPCL has filed a Writ Petition 31286/2018 against Enforcement Directorate in the Hon'ble High Court of Karnataka praying to quash the Letter dated 10/04/2018 bearing ECIR No. BGZO/19/2015 issued by ED and also to quash the Provisional Attachment Order No. 03/2018 in ECIR No. BGZO/19/2015 made by ED.

ಇಡಿಯವರು ನೀಡಿದ ಇಸಿಐಆರ್ ಸಂಖ್ಯೆ ಬಿಜಿಜೆಡ್ಒ/19/2015 ದಿನಾಂಕ 10.04.2018ರ ಪತ್ರ ಹಾಗೂ ಇಸಿಐಆರ್ ಸಂಖ್ಯೆ ಬಿಜಿಜೆಡ್ಒ/19/2015 ನಲ್ಲಿನ ತಾತ್ಕಾಲಿಕ ಲಗತ್ತಿಸುವಿಕೆ ಆದೇಶ ಸಂಖ್ಯೆ 03/2018 ಅನ್ನು ರದ್ದುಗೊಳಿಸುವಂತೆ ವಿನಂತಿಸಿಕೊಂಡು ಕವಿನಿನಿಯು ಎನ್‌ಫೋರ್ಸ್‌ಮೆಂಟ್ ಡೈರೆಕ್ಟೋರೇಟ್ ವಿರುದ್ಧ ಕರ್ನಾಟಕದ ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ಸಂಖ್ಯೆ 31286/2018 ರಿಟ್ ಅರ್ಜಿಯನ್ನು ಸಲ್ಲಿಸಿದೆ.

B. Claims on the Corporation towards new coal mine / ಹೊಸ ಕಲ್ಲಿದ್ದಲುಗಣಿಗೆ ಸಂಬಂಧಿಸಿದಂತೆ ನಿಗಮದ ಮೇಲಿನ ಕ್ಲೇಮುಗಳು;

Pursuant to the applications filed by the Corporation with the various Central/ State Government and statutory authorities for transfer of approvals/ licenses/ clearances in favour of the Corporation, the Corporation has received various claims/ demands/ deposits to be made which in the view of the Corporation is to be adjusted against the compensation payable to KECML by the Ministry of Coal, Government of India. The total claim received by the Corporation is INR 11,823 lakhs (PY INR 11,823 lakhs).

ನಿಗಮದ ಪರವಾಗಿ ಸಮ್ಮತಿಗಳ ವರ್ಗಾವಣೆ / ಪರವಾನಿಗೆಗಳು / ತೀರುವಳಿಗಾಗಿ ಹಲವಾರು ಕೇಂದ್ರ / ರಾಜ್ಯ ಸರ್ಕಾರ ಮತ್ತು ಶಾಸನ ಬದ್ಧ ಪ್ರಾಧಿಕಾರಗಳಿಗೆ ಅಗತ್ಯ ಅರ್ಜಿಗಳನ್ನು ಸಲ್ಲಿಸಿದ ತರುವಾಯ, ನಿಗಮಕ್ಕೆ ಹಲವಾರು ಹಕ್ಕುಗಳು / ಬೇಡಿಕೆಗಳು / ಠೇವಣಿಗಳು ಮಾಡುವಂತೆ ಬೇಡಿಕೆಗಳು ಬಂದಿದ್ದು, ಇವುಗಳನ್ನು ಭಾರತ ಸರ್ಕಾರದ ಕಲ್ಲಿದ್ದಲು ಸಚಿವಾಲಯವು ಕೆಇಸಿಎಂಎಲ್‌ಗೆ ನೀಡಬೇಕಾದ ಪರಿಹಾರ ಮೊತ್ತದಲ್ಲಿ ಹೊಂದಾಣಿಕೆ ಮಾಡಬೇಕಾಗುವುದು. ನಿಗಮವು ಪಡೆದ ಒಟ್ಟು ಕ್ಲೇಮಿನ ಮೊತ್ತ ರೂ.11,823 ಲಕ್ಷಗಳು (ಹಿಂದಿನ ವರ್ಷ:11,823 ಲಕ್ಷಗಳು).

C. Contingent Liabilities / ಅನಿಶ್ಚಿತ ಹೊಣೆಗಾರಿಕೆ;

(INR in Lakhs, ರೂ ಲಕ್ಷಗಳಲ್ಲಿ)

Contingent liabilities and commitments (to the extent not provided for)	As at 31 March 2018	As at 31 March 2017
ಅನಿಶ್ಚಿತ ಹೊಣೆಗಾರಿಕೆ ಮತ್ತು ಬದ್ಧತೆಗಳು (ಲೆಕ್ಕ ಪುಸ್ತಕದಲ್ಲಿ ಒದಗಿಸಿಲ್ಲದೇ ಇರುವುದು)	31 ಮಾರ್ಚ್ 2018ಕ್ಕೆ	31 ಮಾರ್ಚ್ 2017ಕ್ಕೆ
i) Contingent Liabilities / ಅನಿಶ್ಚಿತ ಹೊಣೆಗಾರಿಕೆಗಳು		
Claims against the Corporation not acknowledged as debt / ನಿಗಮದ ವಿರುದ್ಧ ಇರುವ ಒಪ್ಪಿಕೊಳ್ಳದ ಕ್ಲೇಮ್‌ಗಳು		
a) Claims disputed by the Corporation / ಕಂಪನಿಯ ವತಿಯಿಂದ ವಿವಾದದಲ್ಲಿರುವ ಕ್ಲೇಮುಗಳು	37 612.71	39 719.00
b) Income tax matters / ಆದಾಯ ತೆರಿಗೆಯ ವಿಷಯಗಳು	29 373.01	28 645.00
c) Indirect tax matters / ಪರೋಕ್ಷ ತೆರಿಗೆಯ ವಿಷಯಗಳು	13 254.29	12 809.00
Sub total / ಉಪಮೊತ್ತ	**80 240.01**	**81 173.00**
ii) Commitments / ಬದ್ಧತೆಗಳು		
a) Estimated amount of Contracts remaining to be executed on Capital account and not provided for / ಅಂದಾಜು ಬಂಡವಾಳ ಖಾತೆಯಡಿ ಕಾರ್ಯಗತಗೊಳಿಸಲು ಲೆಕ್ಕ ಪುಸ್ತಕದಲ್ಲಿ ಒದಗಿಸದೇ ಉಳಿದಿರುವ ಒಪ್ಪಂದಗಳು	15 411.59	1 37 480.00
Sub total / ಉಪಮೊತ್ತ	**15 411.59**	**1 37 480.00**
Total / ಒಟ್ಟು ಮೊತ್ತ	**95 651.60**	**2 18 653.00**

1 Contingent liabilities (claims against the Corporation not acknowledged) as on 31.03.2018 is INR 80,240.01 Lakhs (PY: INR 81,173.00 Lakhs) relates to claims of agencies, land acquisition claims, stamp duty, bank guarantee related liabilities, commercial tax liability and others.

ದಿನಾಂಕ 31.03.2018 ಕ್ಕೆ ಅನಿಶ್ಚಿತ ಹೊಣೆಗಾರಿಕೆಗಳು (ನಿಗಮದ ವಿರುದ್ಧ ಇರುವ ಒಪ್ಪಿಕೊಳ್ಳದ ಕ್ಲೇಮ್‌ಗಳು) ರೂ.80,941.33 ಲಕ್ಷಗಳು (ಹಿಂದಿನ ವರ್ಷ ರೂ. 81,173.00 ಲಕ್ಷಗಳು). ಇದು ಏಜೆನ್ಸಿಗಳ ಕ್ಲೇಮ್, ಭೂಮಿ ಸ್ವಾಧೀನತೆಯ ಕ್ಲೇಮ್, ಸ್ಟಾಂಪು ಶುಲ್ಕಗಳು, ಬ್ಯಾಂಕಿನ ಜಾಮೀನಿಗೆ ಸಂಬಂಧಿಸಿದ ಹೊಣೆಗಾರಿಕೆ, ವಾಣಿಜ್ಯ ತೆರಿಗೆ ಹೊಣೆಗಾರಿಕೆ ಮತ್ತು ಇತರೆ ಒಳಗೊಂಡಿದೆ.

Includes / ಈ ಕೆಳಕಂಡ ಪ್ರಕರಣಗಳು ಒಳಗೊಂಡಿವೆ:

a) An amount of INR 456.00 Lakhs (PY: INR 456.00 lakhs) payable under court decree in the Mulky Dam Claims case is not provided pending appeal against order of JFMC-Sagar in higher court of law.

ಮಾಣಿ ಅಣೆಕಟ್ಟು ಹಕ್ಕು ಪ್ರಕರಣದಲ್ಲಿ ನ್ಯಾಯಾಲಯದ ತೀರ್ಪುರೀತ್ಯಾ ಕೊಡಬೇಕಾದ ಮೊಬಲಗು ರೂ.456.00 ಲಕ್ಷಗಳಿದ್ದು (ಹಿಂದಿನ ವರ್ಷ ರೂ.456.00 ಲಕ್ಷಗಳು), ಇದು ಜೆ.ಎಮ್.ಎಫ್.ಸಿ. ಸಾಗರ್ ನ್ಯಾಯಾಲಯದಲ್ಲಿ ಕೊಟ್ಟ ತೀರ್ಪಿನ ವಿರುದ್ಧ ಇರುವುದರಿಂದ ಪ್ರಕರಣವನ್ನು ಮುಂದಿನ ಉಚ್ಚನ್ಯಾಯಾಲಕ್ಕೆ ಮನವಿ ಸಲ್ಲಿಸಲಾಗಿದೆ.

b) Inclusion of 'Stowing Excise Duty' component for imposition of Central Excise Duty towards coal supply made to the Corporation and claim by collieries are disputed by the Corporation and hence no provision is considered necessary.

ಕಲ್ಲಿದ್ದಲು ಸರಬರಾಜು ಮೇಲಿನ ಕೇಂದ್ರ ಅಬಕಾರಿ ಸುಂಕದಲ್ಲಿ ಸೇರಿರುವ ಸ್ಟೋಯಿಂಗ್ ಅಬಕಾರಿ ಸುಂಕದ ಕೊಲ್ಲೈರಿಗಳ ಬೇಡಿಕೆ ಹಾಗೂ ಕೊಲ್ಲೈರಿಗಳ ಹಕ್ಕೊತ್ತಾಯವು ವಿವಾದದಲ್ಲಿರುವುದರಿಂದ ಯಾವುದೇ ಅವಕಾಶವನ್ನು ಕಲ್ಪಿಸಿರುವುದಿಲ್ಲ.

c) Differential customs duty on imported coal demanded by the Commissioner of Customs & Central Excise, Ennore Sea Port, Chennai amounting to INR 1,267 lakhs (PY: INR 1,267 lakhs). The demand has been contested by the Corporation, pending settlement no provision is considered necessary.

ಕಸ್ಟಮ್ಸ್ ಮತ್ತು ಸೆಂಟ್ರಲ್ ಎಕ್ಸೈಸ್ ಆಯುಕ್ತರು, ಎನ್ನೊರೆ ಬಂದರು, ಚೆನ್ನೈ ಬೇಡಿಕೆಯಿಟ್ಟಿರುವ ಆಮದು ಕಲ್ಲಿದ್ದಲಿನ ಮೇಲಿನ ವ್ಯತ್ಯಾಸಾತ್ಮಕ ಅಬಕಾರಿ ಸುಂಕವಾದ ರೂ.1,267 ಲಕ್ಷಗಳನ್ನು (ಹಿಂದಿನ ವರ್ಷ ರೂ.1,267 ಲಕ್ಷಗಳು) ನಿಗಮವು ವಿರೋಧಿಸಿರುವುದರಿಂದ ಅವಕಾಶವನ್ನು ಕಲ್ಪಿಸಿರುವುದಿಲ್ಲ.

d) Differential customs duty on imported coal demanded by the Commissioner of Customs & Central Excise, Guntur amounting to INR 11,216 lakhs (PY: INR 11,216 lakhs). The demand has been contested by the Corporation, pending settlement no provision is considered necessary.

ಕಸ್ಟಮ್ಸ್ ಮತ್ತು ಸೆಂಟ್ರಲ್ ಎಕ್ಸೈಸ್ ಆಯುಕ್ತರು, ಗುಂಟೂರು ಬೇಡಿಕೆಯಿಟ್ಟಿರುವ ಆಮದು ಕಲ್ಲಿದ್ದಲಿನ ಮೇಲಿನ ವ್ಯತ್ಯಾಸಾತ್ಮಕ ಅಬಕಾರಿ ಸುಂಕವಾದ ರೂ.11,216 ಲಕ್ಷಗಳನ್ನು (ಹಿಂದಿನ ವರ್ಷ ರೂ.11,216 ಲಕ್ಷಗಳು) ನಿಗಮವು ವಿರೋಧಿಸಿರುವುದರಿಂದ ಅವಕಾಶವನ್ನು ಕಲ್ಪಿಸಿರುವುದಿಲ್ಲ.

e) Demand amounting to INR 126.73 lakhs (PY: INR 141.74 lakhs) payable to Superintendent of Police, Department of Police, Govt. of Karnataka, Mandya, towards leave contribution and short payment of lent establishment charges pertaining to October 1998 to March 2017 at Shivasamudram Project is under reconciliation and hence no provision is considered as necessary.

ಪೋಲಿಸ್ ಸೂಪರಿಂಟೆಂಡೆಂಟ್, ಪೋಲಿಸ್ ಇಲಾಖೆ, ಕರ್ನಾಟಕ ಸರ್ಕಾರ, ಮಂಡ್ಯ ಇವರ ರಜೆ ಸಂಬಳ ಮತ್ತು ಅಕ್ಟೋಬರ್ 1998 ರಿಂದ ಮಾರ್ಚ 2017ರ ವರೆಗಿನ ಎರವಲು ಸೇವೆಯ ರೂ.126.73 ಲಕ್ಷಗಳು (ಹಿಂದಿನ ವರ್ಷ ರೂ.141.74 ಲಕ್ಷಗಳು) ಶಿವನಸಮುದ್ರ ಯೋಜನೆಗೆ ಸಂಬಂಧಿಸಿದಂತೆ ಬೇಡಿಕೆಯು ಪರಿಶೀಲನೆಯಲ್ಲಿರುವುದರಿಂದ ಲೆಕ್ಕದಲ್ಲಿ ಪರಿಗಣಿಸಿಲ್ಲ.

f) Applicability of service tax and tax liability for the services rendered by Police Department to various hydel projects of KPCL on reimbursement basis (lent establishment services) earlier to introduction of Negative List of services i.e., till 1.07.2012 has been reviewed by Service Tax authorities and tax has been demanded to an extent of INR 63.13 lakhs in certain Projects.

ಜಲ ವಿದ್ಯುತ್ ಯೋಜನಾ ಪ್ರದೇಶಗಳಿಗೆ ಸಂಬಂಧಪಟ್ಟಂತೆ ಮರುಪಾವತಿ ಆಧಾರದ ಮೇಲೆ ಪೋಲಿಸ್ ಇಲಾಖೆಯು ಸಲ್ಲಿಸಿದ ಸೇವೆಯ ಮೇಲಿನ ಸೇವಾ ತೆರಿಗೆ ಮತ್ತು ತೆರಿಗೆ ಹೊಣೆಯನ್ನು, ಸೇವೆಗಳ ಋಣಾತ್ಮಕ ಪಟ್ಟಿ ಮಂಡಿಸಿದ ಪೂರ್ವದ (ದಿನಾಂಕ 1.07.2012ರ ವರೆಗೆ) ಅವಧಿಗೆ ಸೇರಿದ್ದು, ಸೇವಾ ತೆರಿಗೆ ಅಧಿಕಾರಿಗಳ ಪರಿಶೀಲಿಸಿ ಕೆಲವು ಯೋಜನೆಗಳಿಗೆ ರೂ.63.13 ಲಕ್ಷಗಳ ಬೇಡಿಕೆಯನ್ನು ಇರಿಸಿದ್ದಾರೆ.

g) Income-Tax Liabilities: Total Contingent liability on account of disputed income tax before various appellate authorities amounts to INR 29,373.01 lakhs. (PY: INR 28,645 lakhs)

ಆದಾಯ ತೆರಿಗೆ ಹೊಣೆಗಾರಿಕೆ: ವಿವಿಧ ನ್ಯಾಯಾಧೀಕರಣಗಳ ಮುಂದಿರುವ ವಿವಾದಿತ ಆದಾಯ ತೆರಿಗೆಗಳ ಸಾದಿಲ್ವಾರು ಹೊಣೆಗಾರಿಕೆಯ ಒಟ್ಟು ಮೊತ್ತ ರೂ.29,373.01 ಲಕ್ಷಗಳು (ಹಿಂದಿನ ವರ್ಷ ರೂ.28,645 ಲಕ್ಷಗಳು).

h) Contingent Liability towards claim on acquisition mines: Pursuant to the applications filed with the various Central/ State Government and statutory authorities for transfer of approvals/ licenses/ clearances in favour of the Corporation, the Corporation has received various claims/ demands/ deposits to be made which is pending for certain clarifications. Claim is received towards payment of non-agricultural tax of rehabilitation land and non-agricultural tax for village at Baranj, Chichirali and Kesurli for the period 2015-16 amounting to INR 82 lakhs and the same has not been paid since the mutation of the said lands in the name of the Corporation is pending.

ಗಣಿ ಸ್ವಾಧೀನತೆಯ ಅನಿಶ್ಚಿತ ಹೊಣೆಗಾರಿಕೆ: ವಿವಿಧ ಸರ್ಕಾರಿ ಮತ್ತು ಶಾಸನಬದ್ಧ ಅಧಿಕಾರಿಗಳಿಗೆ ನಿಗಮವು ಅದರ ಪರವಾಗಿ ಲೈಸನ್ಸ್ / ಪರವಾನಗಿಯ ವರ್ಗಾವಣೆಗೆ ಸಂಬಂಧಿಸಿದಂತೆ ಸಲ್ಲಿಸಿದ ಅರ್ಜಿಯ ಅನುಸಾರವಾಗಿ, ನಿಗಮವು ವಿವಿಧ ಹಕ್ಕುಬೇಡಿಕೆ / ಬೇಡಿಕೆ / ಠೇವಣಿಗಳನ್ನು ಮಾಡಬೇಕಾಗಿದೆ ಹಾಗೂ ಇದರ ಸ್ಪಷ್ಟೀಕರಣ ಬಾಕಿಯಿರುವುದು. ಕೃಷಿ ಅಲ್ಲದ ಭೂಮಿಯ ಪುನರ್‌ಸ್ಥಾಪನೆಯ ತೆರಿಗೆ ಹಾಗೂ ಬಾರಾಂಜ್, ಚಿಚಿರಲಿ ಹಾಗೂ ಕೆಸುರ್ಲಿ ಗ್ರಾಮಗಳಿಗೆ 2015-16ನೇ ಸಾಲಿಗೆ ಕೃಷಿ ಅಲ್ಲದ ತೆರಿಗೆ ಪಾವತಿಸುವಂತೆ ಪ್ರಸ್ತುತ ವರ್ಷದಲ್ಲಿ ರೂ.82 ಲಕ್ಷಗಳ ಹಕ್ಕುಬೇಡಿಕೆಯ ಪಾವತಿಯು ಮೇಲೆ ಉಲ್ಲೇಖಿತ ಭೂಮಿಗಳ ನಿಗಮದ ಹೆಸರಿನಲ್ಲಿ ಪರಿವರ್ತನೆ ಆಗದೇ ಇರುವುದರಿಂದ ಬಾಕಿಯಿರುತ್ತದೆ.

i) An amount of INR 227.80 Lakhs (PY: INR 246 lakhs) for claim made by forest authorities towards interest for delayed payment of lease rentals for the period from 09.08.2004 to 08.05.2016 at Kappadagudda Wind Mill Farm Project

09.08.2004 ರಿಂದ 08.05.2016 ರ ಅವಧಿಯವರೆಗಿನ ಕಪ್ಪತಗುಡ್ಡ ಪವನ ಶಕ್ತಿ ವಿದ್ಯುತ್ ಯೋಜನೆಯ ತಡವಾಗಿ ಪಾವತಿಸಿದ ಗುತ್ತಿಗೆ ಬಾಡಿಗೆಗೆ ಸಂಬಂಧಿಸಿದಂತೆ ಅರಣ್ಯ ಇಲಾಖೆಯವರು ರೂ.227.80 ಲಕ್ಷಗಳ (ಹಿಂದಿನ ವರ್ಷ ರೂ.246 ಲಕ್ಷಗಳು) ಹಕ್ಕುಬೇಡಿಕೆಯನ್ನು ಮಂಡಿಸಿರುತ್ತಾರೆ.

j) Includes the claim received from collieries prior to the date of notification issued by Government of India towards District Mineral Fund amounting to INR 7,087.54 Lakhs (PY: INR 8,196.23 lakhs)

ಭಾರತ ಸರ್ಕಾರವು ಹೊರಡಿಸಿದ ಅಧಿಸೂಚನೆಯ ದಿನಾಂಕದ ಹಿಂದಿನ ಅವಧಿಯ ಡಿಸ್ಟ್ರಿಕ್ಟ್ ಮಿನರಲ್ ಫಂಡ್‌ಗೆ ಸಂಬಂಧಪಟ್ಟ ರೂ.7,087.54 ಲಕ್ಷಗಳ (ಹಿಂದಿನ ವರ್ಷ ರೂ.8,196.23 ಲಕ್ಷಗಳು) ಕೊಲ್ಯೆರಿಗಳ ಹಕ್ಕು ಬೇಡಿಕೆಯನ್ನು ಒಳಗೊಂಡಿರುತ್ತದೆ.

k) An amount of INR 6,000 lakhs of claim made by KECML towards washery charges at INR 90/MT and the same has not been provided for since the Corporation has filed the petition in the Hon'ble Supreme Court of India against the above adjudication.

Special Leave Petition No. 26367-26369/2016 was filed by KPCL before the Hon'ble Supreme Court of India against the Hon'ble High Court of Karnataka Order dated 24.03.2016 allowing the Writ Petition 2995-96/2016 & Writ Petition No. 2997-2998/2016 filed by KECML/EMTA challenging the KPCL's actions in seeking to realize a sum of Rs.5,237 Lakhs towards cost of rejects on the basis of a Report issued by the C&AG and Recovery of Washing charges from the bills of KECML amounting to Rs.5,978 Lakhs. The Hon'ble Supreme Court has granted Leave in the matter and the SLP number is Converted to Civil Appeal No. 5401-5404 / 2017. Final Outcome is awaited.

ತೊಳೆಯುವ ವೆಚ್ಚಕ್ಕೆ ಸಂಬಂಧಿಸಿದಂತೆ ರೂ.90 ಪ್ರತಿ ಎಂಟಿ ಯಂತೆ ಕೆಇಸಿಎಂಎಲ್‌ನವರು ರೂ.6,000 ಲಕ್ಷಗಳ ಹಕ್ಕು ಬೇಡಿಕೆಯನ್ನು ಮಂಡಿಸಿರುತ್ತಾರೆ ಹಾಗೂ ನಿಗಮವು ಇದಕ್ಕೆ ಸಂಬಂಧಿಸಿದಂತೆ ಮಾನ್ಯ ಸರ್ವೋಚ್ಚ ನ್ಯಾಯಾಲಯದಲ್ಲಿ ಅರ್ಜಿಯನ್ನು ಸಲ್ಲಿಸಿರುವುದರಿಂದ ಇದನ್ನು ಪರಿಗಣಿಸಲಾಗಿರುವುದಿಲ್ಲ.

ಭಾರತದ ನಿಯಂತ್ರಕ ಮತ್ತು ಮಹಾಲೆಕ್ಕಪರಿಶೋಧಕರ ವರದಿಯ ಆಧಾರದ ಮೇಲೆ ಕಲ್ಲಿದ್ದಲು ತಿರಸ್ಕೃತಗಳ ವೆಚ್ಚಕ್ಕೆ ಸಂಬಂಧಿಸಿದಂತೆ ರೂ.5,237 ಲಕ್ಷಗಳ ಮೊತ್ತವನ್ನು ಪಡೆಯಲು ಕವಿನಿನಿಯು ತೆಗೆದುಕೊಂಡ ಕ್ರಮಗಳನ್ನು ಹಾಗೂ ರೂ.5,978 ಲಕ್ಷಗಳ ತೊಳೆಯುವ ವೆಚ್ಚವನ್ನು ಮೆ॥ಕೆಇಸಿಎಂಎಲ್‌ನ ಬಿಲ್ಲುಗಳಿಂದ ವಸೂಲಿ ಮಾಡುವಿಕೆಯನ್ನು ಆಕ್ಷೇಪಿಸಿ ಮೆ॥ಕೆಇಸಿಎಂಎಲ್/ಎಮ್ಟಾ ಸಲ್ಲಿಸಿದ ಸಂಖ್ಯೆ 2995-96/2016 ಹಾಗೂ 2997-2998/2016 ರ ರಿಟ್ ಅರ್ಜಿಗಳನ್ನು ಅನುಮತಿಸಿ ಕರ್ನಾಟಕದ ಗೌರವಾನ್ವಿತ ಉಚ್ಚ ನ್ಯಾಯಾಲಯದ ದಿನಾಂಕ 24.03.2016ರ ಆದೇಶವನ್ನು ವಿರೋಧಿಸಿ ನಿಗಮವು ಮಾನ್ಯ ಸರ್ವೋಚ್ಚ ನ್ಯಾಯಾಲಯಕ್ಕೆ ಸಂಖ್ಯೆ 26367-26369/2016 ಸ್ಪೆಷಲ್ ಲೀವ್ ಅರ್ಜಿಯನ್ನು ಸಲ್ಲಿಸಿದೆ. ಮಾನ್ಯ ಸರ್ವೋಚ್ಚ ನ್ಯಾಯಾಲಯವು ಈ ವಿಷಯದಲ್ಲಿ ಸ್ಪೆಷಲ್ ಲೀವ್ ಅನ್ನು ನೀಡಿರುತ್ತದೆ ಹಾಗೂ ಎಸ್‌ಎಲ್‌ಪಿ ಸಂಖ್ಯೆಯನ್ನು ಸಿವಿಲ್ ಅಪೀಲ್ ಸಂಖ್ಯೆ 5401-5404/2017ಕ್ಕೆ ಪರಿವರ್ತಿಸಲಾಗಿದೆ. ಅಂತಿಮ ಫಲಿತಾಂಶವು ನಿರೀಕ್ಷಣೆಯಲ್ಲಿರುತ್ತದೆ.

l) An amount of INR 186.35 lakhs (PY: INR 186.35 Lakhs) for claim made by Pattana Panchayath Kargal for the claim of municipal taxes on kargal colony & offices for the period from 2005 to 2017.

2005ರಿಂದ 2017ರವರೆಗಿನ ಅವಧಿಯ ಕಾರ್ಗಲ್ ಕಾಲೋನಿ ಹಾಗೂ ಕಛೇರಿಯ ಪುರಸಭೆಯ ತೆರಿಗೆಗೆ ಸಂಬಂಧಿಸಿದಂತೆ ಪಟ್ಟಣ ಪಂಚಾಯಿತಿ, ಕಾರ್ಗಲ್‌ರವರ ರೂ.186.35 ಲಕ್ಷಗಳ (ಹಿಂದಿನ ವರ್ಷ ರೂ.186.35 ಲಕ್ಷಗಳು) ಹಕ್ಕೊತ್ತಾಯವನ್ನು ಒಳಗೊಂಡಿರುತ್ತದೆ.

m) An amount of INR 51.55 lakhs (PY: INR 51.55 Lakhs) towards pending sales tax assessment and difference in tax liability as demanded by Department of Commercial Taxes, Bangalore for the financial year 2001-02 to 2005-06.

ವಾಣಿಜ್ಯ ತೆರಿಗೆಗಳ ಇಲಾಖೆ, ಬೆಂಗಳೂರು ಇವರು 2001-02 ರಿಂದ 2005-06ರವರೆಗಿನ ಆರ್ಥಿಕ ವರ್ಷಕ್ಕೆ ಸಂಬಂಧಿಸಿದ ರೂ.51.55 (ಹಿಂದಿನ ವರ್ಷ ರೂ.51.55 ಲಕ್ಷಗಳು) ಲಕ್ಷಗಳ ತೆರಿಗೆ ಹೊಣೆಗಾರಿಕೆಯ ವ್ಯತ್ಯಾಸದ ಬೇಡಿಕೆಯನ್ನು ಮಂಡಿಸಿರುತ್ತಾರೆ. ಈ ವ್ಯತ್ಯಾಸದ ಮಾರಾಟ ತೆರಿಗೆ ನಿರ್ಣಯವು ಬಾಕಿಯಿರುತ್ತದೆ.

n) An amount of INR 85.86 Lakhs (PY: INR 200 lakhs) claim towards water cess for onsumption of water for BTPS units 01 & 02 issued by Karnataka State Pollution Board.

ಬಳ್ಳಾರಿ ಶಾಖೋತ್ಪನ್ನ ಘಟಕ 1 ಮತ್ತು 2ರಲ್ಲಿ ಬಳಸಲಾದ ನೀರಿನ ಸೆಸ್‌ಗೆ ಸಂಬಂಧಿಸಿದಂತೆ ಕರ್ನಾಟಕ ರಾಜ್ಯ ಮಾಲಿನ್ಯ ಮಂಡಳಿಯ ರೂ.85.86 ಲಕ್ಷಗಳ (ಹಿಂದಿನ ವರ್ಷ ರೂ.200 ಲಕ್ಷಗಳು) ಹಕ್ಕೊತ್ತಾಯವನ್ನು ಒಳಗೊಂಡಿರುತ್ತದೆ.

o) The Corporation has approached the Chief Electrical Inspectorate towards the applicability of 6% ad valorem electricity tax on colony consumption at RTPS, that the power is supplied directly from plant to the colony without any billing for consumption. The Corporation has requested for waiver of electricity tax and the department informed that the same would be conveyed to the Government of Karnataka for waiver of electricity tax on ad valorem basis.

ನಿಗಮವು ಆರ್‌ಟಿಪಿಎಸ್ ಕಾಲೋನಿ ಬಳಕೆಯ ಮೇಲೆ ಶೇಕಡಾ 6 ರಂತೆ ಅಡ್‌ವಲೋರೆಮ್ ವಿದ್ಯುಚ್ಛಕ್ತಿಯ ತೆರಿಗೆಯ ಅನ್ವಯವಾಗುವಿಕೆಯ ಕುರಿತು, ಸ್ಥಾವರಗಳಿಂದ ಕಾಲೋನಿಗಳಿಗೆ ವಿದ್ಯುತ್ತನ್ನು ನೇರವಾಗಿ ಯಾವುದೇ ಮಾರಾಟ ಬೆಲೆಯನ್ನು (ಬಿಲ್ಲಿಂಗ್) ವಿಧಿಸಿದೆ ಸರಬರಾಜು ಮಾಡಲಾಗುತ್ತಿದೆಯೆಂದು ಮುಖ್ಯ ವಿದ್ಯುತ್ ಪರೀಕ್ಷಾಧಿಕಾರಿಗಳಿಗೆ ತಿಳಿಸಿರುತ್ತದೆ. ನಿಗಮವು ವಿದ್ಯುತ್ ತೆರಿಗೆಯನ್ನು ಮನ್ನಾ ಮಾಡಲು ಬೇಡಿಕೆಯನ್ನು ಸಲ್ಲಿಸಿರುತ್ತದೆ ಹಾಗೂ ಇಲಾಖೆಯು ಅಡ್‌ವಲೋರೆಮ್ ಆಧಾರದ ಮೇಲೆ ವಿದ್ಯುತ್ ತೆರಿಗೆಯನ್ನು ಮನ್ನಾ ಮಾಡಲು ಕರ್ನಾಟಕ ಸರ್ಕಾರಕ್ಕೆ ತಿಳಿಸುವುದಾಗಿ ಮಾಹಿತಿ ನೀಡಿರುತ್ತದೆ.

p) An amount of INR 290 Lakhs (PY: INR 380 lakhs) demanded by land loser of Kadra and Kodasalli Valley projects for increase in compensation paid.

ಪರಿಹಾರದ ಹೆಚ್ಚಳಕ್ಕೆ ಸಂಬಂಧಿಸಿದಂತೆ ಕದ್ರಾ ಮತ್ತು ಕೊಡಸಳ್ಳಿ ಯೋಜನೆಗಳ ಭೂವಂಚಿತರು ರೂ.290 ಲಕ್ಷಗಳ (ಹಿಂದಿನ ವರ್ಷ ರೂ.380 ಲಕ್ಷಗಳು) ಬೇಡಿಕೆಯನ್ನು ಮಂಡಿಸಿರುತ್ತಾರೆ.

q) An amount of INR 548.90 Lakhs demanded by Directorate General of Goods & Service Tax Intelligence towards claim on service tax on royalty.

ಜಿಎಸ್‌ಟಿ ಇಂಟೆಲಿಜನ್ಸ್‌ನ ಡೈರೆಕ್ಟೋರೇಟ್ ಜನರಲ್ ಅವರು ರಾಜಧನದ ಮೇಲಿನ ಸೇವಾತೆರಿಗೆಗೆ ಸಂಬಂಧಿಸಿದಂತೆ ರೂ.548.90 ಲಕ್ಷಗಳ ಬೇಡಕೆಯನ್ನು ಮಂಡಿಸಿರುತ್ತಾರೆ.

r) The Corporation has pending assessments with the various authorities for earlier years and which are in various stages of proceedings. Pending further developments of such matters, amount of claim cannot be quantified.

ವಿವಿಧ ಪ್ರಾಧಿಕಾರಗಳೊಂದಿಗೆ ನಿಗಮದ ಹಿಂದಿನ ವರ್ಷಗಳಿಗೆ ಸಂಬಂಧಿಸಿದ ಕಂದಾಯ ನಿರ್ಧರಿಸುವಿಕೆಯು ಬಾಕಿಯಿದ್ದು, ಇದರ ವಿಚಾರಣೆಯು ವಿವಿಧ ಹಂತಗಳಲ್ಲಿರುತ್ತದೆ. ಇಂತಹ ವಿಷಯಗಳ ಬೆಳವಣಿಗೆಯು ಬಾಕಿಯಿರುವುದರಿಂದ, ಹಕ್ಕುಬೇಡಿಯ ಮೊತ್ತವನ್ನು ನಿರ್ಧರಿಸಲು ಸಾಧ್ಯವಿರುವುದಿಲ್ಲ.

D. General Disclosures / ಸಾಮಾನ್ಯ ಪ್ರಕಟಣೆಗಳು:

1. Related party disclosure under Ind AS 24 / ಭಾರತೀಯ ಲೆಕ್ಕ ಮಾನದಂಡ (IND AS) 24ರ ಪ್ರಕಾರ – ಸಂಬಂಧಪಟ್ಟ ಸಂಸ್ಥೆಗಳ ಪ್ರಕಟಣೆ

A. Enterprises that are directly or indirectly controlled by the Corporation are as detailed below

ಎ) ನೇರವಾಗಿ ಅಥವಾ ಪರೋಕ್ಷವಾಗಿ ಮಾತೃಸಂಸ್ಥೆಯ ನಿಯಂತ್ರಣದಲ್ಲಿರುವ ಸಂಸ್ಥೆಗಳ ವಿವರ ಈ ಕೆಳಗಿನಂತಿದೆ

Subsidiary / ಅಧೀನ ಸಂಸ್ಥೆ	Karnataka Gas Power Corporation Limited (formerly known as KPC Bidadi Power Corporation Private Limited) ಕೆಪಿಸಿ ಗ್ಯಾಸ್ ಪವರ್ ಕಾರ್ಪೊರೇಷನ್ ಲಿಮಿಟೆಡ್ (ಹಿಂದಿನ ಕರ್ನಾಟಕ ಬಿಡದಿ ಪವರ್ ಕಾರ್ಪೊರೇಷನ್ ಪ್ರೈವೇಟ್ ಲಿಮಿಟೆಡ್)
Joint ventures / ಜಂಟಿ ಸಹಭಾಗಿತ್ವ ಸಂಸ್ಥೆ	Karnataka EMTA Coal Mines Limited (KECML) ಕರ್ನಾಟಕ ಎಮ್ಟಾ ಕೋಲ್ ಮೈನ್ಸ್ ಲಿಮಿಟೆಡ್ (ಕೆಇಸಿಎಂಎಲ್) Raichur Power Corporation Limited (RPCL) ರಾಯಚೂರು ಪವರ್ ಕಾರ್ಪೋರೇಷನ್ ಲಿಮಿಟೆಡ್ (ಆರ್‌ಪಿಸಿಎಲ್) Bengal Birbhum Coalfields Limited ಬೆಂಗಾಲ್ ಬಿರ್‌ಭುಮ್ ಕೋಲ್‌ಫೀಲ್ಡ್ಸ್ ಲಿಮಿಟೆಡ್
Joint venture Partner ಜಂಟಿ ಸಹಭಾಗಿತ್ವದ ಪಾಲುದಾರ ಸಂಸ್ಥೆ	EMTA Coal Mines Limited / ಎಮ್ಟಾ ಕೋಲ್ ಮೈನ್ಸ್ ಲಿಮಿಟೆಡ್ Refer Note 4 / ಟಿಪ್ಪಣಿ ಸಂಖ್ಯೆ 4 ನೋಡಿರಿ

(INR in Lakhs, ರೂ ಲಕ್ಷಗಳಲ್ಲಿ)

B. Financial Transactions - others / ಹಣಕಾಸು ವ್ಯವಹಾರಗಳು

Particulars	KPC Gas Power Corporation limited		Bengal Birbhum Coalfields Limited		Karnataka EMTA Coal Mines Limited		Raichur Power Corporation Limited		EMTA Coal Mines Limited	
ವಿವರಗಳು	ಕೆಪಿಸಿ ಗ್ಯಾಸ್ ಪವರ್ ಕಾರ್ಪೊರೇಷನ್ ಲಿಮಿಟೆಡ್		ಬೆಂಗಾಲ್ ಬಿರ್‌ಭುಮ್ ಕೋಲ್‌ಫೀಲ್ಡ್ಸ್ ಲಿಮಿಟೆಡ್		ಕರ್ನಾಟಕ ಎಮ್ಟಾ ಕೋಲ್ ಮೈನ್ಸ್ ಲಿಮಿಟೆಡ್		ರಾಯಚೂರು ಪವರ್ ಕಾರ್ಪೋರೇಷನ್ ಲಿಮಿಟೆಡ್		ಎಮ್ಟಾ ಕೋಲ್ ಮೈನ್ಸ್ ಲಿಮಿಟೆಡ್	
Transactions During the Year / ಪ್ರಸಕ್ತ ವರ್ಷದ ವ್ಯವಹಾರಗಳು	**2017-18**	**2016-17**	**2017-18**	**2016-17**	**2017-18**	**2016-17**	**2017-18**	**2016-17**	**2017-18**	**2016-17**
Advances made (Net of repayments received) / ಮುಂಗಡ ಹಣ (ಹಿಂದಿರುಗುಸುವಿಕೆಯನ್ನು ಒಳಗೊಂಡಿದೆ)	21 077.81	275.66	-	-	-	-	19 782.11	19 320.51	-	-
Balances received / ಹಿಂಪಡೆದ ಬಾಕಿ	-	-	-	-	-	-	-	-	(3 142.00)	-
Claims paid / ಪಾವತಿಸಿದ ಕ್ಲೇಮುಗಳು	-	-	-	-	13 895.47	15 152.06	-	-	-	-
Transfer of Raw Coal / ಕಚ್ಚಾ ಕಲ್ಲಿದ್ದಿಲಿನ ವರ್ಗಾವಣೆ	-	-	-	-	-	-	38 820.66	9 589.98	-	-
Receipt of Raw coal / ಕಚ್ಚಾ ಕಲ್ಲಿದ್ದಿಲಿನ ಸ್ವೀಕೃತಿ	-	-	-	-	-	-	(44 758.09)	(11 321.16)	-	-
Towards Employee Benefits expenses / ಉದ್ಯೋಗಿಗಳ ಸೌಲಭ್ಯಗಳ ವೆಚ್ಚ	-	-	-	-	-	-	242.26	2 039.67	-	-
Interest received/receivable on advances/receivables / ಮುಂಗಡ/ಬರತಕ್ಕ ಬಾಕಿಯ ಮೇಲೆ ಪಡೆದ/ಪಡೆಯಬೇಕಾದ ಬಡ್ಡಿ	-	-	-	-	-	-	-	-	103.29	362.00
Interest on inter-corporate advances / ಇಂಟರ್ ಕಾರ್ಪೋರೇಟ್ ಮುಂಗಡದ ಮೇಲಿನ ಬಡ್ಡಿ	-	-	-	-	-	-	2 633.07	-	-	-
	Lakshmi Vilas Bank / ಲಕ್ಷ್ಮೀವಿಲಾಸ್ ಬ್ಯಾಂಕ್	11.66	4.13
	Oriental Bank of Commerce / ಓರಿಯಂಟಲ್ ಬ್ಯಾಂಕ್ ಆಫ್ ಕಾಮರ್ಸ್*	(24.19)	61.74
	Punjab & Sind Bank / ಪಂಜಾಬ್ ಮತ್ತು ಸಿಂದ್ ಬ್ಯಾಂಕ್	6 684.30	5 645.06
	Punjab National Bank / ಪಂಜಾಬ್ ನ್ಯಾಷನಲ್ ಬ್ಯಾಂಕ್	29.86	182.28
	Small Industries Development Bank of India (SIDBI) ಸ್ಮಾಲ್ ಇಂಡಸ್ಟ್ರೀಸ್ ಡೆವಲಪ್‌ಮೆಂಟ್ ಬ್ಯಾಂಕ್ ಆಫ್ ಇಂಡಿಯಾ (ಎಸ್‌ಐಡಿಬಿಐ)	7.21	43.78
	South Indian Bank / ಸೌತ್ ಇಂಡಿಯನ್ ಬ್ಯಾಂಕ್	7.26	75.78
	State Bank of India / ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ:		
	State Bank of India (SBI) / ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ (ಎಸ್‌ಬಿಐ)	2 175.05	2 294.02
	State Bank of Bikaner & Jaipur / ಸ್ಟೇಟ್ ಬ್ಯಾಂಕ್ ಆಫ್ ಬಿಕನೆರ್ ಮತ್ತು ಜೈಪುರ್	8.16	1 453.19
	State Bank of Hyderabad* / ಸ್ಟೇಟ್ ಬ್ಯಾಂಕ್ ಆಫ್ ಹೈದರಾಬಾದ್*	(9.59)	4 666.07
	State Bank of Mysore / ಸ್ಟೇಟ್ ಬ್ಯಾಂಕ್ ಆಫ್ ಮೈಸೂರು	4 491.72	6 893.31
	State Bank of Patiala / ಸ್ಟೇಟ್ ಬ್ಯಾಂಕ್ ಆಫ್ ಪಟಿಯಾಲ	16.26	101.03
	State Bank of Travancore / ಸ್ಟೇಟ್ ಬ್ಯಾಂಕ್ ಆಫ್ ಟ್ರಾವಾಂಕೂರು	1 841.61	2 797.01
	Syndicate Bank / ಸಿಂಡಿಕೇಟ್ ಬ್ಯಾಂಕ್	7 746.85	6 788.91

Karnataka Power Corporation Limited / ಕರ್ನಾಟಕ ವಿದ್ಯುತ್ ನಿಗಮ ನಿಯಮಿತ
Notes to the Consolidated Financial Statements for the yesr ended 31 March 2018
31ನೇ ಮಾರ್ಚ್ 2018 ಕ್ಕೆ ಕೊನೆಗೊಂಡ ಕ್ರೋಡಿಕೃತ ಆರ್ಥಿಕ ಸ್ಥಿತಿ ವಿವರಣಾ ಪಟ್ಟಿಯ ಟಿಪ್ಪಣಿಗಳು
(All amounts in Indian Rupees Lakhs except as otherwise stated)
(ಉಲ್ಲೇಖಿಸಿದಲ್ಲಿ ಹೊರತುಪಡಿಸಿ, ಎಲ್ಲಾ ಮೊತ್ತಗಳು ರೂಪಾಯಿ ಲಕ್ಷಗಳಲ್ಲಿ)

Particulars / ವಿವರಗಳು		For the year ended 31-Mar-2018 31–ಮಾರ್ಚ್–2018 ಕ್ಕೆ	For the year ended 31-Mar-2017 31–ಮಾರ್ಚ್–2017ಕ್ಕೆ
	The Federal Bank Limited / ದಿ ಫೆಡೆರಲ್ ಬ್ಯಾಂಕ್ ಲಿಮಿಟೆಡ್	4.41	37.89
	UCO Bank / ಯೂಕೋ ಬ್ಯಾಂಕ್	3 290.12	2 112.94
	Union Bank of India / ಯೂನಿಯನ್ ಬ್ಯಾಂಕ್ ಆಫ್ ಇಂಡಿಯಾ	9 812.23	10 317.87
	United Bank of India / ಯುನೈಟೆಡ್ ಬ್ಯಾಂಕ್ ಆಫ್ ಇಂಡಿಯಾ	2 685.85	1 792.20
	Vijaya Bank / ವಿಜಯಾ ಬ್ಯಾಂಕ್	10 470.72	7 789.22
	Interest on Bank Overdraft / ಬ್ಯಾಂಕ್ ಓವರ್ ಡ್ರಾಫ್ಟ್ ಮೇಲಿನ ಬಡ್ಡಿ	16 065.69	16 132.01
		1 30 142.14	**1 24 095.60**
	Others / ಇತರೆ		
	Power Finance Corporation / ಪವರ್ ಫೈನಾನ್ಸ್ ಕಾರ್ಪೊರೇಷನ್	0.78	21.74
	ICICI - Home Finance Company Limited / ಐಸಿಐಸಿಐ ಹೋಮ್ ಫೈನಾನ್ಸ್ ಕಂಪನಿ ಲಿಮಿಟೆಡ್	-	3.42
	PFC Green energy Ltd / ಪಿಎಫ್‌ಸಿ ಗ್ರೀನ್ ಎನರ್ಜಿ ಲಿಮಿಟೆಡ್	426.00	464.29
	Rural Electrification Corporation / ರೂರಲ್ ಎಲೆಕ್ಟ್ರಿಫಿಕೇಷನ್ ಕಾರ್ಪೊರೇಷನ್	42 725.83	41 765.04
		43 152.61	**42 254.49**
	Other charges / ಇತರೆ ವೆಚ್ಚಗಳು		
	Guarantee Commission** / ಆಶ್ವಾಸನಾ ದಲ್ಲಾಳಿ**	55.00	55.00
	Expenses on availment of loan / ಸಾಲ ಪಡೆಯಲು ತಗುಲಿದ ಖರ್ಚುಗಳು	31.03	31.56
	Lease Rentals / ಗುತ್ತಿಗೆ ಬಾಡಿಗೆ	80.16	61.45
	Interest others /ಇತರೆ ಬಡ್ಡಿ	94.03	973.41
	Interest on belated payment to collieries / ಕೊಲ್ಯೆರಿಸ್‌ಗೆ ತಡವಾಗಿ ಪಾವತಿಸಿದ ಹಣದ ಮೇಲಿನ ಬಡ್ಡಿ	1 462.26	8 065.21
	Bank Charges*** / ಬ್ಯಾಂಕ್ ಶುಲ್ಕಗಳು***	155.76	172.08
	Less: Transferred to work-in-progress / PPE ಕಳೆಯಿರಿ: ಪ್ರಗತಿಯಲ್ಲಿರುವ ಕಾಮಗಾರಿ/ಸ್ಥಿರಾಸ್ತಿ ಮತ್ತು ಯಂತ್ರೋಪಕರಣಗಳಿಗೆ ವರ್ಗಾವಣೆ	(4 848.99)	(20 658.23)
		(2 970.76)	**(11 299.52)**
		1 70 323.99	**1 55 050.57**

*Indicates credit received from bank towards excess interest remitted in previous years. Refer annexure to note 19 & 25

*ಹಿಂದಿನ ವರ್ಷಗಳಲ್ಲಿ ವರ್ಗಾಯಿಸಿದ ಅಧಿಕ ಬಡ್ಡಿಗೆ ಸಂಬಂಧಿಸಿದಂತೆ ಬ್ಯಾಂಕ್‌ನಿಂದ ಪಡೆದ ಜಮೆಯನ್ನು(ಕ್ರೆಡಿಟ್) ಸೂಚಿಸುತ್ತದೆ.

Karnataka Power Corporation Limited / ಕರ್ನಾಟಕ ವಿದ್ಯುತ್ ನಿಗಮ ನಿಯಮಿತ
Notes to the Consolidated Financial Statements for the yesr ended 31 March 2018
31ನೇ ಮಾರ್ಚ್ 2018 ಕ್ಕೆ ಕೊನೆಗೊಂಡ ಕ್ರೋಡಿಕೃತ ಆರ್ಥಿಕ ಸ್ಥಿತಿ ವಿವರಣಾ ಪಟ್ಟಿಯ ಟಿಪ್ಪಣಿಗಳು
(All amounts in Indian Rupees Lakhs except as otherwise stated)
(ಉಲ್ಲೇಖಿಸಿದಲ್ಲಿ ಹೊರತುಪಡಿಸಿ, ಎಲ್ಲಾ ಮೊತ್ತಗಳು ರೂಪಾಯಿ ಲಕ್ಷಗಳಲ್ಲಿ)

** Paid to Government of Karnataka for providing guarantee with respect to availment of loan.

** ಸಾಲ ಪಡೆಯಲು ನೀಡಿದ ಆಶ್ವಾಸನೆಗಾಗಿ ಕರ್ನಾಟಕ ಸರ್ಕಾರಕ್ಕೆ ಪಾವತಿಸಲಾಗಿದೆ.

*** includes bank guarantee charges

*** ಬ್ಯಾಂಕ್ ಆಶ್ವಾಸನಾ ಶುಲ್ಕವನ್ನು ಒಳಗೊಂಡಿರುತ್ತದೆ.

(1) The Group has availed lease facility from ICICI Bank Limited for Boiler equipment of RTPS Units 5&6. On completion of the primary lease the Group continues to avail the equipment on lease charges as contemplated in the agreement.

(1) ಗುಂಪು, ರಾಯಚೂರು ಶಾಖೋತ್ಪನ್ನ ವಿದ್ಯುತ್ ಸ್ಥಾವರದ 5 ಮತ್ತು 6ನೇ ಘಟಕಗಳ ಬಾಯ್ಲರ್ ಯಂತ್ರೋಪಕರಣಗಳನ್ನು ಐಸಿಐಸಿಐ ಬ್ಯಾಂಕ್ ಲಿಮಿಟೆಡ್ ನಿಂದ ಗುತ್ತಿಗೆ ಆಧಾರದ ಆರ್ಥಿಕ ಸಾಲ ಸೌಲಭ್ಯದ ಮೇಲೆ ಪಡೆದಿರುತ್ತದೆ. ಪ್ರಾಥಮಿಕ ಗುತ್ತಿಗೆ ಅವಧಿ ಪೂರ್ಣಗೊಂಡ ನಂತರವೂ, ಗುತ್ತಿಗೆ ನಿಯಮಗಳಿಗೆ ಅನುಗುಣವಾಗಿ ನಿಗಮವು ಯಂತ್ರೋಪಕರಣಗಳನ್ನು ಗುತ್ತಿಗೆ ಸೌಲಭ್ಯದೊಂದಿಗೆ ಪಡೆದಿರುತ್ತದೆ.

	Particulars / ವಿವರಗಳು	For the year ended 31-Mar-2018 31–ಮಾರ್ಚ್–2018 ಕ್ಕೆ	For the year ended 31-Mar-2017 31–ಮಾರ್ಚ್–2017ಕ್ಕೆ
38	**Depreciation and amortization expense** **ಸ್ಥಿರಾಸ್ತಿ ಮತ್ತು ಯಂತ್ರೋಪಕರಣಗಳ ಮೇಲಿನ ಸವಕಳಿ**		
	Depreciation on property, plant and equipment ಸ್ಥಿರಾಸ್ತಿ ಮತ್ತು ಯಂತ್ರೋಪಕರಣಗಳ ಮೇಲಿನ ಸವಕಳಿ	65 983.34	54 848.02
	Amortisation of intangible assets ಅಗೋಚರ ಆಸ್ತಿಗಳ ಋಣವಿಮೋಚನಾ ವೆಚ್ಚ	3.85	3.84
		65 987.19	**54 851.86**

Depreciation and amortization is provided on straight line method at the rates specified in the CERC tariff regulations.

ಸಿಇಆರ್‌ಸಿ ವಿದ್ಯುತ್‌ದರ ನಿಯಮಾವಳಿಗಳಲ್ಲಿ ಉಲ್ಲೇಖಿತ ದರದಲ್ಲಿ ಜೀವಿತಾವಧಿಯ ವಿಧಾನದ ಮೇರೆಗೆ ಸವಕಳಿಯನ್ನು ಲೆಕ್ಕಾಚಾರ ಮಾಡಲಾಗಿದೆ.

	Particulars / ವಿವರಗಳು	For the year ended 31-Mar-2018 31–ಮಾರ್ಚ್–2018 ಕ್ಕೆ	For the year ended 31-Mar-2017 31–ಮಾರ್ಚ್–2017ಕ್ಕೆ
39	**Other expenses / ಇತರೆ ವೆಚ್ಚಗಳು**		
	Excise duty / ಅಬಕಾರಿ ತೆರಿಗೆ	64.68	307.92
	***Administrative expenses* / ಆಡಳಿತ ವೆಚ್ಚ**		
	Rates and taxes / ಕಂದಾಯ ಮತ್ತು ತೆರಿಗೆಗಳು	221.47	387.22
	Power charges / ವಿದ್ಯುತ್ ವೆಚ್ಚಗಳು	1 424.06	1 286.81
	Office expenses and stationery / ಕಛೇರಿ ವೆಚ್ಚಗಳು ಮತ್ತು ಲೇಖನ ಸಾಮಗ್ರಿಗಳು	361.48	399.05
	Maintenance of office and equipment / ಕಛೇರಿ ಮತ್ತು ಸಾಧನಗಳ ನಿರ್ವಹಣೆ	276.42	192.86

(INR in Lakhs, ರೂ ಲಕ್ಷಗಳಲ್ಲಿ)

Particulars / ವಿವರಗಳು	For the year ended 31-Mar-2018 31–ಮಾರ್ಚ್–2018 ಕ್ಕೆ	For the year ended 31-Mar-2017 31–ಮಾರ್ಚ್–2017ಕ್ಕೆ
Rent including lease rent/ ಗುತ್ತಿಗೆ ಬಾಡಿಗೆಯನ್ನೊಳಗೊಂಡ ಬಾಡಿಗೆ	199.28	174.70
Advertisement and publicity / ಜಾಹೀರಾತು ಮತ್ತು ಪ್ರಚಾರ	499.78	212.99
Professional and legal charges/ ವೃತ್ತೀಯ ಮತ್ತು ಕಾನೂನು ಸಲಹಾ ವೆಚ್ಚಗಳು	363.57	173.50
Consultancy charges / ಸಲಹೆ ವೆಚ್ಚಗಳು	158.41	146.25
Hire charges paid / ಪಾವತಿಸಿದ ಬಾಡಿಗೆ	1 471.79	1 467.68
Expenses on safety and security/ಸುರಕ್ಷೆ ಮತ್ತು ಭದ್ರತಾ ವೆಚ್ಚಗಳು	4 304.21	3 930.74
Insurance / ವಿಮೆ	34.95	33.42
Corporate social responsibility - Refer Note 41.II.H ಸಾಂಸ್ಥಿಕ ಸಾಮಾಜಿಕ ಜವಾಬ್ದಾರಿ – ಟಿಪ್ಪಣಿ 41.II.ಹೆಚ್ ನೋಡಿರಿ	877.70	178.93
Staff recruitment expenses / ಸಿಬ್ಬಂದಿ ನೇಮಕಾತಿ ವೆಚ್ಚ	59.36	13.23
Bad debts / ವಸೂಲಾಗದ ಸಾಲ	-	-
Donation and contribution / ದಾನ ಮತ್ತು ವಂತಿಗೆ	336.53	16.44
Sundry recoverable written off / ಮನ್ನಾ ಮಾಡಿದ ವಸೂಲಿಯಾಗಬೇಕಾಗಿರುವ ಸಾದಿಲ್ವಾರು ಹಣ	-	-
Expenses on ceremonial functions / ಸಮಾರಂಭದ ವೆಚ್ಚಗಳು	177.31	113.82
Other expenses/ ಇತರೆ ವೆಚ್ಚಗಳು	208.00	132.74
Staff training / ಸಿಬ್ಬಂದಿ ತರಬೇತಿ	17.71	39.75
Expenses on Energy Conservation/ಇಂಧನ ಉಳಿತಾಯ ವೆಚ್ಚ*	1 110.02	-
	12 166.74	**9 208.06**
Less: Expenses transferred to work- in -progress/PPE ಕಳೆಯಿರಿ: ಪ್ರಗತಿಯಲ್ಲಿರುವ ಕಾಮಗಾರಿ / ಸ್ಥಿರಾಸ್ತಿ ಮತ್ತು ಯಂತ್ರೋಪಕರಣಗಳಿಗೆ ವರ್ಗಾವಣೆ	(507.41)	(160.95)
Loss /obsolocence of stock /ಸಾಮಗ್ರಿಗಳ ನಷ್ಟ / ಕ್ಷಯ	6.68	104.19
Loss on sale of assets (net) / ಆಸ್ತಿಯ ಮಾರಾಟದಿಂದಾದ ನಷ್ಟ (ನಿವ್ವಳ)	-	31.74
Provision for abandoned project / ಯೋಜನೆಗಳ ಪರಿತ್ಯಾಗದ ಪೂರ್ವಸಿದ್ಧತೆ	-	58.23
	6.68	**194.16**
Payment to Auditors / ಲೆಕ್ಕ ಪರಿಶೋಧಕರ ಸಂಭಾವನೆ		
Statutory auditors fee / ಶಾಸನ ಬದ್ಧ ಲೆಕ್ಕ ಪರಿಶೋಧಕರ ಶುಲ್ಕ	21.47	19.13
for taxation matters / ತೆರಿಗೆ ಸಂಬಂಧಿತ ವಿಷಯಗಳಿಗೆ	2.33	2.12
for other services / ಇತರೆ ಸೇವೆಗಳಿಗೆ	-	0.25

Karnataka Power Corporation Limited / ಕರ್ನಾಟಕ ವಿದ್ಯುತ್ ನಿಗಮ ನಿಯಮಿತ
Notes to the Consolidated Financial Statements for the yesr ended 31 March 2018
31ನೇ ಮಾರ್ಚ್ 2018 ಕ್ಕೆ ಕೊನೆಗೊಂಡ ಕ್ರೋಡಿಕೃತ ಆರ್ಥಿಕ ಸ್ಥಿತಿ ವಿವರಣಾ ಪಟ್ಟಿಯ ಟಿಪ್ಪಣಿಗಳು
(All amounts in Indian Rupees Lakhs except as otherwise stated)
(ಉಲ್ಲೇಖಿಸಿದಲ್ಲಿ ಹೊರತುಪಡಿಸಿ, ಎಲ್ಲಾ ಮೊತ್ತಗಳು ರೂಪಾಯಿ ಲಕ್ಷಗಳಲ್ಲಿ)

Particulars / ವಿವರಗಳು		For the year ended 31-Mar-2018 31–ಮಾರ್ಚ್–2018 ಕ್ಕೆ	For the year ended 31-Mar-2017 31–ಮಾರ್ಚ್–2017ಕ್ಕೆ
	for goods and services tax (GST) / service tax ಸರಕು ಮತ್ತು ಸೇವಾ ತೆರಿಗೆಗೆ ಸಂಬಂಧಿಸಿದಂತೆ	4.60	3.69
	for reimbursement of expenses / ವೆಚ್ಚಗಳ ಮರುಪಾವತಿ	-	9.27
		28.40	**34.45**
		11 694.40	**9 275.72**

*During the year, the Group has purchased non-transferable Energy Saving Certificates (ESCerts) under the Perform, Achieve and Trade scheme of Bureau of Energy Efficiency (BEE) for Cycle 1 (2012 - 2015).

*ಪ್ರಸ್ತುತ ವರ್ಷದಲ್ಲಿ, ಎನರ್ಜಿ ಎಫೀಷಿಯನ್ಸಿ ಬ್ಯೂರೋದವರ ಕಾರ್ಯನಿರ್ವಹಣೆ, ಸಾಧನೆ ಹಾಗೂ ವಿನಿಮಯ ಸುತ್ತು–1 (2012–15) ಕಾರ್ಯಯೋಜನೆಯಡಿಯಲ್ಲಿ ನಿಗಮವು ವರ್ಗಾಯಿಸಲಾಗದ ಇಂಧನ ಉಳಿತಾಯ ಪ್ರಮಾಣ ಪತ್ರಗಳನ್ನು ಖರೀದಿಸಿರುತ್ತದೆ.

Particulars / ವಿವರಗಳು		For the year ended 31-Mar-2018 31–ಮಾರ್ಚ್–2018 ಕ್ಕೆ	For the year ended 31-Mar-2017 31–ಮಾರ್ಚ್–2017ಕ್ಕೆ
40	**Other Comprehensive Income / ಇತರೆ ಸಮಗ್ರ ಆದಾಯ**		
	Defined benefit actuarial gains/(losses) ಗುರುತು ಮಾಡಿದ ಸೌಲಭ್ಯ ವಿಮಾಗಣಕ ಲಾಭ/(ನಷ್ಟ)	(3 891.46)	(8 498.53)
	Income tax / ಆದಾಯ ತೆರಿಗೆ	1 346.76	2 941.17
		(2 544.70)	**(5 557.36)**

Karnataka Power Corporation Limited / ಕರ್ನಾಟಕ ವಿದ್ಯುತ್ ನಿಗಮ ನಿಯಮಿತ
Notes to the Consolidated Financial Statements for the yesr ended 31 March 2018
31ನೇ ಮಾರ್ಚ್ 2018 ಕ್ಕೆ ಕೊನೆಗೊಂಡ ಕ್ರೋಡಿಕೃತ ಆರ್ಥಿಕ ಸ್ಥಿತಿ ವಿವರಣಾ ಪಟ್ಟಿಯ ಟಿಪ್ಪಣಿಗಳು
(All amounts in Indian Rupees Lakhs except as otherwise stated)
(ಉಲ್ಲೇಖಿಸಿದಲ್ಲಿ ಹೊರತುಪಡಿಸಿ, ಎಲ್ಲಾ ಮೊತ್ತಗಳು ರೂಪಾಯಿ ಲಕ್ಷಗಳಲ್ಲಿ)

41.I Group Overview / ಗುಂಪಿನ ಪಕ್ಷಿನೋಟ

Karnataka Power Corporation Limited (herein after referred to as 'KPCL' or 'the Corporation' or 'the Company') began its journey in 1970. For over four decades, the Karnataka Power Corporation has been a prime mover and catalyst behind key power sector reforms in the state – measures that have spiralled steady growth witnessed in both industrial and economic areas.

ಕರ್ನಾಟಕ ವಿದ್ಯುತ್ ನಿಗಮ ನಿಯಮಿತವು (ಈ ಕೆಳಗೆ 'ಕೆಪಿಸಿಎಲ್' ಅಥವಾ 'ನಿಗಮ' ಅಥವಾ 'ಕಂಪನಿ'ಎಂದು ಕರೆಯಲ್ಪಡುವ) ತನ್ನ ಪಯಣವನ್ನು 1970ರಲ್ಲಿ ಪ್ರಾರಂಭಿಸಿತು. ನಾಲ್ಕು ದಶಕಗಳಿಗಿಂತಲೂ ಹೆಚ್ಚಿನ ಸಮಯದಿಂದ, ರಾಜ್ಯದ ಕೈಗಾರಿಕಾ ಮತ್ತು ಆರ್ಥಿಕ ವಲಯಗಳ ಅಭಿವೃದ್ಧಿಯ ಕ್ರಮಗಳಲ್ಲಿ ಹಾಗೂ ಪ್ರಮುಖ ವಿದ್ಯುತ್ ಕ್ಷೇತ್ರ ಸುಧಾರಣೆಗಳಲ್ಲಿ ಕರ್ನಾಟಕ ವಿದ್ಯುತ್ ನಿಗಮ ನಿಯಮಿತವು ಮುಂಚೂಣಿಯಲ್ಲಿದೆ.

The Group is engaged in construction and operation of thermal, hydel, solar and wind energy generating stations in different parts of the State. KPCL today has an installed capacity of 7246.31 MW of Hydel, thermal, solar and wind energy, with 6450 MW in the pipeline.

ಗುಂಪು, ರಾಜ್ಯದ ವಿವಿಧ ಭಾಗಗಳಲ್ಲಿ ಶಾಖೋತ್ವನ್ನ, ಜಲ, ಸೌರ ಹಾಗೂ ಪವನಶಕ್ತಿ ಉತ್ಪಾದನಾ ಕೇಂದ್ರಗಳ ನಿರ್ಮಾಣ ಹಾಗೂ ನಿರ್ವಹಣೆಯಲ್ಲಿ ತೊಡಗಿಕೊಂಡಿರುತ್ತದೆ. ಮೆ॥ಕೆಪಿಸಿಎಲ್ ಪ್ರಸ್ತುತ ಜಲ, ಶಾಖೋತ್ವನ್ನ, ಸೌರ ಹಾಗೂ ಪವನಶಕ್ತಿ ಮೂಲಗಳಿಂದ 7246.31 ಮೆ.ವ್ಯಾ. ಸ್ಥಾಪಿತ ಸಾಮರ್ಥ್ಯವನ್ನು ಹೊಂದಿದ್ದು, 6450 ಮೆ.ವ್ಯಾ. ಸಾಮರ್ಥ್ಯವನ್ನು ಹೆಚ್ಚಿಸುವ ಉದ್ದೇಶವನ್ನು ಹೊಂದಿದೆ.

The Corporate Identity Number (CIN) of KPCL is U85110KA1970SGC001919

ಕೆಪಿಸಿಎಲ್‌ನ ಕಾರ್ಪೊರೇಟ್ ಇಂಡೆಂಟಿಟಿ ಸಂಖ್ಯೆ U85110KA1970SGC001919

The Consolidated financial statements are approved for issue by the Group's Board of Directors on August 08, 2018.

ಗುಂಪಿನ ನಿರ್ದೇಶಕ ಮಂಡಳಿಯು ಕ್ರೋಢಿಕೃತ ಆರ್ಥಿಕ ವಿವರಣಾ ಪಟ್ಟಿಗಳನ್ನು ಪ್ರಸ್ತುತ ಪಡಿಸಲು ಆಗಸ್ಟ್ 08, 2018 ರಂದು ಅನುಮೋದಿಸಿದೆ.

Basis of preparation of accounts / ಸಿದ್ಧತೆಯ ತಳಹದಿ

The accounts have been prepared in accordance with IND AS and disclosures thereon comply with the requirements of IND AS stipulations contained in Schedule-III (revised) as applicable under Section 133 of the Companies Act 2013 read with Rule 7 of the Companies (Accounts) Rules 2014 Companies (Indian Accounting Standards) Rules 2015 as amended from time to time other pronouncements of ICAI provisions of Electricity Act 2003 and provisions of Companies Act 2013.

ಭಾರತದ ಲೆಕ್ಕಮಾನದಂಡ (IND AS) ಅನುಸಾರ ಲೆಕ್ಕಪತ್ರಗಳನ್ನು ತಯಾರಿಸಲಾಗಿದೆ ಹಾಗೂ ಪ್ರಸ್ತುತಪಡಿಸಿದ ಮಾಹಿತಿಯು ಭಾರತದ ಲೆಕ್ಕಮಾನದಂಡಗಳ (IND AS) ಅವಶ್ಯಕತೆಗಳು, ಕಂಪನಿ(ಲೆಕ್ಕ) ನಿಯಮಗಳು 2014ರ ನಿಯಮ 7ರ ಜೊತೆಗೆ ಕಂಪನಿ ಅಧಿನಿಯಮ, 2013ರ ಕಲಂ 133 ರಡಿಯಲ್ಲಿ ಅನ್ವಯವಾಗುವ ಷೆಡ್ಯೂಲ್-III ರ ನಿಬಂಧನೆಗಳು, ಕಾಲಕಾಲಕ್ಕೆ ತಿದ್ದುಪಡಿ ಮಾಡಲಾದ ಕಂಪನಿ (ಭಾರತದಲೆಕ್ಕಮಾನದಂಡಗಳು) ನಿಯಮಗಳು 2015, ಐಸಿಎಐನ ಇತರೆ ಪ್ರಕಟಣೆಗಳು, ವಿದ್ಯುಚ್ಛಕ್ತಿ ಕಾಯ್ದೆ 2003ರ ನಿಬಂಧನೆಗಳು ಹಾಗೂ ಕಂಪನಿಅಧಿನಿಯಮ 2013ರ ನಿಬಂಧನೆಗಳು ಒಪ್ಪುವಂತಿರುತ್ತವೆ.

Current and non-current classification / ಚಾಲ್ತಿ ಮತ್ತು ಚಾಲ್ತಿರಹಿತ ವರ್ಗೀಕರಣ

Assets and Liabilities have been classified as current or non-current as per the Group's normal operating cycle and other criteria set out in revised Schedule III- to the Companies Act 2013.

ಗುಂಪಿನ ಸಾಮಾನ್ಯ ಕಾರ್ಯಚಕ್ರ ಹಾಗೂ ಕಂಪನಿ ಅಧಿನಿಯಮ, 2013ರ ಷೆಡ್ಯೂಲ್-III ರಲ್ಲಿ ವಿಧಿಸಲಾದ ಮಾನದಂಡಗಳ ಅನುಸಾರ ಆಸ್ತಿ ಮತ್ತು ಹೊಣೆಗಾರಿಕೆಗಳನ್ನು ಚಾಲ್ತಿ ಅಥವಾ ಚಾಲ್ತಿರಹಿತವೆಂದು ವರ್ಗೀಕರಿಸಲಾಗಿದೆ.

Functional and presentation currency / ನಿರೂಪಣೆ ಹಾಗೂ ಕಾರ್ಯಾಚರಣೆಯ ಕರೆನ್ಸಿ

The financial statements are presented in Indian rupees which is the functional currency of the Group and the currency of the primary economic environment in which the Group operates.

ಗುಂಪಿನ ಕಾರ್ಯಾತ್ಮಕ ಹಾಗೂ ಗುಂಪು ಕಾರ್ಯನಿರ್ವಹಿಸುವ ಪ್ರಧಾನ ಆರ್ಥಿಕ ವಲಯದ ಕರೆನ್ಸಿಯಾದ ಭಾರತೀಯ ರೂಪಾಯಿಗಳಲ್ಲಿ ಆರ್ಥಿಕ ವಿವರಣಾ ಪಟ್ಟಿಗಳನ್ನು ಮಂಡಿಸಲಾಗಿದೆ.

All values are rounded to the nearest lakhs up to two decimals except when otherwise indicated.

ಸೂಚಿಸಿದವುಗಳನ್ನು ಹೊರತುಪಡಿಸಿ, ಎಲ್ಲಾ ಮೌಲ್ಯಗಳನ್ನು ಎರಡು ದಶಾಂಶಗಳವರೆಗೆ ಸನಿಹದ ಲಕ್ಷಕ್ಕೆ ಪೂರ್ಣಾಂಕಕ್ಕೆ ತರಲಾಗಿದೆ.

Use of Estimates / ಅಂದಾಜುಗಳ ಬಳಕೆ

IND AS enjoins management to make estimates and assumptions related to financial statements that affect reported amount of assets liabilities revenue expenses and contingent liabilities pertaining to the year. Actual results may differ from such estimates. Any revision in accounting estimates is recognised prospectively in the period of change and material revision including its impact on financial statements is reported in the notes to accounts in the year of incorporation of revision.

ವರದಿ ಮಾಡಿದ ಆಸ್ತಿ, ಜವಾಬ್ದಾರಿ, ಆದಾಯ, ವೆಚ್ಚ ಮತ್ತು ಅನಿಶ್ಚಿತ ಹೊಣೆಗಾರಿಕೆಗಳ ಮೊತ್ತಗಳ ಮೇಲೆ ಪರಿಣಾಮ ಬೀರುವ ಆಡಳಿತ ಮಂಡಳಿಯ ಅಂದಾಜು ಮತ್ತು ಕಲ್ಪನೆಗಳಿಗೆ ಭಾರತದ ಲೆಕ್ಕಮಾನದಂಡಗಳು (IND AS) ಕಟ್ಟಳೆಯನ್ನು ವಿಧಿಸಿವೆ. ವಾಸ್ತವಿಕ ಪರಿಣಾಮವು ಇಂತಹ ಅಂದಾಜುಗಳಿಗಿಂತ ವಿಭಿನ್ನವಾಗಿರಬಹುದು. ಲೆಕ್ಕಾಚಾರದ ಅಂದಾಜುಗಳ ತಿದ್ದುಪಡಿಯಾದಲ್ಲಿ, ಅದನ್ನು ಮಹತ್ವದ ತಿದ್ದುಪಡಿ ಹಾಗೂ ಬದಲಾವಣೆಯಾದ ಅವಧಿಯಲ್ಲಿ ಭವಿಷ್ಯವರ್ತಿಯಾಗಿ ಆರ್ಥಿಕ ವಿವರಣಾ ಪಟ್ಟಿಗಳ ಮೇಲಿನ ಪರಿಣಾಮದ ಸಹಿತ ಗುರುತಿಸಲಾಗಿದೆ ಹಾಗೂ ತಿದ್ದುಪಡಿಯನ್ನು ಅಳವಡಿಸಿಕೊಂಡ ಸಾಲಿನಲ್ಲಿ ಲೆಕ್ಕಾಚಾರದ ಟಿಪ್ಪಣಿಗಳಲ್ಲಿ ವರದಿ ಮಾಡಲಾಗಿದೆ.

Significant Accounting Policies / ಲೆಕ್ಕಾಚಾರದ ಮಹತ್ವದ ಧೋರಣೆಗಳು

A summary of the significant accounting policies applied in the presentation of the financial statements are as given below. These accounting policies have been consistently applied to the periods presented in the financial statements.

ಆರ್ಥಿಕ ವಿವರಣಾ ಪಟ್ಟಿಗಳ ಮಂಡನೆಯಲ್ಲಿ ಅನ್ವಯಿಸಿದ ಲೆಕ್ಕಾಚಾರದ ಮಹತ್ವದ ಧೋರಣೆಗಳು ಸಂಕ್ಷಿಪ್ತ ವಿವರಗಳು ಈ ಕೆಳಗಿನಂತಿವೆ. ಈ ಲೆಕ್ಕಾಚಾರದ ಧೋರಣೆಗಳನ್ನು ಆರ್ಥಿಕ ವಿವರಣಾ ಪಟ್ಟಿಗಳಲ್ಲಿ ಪ್ರಸ್ತುತಪಡಿಸಿದ ಅವಧಿಗೆ ಸಮಂಜಸವಾಗಿ ಅಳವಡಿಸಲಾಗಿದೆ.

1 Property, Plant and Equipment (PPE) / ಸ್ಥಿರಾಸ್ತಿ ಮತ್ತು ಯಂತ್ರೋಪಕರಣಗಳು:

(i) Recognition and measurement / ಗುರುತಿಸುವಿಕೆ ಮತ್ತು ಅಳತೆ

Items of property, plant and equipment that qualifies for recognition are recognised and are measured at cost and is carried at its cost less accumulated depreciation and any accumulated impairment losses.

ಸ್ಥಿರಾಸ್ತಿ ಮತ್ತು ಯಂತ್ರೋಪಕರಣಗಳಾಗಿ ಗುರುತಿಸಲ್ಪಡುವ ಅರ್ಹ ಯಂತ್ರೋಪಕರಣಗಳನ್ನು ಅದರ ವೆಚ್ಚದಲ್ಲಿ ಅಳತೆ ಮಾಡಲ್ಪಡುವುದು ಮತ್ತು ಸಂಚಿತ ಸವಕಳಿ ಹಾಗೂ ದುರ್ಬಲತೆ ಹಾನಿಗಳನ್ನು ಕಳೆದು ತೋರಿಸಲಾಗಿದೆ.

Cost of an item of property, plant and equipment comprises its purchase price, including import duties and non-refundable purchase taxes, after deducting trade discounts and rebates, any directly attributable cost of bringing the item to its working condition for its intended use and capitalised borrowing costs and estimated costs of dismantling and removing the item and restoring the site, if any, on which it is located.

ಸ್ಥಿರಾಸ್ತಿ ಮತ್ತು ಯಂತ್ರೋಪಕರಣಗಳ ವೆಚ್ಚವು ಖರೀದಿ ದರ, ಆಮದು ಸುಂಕ ಹಾಗೂ ಹಿಂತಿರುಗಿಸಲಾಗದ ಖರೀದಿ ತೆರಿಗೆಗಳು, ವಾಣಿಜ್ಯ ರಿಯಾಯತಿ ಹಾಗೂ ಸೋಡಿಗಳನ್ನು ಕಳೆಯುವುದು, ವಸ್ತುವನ್ನು ಅದರ ಉದ್ದೇಶಿತ ಕಾರ್ಯಕ್ಕಾಗಿ ಉಪಯೋಗಿಸುವ ಕಾರ್ಯ ಸ್ಥಿತಿಗೆ ತರುವಲ್ಲಿ ಮಾಡಿದ ನೇರ ವೆಚ್ಚ ಮತ್ತು ಬಂಡವಾಳೀಕರಣಗೊಂಡ ಸಾಲದ ವೆಚ್ಚಗಳು ಮತ್ತು ಯಂತ್ರೋಪಕರಣಗಳನ್ನು ಕಳಚಲು ಮತ್ತು ತೆಗೆಯಲು ಭರಿಸಬೇಕಾದ ಅಂದಾಜು ವೆಚ್ಚ ಮತ್ತು ಯಂತ್ರೋಪಕರಣ ಇರುವ ನಿವೇಶನದ ಪುನರ್‌ನಿರ್ಮಾಣ ವೆಚ್ಚ.

The cost of a self-constructed item of property, plant and equipment comprises the cost of materials and direct employee benefits, any other costs directly attributable to bringing the item to working condition for its intended use and capitalised borrowing costs and estimated costs of dismantling and removing the item and restoring the site, if any, on which it is located.

ಸ್ವಯಂ ನಿರ್ಮಾಣಗೊಂಡ ಆಸ್ತಿ ಮತ್ತು ಯಂತ್ರೋಪಕರಣಗಳ ವೆಚ್ಚವು ಸಾಮಗ್ರಿಗಳ ವೆಚ್ಚ ಮತ್ತು ನೇರ ಸಿಬ್ಬಂದಿ ವೆಚ್ಚ, ವಸ್ತುವನ್ನು ಅದರ ಉದ್ದೇಶಿತ ಕಾರ್ಯಕ್ಕಾಗಿ ಉಪಯೋಗಿಸುವ ಕಾರ್ಯ ಸ್ಥಿತಿಗೆ ತರುವಲ್ಲಿ ಮಾಡಿದ ನೇರ ವೆಚ್ಚ ಮತ್ತು ಬಂಡವಾಳೀಕರಣಗೊಂಡ ಸಾಲದ ವೆಚ್ಚಗಳು ಮತ್ತು ಯಂತ್ರೋಪಕರಣಗಳನ್ನು ಕಳಚಲು ಮತ್ತು ತೆಗೆಯಲು ಭರಿಸಬೇಕಾದ ಅಂದಾಜು ವೆಚ್ಚ ಮತ್ತು ಯಂತ್ರೋಪಕರಣ ಇರುವ ನಿವೇಶನದ ಪುನರ್‌ನಿರ್ಮಾಣ ವೆಚ್ಚವನ್ನು ಒಳಗೊಂಡಿರುತ್ತದೆ.

Power plant- Items of PPE as required to be identified separately as per KERC requirements for charge of depreciation have been separately identified and recognised. Cost incurred upto the date of commercial operation that are directly attributable to the projects including borrowing costs have been capitalised. Such costs do not include the cost incurred for an item yet to be brought into use. Liquidated damages recoverable/ recovered have been reduced from the cost of the equipment pro rata to the respective item of capitalisation.

ವಿದ್ಯುತ್ ಸ್ಥಾವರ– ಸ್ಥಿರಾಸ್ತಿ ಮತ್ತು ಯಂತ್ರೋಪಕರಣಗಳನ್ನು KERC ಸವಕಳಿ ಲೆಕ್ಕಾಚಾರ ನಿಯಮಾನುಸಾರವಾಗಿ ಪ್ರತ್ಯೇಕವಾಗಿ ಗುರುತಿಸಿಲಾಗಿದೆ. ಯೋಜನೆಯ ವಾಣಿಜ್ಯ ಕಾರ್ಯಾಚರಣೆವರೆಗೂ ಮಾಡಲ್ಪಟ್ಟ ನೇರವಾದ ವೆಚ್ಚ ಮತ್ತು ಸಾಲದ ವೆಚ್ಚಗಳನ್ನು ಬಂಡವಾಳೀಕರಿಸಲಾಗಿದೆ. ಯಾವುದೇ ಉಪಯೋಗಿಸಲ್ಪಡದ ಆಸ್ತಿಯ ವೆಚ್ಚವು ಬಂಡವಾಳೀಕರಿಣದಲ್ಲಿ ಸೇರಿಸಿಲ್ಲ. ಸ್ಥಿರಾಸ್ತಿ ಮತ್ತು ಯಂತ್ರೋಪಕರಣಗಳ ಬಂಡವಾಳಗೊಳಿಸುವ ಹಂತದಲ್ಲಿ ಯಂತ್ರೋಪಕರಣ ವೆಚ್ಚದಿಂದ ವಸೂಲಾತಿಯಾಗಬೇಕಿರುವ / ವಸೂಲಾತಿಯಾಗಿರುವ ಋಣವಿಮೋಚನಾ ಹಾನಿಯ ಮೊತ್ತವನ್ನು ಪ್ರಮಾಣನುಸಾರಮಾಗಿ ಕಳೆಯಲಾಗಿದೆ.

In case of an item of property, plant and equipment acquired on exchange for an asset, cost is reliably measured at fair value of either the asset received or the asset given up. If the fair value is not available, the cost is measured at carrying amount of asset given up.

ಯಾವುದೇ ಸ್ಥಿರಾಸ್ತಿ ಮತ್ತು ಯಂತ್ರೋಪಕರಣಗಳನ್ನು ಮತ್ತೊಂದು ಆಸ್ತಿಯ ವಿನಿಮಯದಿಂದ ಸ್ವಾಧೀನಪಡಿಸಿಕೊಂಡ ಪಕ್ಷದಲ್ಲಿ, ಪಡೆದುಕೊಂಡ ಆಸ್ತಿಯ ಅಥವಾ ವಿನಿಮಯಗೊಂಡ ಆಸ್ತಿಯ ನ್ಯಾಯಾಯುತ ಮೌಲ್ಯದ ಆಧಾರದ ಮೇಲೆ ವೆಚ್ಚ ನಿಗದಿಪಡಿಸಲಾಗುವುದು. ನ್ಯಾಯಾಯುತ ಮೌಲ್ಯ ಇರದಿದ್ದ ಸಂದರ್ಭದಲ್ಲಿ, ವಿನಿಮಯಗೊಂಡ ಆಸ್ತಿಯ ನಿವ್ವಳ ಮೊತ್ತವನ್ನು ವೆಚ್ಚವನ್ನಾಗಿ ಪರಿಗಣಿಸಲಾಗುವುದು.

If significant parts of an item of property, plant and equipment have different useful lives, then they are accounted for as separate items (major components) of property, plant and equipment.

ಸ್ಥಿರಾಸ್ತಿ ಮತ್ತು ಯಂತ್ರೋಪಕರಣ ಮಹತ್ವದ ಭಾಗಗಳು ಬೇರೆ ಬೇರೆಯಾದ ಉಪಯುಕ್ತ ಅವಧಿಯನ್ನು ಹೊಂದಿದ ಪಕ್ಷದಲ್ಲಿ ಯಂತ್ರೋಪಕರಣ ಮತ್ತು ಆಸ್ತಿಗಳನ್ನು ಪ್ರತ್ಯೇಕವಾಗಿ ಪರಿಗಣಿಸಿ ಲೆಕ್ಕಾಚಾರ ಮಾಡಲಾಗುವುದು.

Any gain or loss on disposal of an item of property, plant and equipment is recognised in the statement of profit or loss.

ಯಾವುದೇ ಸ್ಥಿರಾಸ್ತಿ ಮತ್ತು ಯಂತ್ರೋಪಕರಣಗಳನ್ನು ವಿಲೇವಾರಿ ಮಾಡಿದ ಸಂದರ್ಭದಲ್ಲಿ ಯಾವುದೇ ಲಾಭ ಅಥವಾ ನಷ್ಟವನ್ನು ಲಾಭ ಅಥವಾ ನಷ್ಟ ತಃಖ್ತೆಯಲ್ಲಿ ಲೆಕ್ಕಾಚಾರ ಮಾಡಲಾಗುವುದು.

Spare parts, stand-by equipment and serving equipment are recognized as property, plant and equipment when it is probable that the future economic benefit associated with the item flow to the entity and cost can be reliably measured.

ಬಿಡಿಭಾಗಗಳು, ಉಪಯೋಗಿಸಲು ಸಿದ್ಧವಾಗಿರುವ ಉಪಕರಣಗಳ ವೆಚ್ಚವನ್ನು ಸಂಸ್ಥೆಗೆ ದೊರಕುವ ಭವಿಷ್ಯದ ಆರ್ಥಿಕ ಲಾಭಗಳ ಕಾಲಾವಧಿಯಿಂದ ಸ್ಥಿರಾಸ್ತಿ ಮತ್ತು ಯಂತ್ರೋಪಕರಣಗಳೆಂದು ಗುರುತಿಸಲ್ಪಡುತ್ತದೆ.

The cost of replacement of a part of an item of a property, plant and equipment is included in the carrying amount when it is probable that the future economic benefit associated with the item flow to the entity and cost can be reliably measured.

ಸ್ಥಿರಾಸ್ತಿ ಮತ್ತು ಯಂತ್ರೋಪಕರಣಗಳ ಭಾಗಗಳನ್ನು ಬದಲಾಯಿಸಲು ಮಾಡಿದ ವೆಚ್ಚವನ್ನು ಸ್ಥಿರಾಸ್ತಿ ಮತ್ತು ಯಂತ್ರೋಪಕರಣದ ನಿವ್ವಳ ವೆಚ್ಚದಲ್ಲಿ ಸಂಸ್ಥೆಗೆ ದೊರಕುವ ಭವಿಷ್ಯದ ಆರ್ಥಿಕ ಲಾಭಗಳ ಕಾಲಾವಧಿಯಿಂದ ಸೇರಿಸಲಾಗುವುದು.

Property, plant and equipment under construction are recognised as capital work-in-progress.

ನಿರ್ಮಾಣ ಹಂತದಲ್ಲಿರುವ ಸ್ಥಿರಾಸ್ತಿ ಮತ್ತು ಯಂತ್ರೋಪಕರಣಗಳನ್ನು ಪ್ರಗತಿಯಲ್ಲಿರುವ ಬಂಡವಾಳ ಕಾಮಗಾರಿಗಳೆಂದು ಪರಿಗಣಿಸಲಾಗುವುದು.

(ii) Subsequent expenditure / ತದನಂತರದ ವೆಚ್ಚ

Subsequent expenditure is capitalised only if it is probable that the future economic benefits associated with the expenditure will flow to the corporation and cost can be reliably measured

ಸ್ಥಿರವಾಗಿ ಸಂಸ್ಥೆಗೆ ದೊರಕುವ ಭವಿಷ್ಯದ ಆರ್ಥಿಕ ಲಾಭಗಳ ಕಾಲಾವಧಿಯಿಂದ ಸ್ಥಿರಾಸ್ತಿ ಮತ್ತು ಯಂತ್ರೋಪಕರಣಗಳ ಮೇಲೆ ಮಾಡಿರುವ ಆನಂತರದ ವೆಚ್ಚವನ್ನು ಬಂಡವಾಳೀಕರಣಗೊಳಿಸಲಾಗುವುದು.

(iii) Depreciation / ಸವಕಳಿ

Depreciation is calculated on cost of items of property, plant and equipment less their estimated residual values over their estimated useful lives using the straight-line method, and is generally recognised in the statement of profit and loss. Assets acquired under finance leases are depreciated over the shorter of the lease term and their useful lives unless it is reasonably certain that the Group will obtain ownership by the end of the lease term.

ಸ್ಥಿರಾಸ್ತಿ ಮತ್ತು ಯಂತ್ರೋಪಕರಣಗಳ ಮೇಲಿನ ಸವಕಳಿಯನ್ನು ಆಸ್ತಿಗಳ ವೆಚ್ಚದಿಂದ ಆಸ್ತಿಗಳ ಅಂದಾಜು ಉಳಿಕೆಯ ಮೌಲ್ಯವನ್ನು ಕಳೆದು ಆಸ್ತಿಗಳ ಅಂದಾಜು ಉಪಯುಕ್ತ ಅವಧಿಯ ಮೇರೆಗೆ ಸರಳರೇಖೆ ವಿಧಾನವನ್ನು ಅನುಸರಿಸಿ ಸವಕಳಿಯ ಲೆಕ್ಕಾಚಾರವನ್ನು ಮಾಡಲಾಗುವುದು. ಸಾಮಾನ್ಯವಾಗಿ ಸವಕಳಿ ವೆಚ್ಚವು ಲಾಭ ಅಥವಾ ನಷ್ಟ ತಃಖ್ತೆಯಲ್ಲಿ ಗುರುತಿಸ್ಪಡುತ್ತದೆ. ಹಣಕಾಸು ಭೋಗ್ಯದಡಿಯಲ್ಲಿ ಸ್ವಾಧೀನ ಪಡೆಸಿಕೊಂಡ ಆಸ್ತಿಯ ಸವಕಳಿಯನ್ನು ಭೋಗ್ಯದ ಅವಧಿ ಅಥವಾ ಆಸ್ತಿಯ ಉಪಯುಕ್ತ ಅವಧಿ ಯಾವುದು ಮೊದಲೊ ಆ ಅವಧಿಗೆ ಸವಕಳಿ ಮಾಡಲ್ಪಡುವುದು. ಆದರೆ, ಭೋಗ್ಯದ ಅವಧಿ ಕಡೆಯಲ್ಲಿ ಗುಂಪಿಗೆ ಆಸ್ತಿಯ ಮಾಲಿಕತ್ವ ದೊರೆತ ಪಕ್ಷದಲ್ಲಿ ಈ ಸವಕಳಿ ವಿಧಾನ ಅನ್ವಯವಾಗುವುದಿಲ್ಲ.

Freehold land is not depreciated.

ಹಿಡುವಳಿಮುಕ್ತ ಭೂಮಿಯ ಮೇಲೆ ಸವಕಳಿ ಲೆಕ್ಕಾಚಾರ ಮಾಡಿರುವುದಿಲ್ಲ.

The Group depreciates property, plant and equipment at the rates specified in the CERC Tariff Regulations from the date the assets are available for its intended use.

ಗುಂಪು ಸ್ಥಿರಾಸ್ತಿ ಮತ್ತು ಯಂತ್ರೋಪಕರಣಗಳ ಮೇಲಿನ ಸವಕಳಿಯನ್ನು ಆಸ್ತಿಗಳ ಉಪಯುಕ್ತ ಅವಧಿಯ ಪ್ರಾರಂಭದಿಂದ CERC ದರ ನಿಗದಿ ನಿಯಮಗಳ ಅನುಸಾರವಾಗಿ ನಿರ್ದಿಷ್ಟ ಸವಕಳಿ ದರಗಳ ಆಧಾರದ ಮೇಲೆ ಲೆಕ್ಕಾಚಾರ ಮಾಡಿರುತ್ತದೆ.

Depreciation on additions / (disposals) is provided on a pro-rata basis i.e. from / (upto) the date the assets are available for its intended use. (disposed of).

ಯಾವುದೇ ಯಂತ್ರೋಪಕರಣಗಳನ್ನು ಹೊಸದಾಗಿ ಸೇರಿಸಲ್ಪಟ್ಟಿದ್ದರೆ / (ವಿಲೇವಾರಿಯಾಗಿದ್ದಲ್ಲಿ) ಸೇರಿಸಲ್ಪಟ್ಟ / ವಿಲೇವಾರಿಯಾದ ದಿನಾಂಕದಿಂದ ಪ್ರಮಾಣನುಸಾರವಾಗಿ ಸವಕಳಿ ಲೆಕ್ಕಾಚಾರ ಮಾಡಲಾಗುವುದು.

Individual item of property, plant and equipment costing upto INR.5,000/- are fully depreciated in the year in which the assets are available for its intended use.

ರೂ.೫,೦೦೦ದ ವರೆಗೆ ಬೆಲೆ ಬಾಳುವ ಪ್ರತ್ಯೇಕ ಆಸ್ತಿಗಳನ್ನು ಬಳಸಿದ ವರ್ಷದಲ್ಲಿಯೇ ಪೂರ್ಣವಾಗಿ ಸವಕಳಿಯೆಂದು ಖರ್ಚು ಹಾಕಲಾಗುವುದು.

2 Intangible assets / ಅಗೋಚರ ಆಸ್ತಿಗಳು

Intangible asset that is internally generated / acquired by the Group which has finite useful life is measured at cost less accumulated amortization and accumulated impairment losses. Cost includes expenditure that is directly attributable to the internally generated/acquisition of the intangible asset and is capitalized and amortized in line with straight-line method at the rates specified in the CERC Tariff Regulations as applicable.

ಗುಂಪು ಆಂತರಿಕವಾಗಿ ಉತ್ಪಾದಿಸಲಾದ / ಸ್ವಾಧೀನ ಪಡಿಸಿಕೊಂಡ ನಿರ್ದಿಷ್ಟ ಉಪಯುಕ್ತ ಅವಧಿಯುಳ್ಳ ಅಗೋಚರ ಆಸ್ತಿಗಳ ವೆಚ್ಚದಿಂದ ಸಂಚಿತ ಸವಕಳಿ ಹಾಗೂ ದುರ್ಬಲತೆ ಹಾನಿಗಳನ್ನು ಕಳೆದು ತೋರಿಸಲಾಗಿದೆ. ಗುಂಪು ಆಂತರಿಕವಾಗಿ ಉತ್ಪಾದಿಸಲಾದ / ಸ್ವಾಧೀನ ಪಡಿಸಿಕೊಂಡ ಅಗೋಚರ ಆಸ್ತಿಗಳ ವೆಚ್ಚವು ನೇರವಾಗಿ ಮಾಡಿದ ವೆಚ್ಚವನ್ನು ಒಳಗೊಂಡಿರುತ್ತದೆ ಮತ್ತು ಬಂಡವಾಳೀಕರಣಗೊಳಿಸಲಾಗಿದೆ. CERC ದರ ನಿಗದಿ ನಿಯಮಗಳ ಅನುಸಾರವಾಗಿ ಸರಳ ರೇಖೆ ವಿಧಾನದಲ್ಲಿ ಸವಕಳಿಯನ್ನು ಲೆಕ್ಕಾಚಾರ ಮಾಡಿರಲಾಗುತ್ತದೆ.

3 Investment property / ಹೂಡಿಕೆ ಆಸ್ತಿ

Investment property (property held to earn rentals or for capital appreciation or both) are measured at cost less accumulated depreciation and less accumulated impairment loss, if any. The cost of an investment property comprises its purchase price and any directly attributable expenditure.

Any gain or loss on disposal of an investment property is recognised in profit or loss.

The fair values of investment property determined by a recognised professional independent valuer are disclosed in the notes where applicable.

ಹೂಡಿಕೆ ಆಸ್ತಿ (ಬಾಡಿಗೆ ಗಳಿಸುವ ಉದ್ದೇಶ ಅಥವಾ ಬಂಡವಾಳ ಬೆಲೆಯೇರಿಕೆ ಅಥವಾ ಎರಡು ಉದ್ದೇಶಗಳಿಗಾಗಿ ಹೊಂದಿರುವ ಆಸ್ತಿ) ವೆಚ್ಚದಿಂದ ಸಂಚಿತ ಸವಕಳಿ ಹಾಗೂ ದುರ್ಬಲತೆ ಹಾನಿಗಳನ್ನು ಕಳೆದು ತೋರಿಸಲ್ಪಡುವುದು. ಹೂಡಿಕೆ ಆಸ್ತಿಯ ವೆಚ್ಚವು ಖರೀದಿ ದರ ಹಾಗೂ ನೇರ ವೆಚ್ಚವನ್ನು ಒಳಗೊಂಡಿರುತ್ತದೆ.

ಹೂಡಿಕೆ ಆಸ್ತಿಯನ್ನು ವಿಲೇವಾರಿ ಮಾಡಿದ ಸಂದರ್ಭದಲ್ಲಿ ಯಾವುದೇ ಲಾಭ ಅಥವಾ ನಷ್ಟವನ್ನು, ಲಾಭ ಅಥವಾ ನಷ್ಟ ತಃಖ್ತೆಯಲ್ಲಿ ಲೆಕ್ಕಾಚಾರ ಮಾಡಲಾಗುವುದು.

ಮಾನ್ಯತೆ ಪಡೆದ ಸ್ವತಂತ್ರ ವೃತ್ತಿಪರ ಮೌಲ್ಯಮಾಪಕರು ನಿರ್ಧರಿಸಿದ ಹೂಡಿಕೆ ಆಸ್ತಿಯ ನ್ಯಾಯಾಯುತ ಮೌಲ್ಯವನ್ನು ಟಿಪ್ಪಣಿಗಳಲ್ಲಿ ಪ್ರಕಟಿಸಲಾಗಿದೆ.

4 Grants from Government / ಸರ್ಕಾರಿ ಅನುದಾನಗಳು

Government grants are recognised on certainty of receipt and compliance of conditions of such grants.

Government grants are recognised in the statement of profit and loss on a systematic basis over the period of recognising the related costs for which the grants are received.

ಸರ್ಕಾರಿ ಅನುದಾನಗಳನ್ನು ಸ್ವೀಕೃತಿಯ ನಿಶ್ಚಿತತೆ ಮತ್ತು ಅನುದಾನದ ಷರತ್ತುಗಳನ್ನು ಪಾಲಿಸುವ ಆಧಾರದ ಮೇಲೆ ಲೆಕ್ಕಾಚಾರ ಮಾಡಲಾಗುವುದು.

ಸರ್ಕಾರಿ ಅನುದಾನಗಳನ್ನು ಲಾಭ ಮತ್ತು ನಷ್ಟ ತಃಖ್ತೆಯಲ್ಲಿ ವ್ಯವಸ್ಥಿತ ಆಧಾರದ ಮೇಲೆ ಯಾವ ಉದ್ದೇಶಕ್ಕಾಗಿ ಅನುದಾನ ಬಿಡುಗಡೆಯಾಗಿದೆ ತತ್ಸಂಬಂಧ ವೆಚ್ಚಗಳ ಅವಧಿಯಲ್ಲಿ ಗುರುತಿಸಲ್ಪಡುವುದು.

5 Employee benefits / ಉದ್ಯೋಗಿ ಸೌಲಭ್ಯಗಳು

(i) Short term employee benefits / ಅಲ್ಪಾವಧಿ ಉದ್ಯೋಗಿ ಸೌಲಭ್ಯಗಳು

Short-term employee benefit obligations are measured on an undiscounted basis and are expensed or included in the cost of an asset as the related service is provided. Liabilities is respect of accumulating paid absences, payment of bonus and other statutory obligations are recognised, if the Group has obligation to pay as result of past services provided by the employee and the amount of obligation be estimated reliably.

ಅಲ್ಪಾವಧಿ ಉದ್ಯೋಗಿ ಸೌಲಭ್ಯ ಬಾಧ್ಯತೆಗಳನ್ನು ರಿಯಾಯಿತರಹಿತ ಆಧಾರದ ಮೇಲೆ ಗುರುತಿಸಲ್ಪಡುವುದು ಮತ್ತು ತತ್ಸಂಬಂಧ ಸೇವೆ ಪಡೆದ ಆಸ್ತಿಯ ವೆಚ್ಚಕ್ಕೆ ಸೇರಿಸಲ್ಪಡುವುದು ಅಥವಾ ವೆಚ್ಚವೆಂದು ಪರಿಗಣಿಸಲಾಗುವುದು. ಉದ್ಯೋಗಿಯು ಗುಂಪಿಗೆ ಸಲ್ಲಿಸಿದ ಹಿಂದಿನ ಸೇವೆಗಳ ಅನುಸಾರವಾಗಿ ಗುಂಪು ಪಾವತಿಸುವ ಬಾಧ್ಯತೆಯಿದ್ದು ಮತ್ತು ಬಾಧ್ಯತೆಯ ಮೊತ್ತವು ಅಂದಾಜು ಮಾಡಿದ್ದ ಪಕ್ಷದಲ್ಲಿ, ಸಂಚಿತ ವೇತನ ಸಹಿತ ರಜೆಗೆ ಸಂಬಂಧಿಸಿದ ಜವಾಬ್ದಾರಿಗಳನ್ನು, ಬೋನಸ್ ಪಾವತಿ ಮತ್ತು ಇನ್ನಿತರ ಶಾಸನಬದ್ಧ ಬಾಧ್ಯತೆಗಳು ಗುರುತಿಸಲ್ಪಡುತ್ತದೆ.

(ii) Defined contribution plans / ವ್ಯಾಖ್ಯಾನಿಸಲಾದ ಅಂಶದಾನ ಯೋಜನೆಗಳು

A defined contribution plan is a post-employment benefit plan under which an entity pays fixed contributions into a separate fund and will have no legal or constructive obligation to pay further contributions if the fund does not hold sufficient assets to pay all employee benefits relating to employee service in the current and prior periods. The obligations of contribution towards KPCL Retired Employees Medical Benefit Fund and National pension fund are defined contribution plans and are recognised as an employee benefit expense in the statement of profit or loss in the periods during which it is incurred.

ವ್ಯಾಖ್ಯಾನಿಸಲಾದ ಅಂಶದಾನ ಯೋಜನೆಯು ಒಂದು ಉದ್ಯೋಗಾವಧಿ ನಂತರದ ಕೊಡುಗೆ ಯೋಜನೆಯಾಗಿದ್ದು, ಇದರಡಿಯಲ್ಲಿ ಒಂದು ಸಂಸ್ಥೆಯು ನಿಗದಿಪಡಿಸಿದ ವಂತಿಗೆಗಳನ್ನು ಪ್ರತ್ಯೇಕ ನಿಧಿಗೆ ಪಾವತಿ ಮಾಡುತ್ತದೆ ಮತ್ತು ಪ್ರತ್ಯೇಕ ನಿಧಿಯಲ್ಲಿ ಪ್ರಸ್ತುತ ಅಥವಾ ಹಿಂದಿನ ಅವಧಿಯ ಉದ್ಯೋಗಿ ಸೇವೆಗೆ ಸಂಬಂಧಿಸಿದ ಉದ್ಯೋಗಿ ಸೌಲಭ್ಯಗಳನ್ನು ಪಾವತಿಸಲು ಬೇಕಾದ ಸಾಕಷ್ಟು ಆಸ್ತಿಗಳು ಇಲ್ಲದಿದ್ದ ಪಕ್ಷದಲ್ಲಿ ಸಂಸ್ಥೆಗೆ ಕಾನೂನು ಅಥವಾ ರಚನಾತ್ಮಕ ಬಾಧ್ಯತಾನುಸಾರ ಹೆಚ್ಚಿನ ಹಣ ನೀಡುವಂತ ಬಾಧ್ಯತೆ ಸಂಸ್ಥೆಯ ಮೇಲಿರುವುದಿಲ್ಲ. ನಿವೃತ್ತ ಉದ್ಯೋಗಿಗಳ ವೈದ್ಯಕೀಯ ಸೌಲಭ್ಯ ನಿಧಿ ಮತ್ತು ರಾಷ್ಟ್ರೀಯ ಪಿಂಚಣಿ ನಿಧಿ (NPS) ಗಳಿಗೆ ಪಾವತಿಸಬೇಕಾದ ವಂತಿಕೆಗಳ ಬಾಧ್ಯತೆಗಳು ವ್ಯಾಖ್ಯಾನಿಸಲಾದ ಅಂಶದಾನ ಯೋಜನೆಗಳಾಗಿರುತ್ತದೆ ಮತ್ತು ಯಾವ ಅವಧಿಯಲ್ಲಿ ಈ ವಂತಿಕೆಗಳು ಸಂಬಂಧಿಸಿರುತ್ತದೆ. ಆ ಅವಧಿಯ ಲಾಭ ಅಥವಾ ನಷ್ಟ ತಃಖ್ತೆಯಲ್ಲಿ ಉದ್ಯೋಗಿ ಸೌಲಭ್ಯ ವೆಚ್ಚವೆಂದು ಪರಿಗಣಿಸಲ್ಪಡುತ್ತದೆ.

Post-employment benefits / ಉದ್ಯೋಗಾವಧಿ ನಂತರದ ಸೌಲಭ್ಯಗಳು

(iii) Defined benefit plans / ವ್ಯಾಖ್ಯಾನಿಸಲಾದ ಸೌಲಭ್ಯ ಯೋಜನೆಗಳು

A defined benefit plan is a post-employment benefit plan other than a defined contribution plans. The Group's net obligation in respect of defined benefit plans is calculated separately for each plan by estimating the amount of future benefit that employees have earned in the current and prior periods, discounting that amount and deducting the fair value of any plan assets.

ವ್ಯಾಖ್ಯಾನಿಸಲಾದ ಸೌಲಭ್ಯ ಯೋಜನೆಯು ಉದ್ಯೋಗಾವಧಿ ನಂತರದ ಸೌಲಭ್ಯ ಯೋಜನೆಯಾಗಿರುತ್ತದೆ. ವ್ಯಾಖ್ಯಾನಿಸಲಾದ ಸೌಲಭ್ಯ ಯೋಜನೆಗಳ ಗುಂಪಿನ ನಿವ್ವಳ ಬಾಧ್ಯತೆಯನ್ನು ಪ್ರತಿಯೊಂದು ಯೋಜನೆಗೂ ಉದ್ಯೋಗಿಗಳು ಪ್ರಸ್ತುತ ಮತ್ತು ಹಿಂದಿನ ಅವಧಿಗಳಲ್ಲಿ ಉದ್ಯೋಗಿಗಳು ಭವಿಷ್ಯದ ಸೌಲಭ್ಯಕ್ಕಾಗಿ ಸಂಪಾದಿಸಿದ ಮೊತ್ತವನ್ನು ಅಂದಾಜು ಮಾಡಿ ಲೆಕ್ಕಾಚಾರ ಮಾಡಲಾಗುವುದು.

The entity determines the defined benefit liability / asset annually by referring the same for valuation by a qualified actuary. The qualified actuary valued the defined benefit obligation by using the projected unit credit method. The amounts recognised in the financial statements are based on such actuarial valuation. Such determination of defined benefit obligations takes into account any practices of constructive obligations. The obligations (in respect of each material plan) are recognised in the financial statements

ಸಂಸ್ಥೆಯು ವ್ಯಾಖ್ಯಾನಿಸಲಾದ ಸೌಲಭ್ಯದ ವಾರ್ಷಿಕ ಜವಾಬ್ದಾರಿ ಹಾಗೂ ಆಸ್ತಿಯನ್ನು ಪರಿಣಿತ ವಿಮಾಗಣಕ ಸಂಸ್ಥೆಯಿಂದ ಲೆಕ್ಕಾಚಾರ ಮಾಡಿಸಲಾಗುವುದು. ಪರಿಣಿತ ವಿಮಾಗಣಕರು ವ್ಯಾಖ್ಯಾನಿಸಲಾದ ಸೌಲಭ್ಯ ಯೋಜನೆಯ ಬಾಧ್ಯತೆಯನ್ನು ಯೋಜಿತ ಯುನಿಟ್ ಕ್ರೆಡಿಟ್ ವಿಧಾನವನ್ನು ಉಪಯೋಗಿಸಿ ಮೌಲ್ಯ ನಿರ್ಧಾರ ಮಾಡಿರುತ್ತಾರೆ. ಆರ್ಥಿಕ ವಿವರಣಾ ಪಟ್ಟಿಗಳಲ್ಲಿ ಗುರುತಿಸಲಾದ ಮೊತ್ತವು ವಿಮಾಗಣಕ ಮೌಲ್ಯಮಾಪನದ ಆಧಾರದ ಮೇಲೆ ಲೆಕ್ಕಾಚಾರ ಮಾಡಲಾಗಿದೆ.ಪ್ರತಿ ಯೋಜನೆಯ ಬಾಧ್ಯತೆಯನ್ನು ಆರ್ಥಿಕ ವಿವರಣಾ ಪಟ್ಟಿಗಳಲ್ಲಿ ಗುರುತಿಸಲಾಗಿದೆ.

a) In Statement of Profit & Loss / ಲಾಭ ಮತ್ತು ನಷ್ಟ ತಃಖ್ತೆಯಲ್ಲಿ

(i) Current service cost / ಚಾಲ್ತಿ ಸೇವಾ ವೆಚ್ಚ

(ii) Any past service cost and gain or loss on settlement / ಹಿಂದಿನ ಸೇವಾ ವೆಚ್ಚ ಮತ್ತು ಇತ್ಯರ್ಥದ ಮೇರೆಗೆ ಉಂಟಾದ ಲಾಭ ಮತ್ತು ನಷ್ಟ

(iii) Net interest on net defined benefit liability / ವ್ಯಾಖ್ಯಾನಿಸಲಾದ ಸೌಲಭ್ಯದ ನಿವ್ವಳ ಜವಾಬ್ದಾರಿಯ ಮೇಲಿನ ನಿವ್ವಳ ಬಡ್ಡಿ

b) In Other comprehensive income / ಇನ್ನಿತರ ಸಮಗ್ರ ಆದಾಯದಲ್ಲಿ

(i) Actuarial gains and losses / ವಿಮಾಗಣಕ ಲಾಭ ಮತ್ತು ನಷ್ಟಗಳು

(ii) Return on plan assets, excluding amounts included in net interest on the net defined benefit liability / ಯೋಜಿತ ಆಸ್ತಿಗಳ ಮೇಲಿನ ಆದಾಯ, ನಿವ್ವಳ ಜವಾಬ್ದಾರಿಯ ಮೇಲಿನ ನಿವ್ವಳ ಬಡ್ಡಿಯನ್ನು ಹೊರತುಪಡಿಸಿ

(iii) Any change in the effect of asset ceiling / ಆಸ್ತಿಯ ಗರಿಷ್ಟ ಪರಿಮಿತಿಯ ಪರಿಣಾಮದಿಂದಾಗುವ ಯಾವುದೇ ಬದಲಾವಣೆ

c) In the Balance sheet, the net defined benefit / asset is separately recognised and in respect of surplus in a defined plan, the net defined asset is measured at lower of

ಆರ್ಥಿಕ ವಿವರಣಾ ಪಟ್ಟಿಯಲ್ಲಿ, ನಿವ್ವಳ ವ್ಯಾಖ್ಯಾನಿಸಲಾದ ಸೌಲಭ್ಯ / ಆಸ್ತಿ ಪ್ರತ್ಯೇಕವಾಗಿ ಗುರುತಿಸಲಾಗಿದೆ ಮತ್ತು ವ್ಯಾಖ್ಯಾನಿಸಲಾದ ಯೋಜನೆಯಲ್ಲಿ ಮಿಗಿತ ಇರುವ ಪಕ್ಷದಲ್ಲಿ, ನಿವ್ವಳ ವ್ಯಾಖ್ಯಾನಿಸಲಾದ ಆಸ್ತಿಯನ್ನು ಈ ಎರಡು ಕೆಳಗಿನ ಕಡಿಮೆ ಮೊತ್ತದಲ್ಲಿ ಲೆಕ್ಕಾಚಾರ ಮಾಡಲಾಗಿದೆ.

a) Surplus in the defined benefit plan and / ವ್ಯಾಖ್ಯಾನಿಸಲಾದ ಸೌಲಭ್ಯ ಯೋಜನೆಯ ಮಿಗಿತ ಮತ್ತು

b) The asset ceiling / ಆಸ್ತಿಯ ಗರಿಷ್ಟ ಪರಿಮಿತಿ

When the benefits of a plan are changed or when a plan is curtailed, the resulting change in benefit that relates to past service ('past service cost' or 'past service gain') or the gain or loss on curtailment is recognised immediately in profit or loss. The Group recognises gains and losses on the settlement of a defined benefit plan when the settlement occurs.

ಯೋಜನೆಯ ಸೌಲಭ್ಯಗಳು ಬದಲಾವಣೆಯಾದಲ್ಲಿ ಅಥವಾ ಯೋಜನೆಯನ್ನು ಕಡಿತಗೊಳಿಸಿದಾಗ ಉಂಟಾಗುವ ಸೌಲಭ್ಯದಲ್ಲಿನ ಬದಲಾವಣೆಯನ್ನು ಹಿಂದಿನ ಸೇವಾವಧಿಗೆ ಸಂಬಂಧಪಟ್ಟದಲ್ಲಿ ಅಥವಾ ಯೋಜನೆ ಕಡಿತಗೊಳಿಸಿದರಿಂದ ಆಗುವ ಲಾಭ ಅಥವಾ ನಷ್ಟವೆಂದು ಗುರುತಿಸಲಾಗುವುದು. ಗುಂಪು ವ್ಯಾಖ್ಯಾನಿಸಲಾದ ಯೋಜನೆಯಲ್ಲಿ ಒಪ್ಪಂದ ನಡೆದಾಗ ಉಂಟಾಗುವ ಲಾಭ ಅಥವಾ ನಷ್ಟವನ್ನು ಒಪ್ಪಂದದ ಸಮಯದಲ್ಲಿ ಗುರುತಿಸಲಾಗುವುದು.

(iv) Long-term employee benefits / ಇನ್ನಿತರ ದೀರ್ಘಾವಧಿ ಉದ್ಯೋಗಿ ಸೌಲಭ್ಯಗಳು

The Other long-term benefits that arise consequent to employment contracts are recognised in Statement of Profit & Loss as

ಉದ್ಯೋಗಿ ಸಂಬಂಧಿತ ಕರಾರುಗಳ ಪರಿಣಾಮವಾಗಿ ಉಂಟಾಗುವ ಇನ್ನಿತರ ದೀರ್ಘಾವಧಿ ಉದ್ಯೋಗಿ ಸೌಲಭ್ಯಗಳನ್ನು ಲಾಭ ಮತ್ತು ನಷ್ಟ ತಃಖ್ತೆಯಲ್ಲಿ ಈ ಕೆಳಕಂಡಂತೆ ಗುರುತಿಸಲಾಗುವುದು.

(i) Service cost / ಸೇವಾ ವೆಚ್ಚ

(ii) Net interest on net defined benefit liability / ವ್ಯಾಖ್ಯಾನಿಸಲಾದ ಸೌಲಭ್ಯದ ನಿವ್ವಳ ಜವಾಬ್ದಾರಿಯ ಮೇಲಿನ ನಿವ್ವಳ ಬಡ್ಡಿ

(iii) Re-measurements of the net defined benefit liability / ನಿವ್ವಳ ವ್ಯಾಖ್ಯಾನಿಸಲಾದ ಸೌಲಭ್ಯದ ಜವಾಬ್ದಾರಿಯ ಮರುಮಾಪನ

Long term paid absences and other long-term employee benefits are provided for on the basis of an actuarial valuation, using projected unit credit method, as at each balance sheet date.

ದೀರ್ಘ ಕಾಲೀನ ಪಾವತಿಯ ಅಭಾವ ಹಾಗೂ ಇತರೆ ದೀರ್ಘಕಾಲೀನ ಉದ್ಯೋಗಿ ಸೌಲಭ್ಯಗಳಿಗೆ ಪ್ರಾಜೆಕ್ಟೆಡ್ ಯುನಿಟ್ ಕ್ರೆಡಿಟ್ ವಿಧಾನವನ್ನು ಬಳಸಿದ ವಿಮಾಗಣಕದ ಆಧಾರದ ಮೇಲೆ ಪ್ರತಿ ಆರ್ಥಿಕ ವಿವರಣಾ ಪಟ್ಟಿಯ ದಿನಾಂಕದಂದು ಅವಕಾಶವನ್ನು ಕಲ್ಪಿಸಲಾಗಿದೆ.

(v) Termination benefits / ನಿರ್ಗಮನ ಸೌಲಭ್ಯಗಳು

Termination benefits are recognised as expense at the earlier of when the Group can no longer withdraw the offer of those benefits and when the Group recognises costs for a restructuring. If benefits are not expected to be settled wholly within 12 months of the reporting date, then they are discounted.

ನಿರ್ಗಮನ ಸೌಲಭ್ಯಗಳನ್ನು ಗುಂಪು ಯಾವುದೇ ಕಾರಣಕ್ಕೆ ಅಂತಹ ಸೌಲಭ್ಯಗಳನ್ನು ಹಿಂಪಡೆಯಲು ಕಾರಣವಿಲ್ಲದಾಗ ವೆಚ್ಚವೆಂದು ಪರಿಗಣಿಸುತ್ತದೆ ಮತ್ತು ಗುಂಪು ಇಂತಹ ಸೌಲಭ್ಯಗಳನ್ನು ವರದಿ ದಿನಾಂಕದಿಂದ 12 ತಿಂಗಳೊಳಗೆ ಸಂಪೂರ್ಣವಾಗಿ ಹೊಂದಾಣಿಕೆ ಮಾಡದಿದ್ದ ಸಮದರ್ಭದಲ್ಲಿ ರಿಯಾಯಿತಿಗೊಳಿಸಲಾಗುವುದು.

6 Foreign exchange transactions / ವಿದೇಶಿ ವಿನಿಮಯ ವ್ಯವಹಾರಗಳು

Foreign currency transactions during the year are initially recognised in the functional currency at the rate of exchange prevailing at the date of transaction. Exchange differences arising on the settlement of such transactions are recognised in the Statement of Profit and Loss in the period in which they arise.

ವ್ಯವಹಾರ ದಿನಾಂಕದಂದು ಚಾಲ್ತಿಯಲ್ಲಿದ್ದ ವಿದೇಶಿ ದರಗಳನ್ನಾಧರಿಸಿ, ವಿದೇಶಿ ನಾಣ್ಯಗಳ ವ್ಯವಹಾರಗಳನ್ನು ಲೆಕ್ಕ ಪುಸ್ತಕಗಳಲ್ಲಿ ದಾಖಲಿಸಲಾಗಿದೆ. ಇಂತಹ ವ್ಯವಹಾರಗಳ ಒಪ್ಪಂದಗಳಿಂದ ಉಂಟಾಗುವ ವಿದೇಶಿ ವಿನಿಮಯದರದ ವ್ಯತ್ಯಾಸವನ್ನು ವಿದೇಶಿ ವ್ಯವಹಾರದ ವರ್ಷದಲ್ಲಿಯ ಲಾಭ ಅಥವಾ ಹಾನಿ ಎಂದು ಗುರುತಿಸಲಾಗುವುದು.

Foreign currency monetary items as at the balance date are translated using the closing rate; the resultant exchange differences are recognized in the Statement of Profit and Loss.

ವಿದೇಶಿ ನಾಣ್ಯದ ವಿತ್ತೀಯ ಅಂಶಗಳನ್ನು ಆರ್ಥಿಕ ವಿವರಣಾ ಪಟ್ಟಿಯ ದಿನಾಂಕದಂದು ಚಾಲ್ತಿಯಲ್ಲಿರುವ ವಿದೇಶಿ ವಿನಿಮಯದ ಕೊನೆಯ ದರದಲ್ಲಿ ಪರಿಗಣಿಸಲಾಗುವುದು.ವಿದೇಶಿ ವಿನಿಮಯ ದರದ ವ್ಯತ್ಯಾಸವನ್ನು ವಿದೇಶಿ ವ್ಯವಹಾರದ ವರ್ಷದಲ್ಲಿಯ ಲಾಭ ಅಥವಾ ಹಾನಿ ಎಂದು ಗುರುತಿಸಲಾಗುವುದು.

Non- Monetary items that are measured in terms of historical cost in a foreign currency and are translated using the exchange rate at the date of transaction.

ವಿತ್ತೀಯೇತರ ಅಂಶಗಳನ್ನು ವಿದೇಶಿ ನಾಣ್ಯದ ಚಾರಿತ್ರಿಕ ವೆಚ್ಚದಲ್ಲಿ ಅಳತೆ ಮಾಡಲಾಗುವುದು ಮತ್ತು ವಹಿವಾಟು ಮಾಡಿದ ದಿನಾಂಕದಂದು ಚಾಲ್ತಿಯಲ್ಲಿರುವ ವಿನಿಮಯ ದರದಲ್ಲಿ ಲೆಕ್ಕಾಚಾರ ಮಾಡಲಾಗುವುದು.

7 Leases / ಗುತ್ತಿಗೆ

At the inception of lease, the lease arrangement is classified as either a finance lease or an operating lease, based on the requirement of IND AS 17- Leases.

ಭಾರತೀಯ ಲೆಕ್ಕ ಮಾನದಂಡ – 17 'ಗುತ್ತಿಗೆಗಳು' (IND AS 17 – 'Leases') ನ್ನು ಆಧರಿಸಿ, ಅದರ ಅಗತ್ಯತೆಗಳನುಸಾರ ಗುತ್ತಿಗೆಯ ಆರಂಭದಲ್ಲಿಯೆ ಗುತ್ತಿಗೆ ವ್ಯವಸ್ಥೆಯನ್ನು ಆರ್ಥಿಕ ಗುತ್ತಿಗೆ ಅಥವಾ ಕಾರ್ಯಾಚರಣೆಯ ಗುತ್ತಿಗೆ ಎಂದು ವಿಭಾಗಿಸಬಹುದಾಗಿದೆ.

Operating Lease / ಕಾರ್ಯಾಚರಣೆಯ ಗುತ್ತಿಗೆ:

The total lease payments (including scheduled rental increase) in respect of an asset taken on operating lease are charged to the Statement of Profit and Loss on a straight-line basis over the lease term unless such payments are structured to increase in line with expected general inflation to compensate for the lessor's expected inflationary cost increases.

ನಿರೀಕ್ಷಿತ ಸಾಮಾನ್ಯ ಹಣದುಬ್ಬರವನ್ನು ಆಧರಿಸಿ ಗುತ್ತಿಗೆ ಕೊಟ್ಟವನ (Lessor) ನಿರೀಕ್ಷಿತ ಹಣದುಬ್ಬರದಿಂದಾಗುವ ವೆಚ್ಚದ ಹೆಚ್ಚಳವನ್ನು ಸರಿದೂಗಿಸಲು ಅನುಕೂಲವಾಗುವಂತೆ ಗುತ್ತಿಗೆಯ ಪಾವತಿಗಳನ್ನು ನಿಗದಿಪಡಿಸಿದ್ದೇ ಆದಲ್ಲಿ, ಕಾರ್ಯಾಚರಣೆಯ ಗುತ್ತಿಗೆಯನ್ನು ಆಧರಿಸಿ ತೆಗೆದುಕೊಂಡ ಆಸ್ತಿಯ ಒಟ್ಟು ಗುತ್ತಿಗೆ ಪಾವತಿಗಳನ್ನು (ನಿಗದಿಪಡಿಸಿದ ಬಾಡಿಗೆ ಹೆಚ್ಚಳ ಒಳಗೊಂಡು) ಗುತ್ತಿಗೆ ಅವಧಿಯ ಪರ್ಯಂತ ಸಮಾನವಾಗಿ ಲಾಭ ಮತ್ತು ನಷ್ಟ ಪಟ್ಟಿಗೆ ಆಕರಿಸಲಾಗುವುದು.

Finance lease / ಆರ್ಥಿಕ ಗುತ್ತಿಗೆ:

Assets taken on finance lease are initially capitalized at fair value of the asset or present value of the minimum lease payments at the inception of the lease, whichever is lower.

ಆರ್ಥಿಕ ಗುತ್ತಿಗೆಯನ್ನಾಧರಿಸಿ ತೆಗೆದುಕೊಂಡ ಆಸ್ತಿಯ ನ್ಯಾಯೋಚಿತ ಮೌಲ್ಯ ಅಥವಾ ಕನಿಷ್ಟ ಗುತ್ತಿಗೆ ಪಾವತಿಗಳ ಪ್ರಸ್ತುತ ಮೌಲ್ಯಗಳಲ್ಲಿ ಕಡಿಮೆಯಿರುವುದನ್ನು ಪರಿಗಣಿಸಿ ಆರಂಭದಲ್ಲಿಯೆ ಆಸ್ತಿಯನ್ನು ಬಂಡವಾಳೀಕರಣಗೊಳಿಸಲಾಗುವುದು.

Initial direct costs, if any, are also capitalized and subsequent to initial recognition, the asset is accounted for in accordance with the accounting policy applicable to that asset. Contingent rent shall be charged to profit or loss account in the period in which they are incurred.

ಆರ್ಥಿಕ ಗುತ್ತಿಗೆಯನ್ನಾದರಿಸಿ ತೆಗೆದುಕೊಂಡ ಆಸ್ತಿಗಳಿಗೆ ಅನ್ವಯಿಸುವ ಲೆಕ್ಕಾಚಾರದ ಧೋರಣೆಗಳಂತೆ ಆಸ್ತಿ ಸಂಬಂಧಿತ ಪ್ರಾರಂಭಿಕ ಪ್ರತ್ಯಕ್ಷ ವೆಚ್ಚಗಳು ಹಾಗೂ ತರುವಾಯ ತಗಲುವ ವೆಚ್ಚಗಳನ್ನು ಬಂಡವಾಳೀಕರಣಗೊಳಿಸಲಾಗುವುದು. ಅನಿಶ್ಚಿತ ಬಾಡಿಗೆಗಳನ್ನು ಯಾವ ಅವಧಿಯಲ್ಲಿ ಭರಿಸಲಾಗುವುದೊ, ಸಂಬಂಧಿತ ಅವಧಿಯ ಲಾಭ ಹಾನಿ ತಃಖ್ತೆ (ಪಟ್ಟಿ)ಗೆ ಆಕರಿಸಲಾಗುವುದು.

The Group is generally required to pay refundable security deposits for entering into various lease agreements with lessors. Such security deposits are financial assets and accordingly recognised.

ಗುತ್ತಿಗೆ ಆಧಾರದ ಮೇಲೆ ಆಸ್ತಿಗಳನ್ನು ಮಾರುವವರ ಜೊತೆಗೆ ವಿವಿಧ ಗುತ್ತಿಗೆ ಒಪ್ಪಂದಗಳನ್ನು ಮಾಡಿಕೊಳ್ಳುವಾಗ ಗುಂಪು ಸಾಮಾನ್ಯವಾಗಿ ಮರುಪಾವತಿಸಬಹುದಾದ ಭದ್ರತಾ ಠೇವಣಿಯನ್ನು ಪಾವತಿಸಬೇಕಾಗುವುದು. ಅಂತಹ ಭದ್ರತಾ ಠೇವಣಿಗಳು ಆರ್ಥಿಕ ಆಸ್ತಿಗಳಾಗಿದ್ದು ಮತ್ತು ಆ ಪ್ರಕಾರವಾಗಿ ಗುರುತಿಸಲಾಗುವುದು.

8 Inventories / ಸರಕುಗಳ ವಿವರಗಳು

Raw coal, washed Coal, imported coal, oil, stores, spares and other materials are valued at the lower of cost and net realizable value.

Cost is determined on monthly weighted average basis for

ಕಚ್ಚಾ ಮತ್ತು ತೊಳೆದ ಹಾಗೂ ಆಮದಾದ ಕಲ್ಲಿದ್ದಲು, ತೈಲ, ಬಿಡಿಭಾಗಗಳು ಮತ್ತು ಇತರೆ ವಸ್ತುಗಳನ್ನು ಬೆಲೆ ಅಥವಾ ನಿವ್ವಳ ಪರಿವರ್ತಿತ ಮೌಲ್ಯದಲ್ಲಿ ಯಾವುದು ಕಡಿಮೆಯೋ ಅದರಂತೆ ಬೆಲೆಯನ್ನು ಗೊತ್ತುಪಡಿಸಲಾಗಿದೆ.

ತಿಂಗಳ ಸರಾಸರಿ ಆಧಾರದ ಮೇಲೆ ದರವನ್ನು ಕೆಳಗೆ ನಮೂದಿಸಿದಂತೆ ನಿರ್ಧರಿಸಲಾಗಿದೆ.

a) raw coal, washed coal and imported coal put together and

ಎ) ಕಚ್ಚಾ, ತೊಳೆದ ಮತ್ತು ಆಮದಾದ ಕಲ್ಲಿದ್ದಲಿನ ಒಟ್ಟು ವೆಚ್ಚ ಪರಿಗಣಿಸಲಾಗಿದೆ ಮತ್ತು

b) moving average basis for other items.

ಬಿ) ಇತರೆ ವಸ್ತುಗಳಿಗೆ ಚಲಿಸುವ ಸರಾಸರಿ ದರವನ್ನು ಅಳವಡಿಸಲಾಗಿದೆ

The cost of inventories shall comprise of all the costs of purchase, cost of conversion and other costs incurred in bringing the inventories to their present location and condition.

ದಾಸ್ತಾನುಗಳ ವೆಚ್ಚವು ಖರೀದಿ ವೆಚ್ಚ, ಪರಿವರ್ತನೆಯ ವೆಚ್ಚ ಹಾಗೂ ದಾಸ್ತಾನುಗಳನ್ನು ಪ್ರಸ್ತುತ ಸ್ಥಳಕ್ಕೆ ತರಲು ಭರಿಸಿದ ಎಲ್ಲಾ ತರಹದ ವೆಚ್ಚಗಳನ್ನು ಒಳಗೊಂಡಿರುವುದು.

Net realisable value is the estimated selling price in the ordinary course of business, less the estimated costs of completion and estimated cost necessary to make the sale.

ನಿವ್ವಳ ಪ್ರಾಪ್ತ ಮೌಲ್ಯವು ಸಾಮಾನ್ಯ ವ್ಯಾಪಾರ ವಹಿವಾಟಿನ ಅಂದಾಜು ಮಾರಾಟ ಬೆಲೆಯಲ್ಲಿ ಅಂದಾಜು ಉತ್ಪಾದನಾ ಹಾಗೂ ಮಾರಾಟ ವೆಚ್ಚಗಳನ್ನು ಕಳೆದಾಗ ಲಭಿಸುವ ಮೌಲ್ಯವಾಗಿರುವುದು.

Compensation paid or received from collieries for variation in grade of coal purchased is accounted on acceptance by the collieries. Pursuant to accounting of such compensation, cost of coal is adjusted to the annual average rate, if necessary.

ಖರೀದಿಸಿದ ಕಲ್ಲಿದ್ದಿಲಿನ ದರ್ಜೆಯಲ್ಲಿನ ವ್ಯತ್ಯಾಸಕ್ಕಾಗಿ ಕೊಲ್ಯೆರಿಗಳಿಗೆ ಪಾವತಿಸಿದ ಅಥವಾ ಅವರಿಂದ ಪಡೆದ ಪರಿಹಾರವನ್ನು ಕೊಲ್ಯೆರಿಗಳ ಸ್ವೀಕೃತಿಯ ಮೇರೆಗೆ ಖಾತೆಗೆ ತೆಗೆದುಕೊಳ್ಳಲಾಗಿದೆ. ಇಂತಹ ಪರಿಹಾರದ ಲೆಕ್ಕಾಚಾರಕ್ಕೆ ಅನುಗುಣವಾಗಿ, ಅವಶ್ಯವಿದ್ದಲ್ಲಿ ಕಲ್ಲಿದ್ದಿಲಿನ ವೆಚ್ಚವನ್ನು ವಾರ್ಷಿಕ ಸರಾಸರಿ ದರಕ್ಕೆ ಹೊಂದಾಣಿಕೆ ಮಾಡಲಾಗಿದೆ.

9 Borrowing Costs / ಎರವಲು ವೆಚ್ಚಗಳು

Borrowing costs that are attributable to the construction/ acquisition of qualifying asset under a project are capitalized as a part of the cost of such assets. A qualifying asset is one that necessarily takes substantial period of time to get ready for intended use.

ನಿರ್ದಿಷ್ಟ ಯೋಜನೆಗೆ ಸಂಬಂಧಿಸಿದ ಅರ್ಹತಾ ಆಸ್ತಿಯ ನಿರ್ಮಾಣಕ್ಕಾಗಿ ಅಥವಾ ಸ್ವಾಧೀನಕ್ಕಾಗಿ ತಗುಲಿದ ಎರವಲು ವೆಚ್ಚವನ್ನು ಅಂತಹ ಆಸ್ತಿಯ ವೆಚ್ಚದ ಭಾಗವೆಂದು ಪರಿಗಣಿಸಿ ಬಂಡವಾಳಕರಣಗೊಳಿಸಲಾಗುವುದು. ಒಂದು ಅರ್ಹತಾ ಆಸ್ತಿಯು ಉದ್ದೇಶಿತ ಬಳಕೆಗಾಗಿ ತಯಾರಾಗಲು ಅಗತ್ಯವಾದ ಸಮಯವನ್ನು ತೆಗೆದುಕೊಳ್ಳುತ್ತದೆ.

Non-specific borrowing costs for acquisition of qualifying assets are apportioned to individual works in the ratio of expenditure on works to such borrowing costs, such costs are determined on the basis of weighted average cost of the borrowings outstanding during the period.

ಅರ್ಹತಾ ಆಸ್ತಿಗಳನ್ನು ಸ್ವಾಧೀನಪಡಿಸಿಕೊಳ್ಳಲು ತಗುಲಿದ ನಿರ್ದಿಷ್ಟವಲ್ಲದ ಎರವಲು ವೆಚ್ಚವನ್ನು, ಕಾಮಗಾರಿ ವೆಚ್ಚಕ್ಕೆ ಎರವಲು ವೆಚ್ಚದ ಅನುಪಾತದಲ್ಲಿ ಪ್ರತ್ಯೇಕವಾಗಿ ಒಂದೊಂದು ಕಾಮಗಾರಿಗಳಿಗೆ ಹಂಚಲಾಗುತ್ತದೆ, ಅಂತಹ ಎರವಲು ವೆಚ್ಚಗಳನ್ನು ಅವಧಿಯ ಅಂತ್ಯದಲ್ಲಿ ಬಾಕಿಯಿರುವ ಸಾಲಗಳ ಸರಾಸರಿ ಸರಿದೂಗಿಸಿದ ವೆಚ್ಚದ ಆಧಾರದ ಮೇಲೆ ನಿರ್ಧರಿಸಲಾಗುತ್ತದೆ.

Interest receipts on deposits made out of project funds and on advances to contractors for capital works are adjusted / setoff against the respective asset/expenditure pending capitalization in respect of new projects

ಠೇವಣಿಯಾಗಿರಿಸಿದ ಬಳಸದಿರುವ ಯೋಜನಾ ನಿಧಿಯಿಂದ ಸ್ವೀಕೃತವಾದ ಬಡ್ಡಿ ಮತ್ತು ಬಂಡವಾಳ ಕಾಮಗಾರಿಗಾಗಿ ಗುತ್ತಿಗೆದಾರರಿಗೆ ನೀಡಿದ ಮುಂಗಡದ ಮೇಲಿನ ಬಡ್ಡಿಯನ್ನು ಬಂಡವಾಳೀಕರಣ ಬಾಕಿಯಿರುವ ಸಂಬಂಧಿಸಿದ ಆಸ್ತಿ / ವೆಚ್ಚವನ್ನು ಆಧರಿಸಿ ಹಂಚಿಕೆ ಮಾಡಲಾಗುವುದು.

10 Earnings per share / ಪ್ರತಿ ಷೇರಿನ ಗಳಿಕೆ

The basic earnings / (loss) per share is computed by dividing the net profit / (loss) attributable to equity shareholders of the Group for the year by the weighted average number of equity shares outstanding during the year.

ಗುಂಪಿನ ಈಕ್ವಿಟಿ ಷೇರುದಾರರಿಗೆ ಸೇರಬೇಕಾದ ವಾರ್ಷಿಕ ನಿವ್ವಳ ಲಾಭ / ಹಾನಿಯನ್ನು ಷೇರುಗಳ ಸರಿದೂಗಿಸಿದ ಸರಾಸರಿ ಸಂಖ್ಯೆಯಿಂದ ವಿಭಜಿಸುವ ಮೂಲಕ ಪ್ರತಿ ಇಕ್ವಿಟಿ ಷೇರುದಾರರಿಗೆ ಸಲ್ಲಬೇಕಾದ ಪ್ರತಿ ಷೇರಿನ ಗಳಿಕೆ / (ಹಾನಿ) ಯನ್ನು ಲೆಕ್ಕಹಾಕಲಾಗುತ್ತದೆ.

11 Provisions, Contingent Liabilities and Contingent Assets / ಮುನ್ನೇರ್ಪಾಡುಗಳು, ಅನಿಶ್ಚಿತ ಹೊಣೆಗಾರಿಕೆಗಳು ಮತ್ತು ಅನಿಶ್ಚಿತ ಸ್ವತ್ತುಗಳು

Provisions are recognized when there is a present obligation (legal or Constructive) as a result of past events and it is probable that an outflow of resources will be required to settle the obligation which can be reliably estimated. The amount of provision is measured by the best estimate of the expenditure to settle the present obligation at the end of the reporting period.

ಹಿಂದಿನ ಘಟನೆಗಳ ಪರಿಣಾಮವನ್ನಾಧರಿಸಿ, ಪ್ರಸ್ತುತವಾಗಿ ಕಾನೂನುಬದ್ಧ ಅಥವಾ ರಚನಾತ್ಮಕ ಬಾಧ್ಯತೆಗಳು ಉಂಟಾದಾಗ ಮತ್ತು ಅಂತಹ ಬಾಧ್ಯತೆಗಳನ್ನು ಇತ್ಯರ್ಥಗೊಳಿಸಲು ಸಂಪನ್ಮೂಲಗಳ ಹೊರ ಹರಿವು ಸಂಭಾವ್ಯವಾಗಿದ್ದು ಮತ್ತು ಇದನ್ನು ನಿಖರವಾಗಿ ಅಂದಾಜಿಸಬಹುದಾಗಿದ್ದಲ್ಲಿ, ಅಂತಹ ಬಾಧ್ಯತೆಗಳಿಗಾಗಿ ಮುನ್ನೇರ್ಪಾಡುಗಳನ್ನು ಗುರುತಿಸಲಾಗುವುದು.

Provisions are generally considered as financial liabilities. Where effect of time value of money is material the provisions are discounted at appropriate discount rate.

ಮುನ್ನೇರ್ಪಾಡುಗಳನ್ನು ಸಾಮಾನ್ಯವಾಗಿ ಹಣಕಾಸಿನ ಹೊಣೆಗಾರಿಕೆಗಳಾಗಿ ಪರಿಗಣಿಸಲಾಗುತ್ತದೆ. ಕಾಲಾವಧಿಯ ಹಣದ ಮೌಲ್ಯದಲ್ಲಿನ ಪರಿಣಾಮವು ಮುಖ್ಯವಾದಲ್ಲಿ, ಮುನ್ನೇರ್ಪಾಡುಗಳನ್ನು ನಿಯತವಾದ ಬೆಲೆಯಲ್ಲಿ ಗುರುತಿಸಲಾಗುವುದು.

Provision are not recognized for future operating losses.

ಭವಿಷ್ಯದ ಕಾರ್ಯಾಚರಣೆಯ ನಷ್ಟಗಳಿಗಾಗಿ ಮುನ್ನೇರ್ಪಾಡುಗಳನ್ನು ಗುರುತಿಸಲಾಗುವುದಿಲ್ಲ.

Contingent liability is disclosed for (i) possible obligation that arises from past events and whose existences will be confirmed by the occurrence or non-occurrence of one or more future uncertain events not wholly within the control of the Group or (ii) present obligation that arises from past events where it is not probable that an outflow of resources embodying economic benefits will be required to settle the obligation or the amount of the obligation cannot be measured with sufficient reliability.

ಅನಿಶ್ಚಿತ ಹೊಣೆಗಾರಿಕೆಗಳನ್ನು ಈ ಕೆಳಗಿನ ಸಂದರ್ಭಗಳಲ್ಲಿ ಬಹಿರಂಗಪಡಿಸಲಾಗುವುದು. (i) ಹಿಂದಿನ ಘಟನೆಗಳಿಂದ ಉದ್ಭವಿಸುವ ಸಂಭವನೀಯ ಬಾಧ್ಯತೆ ಮತ್ತು ಅದರ ದೃಢಿಕರಣವು, ಒಂದು ಅಥವಾ ಅದಕ್ಕಿಂತ ಹೆಚ್ಚಿನ ಭವಿಷ್ಯದ ಅನಿಶ್ಚಿತ ಘಟನೆಗಳ ಸಂಭವಿಸುವಿಕೆ ಅಥವಾ ಸಂಭವಿಸದಿರುವಿಕೆಯನ್ನು ಆಧರಿಸಿದ್ದು ಹಾಗೂ ಅದು ಸಂಪೂರ್ಣವಾಗಿ ಗುಂಪಿನ ನಿಯಂತ್ರಣದಲ್ಲಿರುವುದಿಲ್ಲ. (ii) ಹಿಂದಿನ ಘಟನೆಗಳಿಂದ ಉದ್ಭವಿಸುವ ಪ್ರಸ್ತುತ ಬಾಧ್ಯತೆಗಳನ್ನು ಬಗೆಹರಿಸಲು (ಇತ್ಯರ್ಥಗೊಳಿಸಲು), ಆರ್ಥಿಕ ಪ್ರಯೋಜನಗಳನ್ನು ಒಳಗೊಂಡ ಸಂಪನ್ಮೂಲಗಳ ಹೊರ ಹರಿವಿನ ಸಾಧ್ಯತೆಯ ಸಂಭವನೀಯತೆಯು ನಿಚ್ಚಳವಾಗಿರುವುದಿಲ್ಲ ಅಥವಾ ಬಾಧ್ಯತೆಯ ಇತ್ಯರ್ಥಕ್ಕಾಗಿ ಬೇಕಾಗುವ ಹಣವನ್ನು ನಿರ್ದಿಷ್ಟವಾಗಿ ಅಂದಾಜಿಸಲಾಗುವುದಿಲ್ಲ.

Contingent Assets are disclosed, where an inflow of economic benefits is probable.

ಆರ್ಥಿಕ ಪ್ರಯೋಜನೆಗಳ ಒಳಹರಿವು ಸಂಭವನೀಯವಾಗಿರುವಲ್ಲಿ ಅನಿಶ್ಚಿತ ಸ್ವತ್ತುಗಳನ್ನು ಬಹಿರಂಗಪಡಿಸಲಾಗುವುದು.

12 Impairment of assets / ಆಸ್ತಿಗಳ ದುರ್ಬಲತೆ

The Group assesses at each balance sheet date whether there is any indication that an asset may be impaired.

ಗುಂಪು ಪ್ರತಿ ಅಢಾವೆಪತ್ರದ ದಿನಾಂಕದಂದು, ಯಾವುದಾದರು ಆಸ್ತಿ ದುರ್ಬಲಗೊಂಡಿದೆಯೋ, ಇಲ್ಲವೋ ಎಂದು ನಿರ್ಧರಣೆ ಮಾಡುತ್ತದೆ.

An asset is treated as impaired when the carrying cost of the asset exceeds its recoverable value. An impairment loss is charged to the Statement of Profit and Loss in the year in which an asset is identified as Impaired.

ಆಸ್ತಿಯ ಪುಸ್ತಕ ಮೌಲ್ಯವು, ಭವಿಷ್ಯತ್ತಿನಲ್ಲಿ ಅಂತಹ ಆಸ್ತಿಯ ಬಳಕೆಯಿಂದ ಪಡೆಯಬಹುದಾದ ಆದಾಯದ ಪ್ರಸ್ತುತ ಮೌಲ್ಯಕ್ಕಿಂತ ಜಾಸ್ತಿಯಾಗಿದ್ದರೆ, ಅಂತಹ ಆಸ್ತಿಯನ್ನು ದುರ್ಬಲ ಆಸ್ತಿಯೆಂದು ಪರಿಗಣಿಸಲಾಗುವುದು. ಆಸ್ತಿಯನ್ನು ದುರ್ಬಲವೆಂದು ಗುರುತಿಸಿದ ಆರ್ಥಿಕ ವರ್ಷದ ಲಾಭ ಮತ್ತು ನಷ್ಟ ತಃಖ್ತೆಯಲ್ಲಿ ಗುರುತಿಸಲ್ಪಟ್ಟ ಆಸ್ತಿಗಳ ದುರ್ಬಲತೆಯ ಹಾನಿಯನ್ನು ನಮೂದಿಸಲಾಗುವುದು.

Impairment loss recognized in prior accounting period is assessed at each Balance Sheet date and if there has been a change in the estimate of recoverable amount, accordingly reversed or further loss recognized.

ಹಿಂದಿನ ಅವಧಿಯಲ್ಲಿ ಗುರುತಿಸಲಾದ ಆಸ್ತಿಗಳ ದುರ್ಬಲತೆಯ ನಷ್ಟವನ್ನು ಪ್ರತಿ ಅಢಾವೆಪತ್ರದ ದಿನಾಂಕದಂದು ಮರುಮೌಲ್ಯಮಾಪನ ಮಾಡಲಾಗುತ್ತದೆ ಮತ್ತು ಅಸ್ತಿಗಳಿಂದ ಹಿಂಪಡೆಯಬಹುದಾದ ಮೊಬಲಗುವಿನ ಅಂದಾಜು ಮೊತ್ತದಲ್ಲಿ ಬದಲಾವಣೆಯಾದಾಗ, ಹಿಂದಿನ ಲೆಕ್ಕಪತ್ರ ಅವಧಿಯಲ್ಲಿ ಗುರುತಿಸಲ್ಪಟ್ಟ ಆಸ್ತಿಗಳ ದುರ್ಬಲತೆಯ ಹಾನಿಯನ್ನು ವಿಪರ್ಯಾಯ ಮಾಡಲಾಗುವುದು ಅಥವಾ ಹೆಚ್ಚಿನ ನಷ್ಟವನ್ನು ಪರಿಗಣಿಸಲಾಗುವುದು.

13 Income Taxes / ಆದಾಯ ತೆರಿಗೆಗಳು

Income-tax expense comprises current tax (i.e. amount of tax for the period determined in accordance with the income-tax law) and deferred tax charge or credit (reflecting the tax effect of temporary differences between the carrying amount of an asset or liability in the balance sheet and its tax base)

Current tax and deferred tax is recognised as income or expense in the statement of profit and loss for the period except to the extent that

a) tax in other comprehensive income is recognised in other comprehensive income

b) tax on equity is recognised in equity

ಆದಾಯ ತೆರಿಗೆ ವೆಚ್ಚವು; ಪ್ರಸ್ತುತ ತೆರಿಗೆ (ಅರ್ಥಾತ್, ಒಂದು ಅವಧಿಗೆ ಆದಾಯ ತೆರಿಗೆ ನಿಯಮಾವಳಿಗಳ ಅನುಸಾರ ನಿರ್ಧರಿಸಲ್ಪಟ್ಟ ಮೊತ್ತ) ಮತ್ತು ಮುಂದೂಡಲ್ಪಟ್ಟ ತೆರಿಗೆ ವೆಚ್ಚ ಅಥವಾ ಆದಾಯ (ಅರ್ಥಾತ್, ಆಸ್ತಿಗಳ ಅಥವಾ ಹೊಣೆಗಾರಿಕೆಗಳ ಪ್ರಸ್ತುತ ಅಢಾವೆ ಪತ್ರದಲ್ಲಿನ ಮೌಲ್ಯ ಹಾಗೂ ತೆರಿಗೆಗಾಗಿ ನಮೂದಿಸಲಟ್ಟ ಮೌಲ್ಯದಲ್ಲಿನ ತಾತ್ಕಾಲಿಕ ವ್ಯತ್ಯಾಸದಿಂದಾದ ತೆರಿಗೆ ಪರಿಣಾಮದ ಮೊತ್ತ) ವನ್ನು ಒಳಗೊಂಡಿರುತ್ತದೆ.

ಮೇಲಿನವುಗಳ ಹೊರತಾಗಿ ಪ್ರಸ್ತುತ ತೆರಿಗೆ ಮತ್ತು ಮುಂದೂಡಲ್ಪಟ್ಟ ತೆರಿಗೆ ವೆಚ್ಚ ಅಥವಾ ಆದಾಯವನ್ನು ಸದರಿ ವರ್ಷದ ಲಾಭ ಮತ್ತು ನಷ್ಟ ತಃಖ್ತೆಯಲ್ಲಿ ನಮೂದಿಸಲಾಗುವುದು.

(ಅ) ಇತರೆ ಸಮಗ್ರ ಆದಾಯದ ಮೇಲಿನ ತೆರಿಗೆಯನ್ನು ಇತರ ಸಮಗ್ರ ಆದಾಯದಲ್ಲಿ ಗುರುತಿಸಲ್ಪಟ್ಟಿದೆ.

(ಆ) ಶೇರುದಾರರ ನಿಧಿ (ಇಕ್ವಿಟಿ) ಮೇಲಿನ ತೆರಿಗೆಯನ್ನು ಇಕ್ವಿಟಿಯಲ್ಲಿ ಗುರುತಿಸಲಾಗಿದೆ.

(i) Current tax / ಪ್ರಸ್ತುತ ತೆರಿಗೆ

Current tax is the expected tax payable on the taxable income for the year, using tax rates enacted or substantially enacted at the reporting date.

ಲಾಭ ಮತ್ತು ಹಾನಿಯನ್ನು ಗುರುತಿಸುವ ದಿನಾಂಕದಂದು ಚಾಲ್ತಿಯಲ್ಲಿರುವ ಕಾನೂನಿನ ಅನ್ವಯ ರೂಪಿಸಿದ/ ಗಣನೀಯವಾಗಿ ರೂಪಿಸಿದ ತೆರಿಗೆ ದರಗಳನ್ನು ಅನ್ವಯಿಸಿ ಪ್ರಸ್ತುತ ಅವಧಿಯ ತೆರಿಗೆಗೊಳಪಟ್ಟ ಆದಾಯದ ಮೇಲೆ ಕೊಡಲ್ಪಡುವ ಅಂದಾಜಿಸಿದ ತೆರಿಗೆಯನ್ನು ಪ್ರಸ್ತುತ ತೆರಿಗೆಯೆಂದು ಕರೆಯಲ್ಪಡುವುದು.

(ii) Deferred tax / ಮುಂದೂಡಲ್ಪಟ್ಟ ತೆರಿಗೆ

Deferred tax is amount of income tax payable (recoverable) in future period in respect of taxable (Deductible) temporary differences. Temporary differences are differences between the carrying amount of an asset or liability in the balance sheet and its tax base.

ಮುಂದೂಡಲ್ಪಟ್ಟ ತೆರಿಗೆಯು, ಭವಿಷ್ಯದ ಅವಧಿಯಲ್ಲಿ ತೆರಿಗೆ ಸಂಬಂಧಿತ ತಾತ್ಕಾಲಿಕ ವ್ಯತ್ಯಾಸಗಳಿಗೆ ಕೊಡಬಹುದಾದ (ಪಡೆಯಬಹುದಾದ) ಆದಾಯ ತೆರಿಗೆಯ ಮೊತ್ತವಾಗಿದೆ. ತಾತ್ಕಾಲಿಕ ವ್ಯತ್ಯಾಸಗಳು ಆಸ್ತಿಗಳ ಅಥವಾ ಹೊಣೆಗಾರಿಕೆಗಳ ಪ್ರಸ್ತುತ ಅಢಾವೆ ಪತ್ರದಲ್ಲಿನ ಮೌಲ್ಯ ಹಾಗೂ ತೆರಿಗೆಗಾಗಿ ನಮೂದಿಸಲಟ್ಟ ಮೌಲ್ಯದಲ್ಲಿನ ತಾತ್ಕಾಲಿಕ ವ್ಯತ್ಯಾಸವಾಗಿರುವುದು.

Tax base of an asset or liability is the amount attributable to that asset or liability for tax purposes.

ತೆರಿಗೆ ಉದ್ದೇಶಗಳಿಗೋಸ್ಕರ ಆಸ್ತಿ ಅಥವಾ ಹೊಣೆಗಾರಿಕೆಗಳಿಗೆ ಸಂಬಂಧಿಸಿದ್ದೆನ್ನಲಾದ ಮೊಬಲಗು, ಆಸ್ತಿ ಅಥವಾ ಹೊಣೆಗಾರಿಕೆಗಳ ತೆರಿಗೆಗಾಗಿ ನಮೂದಿಸಲಟ್ಟ ಮೌಲ್ಯವಾಗಿರುವುದು.

Deferred income tax assets and liabilities are measured at the tax rates that are expected to apply in the period when the asset is realized or the liability is settled, based on tax rates (and tax laws) that have been enacted or substantively enacted at the reporting date.

ವರದಿಯ ದಿನಾಂಕದಂದು ರೂಪಿಸಿದ / ಗಣನೀಯವಾಗಿ ರೂಪಿಸಿದ ತೆರಿಗೆ ದರಗಳ (ತೆರಿಗೆ ಕಾನೂನುಗಳ) ಮೇರೆಗೆ ಆಸ್ತಿಗಳನ್ನು ವಿಲೇವಾರಿ ಮಾಡಿದಾಗ ಅಥವಾ ಹೊಣೆಗಾರಿಕೆಗಳನ್ನು ಪಾವತಿಸಿದ ಅವಧಿಯಲ್ಲಿ ಬಹುತೇಕವಾಗಿ ಅನ್ವಯಿಸುವ ತೆರಿಗೆ ದರಗಳನ್ನು ಆಧರಿಸಿ ಮುಂದೂಡಲ್ಪಟ್ಟ ತೆರಿಗೆ ಆಸ್ತಿ ಮತ್ತು ಹೊಣೆಗಾರಿಕೆಗಳನ್ನು ಪರಿಮಾಣಿಸಲಾಗುವುದು.

Deferred income tax asset is recognized for all deductible temporary differences to the extent that it is probable that taxable profit will be available against which the deductible temporary differences.

ಕಡಿತಕ್ಕೊಳಗಾಗುವ (Deductible) ಎಲ್ಲ ತಾತ್ಕಾಲಿಕ ವ್ಯತ್ಯಾಸಗಳನ್ನು ಹೊಂದಾಣಿಕೆ ಮಾಡಲು ಲಭಿಸುವ ತೆರಿಗೆಗೊಳಪಡುವ ಲಾಭದ ನಿಶ್ಚಿತತೆ (ಸಂಭವನೀಯತೆ)ಯನ್ನು ಆಧರಿಸಿ, ಕಡಿತಕ್ಕೊಳಗಾಗುವ ತಾತ್ಕಾಲಿಕ ವ್ಯತ್ಯಾಸಗಳನ್ನು ಪರಿಗಣಿಸಿ ಮುಂದೂಡಲ್ಪಟ್ಟ ತೆರಿಗೆ ಆಸ್ತಿಗಳನ್ನು ಗುರುತಿಸಲಾಗುವುದು.

Deferred tax asset is recognized for the carry forward of unused tax losses and unused tax credits to the extent that it is probable that future taxable profit will be available against which the unused tax losses and unused tax credits can be utilized.

ಮುಂದಿನ ಅವಧಿಗೆ ವರ್ಗಾಯಿಸಿ ಮತ್ತು ಹೊಂದಣಿಕೆಗೊಳಪಡುವ ಉಪಯೋಗಿಸದ ತೆರಿಗೆ ಹಾನಿಗಳನ್ನು ಮತ್ತು ತೆರಿಗೆ ಜಮೆಗಳನ್ನು ಹೊಂದಾಣಿಕೆ ಮಾಡಲು ಭವಿಷ್ಯತ್ತಿನಲ್ಲಿ ಲಭಿಸುವ ತೆರಿಗೆಗೊಳಪಡುವ ಲಾಭದ ನಿಶ್ಚಿತತೆ (ಸಂಭವನೀಯತೆ) ಯನ್ನು ಆಧರಿಸಿ ಮತ್ತು ತೆರಿಗೆಗೊಳಪಡುವ ಲಾಭದ ಮೊತ್ತದವರೆಗೆ ಉಪಯೋಗಿಸದ ತೆರಿಗೆ ಹಾನಿಗಳನ್ನು ಮತ್ತು ತೆರಿಗೆ ಜಮೆಗಳನ್ನು ಮುಂದೂಡಲ್ಪಟ್ಟ ತೆರಿಗೆ ಆಸ್ತಿಯೆಂದು ಗುರುತಿಸಲಾಗುವುದು.

The carrying amount of a deferred tax asset are reviewed at the end of each reporting period and is adjusted to the extent that the aforesaid convincing evidence no longer exists.

ಮುಂದಿನ ಅವಧಿಗೆ ವರ್ಗಾಯಿಸಿದ ಮುಂದೂಡಲ್ಪಟ್ಟ ತೆರಿಗೆ ಆಸ್ತಿಯನ್ನು ಪ್ರತಿ ವರ್ಷದ ಅಂತ್ಯಕ್ಕೆ ಆರ್ಥಿಕ ವರದಿಗಳನ್ನು ತಯಾರಿಸುವಾಗ ಪುನರ್ವಿಮರ್ಶೆ ಮಾಡುವುದರೊಂದಿಗೆ ಮೇಲೆ ಉಲ್ಲೇಖಿಸಿದಂತೆ ಅಂತಹ ತೆರಿಗೆ ಆಸ್ತಿಯ ಮುಂದುವರಿಕೆಯ ಅವಶ್ಯಕತೆಯಿಲ್ಲವಾದಲ್ಲಿ ಅವುಗಳನ್ನು ಪೂರಕವಾಗಿ ಹೊಂದಾಣಿಕೆ ಮಾಡಲಾಗುವುದು.

(iii) Tax on book profits / ಪುಸ್ತಕ ಲಾಭದ ಮೇಲಿನ ತೆರಿಗೆ

Where the computation of taxable income as per the Income Computation schemes is lower than the books profits computed as per relevant provisions of the act. The entity is liable to pay taxes on book profits and is eligible to claim permissible tax credits in the subsequent period computed in accordance with the provisions of the Act. Such tax paid (known as Minimum Alternative Tax) is recognised as deferred tax income in the statement of profit and loss except to the extent recognised in other comprehensive income or directly in equity. In the years of reversal of such tax credits the tax expense is recognised in the statement of profit or loss except to the extent recognised in other comprehensive income or directly in equity.

ಆದಾಯ ತೆರಿಗೆ ಕಾನೂನಿನ ಅನ್ವಯ ಆದಾಯ ಗಣನೆಯ ಸಾಮಾನ್ಯ ವಿಧಾನಗಳ (Normal Provisions) ಪ್ರಕಾರ ತೆರಿಗೆಗೊಳಪಡುವ ಆದಾಯದ ಮೇಲಿನ ತೆರಿಗೆಯು, ಕಾನೂನಿನ ಇತರೆ ಸೂಕ್ತವಾದ ನಿಬಂಧನೆಗಳ ಪ್ರಕಾರ ಲೆಕ್ಕಾಚಾರ ಮಾಡಿದ ಪುಸ್ತಕ ಲಾಭದ (Book Profit as per section 115JB of the Act) ಮೇಲಿನ ತೆರಿಗೆಗಿಂತ ಕಡಿಮೆಯಿದ್ದರೆ, ಗುಂಪು ಪುಸ್ತಕ ಲಾಭದ ಮೇಲೆ ತೆರಿಗೆಯನ್ನು ಪಾವತಿಸಬೇಕಾಗುತ್ತದೆ. ಗುಂಪು ಪುಸ್ತಕ ಲಾಭದ ಮೇಲೆ ಪಾವತಿಸಿದ ತೆರಿಗೆಯನ್ನು ಕಾನೂನಿನ ಅನುಬಂಧನೆಗಳಿಗೆ ಅನುಗುಣವಾಗಿ ಲೆಕ್ಕ ಮಾಡಿ ಲಭಿಸುವ ಮೊತ್ತವನ್ನು ತೆರಿಗೆ ಜಮೆಯೆಂದು ಮುಂದಿನ ವರ್ಷಗಳಲ್ಲಿ ಪಡೆಯಬಹುದಾಗಿದೆ. ಅಂತಹ ತೆರಿಗೆಯನ್ನು ಲಾಭ ಮತ್ತು ನಷ್ಟ ತಃಖ್ತೆಯಲ್ಲಿ ಮೂಂದುಡಲ್ಪಟ್ಟ ತೆರಿಗೆ ಆದಾಯ ಎಂದು ತೋರಿಸಲಾಗುತ್ತದೆ, ಇಲ್ಲವಾದಲ್ಲಿ ಇತರ ಸಮಗ್ರ ಆದಾಯ ಅಥವಾ ನೇರವಾಗಿ ಇಕ್ವಿಟಿಯಲ್ಲಿ ಗುರುತಿಸಲಾಗುತ್ತದೆ. ಸಂಬಂಧಿತ ವರ್ಷದಲ್ಲಿ ಅಂತಹ ಆದಾಯಗಳನ್ನು ಹಿಂದಿರುಗಿಸುವುದಾದಲ್ಲಿ ಅದನ್ನು ಲಾಭ ಮತ್ತು ನಷ್ಟ ತಃಖ್ತೆಯಲ್ಲಿ ತೆರಿಗೆ ವೆಚ್ಚವೆಂದು ತೋರಿಸಲಾಗುವುದು. ಇಲ್ಲವಾದಲ್ಲಿ ಇತರ ಸಮಗ್ರ ಆದಾಯ ಅಥವಾ ನೇರವಾಗಿ ಇಕ್ವಿಟಿಯಲ್ಲಿ ಗುರುತಿಸಲಾಗುತ್ತದೆ.

Current tax assets and current tax liabilities are offset only if there is a legally enforceable right to set off the recognised amounts, and it is intended to realise the asset and settle the liability on a net basis or simultaneously.

ಪ್ರಸ್ತುತ ತೆರಿಗೆ ಆಸ್ತಿ ಮತ್ತು ಪ್ರಸ್ತುತ ತೆರಿಗೆ ಬಾಧ್ಯತೆಗಳ ನಿರ್ದಿಷ್ಟ ಮೊತ್ತಗಳನ್ನು ಕಾನೂನುಬದ್ಧವಾಗಿ ಜಾರಿಗೊಳಿಸಬಹುದಾದ ಹಕ್ಕು ಇದ್ದಾಗ ಮಾತ್ರ ಸರಿದೂಗಿಸಬಹುದು. ಇಂತಹ ತೆರಿಗೆ ಆಸ್ತಿ ಹಾಗೂ ಹೊಣೆಗಾರಿಕೆಗಳನ್ನು ನಿವ್ವಳ ಆಧಾರದ ಮೇಲೆ ಅಥವಾ ಏಕಕಾಲದಲ್ಲಿ ಇತ್ಯರ್ಥಗೊಳಿಸಲು ಉದ್ದೇಶಿಸಲಾಗಿದೆ.

14 Cash flow statement / ಹಣಕಾಸು ಪತ್ರಗಳು

The entity reports the cash flow from / ಗುಂಪು ನಗದು ಹರಿವನ್ನು ಈ ಕೆಳಗಿನಂತೆ ವರದಿ ಮಾಡುತ್ತದೆ

a) operating activities using indirect method by adjusting the profit or loss for the effects of transactions of non-cash nature, deferrals or accruals of past or future cash receipts or payments and item of income or expense associated with investing or financing cash flows.

ಅ) ಕಾರ್ಯಾಚರಣೆಯಿಂದಾಗುವ ನಗದು ಹರಿವನ್ನು ಅಪ್ರತ್ಯಕ್ಷ ವಿಧಾನದ ಮೂಲಕ ಕಂಡುಕೊಳ್ಳಲಾಗುವುದು. ನಗದು ರಹಿತ ವ್ಯವಹಾರಗಳು, ಗತಿಸಿದ ಅಥವಾ ಭವಿಷ್ಯತ್ತಿನ ಮೂಂದುಡಲ್ಪಟ್ಟ ಅಥವಾ ಒದಗಿ ಬಂದ (deferrals or accruals) ನಗದು ಸ್ವೀಕೃತಿ ಅಥವಾ ಪಾವತಿಗಳನ್ನು ಮತ್ತು ಹೂಡಿಕೆ ಅಥವಾ ಆರ್ಥಿಕ ಚಟುವಟಿಕೆಗಳಿಗೆ ಸಂಬಂಧಿಸಿದ ಆದಾಯ ಮತ್ತು ಖರ್ಚುಗಳೊಂದಿಗೆ ಹೊಂದಾಣಿಕೆ ಮಾಡಿ ಕಾರ್ಯಾಚರಣೆಯಿಂದಾಗುವ ನಗದು ಹರಿವನ್ನು ಕಂಡುಕೊಳ್ಳಲಾಗುವುದು.

b) From investing and financing activities by reporting separately the major cash receipts and cash payments that arises from investing and financing activities except to the extent permitted to be reported on net basis by IND AS -7

ಆ) ಹೂಡಿಕೆ ಮತ್ತು ಆರ್ಥಿಕ ಚಟುವಟಿಕೆಗಳಂದ ಉಂಟಾಗುವ ನಗದು ಹರಿವನ್ನು ಭಾರತೀಯ ಲೆಕ್ಕ ದಂಡಮಾನ–7 (Ind AS-7) ದ ಅನ್ವಯ ನಿವ್ವಳ ಆಧಾರದ ಮೇರೆಗೆ ತೋರಿಸಲು ಅವಕಾಶವಿರುವುದನ್ನು ಹೊರತುಪಡಿಸಿ ಹೂಡಿಕೆ ಮತ್ತು ಆರ್ಥಿಕ ಚಟುವಟಿಕೆಗಳಂದುಂಟಾಗುವ ಪ್ರಮುಖ ನಗದು ಸ್ವೀಕೃತಿ ಮತ್ತು ಪಾವತಿಗಳನ್ನು ಪ್ರತ್ಯೇಕವಾಗಿ ನಿರೂಪಿಸಲಾಗಿರುವುದು.

15 Cash and cash equivalents / ನಗದು ಮತ್ತು ನಗದು ಸಮಾನಗಳು

Cash and cash equivalents comprises cash in hand, balance in bank in current accounts and deposit accounts, with original maturity of less than twelve months.

ನಗದು ಮತ್ತು ನಗದು ಸಮಾನಗಳು ನಗದು, ಹನ್ನೆರಡು ತಿಂಗಳುಗಳಗಿಂತ ಕಡಿಮೆ ಅವಧಿಯಲ್ಲಿ ಮುಕ್ತಾಯ (maturity) ಗೊಳ್ಳುವ ಚಾಲ್ತಿ ಖಾತೆ ಮತ್ತು ಠೇವಣಿ ಖಾತೆಗಳಲ್ಲಿನ ಹಣವನ್ನು ಒಳಗೊಂಡಿರುತ್ತದೆ.

16 Financial Instruments / ಹಣಕಾಸು ಪತ್ರಗಳು

a. Financial Asset / ಹಣಕಾಸಿನ ಆಸ್ತಿ

Financial assets comprise of investments in equity and debt securities, trade receivables, cash and cash equivalents and other financial assets.

ಹಣಕಾಸಿನ ಆಸ್ತಿಗಳು ಇಕ್ವಿಟಿಯಲ್ಲಿನ ಹೂಡಿಕೆ, ಮತ್ತು ಸಾಲ ಪತ್ರಗಳು, ವ್ಯಾಪಾರಿ ಸಂಬಂಧ ಬರತಕ್ಕವುಗಳು, ನಗದು ಮತ್ತು ನಗದು ಸಮಾನತೆಗಳು ಮತ್ತು ಇತರೆ ಹಣಕಾಸಿನ ಸ್ವತ್ತುಗಳನ್ನು ಒಳಗೊಂಡಿರುತ್ತದೆ.

Initial recognition / ಆರಂಭಿಕ ಗುರುತಿಸುವಿಕೆ

All financial assets are recognised initially at fair value plus, in the case of financial assets not recorded at fair value through profit and loss (FVTPL), transaction cost that are attributable to the acquisition of the financial asset. Purchase or sales of financial asset that require delivery of assets within a time frame established by regulation or convention in the market place are recognised on the trade date, i.e., the date that the Group commits to purchase or sell the asset.

ಎಲ್ಲಾ ಹಣಕಾಸಿನ ಆಸ್ತಿಗಳು ಆರಂಭದಲ್ಲಿ ನ್ಯಾಯೋಜಿತ ಮೌಲ್ಯದ ಅನ್ವಯ ಗುರುತಿಸಲ್ಪಡುತ್ತವೆ. ಒಂದು ವೇಳೆ, ಹಣಕಾಸಿನ ಆಸ್ತಿಗಳು ಲಾಭ ಮತ್ತು ನಷ್ಟದ ಮುಖಾಂತರ ನ್ಯಾಯೋಜಿತ ಮೌಲ್ಯದ [Fair Value Through Profit and Loss (FVTPL)] ಅನ್ವಯ ಗುರುತಿಸಲ್ಪಡದೆಯಿದ್ದಲ್ಲಿ, ಹಣಕಾಸಿನ ಆಸ್ತಿಯ ಸ್ವಾಧೀನಕ್ಕೆ ಸಂಬಂಧಿಸಿದ ವ್ಯವಹಾರದ ವೆಚ್ಚದಲ್ಲಿ ತೋರ್ಪಡಿಸಲಾಗುವುದು. ಮಾರುಕಟ್ಟೆಯ ನಿಬಂಧನೆಗಳ ಅಥವಾ ಆಚರಣೆಗಳ ಅನುಸಾರ ನಿಗದಿಪಡಿಸಲಾದ ಕಾಲ ಮಿತಿಯೊಳಗೆ ಗೊತ್ತುಪಡಿಸಿದ ಹಣಕಾಸು ಆಸ್ತಿಯನ್ನು ವಶಕ್ಕೆ ಕೊಡುವುದಾದಲ್ಲಿ / ಪಡೆಯುವುದಾದಲ್ಲಿ ಹಣಕಾಸಿನ ಆಸ್ತಿಯ ಖರೀದಿ ಅಥವಾ ಮಾರಾಟವನ್ನು ವ್ಯವಹಾರದ ದಿನಾಂಕದಂದು (ಅರ್ಥಾತ್, ನಿಗಮವು ಆಸ್ತಿಯನ್ನು ಖರೀದಿಸಲು ಅಥವಾ ಮಾರಾಟ ಮಾಡಲು ಬದ್ಧತೆಗೊಳಪಟ್ಟ ದಿನಾಂಕ) ಗುರುತಿಸಲ್ಪಡುವುದು.

Subsequent measurement / *ತರುವಾಯದ ಮೌಲ್ಯಮಾಪನ*

(i) Financial asset measured at amortized cost

(i) ಹಣಕಾಸು ಆಸ್ತಿಗಳ ಮೂಲ ಬೆಲೆಯನ್ನು (ಪ್ರಾರಂಭಿಕ ವೆಚ್ಚವನ್ನು) ಕ್ರಮೇಣ ವಜಾಗೊಳಿಸಿದ ನಂತರದ ಮೌಲ್ಯದಲ್ಲಿ (Amortised Cost) ಮೌಲ್ಯ ನಿರ್ಧರಣೆ:

Financial assets held within a business model whose objective is to hold financial assets in order to collect contractual cash flows and the contractual terms of the financial asset give rise to specified dates to cash flows that are solely payments of principal and interest on the principal amount outstanding are measured at amortized cost using effective interest rate (EIR) method.

The EIR amortization is recognised as finance income in the Statement of Profit and Loss.

ವ್ಯವಹಾರದ ಮಾದರಿಯಲ್ಲಿ ಹೊಂದಿದ ಹಣಕಾಸು ಆಸ್ತಿಗಳನ್ನು, ಒಪ್ಪಂದದ ಮೇರೆಗೆ ಲಭಿಸುವ ನಗದು ಹರಿವನ್ನು ಸಂಗ್ರಹಿಸುವ ಉದ್ದೇಶಗಳಾಗಿ ಹೊಂದಲಾಗಿರುವುದು. ಹಣಕಾಸು ಆಸ್ತಿಯ ಒಪ್ಪಂದದ ನಿಬಂಧನೆಗಳು, ನಿರ್ದಿಷ್ಟ ದಿನಾಂಕಗಳಂದು ಅಸಲಿನ ಮರುಪಾವತಿ ಮತ್ತು ಬಾಕಿ ಉಳಿದಿರುವ ಅಸಲಿನ ಮೇಲೆ ಪರಿಣಾಮಕಾರಿ ಬಡ್ಡಿದರ [Effective Interest Rate (EIR)] ವಿಧಾನವನ್ನು ಅನುಸರಿಸಿ ಆಕರಿಸಿದ ಬಡ್ಡಿ ಸ್ವೀಕೃತಿಯಿಂದ ಲಭಿಸುವ ನಗದು ಹರಿವಿನ ಸ್ವೀಕೃತಿಗೆ ಅವಕಾಶ ಮಾಡಿಕೊಡುವವು.

ಪರಿಣಾಮಕಾರಿ ಬಡ್ಡಿ ದರವನ್ನು (EIR), ಕ್ರಮೇಣ ಮೊಟಕುಗೊಳಿಸಿ ಲಭಿಸುವ ಮೊಬಲಗುವನ್ನು ಆರ್ಥಿಕ ಚಟುವಟಿಕೆಯ ಆದಾಯವೆಂದು ಲಾಭ ಮತ್ತು ನಷ್ಟ ತಃಖ್ತೆಯಲ್ಲಿ ಗುರುತಿಸಲಾಗುವುದು.

(ii) Financial assets at fair value through other comprehensive income (FVTOCI)

(ii) ಹಣಕಾಸು ಆಸ್ತಿಗಳನ್ನು ಇತರ ವಿಸ್ತೃತ ಆದಾಯ ವಿವರಣ ಪಟ್ಟಿಯ (Other Comprehensive Income) ಮೂಲಕ ನ್ಯಾಯೋಚಿತ ಮೌಲ್ಯ (Fair Value) ದಲ್ಲಿ ಉಲ್ಲೇಖಿಸಲಾಗುವುದು:

Financial assets held within a business model whose objective is achieved by both collecting contractual cash flows and selling financial asset and the contractual terms of the financial asset give rise to specified dates to cash flows that are solely payments of principal and interest on the principal amount outstanding are subsequently measured at FVTOCI. Fair value movements in financial assets at FVTOCI are recognised in other comprehensive income. Equity instruments held for trading are classified as at FVTPL. For other equity instruments the Group classifies the same as at FVTOCI. The classification is made on initial recognition and is irrevocable. Fair value changes on equity instruments at FVTOCI, excluding dividends, are recognised in OCI.

ವ್ಯವಹಾರದ ಮಾದರಿಯಲ್ಲಿ ಹೊಂದಿದ ಹಣಕಾಸು ಆಸ್ತಿಗಳನ್ನು ಒಪ್ಪಂದದ ಮೇರೆಗೆ ಲಭಿಸುವ ನಗದು ಹರಿವನ್ನು ಸಂಗ್ರಹಿಸುವ ಮತ್ತು ಹಣಕಾಸು ಆಸ್ತಿಗಳ ಮಾರಾಟದ ಉದ್ದೇಶಗಳಾಗಿ ಹೊಂದಲಾಗಿರುವುದು. ಹಣಕಾಸು ಆಸ್ತಿಯ ಒಪ್ಪಂದದ ನಿಬಂಧಗಳು, ನಿರ್ದಿಷ್ಟ ದಿನಾಂಕಗಳಂದು ಅಸಲಿನ ಮರುಪಾವತಿ ಮತ್ತು ಬಾಕಿ ಉಳಿದಿರುವ ಅಸಲಿನ ಮೇಲೆ ಆಕರಿಸಿದ ಬಡ್ಡಿಯನ್ನು ತರುವಾಯ ಇತರ ವಿಸ್ತೃತ ಆದಾಯ ವಿವರಣ ಪಟ್ಟಿಯ ಮೂಲಕ ನ್ಯಾಯೋಚಿತ ಮೌಲ್ಯದಲ್ಲಿ [Fair Value through other Comprehensive Income (FVTOCI)] ಲೆಕ್ಕಿಸಲಾಗುವುದು. ಹಣಕಾಸು ಆಸ್ತಿಗಳಲ್ಲಿನ ನ್ಯಾಯೋಚಿತ ಬೆಲೆಯ ಚಲನ ವಲನವನ್ನು ಇತರೆ ವಿಸ್ತೃತ ಆದಾಯ ಪಟ್ಟಿಯಲ್ಲಿ ಉಲ್ಲೇಖಿಸಲಾಗುವುದು. ವ್ಯಾಪಾರ ವಹಿವಾಟಿಗಾಗಿ ಹೊಂದಿರುವ ಇಕ್ವಿಟಿ ಆಖತ ಪತ್ರಗಳನ್ನು ಲಾಭ ಮತ್ತು ಹಾನಿ ತಖ್ತೆಯ ಮುಖಾಂತರ ನ್ಯಾಯೋಚಿತ ಮೌಲ್ಯದಲ್ಲಿ [Fair Value through Profit and Loss (FVTPL)] ವರ್ಗಿಕರಿಸಲಾಗುವುದು, ಗುಂಪು ಇತರೆ ಇಕ್ವಿಟಿ ಆಖತ ಪತ್ರಗಳನ್ನು 'ಹಣಕಾಸು ಆಸ್ತಿಗಳನ್ನು ಇತರ ವಿಸ್ತೃತ ಆದಾಯ ವಿವರಣ ಪಟ್ಟಿಯ ಮೂಲಕ ನ್ಯಾಯೋಚಿತ ಮೌಲ್ಯದ (FVTOCI) ಅನ್ವಯ ವರ್ಗಿಕರಿಸಲಾಗುವುದು. ಈ ವರ್ಗಿಕರಣವನ್ನು ಆರಂಭಿಕ ಗುರುತಿಸುವಿಕೆಯಲ್ಲಿ ಮಾಡಬಹುದಾಗಿದ್ದು ಹಾಗೂ ಇದನ್ನು ರದ್ದುಪಡಿಸಲಾಗದು. 'ಹಣಕಾಸು ಆಸ್ತಿಗಳನ್ನು ಇತರ ವಿಸ್ತೃತ ಆದಾಯ ವಿವರಣ ಪಟ್ಟಿಯ ಮೂಲಕ ನ್ಯಾಯೋಚಿತ ಮೌಲ್ಯದ (FVTOCI)' ಮೇರೆಗೆ ವರ್ಗಿಕೃತ ಇಕ್ವಿಟಿ ಆಖತ ಪತ್ರಗಳ ನ್ಯಾಯೋಚಿತ ಮೌಲ್ಯದ ಬದಲಾವಣೆಗಳನ್ನು, ಲಾಭಾಂಶವನ್ನು (Dividend) ಹೊರತು ಪಡಿಸಿ ಇತರೆ ವಿಸ್ತೃತ ಆದಾಯ ಪಟ್ಟಿ [Other Comprehensive Income (OCI)] ಯಲ್ಲಿ ಗುರುತಿಸಲಾಗುವುದು.

(iii) Financial assets at fair value through profit and loss (FVTPL) / ಹಣಕಾಸು ಆಸ್ತಿಗಳ ಲಾಭ ಮತ್ತು ನಷ್ಟ ತಃಖ್ತೆಯ ಮೂಲಕ ನ್ಯಾಯೋಚಿತ ಮೌಲ್ಯದಲ್ಲಿ ಉಲ್ಲೇಖ:

Financial asset is measured at fair value through profit or loss if it does not meet the criteria for classification as measured at amortized cost or at FVTOCI. All the fair value changes are recognised in the Statement of Profit or Loss.

ಒಂದು ವೇಳೆ ಹಣಕಾಸು ಆಸ್ತಿಯು ಪ್ರಾರಂಭಿಕ ವೆಚ್ಚವನ್ನು (ಮೂಲ ಬೆಲೆಯನ್ನು) ಕ್ರಮೇಣ ವಜಾಗೊಳಿಸಿದ ನಂತರದ ಮೌಲ್ಯ (Amortised cost) ಅಥವಾ 'ಹಣಕಾಸು ಆಸ್ತಿಗಳನ್ನು ಇತರ ವಿಸ್ತೃತ ಆದಾಯ ವಿವರಣ ಪಟ್ಟಿಯ ಮೂಲಕ ನ್ಯಾಯೋಚಿತ ಮೌಲ್ಯದ (FVTOCI)' ವರ್ಗಿಕರಣಗಳ ನಿರ್ಣಾಯಕ ಅಂಶ (ಮಾನದಂಡ) ಗಳನ್ನು ಪೂರೈಸದಿದ್ದಲ್ಲಿ, ಅಂತಹ ಹಣಕಾಸು ಆಸ್ತಿಗಳನ್ನು ಲಾಭ ಮತ್ತು ನಷ್ಟ ತಃಖ್ತೆಯ ಮುಖಾಂತರ ನ್ಯಾಯೋಚಿತ ಮೌಲ್ಯದಲ್ಲಿ ಲೆಕ್ಕಿಸಲಾಗುವುದು.

Derecognition of financial assets / ಹಣಕಾಸು ಆಸ್ತಿಗಳ ಅಮಾನ್ಯಗೊಳಿಸುವಿಕೆ

Financial assets are derecognized when the contractual rights to the cash flows from the financial asset expire or the financial asset is transferred and the transfer qualifies for derecognition. On derecognition of financial assets in its entirety, the difference between the carrying amount (measured at the date of derecognition) and the consideration received (including any new asset obtained less any new liability assumed) shall be recognised in the Statement of Profit or Loss.

ಹಣಕಾಸು ಆಸ್ತಿಗಳಿಂದ ಲಭಿಸಬಹದಾದ ನಗದು ಹರಿವನ್ನು ಸ್ವೀಕರಿಸಲು ಒಪ್ಪಂದದನ್ವಯ ಅಧಿಕಾರವು ಮೊಟಕುಗೊಂಡಾಗ ಅಥವಾ ಹಣಕಾಸು ಆಸ್ತಿಗಳನ್ನು ವರ್ಗಾಯಿಸಿದಾಗ ಅಥವಾ ಅಂತಹ ವರ್ಗಾವಣೆಯು ಅಮಾನ್ಯಕರಣಕ್ಕೊಳಗಾದ ಸಂದರ್ಭಗಳಲ್ಲಿ ಹಣಕಾಸು ಆಸ್ತಿಗಳನ್ನು ಅಮಾನ್ಯಕರಣಗೊಳಿಸಲಾಗುವುದು. ಹಣಕಾಸು ಆಸ್ತಿಗಳನ್ನು ಸಂಪೂರ್ಣವಾಗಿ ಅಮಾನ್ಯಕರಣಗೊಳಿಸಿದಾಗ, ಅಂತಹ ಆಸ್ತಿಗಳು ಲೆಕ್ಕಪುಸ್ತಕದಲ್ಲಿ ಹೊಂದಿರುವ ಮೌಲ್ಯ [ಅಮಾನ್ಯಕರಣ ದಿನಾಂಕದಂದು ಲೆಕ್ಕಾಚಾರ ಮಾಡಿದ ಮೌಲ್ಯ] ಮತ್ತು ವರ್ಗಾವಣೆಯಿಂದ ಲಭಿಸಿದ ಮೌಲ್ಯ (ಅಥವಾ ಯಾವುದೇ ಹೊಸ ಆಸ್ತಿಗಳನ್ನು ಪಡೆದ ಮೊಬಲಗುವಿನಲ್ಲಿ ಯಾವುದೇ ಜವಾಬ್ದಾರಿಗಳನ್ನು ಸ್ವೀಕರಿಸಿದ ಮೊಬಲಗುವನ್ನು ಕಳೆದು ಲಭಿಸಿದ ಮೌಲ್ಯ) ದ ವ್ಯತ್ಯಾಸವನ್ನು ಲಾಭ ಮತ್ತು ನಷ್ಟ ತಃಖ್ತೆಯಲ್ಲಿ ಗುರುತಿಸಲಾಗುವುದು.

Impairment of financial asset / ಹಣಕಾಸು ಆಸ್ತಿಗಳ ದುರ್ಬಲತೆ

Trade receivables, contract assets, lease receivables under Ind AS 109, investments in debt instruments that are carried at amortized cost, investments in debt instruments that are carried at FVTOCI are tested for impairment based on the expected credit losses for the respective financial asset.

ವ್ಯಾಪಾರಿ ಸಂಬಂಧ ಬರತಕ್ಕವುಗಳು, ಒಪ್ಪಂದದ ಮೇರೆಗೆ ಪಡೆದ ಆಸ್ತಿಗಳು, ಭಾರತೀಯ ಲೆಕ್ಕಾಚಾರ ಮಾನದಂಡ – ೧೦೨ (IND AS - 109) ರನ್ವಯ ಗುತ್ತಿಗೆಯಿಂದ ಪಡೆಯಬಹುದಾದವುಗಳು, ಸಾಲ ಪತ್ರಗಳಲ್ಲಿ ಮಾಡಿದ ಗುಂತಾವಣೆ (Investments in Debt Instruments) ಗಳನ್ನು ಮೂಲ ಬೆಲೆಯ ಕ್ರಮೇಣ ವಜಾಗೊಳಿಸಿದ ನಂತರದ ಮೌಲ್ಯದಲ್ಲಿ ಲೆಕ್ಕಿಸಲಾಗಿರುವುದು ಮತ್ತು 'ಹಣಕಾಸು ಆಸ್ತಿಗಳನ್ನು ಇತರ ವಿಸ್ತೃತ ಆದಾಯ ವಿವರಣ ಪಟ್ಟಿಯ ಮೂಲಕ ನ್ಯಾಯೋಚಿತ ಮೌಲ್ಯ'ದ (FVTOCI) ಆಧಾರದ ಮೇರಗೆ ಲೆಕ್ಕಿಸಲಾದ ಸಾಲ ಪತ್ರಗಳನ್ನು, ಸಂಬಂಧಿತ ಹಣಕಾಸು ಆಸ್ತಿಗಳಿಂದ ನಿರೀಕ್ಷಿತ ಜಮೆಯ ಹಾನಿಗಳನ್ನು (Expected Credit Losses) ಆಧರಿಸಿ ಆಸ್ತಿಗಳ ದುರ್ಬಲತೆಯನ್ನು ಪರೀಕ್ಷಿಸಲಾಗುವುದು.

(i) Trade receivables / ವ್ಯಾಪಾರಿ ಸಂಬಂಧ ಬರತಕ್ಕವುಗಳು

An impairment analysis is performed at each reporting date. The expected credit losses over lifetime of the asset are estimated by adopting the simplified approach using a provision matrix which is based on historical loss rates reflecting current condition and forecast of future economic conditions. In this approach assets are grouped on the basis of similar credit characteristics such as industry, customer segment, past due status and other factors which are relevant to estimate the expected cash loss from these assets.

ಪ್ರತಿ ಲೆಕ್ಕಪತ್ರ ವರದಿಯ ದಿನಾಂಕದಂದು ಆಸ್ತಿಗಳ ದುರ್ಬಲತೆಯ ವಿಶ್ಲೇಷಣೆಯನ್ನು ಕೈಗೊಳ್ಳಲಾಗುವುದು. ಭವಿಷ್ಯತ್ತಿನ ಆರ್ಥಿಕ ಸ್ಥಿತಿಗತಿಗಳ ಮುನ್ಸೂಚನೆ ಮತ್ತು ವಾಸ್ತವಿಕ ಸ್ಥಿತಿಗತಿಗಳನ್ನು ಪ್ರತಿಫಲಿಸುವ ಪೂರ್ವವಧಿಯ ಹಾನಿಯ ದರಗಳನ್ನಾಧರಿಸಿ ಅವಕಾಶಗಳ ಮ್ಯಾಟ್ರಿಕ್ಸ್ (ಅಣಿಮಣಿ) ನ್ನು ಉಪಯೋಗಿಸಿ ಸರಳೀಕರಿಸಿದ ವಿಧಾನವನ್ನು ಅಳವಡಿಸಿಕೊಂಡು, ಆಸ್ತಿಯ ಜೀವಿತಾವಧಿಯಲ್ಲಿ (Life Time of Asset) ನಿರೀಕ್ಷಿತ ಜಮೆಯ ಹಾನಿಗಳನ್ನು ಅಂದಾಜಿಸಲಾಗುವುದು. ಪ್ರಸ್ತುತ ವಿಧಾನದಲ್ಲಿ ಇಂತಹ ಆಸ್ತಿಗಳಿಂದಾಗಬಹುದಾದ ನಿರೀಕ್ಷಿತ ನಗದು ಹಾನಿಗಳನ್ನು ಅಂದಾಜಿಸಲು ಪೂರಕವಾಗುವಂತೆ, ಆಸ್ತಿಗಳನ್ನು ಸಮಾನ ರೂಪದ ವಿಶ್ವಾಸಾರ್ಹತೆಯ ಗುಣಲಕ್ಷಣಗಳಾದ ಉದ್ಯಮ, ಗ್ರಾಹಕರ ವಿಭಾಗ, ಹಳೆಯ ಬಾಕಿಯ ಸ್ಥಿತಿಗತಿ ಮತ್ತು ಇತರೆ ಅಂಶಗಳನ್ನಾಧರಿಸಿ ವರ್ಗೀಕರಣಗೊಳಿಸಲಾಗುವುದು.

(ii) Other financial asset / ಇತರೆ ಹಣಕಾಸು ಆಸ್ತಿಗಳು

Other financial assets are tested for impairment based on significant change in credit risk since initial recognition and impairment is measured based on probability of default over the lifetime when there is a significant increase in credit risk

ಜಮೆಯ ಗಂಡಾಂತರದಲ್ಲಿ ಮಹತ್ತರವಾದ ಏರಿಕೆಯಾದಲ್ಲಿ ಅಂತಹ ಆಸ್ತಿಗಳ ಜೀವಿತಾವದಿಯಲ್ಲಿ ಉಪೇಕ್ಷೆಗೊಳಗಾಗುವ ಸಂಭವನೀಯತೆಯನ್ನಾಧರಿಸಿ ಇತರ ಹಣಕಾಸು ಆಸ್ತಿಗಳ ಆರಂಭಿಕ ಗುರುತಿಸುವಿಕೆ ಮತ್ತು ಆಸ್ತಿಗಳ ದುರ್ಬಲತೆಯನ್ನು ಲೆಕ್ಕಿಸಲಾಗುವುದರಿಂದ ಜಮೆಯ ಗಂಡಾಂತರದಲ್ಲಿಯ ಮಹತ್ತರವಾದ ಬದಲಾವಣೆಗಳನ್ನು ಪರಿಗಣಿಸಿ, ಇತರೆ ಆರ್ಥಿಕ ಆಸ್ತಿಗಳ ದುರ್ಬಲತೆಯನ್ನು ಪರೀಕ್ಷಿಸಲಾಗುವುದು.

b. Financial liabilities / ಆರ್ಥಿಕ ಹೊಣೆಗಾರಿಕೆಗಳು

Initial recognition and measurement / ಆರಂಭಿಕ ಗುರುತಿಸುವಿಕೆ ಮತ್ತು ಮೌಲ್ಯಮಾಪನ

Financial liabilities are initially recognised at fair value plus any transaction cost that are attributable to the acquisition of the financial liabilities except financial liabilities at FVTPL which are initially measured at fair value.

ಆರ್ಥಿಕ ಹೊಣೆಗಾರಿಕೆಗಳನ್ನು ಆರಂಭಿಕವಾಗಿ ನ್ಯಾಯೋಚಿತ ಮೌಲ್ಯದಲ್ಲಿ ಲೆಕ್ಕಿಸಿದ್ದು, ಸದ್ಯದಲ್ಲಿ (ಪ್ರಸ್ತುತ) ಲಾಭ ಮತ್ತು ನಷ್ಟ ತಃಖ್ತೆಯ ಮುಖಾಂತರ ನ್ಯಾಯೋಚಿತ ಮೌಲ್ಯದಲ್ಲಿ [Fair Value Through Profit and Loss (FVTPL)] ತೋರಿಸಿರುವುದನ್ನು ಹೊರತುಪಡಿಸಿ ಉಳಿದೆಲ್ಲ ಆರ್ಥಿಕ ಹೊಣೆಗಾರಿಕೆಗಳ ನ್ಯಾಯೋಚಿತ ಮೌಲ್ಯದೊಂದಿಗೆ ಹೊಂದಲು ವ್ಯಯಿಸಿದ ಎಲ್ಲ ತರಹದ ವ್ಯವಹಾರಿಕ ವೆಚ್ಚಗಳನ್ನು ಸೇರಿಸಿ ಆರ್ಥಿಕ ಹೊಣೆಗಾರಿಕೆಗಳನ್ನು ಆರಂಭಿಕವಾಗಿ ಗುರುತಿಸಲಾಗುವುದು.

Subsequent measurement / ತರುವಾಯದ ಮೌಲ್ಯಮಾಪನ

The financial liabilities are classified for subsequent measurement into following categories;

ಆರ್ಥಿಕ ಜವಾಬ್ದಾರಿಗಳನ್ನು ತರುವಾಯದ ಮೌಲ್ಯಮಾಪನಕ್ಕಾಗಿ ಈ ಕೆಳಗಿನಂತೆ ಗುಂಪುಗಳಲ್ಲಿ ವರ್ಗೀಕರಿಸಲಾಗುವುದು.

- At amortized cost / ಆರಂಭಿಕ ಹೊಣೆಗಾರಿಕೆಯನ್ನು ಕ್ರಮೇಣ ವಜಾಗೊಳಿಸಿ ಉಳಿದ ಮೌಲ್ಯ (Amortised Cost) ದಲ್ಲಿ ತೋರಿಸಲಾಗುವುದು.
- At FVTPL / ಲಾಭ ಮತ್ತು ನಷ್ಟ ತಃಖ್ತೆಯ ಮುಖಾಂತರ ನ್ಯಾಯೋಚಿತ ಮೌಲ್ಯದಲ್ಲಿ ತೋರಿಸಲಾಗುವುದು (FVTPL)

(i) Financial liability at amortized cost / ಕ್ರಮೇಣ ವಜಾಗೊಳಿಸಿ ಉಳಿದ ಮೌಲ್ಯಕ್ಕೆ ಆರ್ಥಿಕ ಹೊಣೆಗಾರಿಕೆಗಳು:

Amortized cost for financial liabilities represents amount at which liability is measured at initial recognition minus the principal repayments, plus or minus the cumulative amortization using the effective interest method of any difference between that initial amount and the maturity amount.

ಆರ್ಥಿಕ ಹೊಣೆಗಾರಿಕೆಗಳ ಆರಂಭಿಕ ಮೊಬಲಗುವನ್ನು ಕ್ರಮೇಣ ವಜಾಗೊಳಿಸಿ ಉಳಿದ ಮೌಲ್ಯವು (Amortised Cost) ಆರಂಭಿಕ ಗುರುತಿಸುವಿಕೆಯಲ್ಲಿ ಅಂತಹ ಜವಾಬ್ದಾರಿಗಳನ್ನು ಲೆಕ್ಕಿಸಿದ ಮೊಬಲಗುವಿನಲ್ಲಿ ಅಸಲು ಮರುಪಾವತಿಗಳನ್ನು ಕಳೆದು ಬಂದ ಮೊಬಲಗುವಿನಲ್ಲಿ ಪರಿಣಾಮಕಾರಿ ಬಡ್ಡಿ ವಿಧಾನವನ್ನು ಅನುಸರಿಸಿ ಕಂಡುಕೊಂಡ ಆರಂಭಿಕ ಮೊಬಲಗು ಮತ್ತು ಅವಧಿ ಮುಕ್ತಾಯದಲ್ಲಿನ ಮೌಲ್ಯದಲ್ಲಿನ ವ್ಯತ್ಯಾಸದಲ್ಲಿರುವ ಸಂಚಿತ ಮೊಬಲಗುವನ್ನು ಕೂಡಿಸಿದಾಗ ಅಥವಾ ಕಳೆದಾಗ ಲಭಿಸಿದ ಮೌಲ್ಯವಾಗಿರುವುದು.

(ii) Financial liability at FVTPL / ನ್ಯಾಯೋಚಿತ ಮೌಲ್ಯಕ್ಕೆ ಆರ್ಥಿಕ ಹೊಣೆಗಾರಿಕೆಗಳು:

Financial liabilities held for trading are measured at FVTPL / ವ್ಯಾಪಾರ ವಹಿವಾಟಿಗಾಗಿ ಹೊಂದಿರುವ ಆರ್ಥಿಕ ಜವಾಬ್ದಾರಿಗಳನ್ನು ಲಾಭ ಮತ್ತು ನಷ್ಟ ತಃಖ್ತೆಯ ಮುಖಾಂತರ ನ್ಯಾಯೋಚಿತ ಮೌಲ್ಯ (FVTPL) ದಲ್ಲಿ ಲೆಕ್ಕಿಸಲಾಗಿದೆ.

Derecognition of financial liabilities / ಆರ್ಥಿಕ ಜವಾಬ್ದಾರಿಗಳ ಅಮಾನ್ಯೀಕರಣ

A financial liability is derecognized when and only when, it is extinguished i.e. when the obligation specified in the contract is discharged or cancelled or expires.

ಆರ್ಥಿಕ ಜವಾಬ್ದಾರಿಗಳನ್ನು ಅಳಿಸಿದಾಗ ಮಾತ್ರ (ಅರ್ಥಾತ್ ಒಪ್ಪಂದಗಳಲ್ಲಿನ ಬಾಧ್ಯತೆಗಳ ಹೊರೆ ಇಳಿಸಿದಾಗ ಅಥವಾ ಬಾಧ್ಯತೆಗಳನ್ನು ರದ್ದುಗೊಳಿಸಿದಾಗ ಅಥವಾ ಬಾಧ್ಯತೆಗಳ ಅವಧಿ ಮೀರಿದಾಗ) ಅವುಗಳನ್ನು ಅಮಾನ್ಯೀಕರಣಗೊಳಿಸಲಾಗುವುದು.

c. Offsetting of financial assets and financial liabilities / ಆರ್ಥಿಕ ಆಸ್ತಿಗಳ ಮತ್ತು ಆರ್ಥಿಕ ಬಾಧ್ಯತೆಗಳ ಸರಿದೂಗಿಸುವಿಕೆ

Financial assets and liabilities are offset and the net amount is presented in Balance Sheet when, and only when, the Group has a legal right to offset the recognised amounts and intends either to settle on a net basis or to realize the assets and settle the liability simultaneously.

ಆರ್ಥಿಕ ಆಸ್ತಿ ಹಾಗೂ ಬಾಧ್ಯತೆಗಳಿಗೆ ಸಂಭಂದಿಸಿದಂತೆ ಗುಂಪು ಗುರುತಿಸಲ್ಪಟ್ಟ ಮೊಬಲಗುವನ್ನು ಅಳಿಸಿ ಹಾಕಲು ಕಾನೂನುಬದ್ಧ ಅಧಿಕಾರ ಹೊಂದಿದ್ದರೆ ಮತ್ತು ಆಸ್ತಿ ಹಾಗೂ ಬಾಧ್ಯತೆಗಳ ನಿವ್ವಳತೆಯನ್ನು ಆಧರಿಸಿ ಇತ್ಯರ್ಥಗೊಳಿಸಲು ಉದ್ದೇಶಿಸಿದ್ದರೆ ಅಥವಾ ಆಸ್ತಿಗಳ ಮಾರಾಟ ಹಾಗೂ ಬಾಧ್ಯತೆಗಳ ಇತ್ಯರ್ಥವನ್ನು ಏಕಕಾಲದಲ್ಲಿ ಮಾಡುವುದಾದಲ್ಲಿ ಮಾತ್ರ ಹಣಕಾಸು ಆಸ್ತಿಗಳನ್ನು ಮತ್ತು ಬಾಧ್ಯತೆಗಳನ್ನು ಸರಿದೂಗಿಸಬಹುದು ಮತ್ತು ನಿವ್ವಳ ಮೊಬಲಗುವನ್ನು ಆರ್ಥಿಕ ಸ್ಥಿತಿ ವಿವರಣಾ ಪಟ್ಟಿಯಲ್ಲಿ ತೋರಿಸಬಹುದಾಗಿದೆ.

d. Reclassification of financial asset / ಆರ್ಥಿಕ ಆಸ್ತಿಗಳ ಮರುವರ್ಗೀಕರಣ

The Group determines the classification of financial assets and liabilities on initial recognition. After initial recognition no reclassification is made for financial assets which are categorized as equity instruments at FVTOCI and financial assets or liabilities that are specifically designated as FVTPL. For financial assets which are debt instruments, a reclassification is made only if there is a change in the business model for managing those assets. Changes to the business model are expected to be very infrequent. The management determines change in the business model as a result of external or internal changes which are significant to the Group's operations. A change in the business model occurs when the Group either begins or ceases to perform an activity that is significant to its operations. If the Group reclassifies financial assets, it applies reclassification prospectively from the reclassification date which is the first date of the immediately next reporting period following the change in business model. The Group does not restate any previously recognised gains, losses (including impairment gains or losses) or interest.

ಆರ್ಥಿಕ ಆಸ್ತಿ ಮತ್ತು ಬಾಧ್ಯತೆ (ಹೊಣೆಗಾರಿಕೆ) ಗಳ ಆರಂಭಿಕ ಗುರುತಿಸುವಿಕೆಯಲ್ಲಿ, ಗುಂಪು ಅವುಗಳ ವರ್ಗೀಕರಣವನ್ನು ನಿರ್ಧರಿಸುತ್ತದೆ. ಆರಂಭಿಕ ಗುರುತಿಸುವಿಕೆಯ ನಂತರ ಆರ್ಥಿಕ ಆಸ್ತಿಯಾದ ಇಕ್ವಿಟಿ ಆಖಿತ ಪತ್ರಗಳನ್ನು ಹಣಕಾಸು ಆಸ್ತಿಗಳನ್ನು ಇತರ ವಿಸ್ತೃತ ಆದಾಯ ವಿವರಣ ಪಟ್ಟಿಯ ಮೂಲಕ ನ್ಯಾಯೋಚಿತ ಮೌಲ್ಯದ (FVTOCI) ವಿಧಾನದಲ್ಲಿ ವರ್ಗೀಕರಿಸಿದ್ದರೆ ಮತ್ತು ಆರ್ಥಿಕ ಆಸ್ತಿಗಳು ಮತ್ತು ಹೊಣೆಗಾರಿಕೆ (ಬಾಧ್ಯತೆ) ಗಳನ್ನು ನಿರ್ದಿಷ್ಟವಾಗಿ ವ್ಯಾಪಾರ ವಹಿವಾಟಿಗಾಗಿ ಹೊಂದಿರುವ ಆರ್ಥಿಕ ಜವಾಬ್ದಾರಿಗಳನ್ನು ಲಾಭ ಮತ್ತು ನಷ್ಟ ತಃಖ್ತೆಯ ಮುಖಾಂತರ ನ್ಯಾಯೋಚಿತ ಮೌಲ್ಯ (FVTPL) ವರ್ಗದಲ್ಲಿ ವಿಂಗಡಿಸಿದ್ದರೆ; ಅಂತಹುವಗಳ ಮರುವರ್ಗೀಕರಣ ಮಾಡಲು ಅವಕಾಶವಿರುವುದಿಲ್ಲ. ಸಾಲಪತ್ರಗಳನ್ನು (Debt instruments) ಹೊಂದಿದ ಆರ್ಥಿಕ ಆಸ್ತಿಗಳನ್ನು, ಕೇವಲ ಇಂತಹ ಆಸ್ತಗಳನ್ನು ನಿರ್ವಹಿಸುವ ವ್ಯವಹಾರ ಮಾದರಿಯಲ್ಲಿ ಬದಲಾವಣೆಯಾದಾಗ ಮಾತ್ರ ಮರುವರ್ಗೀಕರಣ ಮಾಡಬಹುದು. ವ್ಯವಹಾರ ಮಾದರಿಯ ಬದಲಾವಣೆಯು ವಿರಳವಾಗಿ ಸಂಭವಿಸುವುದು. ಬಾಹ್ಯ ಮತ್ತು ಆಂತರಿಕ ಬದಲಾವಣೆಗಳು ನಿಗಮದ ಕಾರ್ಯಾಚರಣೆಯ ಮೇಲೆ ಮಹತ್ತರವಾದ ಪರಿಣಾಮ ಬೀರುವುದಾದಲ್ಲಿ, ನಿಗಮದ ಆಡಳಿತ ಮಂಡಳಿಯು ವ್ಯವಹಾರದ ಮಾದರಿಯ ಬದಲಾವಣೆಯನ್ನು ಮಾಡಬಹುದು. ಗುಂಪಿನ ಕಾರ್ಯಾಚರಣೆಗಳಾಗಿ ಮಹತ್ವವಾದ ಚಟುವಟಿಕೆಯನ್ನು ಒಂದು ವೇಳೆ ಆರಂಭಿಸಿದ್ದರೆ, ಇಲ್ಲವೇ ಸ್ಥಗಿತಗೊಳಿಸಿದ್ದರೆ ಅಂತಹ ಸಂದರ್ಭದಲ್ಲಿ ವ್ಯವಹಾರದ ಮಾದರಿಯಲ್ಲಿ ಬದಲಾವಣೆ ಮಾಡುವ ಸಾಧ್ಯತೆಯಿದೆ. ಒಂದು ವೇಳೆ ನಿಗಮವು ಆರ್ಥಿಕ ಆಸ್ತಿಗಳ ಮರುವರ್ಗೀಕರಣ ಮಾಡಿದ್ದಾದಲ್ಲಿ, ಅಂತಹ ಮರುವರ್ಗೀಕರಣವು, ಮರುವರ್ಗೀಕರಿಸಿದ ದಿನಾಂಕದಿಂದ ಮುಂಬರುವ ಅವಧಿಗೆ ಅನ್ವಯಿಸುವುದು. ಅಲ್ಲದೇ ವ್ಯವಹಾರದ ಮಾದರಿಯ ಬದಲಾವಣೆ ಮಾಡಿದ ಅವಧಿಯ ತಕ್ಷಣದ ಮುಂದಿನ ಅವಧಿಯ ಮೊದಲನೆಯ ದಿನಾಂಕವೇ ಮರುವರ್ಗೀಕರಿಸಿದ ದಿನಾಂಕವಾಗಿರುವುದು. ಇಂತಹ ಸಂಧರ್ಭಗಳಲ್ಲಿ ಗುಂಪು ಹಿಂದಿನ ಅವಧಿಗಳಲ್ಲಿ ಗುರುತಿಸಿದ ಲಾಭಗಳನ್ನು,ಹಾನಿಗಳನ್ನು (ದುರ್ಬಲತೆಯ ಲಾಭ ಅಥವಾ ಹಾನಿಗಳನ್ನೊಳಗೊಂಡು) ಅಥವಾ ಬಡ್ಡಿಗಳನ್ನು ಮಾರ್ಪಡಿಸಿ ತೋರಿಸುವುದಿಲ್ಲ.

Investment in subsidiaries, Joint Venture and associate companies / ಅಧೀನ ಸಂಸ್ಥೆಗಳು, ಸಹಭಾಗಿತ್ವ ಸಂಸ್ಥೆಗಳು ಮತ್ತು ಸಹವರ್ತಿ ಸಂಸ್ಥೆಗಳಲ್ಲಿ ಹೂಡಿಕೆಗಳು

Investment in subsidiaries, Joint Venture and associate companies are measured at cost.

ಅಧೀನ ಸಂಸ್ಥೆಗಳು, ಸಹಬಾಗಿತ್ವ ಸಂಸ್ಥೆಗಳು ಮತ್ತು ಸಹವರ್ತಿ ಸಂಸ್ಥೆಗಳಲ್ಲಿನ ಹೂಡಿಕೆಗಳನ್ನು ವೆಚ್ಚದಲ್ಲಿ ಲೆಕ್ಕಿಸಲಾಗಿದೆ.

17 Fair value measurement / ನ್ಯಾಯೋಚಿತ ಮೌಲ್ಯಮಾಪನ

'Fair value' is the price that would be received to sell an asset or paid to transfer a liability in an orderly transaction between market participants at the measurement date in the principal or, in its absence, the most advantageous market to which the Group has access at that date. The fair value of a liability reflects its non-performance risk.

ಮೌಲ್ಯ ನಿರ್ಧರಣೆಯ ದಿನಾಂಕದಂದು ಪ್ರಧಾನ ಮಾರುಕಟ್ಟೆಯಲ್ಲಿ ಅಥವಾ ಇದರ ಅನುಪಸ್ಥಿತಿಯಲ್ಲಿ ಗುಂಪು ಪ್ರವೇಶ ಹೊಂದಿರುವ ತುಂಬಾ ಅನುಕೂಲವನ್ನುಂಟು ಮಾಡುವ ಮಾರುಕಟ್ಟೆ ಪಾಲುದಾರರ ಮಧ್ಯೆ ಕ್ರಮಬದ್ಧವಾಗಿ ಜರುಗಿದ ವ್ಯವಹಾರದಲ್ಲಿ ಆಸ್ತಿಗಳ ಮಾರಾಟದಿಂದ ಪಡೆಯಬಹುದಾದ ಅಥವಾ ಭಾಧ್ಯತೆಗಳ ವರ್ಗಾವಣೆಗಾಗಿ ಸಂದಾಯಿಸಿದ ದರವನ್ನು 'ನ್ಯಾಯೋಚಿತ ಮೌಲ್ಯ' ಎಂದು ಹೇಳಲಾಗುವುದು. ಬಾಧ್ಯತೆಗಳ ನ್ಯಾಯೋಚಿತ ಮೌಲ್ಯವು ಅವುಗಳನ್ನು ನೆರವೇರಿಸದಿರುವದರಿಂದ ಆಗಬಹುದಾದ ಹಾನಿಸಂಭವವನ್ನು ಪ್ರತಿಬಿಂಬಿಸುತ್ತದೆ.

When quoted price is available, the Group measures the fair value of an instrument using the quoted price in an active market for that instrument. A market is regarded as active if transactions for the asset or liability take place with sufficient frequency and volume to provide pricing information on an ongoing basis.

ಆರ್ಥಿಕ ಆಸ್ತಿಗಳ ಉಲ್ಲೇಖಿತ ಬೆಲೆ ಲಭ್ಯವಿದ್ದಲ್ಲಿ, ಗುಂಪು ಅಂತಹ ಆಖತಪತ್ರಗಳ (ಇಂಸ್ಟ್ರುಮೆಂಟ್ಸ್) ಕಾರ್ಯಾನಿರತ ಮಾರುಕಟ್ಟೆಯಲ್ಲಿನ ಉಲ್ಲೇಖಿತ ಬೆಲೆಯನ್ನಾಧರಿಸಿ ನ್ಯಾಯೋಚಿತ ಮೌಲ್ಯಮಾಪನ ಮಾಡಲಾಗುವುದು. ಒಂದು ವೇಳೆಮಾರುಕಟ್ಟೆಯಲ್ಲಿ ಆಸ್ತಿ ಅಥವಾ ಬಾಧ್ಯತೆಗಳ ವ್ಯವಹಾರಗಳು ಸಾಕಷ್ಟು ಸಲ ಮತ್ತು ಹೆಚ್ಚಿನ ಗಾತ್ರದಲ್ಲಿ ಜರುಗಿದ ಬೆಲೆಗಳ ಮಾಹಿತಿಯನ್ನು ನಿರಂತರವಾಗಿ ಒದಗಿಸುತ್ತಿದ್ದರೆ ಅಂತಹ ಮಾರುಕಟ್ಟೆಯು ಕ್ರಿಯಾಶೀಲವಾಗಿರುವುದೆಂದು ಪರಿಗಣಿಸಬಹುದಾಗಿದೆ.

If there is no quoted price in an active market, then the Group uses valuation techniques that maximize the use of relevant observable inputs and minimize the use of unobservable inputs. The chosen valuation technique incorporates all the factors that market participants would take into account in pricing a transaction.

ಒಂದು ವೇಳೆ ಕ್ರಿಯಾಶೀಲ ಮಾರುಕಟ್ಟೆಯಲ್ಲಿ ಉಲ್ಲೇಖಿತ ಬೆಲೆ ಲಭ್ಯವಾಗದಿದ್ದಲ್ಲಿ, ಆಗ ಗುಂಪು ಪ್ರಸ್ತುತ ಗ್ರಹಿಸಬಹುದಾದ ಮಾಹಿತಿ (ಇನ್‌ಪುಟ್ಸ್) ಗಳ ಗರಿಷ್ಟ ಬಳಕೆ ಮತ್ತು ಗ್ರಹಿಸಲು ಅಸಾಧ್ಯವಾದ ಮಾಹಿತಿಗಳ ಕನಿಷ್ಟ ಬಳಕೆಯ ಮೌಲ್ಯಮಾಪನ ವಿಧಾನಗಳನ್ನು ಬಳಸುವುದು. ವ್ಯವಹಾರದ ಮೌಲ್ಯಮಾಪನಕ್ಕಾಗಿ ಆಯ್ದುಕೊಂಡ ಮೌಲ್ಯಮಾಪನದ ವಿಧಾನವು ಮಾರುಕಟ್ಟೆಯ ಭಾಗಿದಾರರು ಪರಿಗಣಿಸುವ ಎಲ್ಲಾ ಅಂಶಗಳನ್ನು ಒಳಗೊಂಡಿರುತ್ತದೆ.

When measuring the fair value of an asset or a liability, the Group uses observable market data as far as possible. Fair values are categorized into different levels in a fair value hierarchy based on the inputs used in the valuation techniques as follows.

ಆಸ್ತಿಗಳ ಅಥವಾ ಭಾಧ್ಯತೆಗಳ ನ್ಯಾಯೋಚಿತ ಮೌಲ್ಯವನ್ನು ನಿರ್ಧರಿಸುವಾಗ ಗುಂಪು ಗ್ರಹಿಸಬಹುದಾದ ಮಾರುಕಟ್ಟೆಯ ಅಂಕಿ ಅಂಶಗಳನ್ನು ಸಾಧ್ಯವಾದಷ್ಟು ಮಟ್ಟಿಗೆ ಬಳಸುತ್ತದೆ. ಮೌಲ್ಯ ಮೌಲ್ಯಮಾಪನ ವಿಧಾನಗಳಲ್ಲಿ ಬಳಸಿದ ಅಂಕಿ ಅಂಶ ಅಥವಾ ಮಾಹಿತಿಗಳನ್ನು ಆಧರಿಸಿ, ನ್ಯಾಯೋಚಿತ ಮೌಲ್ಯವನ್ನು, ನ್ಯಾಯೋಚಿತ ಮೌಲ್ಯದ ವರ್ಗಶ್ರೇಣಿ (fair value hierarchy) ಗಳನ್ನು ವಿವಿಧ ಹಂತಗಳಲ್ಲಿ ಈ ಕೆಳಗಿನಂತೆ ವರ್ಗೀಕರಿಸಲಾಗಿದೆ.

- Level 1: quoted prices (unadjusted) in active markets for identical assets or liabilities.
- ಹಂತ 1: ಸಾಮ್ಯತೆ ಹೊಂದಿದ ಆಸ್ತಿಗಳ ಅಥವಾ ಬಾಧ್ಯತೆಗಳ ಕ್ರೀಯಾಶೀಲ ಮಾರುಕಟ್ಟೆಗಳಲ್ಲಿನ ಉಲ್ಲೇಖಿತ ಬೆಲೆಗಳು (ಮಾರ್ಪಡಿಸದ).
- Level 2: inputs other than quoted prices included in Level 1 that are observable for the asset or liability, either directly (i.e. as prices) or indirectly (i.e. derived from prices).
- ಹಂತ 2: ಹಂತ 1 ರಲ್ಲಿ ಸೇರಿಸಲಾದ ಉಲ್ಲೇಖಿತ ಬೆಲೆಗಳನ್ನೊಳಗೊಳ್ಳದ, ಆದರೆ ಆಸ್ತಿ ಹಾಗೂ ಬಾಧ್ಯತೆಗಳ ಕುರಿತಾಗಿ ಪ್ರತ್ಯಕ್ಷವಾಗಿ (ಅರ್ಥಾತ್ ಬೆಲೆಗಳನ್ನಾಧರಿಸಿ) ಇಲ್ಲವೇ ಪರೋಕ್ಷವಾಗಿ (ಅರ್ಥಾತ್ ಬೆಲೆಗಳಿಂದ ಉಗಮವಾದುದು) ಗ್ರಹಿಸಬಹುದಾದ ಮಾಹಿತಿಗಳು (ಅಂಕಿ ಅಂಶಗಳು).
- Level 3: inputs for the asset or liability that are not based on observable market data (unobservable inputs).
- ಹಂತ 3: ಆಸ್ತಿ ಅಥವಾ ಬಾಧ್ಯತೆಗಳ ಕುರಿತು ಮಾರುಕಟ್ಟೆಯ ಗ್ರಹಿಸಬಹುದಾದ ಅಂಕಿ ಅಂಶಗಳನ್ನಾಧರಿಸದೇ ಇರುವ ಮಾಹಿತಿ (ಇನ್‌ಪುಟ್ಸ್) [ಗ್ರಹಿಸಲು ಅಸಾಧ್ಯವಾದ ಮಾಹಿತಿ (ಇನ್‌ಪುಟ್ಸ್)].

  If the inputs used to measure the fair value of an asset or a liability fall into different levels of the fair value hierarchy, then the fair value measurement is categorized in its entirety in the same level of the fair value hierarchy as the lowest level input that is significant to the entire measurement.

  ಆಸ್ತಿ ಅಥವಾ ಬಾಧ್ಯತೆಗಳ ನ್ಯಾಯೋಚಿತ ಮೌಲ್ಯದ ನಿರ್ಧರಣೆ ಮಾಡಲು ಬಳಸಿದ ಮಾಹಿತಿಗಳು (ಅಂಕಿ ಅಂಶಗಳು) ನ್ಯಾಯೋಚಿತ ಮೌಲ್ಯದ ನಿರ್ದಿಷ್ಟವಾದ ವರ್ಗಶ್ರೇಣಿಗಳಲ್ಲಿ ಸರಿಹೊಂದದಿದ್ದರೆ ಅಥವಾ ವಿವಿಧ ಶ್ರೇಣಿಗಳಲ್ಲಿ ಸೇರಿದ್ದರೆ, ಆಗ ಸಂಪೂರ್ಣ ಮೌಲ್ಯ ನಿರ್ಧರಣೆಗೆ ಮಹತ್ತರವಾದ ಕನಿಷ್ಟ ಶ್ರೇಣಿಯ ಅಂಕಿ ಅಂಶಗಳಿಗೆ ಸಂಬಂಧಿಸಿದ ನ್ಯಾಯೋಚಿತ ಮೌಲ್ಯದ ವರ್ಗಶ್ರೇಣಿಯಲ್ಲಿ ಸಮಗ್ರವಾಗಿ ವರ್ಗೀಕರಿಸಲಾಗುವುದು.

18 Revenue recognition / ಆದಾಯ ಗುರುತಿಸುವಿಕೆ

Revenue is recognized on its accrual. / ಪ್ರಾಪ್ತತೆಯ ಆಧಾರದ ಮೇಲೆ ಆದಾಯವನ್ನು ಪರಿಗಣಿಸಲಾಗುವುದು.

Revenue from sale of energy (Conventional and Non-conventional) is recognized in accordance with Electricity Regulatory Commission's regulations, at the tariff rates of PPA executed/PPA initialled/ specified by Government of Karnataka/ provisional tariff admitted.

ವಿದ್ಯುತ್ ಮಾರಾಟದ ಆದಾಯವನ್ನು (ಸಾಂಪ್ರದಾಯಿಕ ಮತ್ತು ಸಾಂಪ್ರದಾಯಿಕವಲ್ಲದ) ವಿದ್ಯುತ್ ನಿಯಂತ್ರಣ ಆಯೋಗದ ನಿಯಮಗಳನುಸಾರವಾಗಿ ಮತ್ತು ಒಪ್ಪಂದಗಳಲ್ಲಿಯ ದರದಂತೆ / ಖರೀದಿ ಒಪ್ಪಂದಗಳಲ್ಲಿಯ ಸಹಿಹಾಕಿದ ದರದಂತೆ / ಕರ್ನಾಟಕ ಸರ್ಕಾರವು ನಿಗದಿಪಡಿಸಿದ ದರಗಳಂತೆ ಪ್ರಾಪ್ತವಾಗುವ ಆಧಾರದ ಮೇರೆಗೆ ಮಾನ್ಯಮಾಡಲಾಗಿದೆ.

Advance against Depreciation recovered through tariff is accrued as revenue in the relatable year of adjustment.

ಬಿಲ್ಲುಗಳಿಂದ ಮುಂಗಡವಾಗಿ ಪಡೆದ ಸವಕಳಿಯ ವೆಚ್ಚವನ್ನು ಹೊಂದಾಣಿಕೆಗೊಳಪಟ್ಟ ಸಂಬಂಧಿತ ವರ್ಷಕ್ಕೆ ಪ್ರಾಪ್ತವಾದ ಆದಾಯವೆಂದು ಗುರುತಿಸಲಾಗುವುದು.

Revenue from contracts and consultancy services is accounted on the basis of progress of work executed and billing milestones, as per the relevant contracts / agreements.

ಸಲಹಾ ಸೇವೆಗಳಿಂದಾದ ಮತ್ತು ಗುತ್ತಿಗೆಗಳಿಂದಾದ ಆದಾಯವನ್ನು ಕಾರ್ಯ ನಿರ್ವಹಣೆಯ ಪ್ರಗತಿಯನ್ನು ಆಧರಿಸಿ ಮತ್ತು ತತ್ಸಂಬಂಧಿತ ಗುತ್ತಿಗೆ / ಒಪ್ಪಂದಗಳಲ್ಲಿಯ ಬಿಲ್ಲು ತಯಾರಿಕೆಯ ಮೈಲಿಗಲ್ಲುಗಳನ್ನು (ಒಪ್ಪಂದಗಳಲ್ಲಿಯ) ಆಧರಿಸಿ ಲೆಕ್ಕಾಚಾರ ಮಾಡಲಾಗಿದೆ.

Interest on outstanding energy dues beyond the prescribed period is recognized on accrual basis.

ತಡವಾಗಿ ವಿಲೇವಾರಿಯಾದ ವಿದ್ಯುತ್ ಮಾರಾಟದ ಬಾಕಿ ಬಾಬ್ತು ಮೇಲಿನ ಬಡ್ಡಿಯನ್ನು ಪ್ರಾಪ್ತವಾಗುವ ಆಧಾರದ ಮೇರೆಗೆ ಗುರುತಿಸಲಾಗಿದೆ.

Rental income / licence fees, insurance claims, and claims on collieries and railways for quality and quantity variation, sale of scrap, spares and coal mill rejects, claim for stones and shales in coal supplies from the collieries are reckoned as accrued on realization / acceptance.

ಬಾಡಿಗೆ ಆದಾಯ / ಪರವಾನಿಗೆ ಶುಲ್ಕ, ಸಿಬ್ಬಂದಿ ಮುಂಗಡಗಳ ಮೇಲಿನ ಬಡ್ಡಿ, ವಿಮಾಹಕ್ಕು ಕೋರಿಕೆಗಳು, ಇಂಧನ ಪೂರೈಕೆ ಒಪ್ಪಂದಕ್ಕಿಂತ ಮುಂಚಿತ ಅವಧಿಯಲ್ಲಾದ ಕಲ್ಲಿದ್ದಲು ಸರಬರಾಜಿನ ಗುಣಮಟ್ಟ ಹಾಗೂ ಪರಿಮಾಣದಲ್ಲಾದ ವ್ಯತ್ಯಾಸದ ಕುರಿತು ರೈಲ್ವೇ ಮತ್ತು ಕಲ್ಲಿದ್ದಲು ಪೂರೈಕೆದಾರರಿಗೆ ಸಲ್ಲಿಸಿರುವ ಹಕ್ಕು ಕೋರಿಕೆಗಳನ್ನು ಕೆಲಸಕ್ಕೆ ಬಾರದ ಉಳಿಕೆ (CRSP) ಯ ಮಾರಾಟ, ತಿರಸ್ಕೃತವಾದ ಕೋಲ್ ಮಿಲ್ ಮತ್ತು ಕಲ್ಲಿದ್ದಲು ಸರಬರಾಜಿನಲ್ಲಿರುವ ಕಲ್ಲುಗಳು ಮತ್ತು ಪುಡಿಯಾಗದ ಕಲ್ಲುಗಳು ಹಕ್ಕು ಕೋರಿಕೆಗಳನ್ನು ಒಪ್ಪಿಗೆಯ ಸ್ವೀಕೃತಿ ನಂತರ ಲೆಕ್ಕಾಚಾರ ಮಾಡಲಾಗಿದೆ.

Interest on staff advance is reckoned as accrued in accordance with the terms of sanction.

ಸಿಬ್ಬಂದಿಗೆ ನೀಡಿದ ಮುಂಗಡದ ಮೇಲಿನ ಬಡ್ಡಿಯನ್ನು ಮೋಜೂರಾತಿಯ ನಿಯಮಗಳನುಸಾರ ಪ್ರಾಪ್ತತೆಯ ಆಧಾರದ ಮೇಲೆ ಲೆಕ್ಕಿಸಲಾಗುವುದು.

Interest income is recognised on time proportionate method, based on underlying interest rates.

ಅಂತರ್ನಿಹಿತ ಬಡ್ಡಿದರಗಳನ್ನಾಧರಿಸಿ ಬಡ್ಡಿ ಆದಾಯವನ್ನು ಕಾಲಾನುಪಾತ ವಿಧಾನದ ಮುಖಾಂತರ ಗುರುತಿಸಲಾಗುತ್ತದೆ.

Revenue from any source other than those mentioned above is recognised on transfer of risk and rewards of ownership and it is probable that the economic benefits associated with the transactions will flow to the entity. Revenue is measured at the fair value of the consideration received or receivable.

ಮೇಲೆ ಉಲ್ಲೇಖಿಸಿದವುಗಳನ್ನು ಹೊರತುಪಡಿಸಿ ಬೇರೆ ಯಾವುದೇ ಇತರೆ ಮೂಲಗಳಿಂದ ಆದಾಯವನ್ನು ಗಳಿಸಿದ್ದಲ್ಲಿ, ಇದನ್ನು ಮಾಲಿಕತ್ವದ ಹಾನಿ ಹಾಗೂ ಪ್ರತಿಫಲ ವರ್ಗಾವಣೆಯಾದಾಗ ಹಾಗೂ ವ್ಯವಹಾರಕ್ಕೆ ಸಂಬಂಧಿಸಿದ ಆರ್ಥಿಕ ಅನುಕೂಲಗಳು ಸಂಸ್ಥೆಗೆ ಬರುವ ಸಾಧ್ಯತೆಯಿರುವಾಗ ಗುರುತಿಸಲಾಗಿದೆ. ಆದಾಯವನ್ನು ಪಡೆದ ಅಥವಾ ಪಡೆಯಬೇಕಾದ ಪರಿಗಣನೆಯ ನ್ಯಾಯೋಚಿತ ಬೆಲೆಗೆ ಅಳೆಯಲಾಗಿದೆ.

19 Accounting for expenditure/ claims under certain heads / ಕೆಲವು ಮುಂಖಡರ ಅಡಿಯಲ್ಲಿ ಖರ್ಚು / ಹಕ್ಕುಗಳಿಗಾಗಿ ಲೆಕ್ಕಪರಿಶೋಧನೆ

Expenditure on municipal and vehicle taxes, insurance premium, membership and subscription, AMC of office equipment is charged to revenue and reckoned as accrued on payment being in the nature of irretrievably incurred

Claims by the group on the contractors for liquidated damages and penalties specifically covered under the respective contracts are accounted on accrual basis subject to mutual contractual obligations.

Claims by the contractors/suppliers on the group for liquidated damages, escalation, bonus and revision in rates which are not specifically covered under the respective contracts are reckoned as accrued on admittance.

ಮುನ್ಸಿಪಲ್ ಮತ್ತು ವಾಹನ ತೆರಿಗೆ ವಿಮೆಯ ಕುಂತು, ಸದಸ್ಯತ್ವ ಶುಲ್ಕ ಮತ್ತು ಚಂದಾ ಹಣ ಮತ್ತು ಕಛೇರಿಯ ಸಲಕರಣೆಗಳ ವಾರ್ಷಿಕ ಉಸ್ತುವಾರಿ ಖರ್ಚುಗಳನ್ನು ಹಿಂಪಡೆಯಲಾಗದ ವ್ಯಯಿಸಿದ ವೆಚ್ಚವನ್ನು ಪಾವತಿಮಾಡಿದ ಆಧಾರದ ಮೇರೆಗೆ ಲೆಕ್ಕಾಚಾರ ಮಾಡಲಾಗುವುದು.

ಪ್ರತ್ಯೇಕ ಕಾಮಗಾರಿಗೆ ಸಂಭಂಧಿಸಿದ ಗುತ್ತಿಗೆ ಒಪ್ಪಂದಗಳಲ್ಲಿ ನಮೂದಿಸಿದ ಹಾನಿ ತೀರಿಕೆ ಮತ್ತು ದಂಡಗಳ ಕುರಿತು ಪರಸ್ಪರ ಒಪ್ಪಂದದ ನಿಬಂಧನೆಗೆ ಒಳಪಟ್ಟು ಗುತ್ತಿಗೆದಾರರ ಮೇಲೆ ಗುಂಪು ಹೊಂದಿರುವ ಹಕ್ಕು ಕೋರಿಕೆಗಳನ್ನು ಪ್ರಾಪ್ತವಾಗುವ ಆಧಾರದ ಮೇರೆಗೆ ಲೆಕ್ಕಾಚಾರ ಮಾಡಲಾಗಿರುವುದು.

ಒಪ್ಪಂದಗಳಲ್ಲಿ ನಿರ್ದಿಷ್ಟವಾಗಿ ಒಳಗೊಂಡಿರದ ಹಾನಿ ತೀರಿಕೆ, ಬೆಲೆ ಏರಿಕೆ, ಬೋನಸ್ ಮತ್ತು ದರಗಳ ಪರಿಷ್ಕರಣೆಗಳ ಕುರಿತಾಗಿ ಗುತ್ತಿಗೆದಾರರು / ಪೂರೈಕೆದಾರರು ಗುಂಪಿನ ಮೇಲೆ ಹೊಂದಿರುವ ಹಕ್ಕು ಕೋರಿಕೆಗಳನ್ನು ನಿಗಮವು ಒಪ್ಪಿದ ತರುವಾಯ ಲೆಕ್ಕಾಚಾರ ಮಾಡಲಾಗುವುದು.

Note No. / ಟಿಪ್ಪಣಿ ಸಂಖ್ಯೆ 41

II: OTHERS / ಇತರೆ

A. By an order dated 24.09.2015 the Hon'ble Supreme Court of India ordered for cancellation of the captive coal mines allotted to the Group and directed the central government to conduct a fresh auction of the coal mines. The central government by its Coal mines (Special Provisions), Ordinance 2014 dated 21.10.2014 stipulated certain condition for any prospective bidder to participate in auction.

ಭಾರತದ ಸರ್ವೋಚ್ಚ ನ್ಯಾಯಾಲಯವು ದಿನಾಂಕ 24.09.2014 ರ ಆದೇಶದ ಮೂಲಕ ಗುಂಪಿಗೆ ಹಂಚಿಕೆಯಾದ ಕ್ಯಾಪ್ಟಿವ್ ಕಲ್ಲಿದ್ದಲಿನ ಗಣಿಗಳನ್ನು ರದ್ದುಗೊಳಿಸಲು ಹಾಗೂ ಕೇಂದ್ರ ಸರ್ಕಾರಕ್ಕೆ ಹೊಸ ಹರಾವುಗಳನ್ನು ನಡೆಸಲು ನಿರ್ದೇಶಿಸಿದೆ. ಕೇಂದ್ರ ಸರ್ಕಾರವು ದಿನಾಂಕ 21.10.2014ರ ತನ್ನ ಕಲ್ಲಿದ್ದಲು ಗಣಿಗಳ (ವಿಶೇಷ ಉಪಬಂಧಗಳು) ಅಧ್ಯಾದೇಶ, 2014 ರ ಮೂಲಕ ಭಾವಿ ಸವಾಲುಗಾರರಿಗೆ, ಸವಾಲಿನಲ್ಲಿ ಭಾಗವಹಿಸಲು ಕೆಲವು ಷರತ್ತುಗಳನ್ನು ವಿಧಿಸಿದೆ.

The Hon'ble Supreme Court of India by its order dated 24.09.2014 has also ordered the prior allottee of the coal mines to pay additional levy of INR 295/MT on excavated coal from mines originally allotted from the date of commencement of mining operations till 24.09.2014. The amount payable for the coal mined by Karnataka EMTA coal mines limited (KECML) till 31.03.2015 aggregating to INR 44,820 lakhs. The Group is of the view the liability is fastened on KECML being the prior allottee and hence no provision made.

ಮಾನ್ಯ ಸರ್ವೋಚ್ಚ ನ್ಯಾಯಾಲಯವು ದಿನಾಂಕ 24.09.2014ರ ಆದೇಶದ ಮೂಲಕ ಪೂರ್ವದ ಕಲ್ಲಿದ್ದಲು ಗಣಿಗಳ ಭಾಗಸ್ಥರಿಗೆ ಗಣಿಗಾರಿಕೆ ಪ್ರಾರಂಭವಾದ ದಿನಾಂಕದಿಂದ 24.09.2014ರ ವರೆಗೆ ಗಣಿಗಳಿಂದ ಅಗೆದ ಕಲ್ಲಿದ್ದಲಿನ ಮೇಲೆ ರೂ.295/- ಮೆಟ್ರಿಕ್‌ಟನ್‌ನಂತೆ ಹೆಚ್ಚುವರಿ ಲೆವಿಯನ್ನು ಪಾವತಿಸಲು ಆದೇಶಿಸಿದೆ. ಮೆ॥ಕರ್ನಾಟಕ ಕೋಲ್ ಮೈನ್ಸ್ ಲಿಮಿಟೆಡ್ ದಿನಾಂಕ 31.03.2015 ರವರೆಗೆ ಅಗೆದ ಕಲ್ಲಿದ್ದಿಲಿನ ಒಟ್ಟು ಬಾಕಿ ಮೊತ್ತ ರೂ. 44,820 ಲಕ್ಷಗಳು. ಗುಂಪಿನ ಅಭಿಪ್ರಾಯದಲ್ಲಿ ಇದು ಪೂರ್ವದ ಹಂಚಿದಾರರಾದ ಮೆ॥ಕೆಇಸಿಎಮ್‌ಎಲ್‌ನ ಜವಾಬ್ದಾರಿಯಾಗಿರುವುದರಿಂದ, ಯಾವುದೇ ಅವಕಾಶವನ್ನು ಕಲ್ಪಿಸಿರುವುದಿಲ್ಲ.

The Hon'ble Supreme court of India had directed reauction and re-allotment of coal blocks as per the stipulations contained in that order and the Group participated in the reauction in respect of allotment of same blocks at Baranj I-IV, Manoradeep and Kiloni which were earlier allotted and in order to ensure the participation in the reauction a sum of INR 11,043 lakhs being 26% of the dues was paid by the Group. In the process of reauction, the same blocks were allotted to the Group and while considering its petition for selection and appointment of mine operator, the Hon'ble Supreme court of India directed the remittance of balance amount of INR 33,777 lakhs and accordingly this sum was also deposited by the Group.

ಭಾರತದ ಮಾನ್ಯ ಸರ್ವೋಚ್ಚ ನ್ಯಾಯಾಲಯವು ಆದೇಶದಲ್ಲಿ ವಿಧಿಸಲಾದ ಷರತ್ತುಗಳ ಅನ್ವಯ ಕಲ್ಲಿದ್ದಲು ಗಣಿಗಳ ಮರುಹರಾವು ಮತ್ತು ಮರುಹಂಚಿಕೆಯನ್ನು ನಿರ್ದೇಶಿಸಿರುತ್ತದೆ. ಹಿಂದಿನ ಅವಧಿಯಲ್ಲಿ ಹಂಚಿಕೆಯಾದ ಬಾರಂಜ್I-IV, ಮನೋರ್‌ದೀಪ್ ಮತ್ತು ಕಿಲೋನಿ ಕಲ್ಲಿದ್ದಲು ಗಣಿಗಳ ಹಂಚಿಕೆಗೆ ಸಂಬಂಧಿಸಿದಂತೆ ಗುಂಪು ಮರುಹರಾವಿನಲ್ಲಿ ಭಾಗವಹಿಸಿರುತ್ತದೆ ಹಾಗೂ ಮರುಹರಾವಿನಲ್ಲಿ ಭಾಗವಹಿಸಲು ರೂ.11,043 ಲಕ್ಷಗಳನ್ನು (ಒಟ್ಟು ಬಾಕಿಯ ಶೇ.26) ಪಾವತಿಸಿರುತ್ತದೆ. ಮರುಹರಾವಿನ ಪ್ರಕ್ರಿಯೆಯಲ್ಲಿ, ಗುಂಪು, ಅದೇ ಹಿಂದಿನ ಕಲ್ಲಿದ್ದಲು ಗಣಿಗಳು ಹಂಚಿಕೆಯಾಗಿರುತ್ತವೆ ಹಾಗೂ ಗಣಿ ಆಯೋಜಕರ ಆಯ್ಕೆ ಮತ್ತು ನೇಮಕಾತಿಯ ಅರ್ಜಿಯನ್ನು ಪರಿಗಣಿಸುವಾಗ, ಮಾನ್ಯ ಸರ್ವೋಚ್ಚ ನ್ಯಾಯಾಲಯವು ಬಾಕಿ ಮೊತ್ತವಾದ ರೂ.33,777 ಲಕ್ಷಗಳನ್ನು ಪಾವತಿಸುವಂತೆ ನಿರ್ದೇಶಿಸಿರುತ್ತದೆ. ಇದರಾನುಸಾರವಾಗಿ, ಗುಂಪು ಈ ಮೊತ್ತವನ್ನು ಠೇವಣಿಯಾಗಿ ನೀಡಿರುತ್ತದೆ.

The Group initiated the process of selection and appointment of mine operator which was challenged by KECML and EMTA Coal mines Limited (EMTA) before the Hon'ble High court of Karnataka contending that they have the first right for being appointed as mine operator and the Hon'ble High Court of Karnataka directed the Group to consider their right to novation as per the Coal Mines (Special Provisions), Act 2015. The Group had taken up the matter further before the Hon'ble Supreme court of India, which directed appointment of an expert committee to arrive at the best price for charge. While considering the expert committee report, before the Hon'ble Supreme court of India, during the year 2016-17, EMTA/KECML has submitted agreeing to the mining charge determined by the expert committee and prayed for allotment of the work. The Hon'ble Supreme court of India had directed the State of Karnataka to file an affidavit and as per the MoC, GoI directions in the meeting dated 23.05.2017, State of Karnataka had filed an affidavit stating that it is more appropriate to go for 'competitive bidding' for MDO contract and; not novating the contract under Section 11 (1) of the Act, unless otherwise directed by the Hon'ble Court. The matter is pending before the Hon'ble Supreme Court of India.

ಗುಂಪು ಗಣಿ ಆಯೋಜಕರ ಆಯ್ಕೆ ಮತ್ತು ನೇಮಕಾತಿಯ ಪ್ರಕ್ರಿಯೆಯನ್ನು ಪ್ರಾರಂಭಿಸಿರುತ್ತದೆ. ಮೆ॥ಕೆಇಸಿಎಮ್‌ಎಲ್ ಹಾಗೂ ಮೆ॥ಎಮ್ಟಾಕೋಲ್ ಮೈನ್ಸ್ ಲಿಮಿಟೆಡ್‌ನವರು ಗಣಿ ಆಯೋಜಕರಾಗಿ ನೇಮಿತವಾಗಲು ಅವರು ಮೊದಲ ಹಕ್ಕುದಾರರೆಂಬ ವಾದವನ್ನು ಮಾನ್ಯ ಕರ್ನಾಟಕ ಉಚ್ಚ ನ್ಯಾಯಾಲಯದಲ್ಲಿ ಮಂಡಿಸಿರುತ್ತಾರೆ ಹಾಗೂ ಮಾನ್ಯ ಕರ್ನಾಟಕ ಉಚ್ಚ ನ್ಯಾಯಾಲಯವು ಕಲ್ಲಿದ್ದಲು ಗಣಿ (ವಿಶೇಷ ನಿಬಂಧನೆಗಳು), ಕಾಯ್ದೆ 2015ರ ಅನ್ವಯ ಅವರ ನೋವೇಶನ್ ಹಕ್ಕನ್ನು ಪರಿಗಣಿಸಲು ನಿಗಮಕ್ಕೆ ನಿರ್ದೇಶಿಸಿರುತ್ತದೆ. ಗುಂಪಿಗೆ ಈ ವಿಷಯನ್ನು ಮಾನ್ಯ ಸರ್ವೋಚ್ಚ ನ್ಯಾಯಾಲಯಕ್ಕೆ ಸಲ್ಲಿಸಿರುತ್ತದೆ ಹಾಗೂ ವಿಧಿಸುವ ಸೂಕ್ತ ಬೆಲೆಯನ್ನು ನಿರ್ಧರಿಸಲು ತಜ್ಞರ ಸಮಿತಿಯನ್ನು ರಚಿಸಬೇಕೆಂಬ ನಿರ್ದೇಶನವನ್ನು ಪಡೆದುಕೊಂಡಿರುತ್ತದೆ. ಮಾನ್ಯ ಸರ್ವೋಚ್ಚ ನ್ಯಾಯಾಲಯದ ಸಮ್ಮುಖದಲ್ಲಿ ತಜ್ಞರ ಸಮಿತಿಯ ವರದಿಯನ್ನು ಪರಿಗಣಿಸುವಾಗ ಮೆ॥ಎಮ್ಟಾ ಕೆಇಸಿಎಂಎಲ್ ಸಂಸ್ಥೆಯು ತಜ್ಞರ ಸಮಿತಿಯು ನಿರ್ಧರಿಸಿದ ಗಣಿಯ ಬೆಲೆಯನ್ನು ಸ್ವೀಕರಿಸಿರುತ್ತದೆ ಹಾಗೂ ಕಾರ್ಯವನ್ನು ಅವರಿಗೆ ನೀಡುವಂತೆ ವಿನಂತಿಸಿಕೊಂಡಿರುತ್ತದೆ. ಭಾರತದ ಸರ್ವೋಚ್ಚ ನ್ಯಾಯಾಲಯವು ಕರ್ನಾಟಕ ರಾಜ್ಯಕ್ಕೆ ಅಫಿಡವಿಟ್ ಸಲ್ಲಿಸುವಂತೆ ನಿರ್ದೇಶಿಸಿದೆ ಹಾಗೂ ಎಂಒಸಿ ಹಾಗೂ ದಿನಾಂಕ 23.05.2017ರ ಸಭೆಯಲ್ಲಿ ಭಾರತ ಸರ್ಕಾರದ ನಿರ್ದೇಶನಗಳ ಅನುಸಾರ ಕರ್ನಾಟಕ ಸರ್ಕಾರವು ಮಾನ್ಯ ನ್ಯಾಯಾಲಯವು ನಿರ್ದೇಶಿಸಿದಾಗ ಹೊರತುಪಡಿಸಿ, ಕಾಯ್ದೆಯ ಕಲಂ 11(1)ರಡಿಯಲ್ಲಿ ಎಂಡಿಒ ಒಪ್ಪಂದವನ್ನು ನವೀಕರಿಸದೆ; 'ಸ್ಪರ್ಧಾತ್ಮಕ ಬಿಡ್ಡಿಂಗ್' ಮಾಡುವುದು ಸೂಕ್ತ ಎಂದು ಅಫಿಡವಿಟ್ ಸಲ್ಲಿಸಿದೆ. ಈ ವಿಷಯದ ಇತ್ಯರ್ಥವು ಭಾರತದ ಮಾನ್ಯ ಸರ್ವೋಚ್ಚ ನ್ಯಾಯಾಲಯದಲ್ಲಿ ಬಾಕಿಯಿರುತ್ತದೆ.

The Group is of the view that the entire amount of additional levy paid aggregating to INR 44,820 lakhs is recoverable from KECML as they are the prior allottee. Accordingly this sum is shown as amount recoverable under the head other current assets (Note 15) of the financial statements.

ಗುಂಪಿನ ಅಭಿಪ್ರಾಯದಲ್ಲಿ ಹೆಚ್ಚುವರಿ ಲೆವಿಯ ಒಟ್ಟು ಮೊತ್ತವಾದ ರೂ.44,820 ಲಕ್ಷಗಳು ಮೆ॥ಕೆಇಸಿಎಮ್‌ಎಲ್‌ನವರು ಪೂರ್ವದ ಹಂಚಿಕೆದಾರರಾದ ಕಾರಣ ಅವರಿಂದ ಬರಬೇಕಾದ ಬಾಕಿಯಾಗಿರುತ್ತದೆ. ಇದರಾನುಸಾರ ಈ ಮೊತ್ತವನ್ನು ಆರ್ಥಿಕ ವಿವರಣಾ ಪಟ್ಟಿಗಳ ಇತರೆ ಚಾಲ್ತಿ ಆಸ್ತಿ (ಟಿಪ್ಪಣಿ 15) ಶೀರ್ಷಿಕೆಯಡಿಯಲ್ಲಿ ಬರಬೇಕಾದ ಬಾಕಿಯೆಂದು ತೋರಿಸಲಾಗಿದೆ.

The Group having remitted the additional levy per tonne of coal mined had raised invoices aggregating to INR 44,820 lakhs on ESCOM's during the year 2016-17. Further, the amount of invoices raised was not recognised as income because of the disputed nature of the transaction which was pending before the Hon'ble High Court of Karnataka and had treated as a liability and classified under the head other current liabilities (Note 28) in the financial statements. During the current year, the case has been referred to a third judge and the matter is pending before the third judge of the Hon'ble High Court of Karnataka.

2016–17 ನೇ ಸಾಲಿನಲ್ಲಿ ಗುಂಪು ಅಗೆದ ಪ್ರತಿ ಟನ್ ಕಲ್ಲಿದ್ದಿಲಿಗೆ ಹೆಚ್ಚುವರಿ ಲೆವಿಯನ್ನು ಪಾವತಿಸಿ, ಎಸ್ಕಾಂಗಳಿಗೆ ರೂ.44,820 ಲಕ್ಷಗಳ ಬಿಲ್ಲನ್ನು ಮಾಡಿರುತ್ತದೆ. ಮಾನ್ಯ ಕರ್ನಾಟಕ ಉಚ್ಚ ನ್ಯಾಯಾಲಯದಲ್ಲಿ ಈ ವ್ಯವಹಾರದ ಇತ್ಯರ್ಥವು ಬಾಕಿ ಇರುತ್ತದೆ ಹಾಗೂ ವಿವಾದಾತ್ಮಕ ಸ್ವರೂಪದ ಕಾರಣದಿಂದಾಗಿ ಬಿಲ್ಲಿನ ಮೊತ್ತವನ್ನು ಆದಾಯವೆಂದು ಗುರುತಿಸದೇ, ಹೊಣೆಗಾರಿಕೆಯೆಂದು ಪರಿಗಣಿಸಿ ಆರ್ಥಿಕ ವಿವರಣಾ ಪಟ್ಟಿಗಳಲ್ಲಿ ಇತರೆ ಚಾಲ್ತಿ ಆಸ್ತಿಗಳು (ಟಿಪ್ಪಣಿ 28) ಶೀರ್ಷಿಕೆಯಡಿಯಲ್ಲಿ ವರ್ಗೀಕರಿಸಲಾಗಿರುತ್ತದೆ. ಪ್ರಸ್ತುತ ಸಾಲಿನಲ್ಲಿ, ಪ್ರಕರಣವನ್ನು ಮೂರನೇ ನ್ಯಾಯಾಧೀಶರಿಗೆ ಶಿಫಾರಸ್ಸು ಮಾಡಲಾಗಿದೆ ಹಾಗೂ ವಿಷಯದ ಇತ್ಯರ್ಥವು ಮೂರನೇ ನ್ಯಾಯಾಧೀಶರಿಂದ ಕರ್ನಾಟಕದ ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ಬಾಕಿಯಿರುತ್ತದೆ.

KPCL had withheld an amount of INR 16,000 Lakhs payable to KECML on account of cost of rejects cleared by KECML belonging to KPCL and for supply of low quality coal. The Directorate of Enforcement Bengaluru Zonal Office ("ED") drawing an attention to the investigation under the provisions of Prevention of Money Laundering Act, 2002 advised not to release the amount to the extent of INR 4,900 Lakhs out of INR 16,000 Lakhs payable to KECML. KPCL, to comply with the directions created an interest bearing fixed deposit dated: 12.04.2018 with State Bank of India amounting to INR. 4,900 Lakhs and to not encash the same until the instructions of ED. A provisional attachment order was issued by ED for the above fixed deposit under the provisions of Prevention of Money-Laundering Act, 2002.

ಕವಿನಿನಿಗೆ ಸಂಬಂಧಿತ ತಿರಸ್ಕೃತಗಳ ವೆಚ್ಚ ಹಾಗೂ ಕೆಳದರ್ಜೆಯ ಕಲ್ಲಿದ್ದಲಿನ ಪೂರೈಕೆಗೆ ಸಂಬಂಧಿಸಿದಂತೆ ಕವಿನಿನಿಯು ಮೆ॥ಕೆಇಸಿಎಮ್‌ಎಲ್‌ಗೆ ಪಾವತಿಸಬೇಕಾದ ರೂ.16,000 ಲಕ್ಷಗಳನ್ನು ತಡೆಹಿಡಿದಿರುತ್ತದೆ. ಬೆಂಗಳೂರು ವಲಯ ಕಛೇರಿಯ ಡೈರೆಕ್ಟೋರೇಟ್ ಆಫ್ ಎನ್‌ಫೋರ್ಸ್‌ಮೆಂಟ್ ("ಇಡಿ") ಇವರು ಪ್ರಿವೆಂಶನ್ ಆಫ್ ಮನಿ ಲಾಂಡರಿಂಗ್ ಕಾಯ್ದೆ, 2002ರ ನಿಬಂಧನೆಗಳ ಅನುಸಾರದ ತನಿಖೆಯಡಿಯಲ್ಲಿ ಮೆ॥ಕೆಇಸಿಎಮ್‌ಎಲ್‌ಗೆ ಪಾವತಿಸಬೇಕಾದ ಒಟ್ಟು ರೂ.16,000 ಲಕ್ಷಗಳಲ್ಲಿ ರೂ.4,900 ಲಕ್ಷಗಳನ್ನು ಬಿಡುಗಡೆಗೊಳಿಸದಂತೆ ಸಲಹೆ ನೀಡಿದೆ. ನಿರ್ದೇಶನಗಳನ್ನು ಪಾಲಿಸಲು, ಕವಿನಿನಿಯು ದಿನಾಂಕ 12.04.2018ರಂದು ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾದಲ್ಲಿ ರೂ.4,900 ಲಕ್ಷಗಳ ಬಡ್ಡಿ ತರುವ ಠೇವಣಿಯನ್ನು ಮಾಡಿದೆ ಹಾಗೂ ಇಡಿಯವರ ಮುಂದಿನ ಸೂಚನೆಯವರೆಗೂ ಇದನ್ನು ನಗದೀಕರಿಸಲಾಗುವುದಿಲ್ಲ. ಪ್ರಿವೆಂಶನ್ ಆಫ್ ಮನಿ ಲಾಂಡರಿಂಗ್ ಕಾಯ್ದೆ, 2002ರ ನಿಬಂಧನೆಗಳ ಅಡಿಯಲ್ಲಿ ಇಡಿಯವರು ಮೇಲಿನ ಠೇವಣಿಗೆ ತಾತ್ಕಾಲಿಕ ಲಗತ್ತಿಸುವಿಕೆಯ ಆದೇಶವನ್ನು ಹೊರಡಿಸಿದಾರೆ.

KPCL has filed a Writ Petition 31286/2018 against Enforcement Directorate in the Hon'ble High Court of Karnataka praying to quash the Letter dated 10/04/2018 bearing ECIR No. BGZO/19/2015 issued by ED and also to quash the Provisional Attachment Order No. 03/2018 in ECIR No. BGZO/19/2015 made by ED.

ಇಡಿಯವರು ನೀಡಿದ ಇಸಿಐಆರ್ ಸಂಖ್ಯೆ ಬಿಜಿಜೆಡ್ಒ/19/2015 ದಿನಾಂಕ 10.04.2018ರ ಪತ್ರ ಹಾಗೂ ಇಸಿಐಆರ್ ಸಂಖ್ಯೆ ಬಿಜಿಜೆಡ್ಒ/19/2015 ನಲ್ಲಿನ ತಾತ್ಕಾಲಿಕ ಲಗತ್ತಿಸುವಿಕೆ ಆದೇಶ ಸಂಖ್ಯೆ 03/2018 ಅನ್ನು ರದ್ದುಗೊಳಿಸುವಂತೆ ವಿನಂತಿಸಿಕೊಂಡು ಕವಿನಿನಿಯು ಎನ್‌ಫೋರ್ಸ್‌ಮೆಂಟ್ ಡೈರೆಕ್ಟೋರೇಟ್ ವಿರುದ್ಧ ಕರ್ನಾಟಕದ ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ಸಂಖ್ಯೆ 31286/2018 ರಿಟ್ ಅರ್ಜಿಯನ್ನು ಸಲ್ಲಿಸಿದೆ.

B. Claims on the Group towards new coal mine / ಹೊಸ ಕಲ್ಲಿದ್ದಲು ಗಣಿಗೆ ಸಂಬಂಧಿಸಿದಂತೆ ಗುಂಪಿನ ಮೇಲಿನ ಕ್ಲೇಮುಗಳು;

Pursuant to the applications filed by the Group with the various Central/ State Government and statutory authorities for transfer of approvals/ licenses/ clearances in favour of the Group, the Group has received various claims/ demands/ deposits to be made which in the view of the Group is to be adjusted against the compensation payable to KECML by the Ministry of Coal, Government of India. The total claim received by the Group is INR 11,823 lakhs (PY INR 11,823 lakhs).

ಗುಂಪಿನ ಪರವಾಗಿ ಸಮ್ಮತಿಗಳ ವರ್ಗಾವಣೆ / ಪರವಾನಿಗೆಗಳು / ತೀರುವಳಿಗಾಗಿ ಹಲವಾರು ಕೇಂದ್ರ / ರಾಜ್ಯ ಸರ್ಕಾರ ಮತ್ತು ಶಾಸನ ಬದ್ಧ ಪ್ರಾಧಿಕಾರಗಳಿಗೆ ಅಗತ್ಯ ಅರ್ಜಿಗಳನ್ನು ಸಲ್ಲಿಸಿದ ತರುವಾಯ, ಗುಂಪಿಗೆ ಹಲವಾರು ಹಕ್ಕುಗಳು / ಬೇಡಿಕೆಗಳು / ಠೇವಣಿಗಳು ಮಾಡುವಂತೆ ಬೇಡಿಕೆಗಳು ಬಂದಿದ್ದು, ಇವುಗಳನ್ನು ಭಾರತ ಸರ್ಕಾರದ ಕಲ್ಲಿದ್ದಲು ಸಚಿವಾಲಯವು ಕೆಇಸಿಎಂಎಲ್‌ಗೆ ನೀಡಬೇಕಾದ ಪರಿಹಾರ ಮೊತ್ತದಲ್ಲಿ ಹೊಂದಾಣಿಕೆ ಮಾಡಬೇಕಾಗುವುದು. ಗುಂಪು ಪಡೆದ ಒಟ್ಟು ಕ್ಲೇಮಿನ ಮೊತ್ತ ರೂ.11,823 ಲಕ್ಷಗಳು (ಹಿಂದಿನ ವರ್ಷ:11,823 ಲಕ್ಷಗಳು).

C. Contingent Liabilities / ಅನಿಶ್ಚಿತ ಹೊಣೆಗಾರಿಕೆ;

(INR in Lakhs, ರೂ ಲಕ್ಷಗಳಲ್ಲಿ)

Contingent liabilities and commitments (to the extent not provided for)	As at 31 March 2018	As at 31 March 2017
ಅನಿಶ್ಚಿತ ಹೊಣೆಗಾರಿಕೆ ಮತ್ತು ಬದ್ಧತೆಗಳು (ಲೆಕ್ಕ ಪುಸ್ತಕದಲ್ಲಿ ಒದಗಿಸಿಲ್ಲದೇ ಇರುವುದು)	31 ಮಾರ್ಚ್ 2018ಕ್ಕೆ	31 ಮಾರ್ಚ್ 2017ಕ್ಕೆ
i) Contingent Liabilities / ಅನಿಶ್ಚಿತ ಹೊಣೆಗಾರಿಕೆಗಳು		
Claims against the Group not acknowledged as debt / ಗುಂಪಿನ ವಿರುದ್ಧ ಇರುವ ಒಪ್ಪಿಕೊಳ್ಳದ ಕ್ಲೇಮ್‌ಗಳು		
a) Claims disputed by the Group / ಗುಂಪಿನ ವತಿಯಿಂದ ವಿವಾದದಲ್ಲಿರುವ ಕ್ಲೇಮುಗಳು	37 807.38	39 913.67
b) Income tax matters / ಆದಾಯ ತೆರಿಗೆಯ ವಿಷಯಗಳು	29 373.01	28 645.00
c) Indirect tax matters / ಪರೋಕ್ಷ ತೆರಿಗೆಯ ವಿಷಯಗಳು	13 254.29	12 809.00
Sub total / ಉಪಮೊತ್ತ	**80 434.68**	**81 367.67**
ii) Commitments / ಬದ್ಧತೆಗಳು		
a) Estimated amount of Contracts remaining to be executed on Capital account and not provided for / ಅಂದಾಜು ಬಂಡವಾಳ ಖಾತೆಯಡಿ ಕಾರ್ಯಗತಗೊಳಿಸಲು ಲೆಕ್ಕ ಪುಸ್ತಕದಲ್ಲಿ ಒದಗಿಸದೇ ಉಳಿದಿರುವ ಒಪ್ಪಂದಗಳು	15 411.59	1 37 480.00
Sub total / ಉಪಮೊತ್ತ	**15 411.59**	**1 37 480.00**
Total / ಒಟ್ಟು ಮೊತ್ತ	**95 846.27**	**2 18 847.67**

1 Contingent liabilities (claims against the Group not acknowledged) as on 31.03.2018 is INR 80,434.68 Lakhs (PY: INR 81,367.67 Lakhs) relates to claims of agencies, land acquisition claims, stamp duty, bank guarantee related liabilities, commercial tax liability and others.

ದಿನಾಂಕ 31.03.2018 ಕ್ಕೆ ಅನಿಶ್ಚಿತ ಹೊಣೆಗಾರಿಕೆಗಳು (ಗುಂಪಿನ ವಿರುದ್ಧ ಇರುವ ಒಪ್ಪಿಕೊಳ್ಳದ ಕ್ಲೇಮ್‌ಗಳು) ರೂ.80,434.68 ಲಕ್ಷಗಳು (ಹಿಂದಿನ ವರ್ಷ ರೂ. 81,367.67 ಲಕ್ಷಗಳು). ಇದು ಏಜೆನ್ಸಿಗಳ ಕ್ಲೇಮ್, ಭೂಮಿ ಸ್ವಾಧೀನತೆಯ ಕ್ಲೇಮ್, ಸ್ಟಾಂಪು ಶುಲ್ಕಗಳು, ಬ್ಯಾಂಕಿನ ಜಾಮೀನಿಗೆ ಸಂಬಂಧಿಸಿದ ಹೊಣೆಗಾರಿಕೆ, ವಾಣಿಜ್ಯ ತೆರಿಗೆ ಹೊಣೆಗಾರಿಕೆ ಮತ್ತು ಇತರೆ ಒಳಗೊಂಡಿದೆ.

Includes / ಈ ಕೆಳಕಂಡ ಪ್ರಕರಣಗಳು ಒಳಗೊಂಡಿವೆ:

a) An amount of INR 456.00 Lakhs (PY: INR 456.00 lakhs) payable under court decree in the Mulky Dam Claims case is not provided pending appeal against order of JFMC-Sagar in higher court of law.

ಮಾಣಿ ಅಣೆಕಟ್ಟು ಹಕ್ಕು ಪ್ರಕರಣದಲ್ಲಿ ನ್ಯಾಯಾಲಯದ ತೀರ್ಪುರೀತ್ಯಾ ಕೊಡಬೇಕಾದ ಮೊಬಲಗು ರೂ.456.00 ಲಕ್ಷಗಳಿದ್ದು (ಹಿಂದಿನ ವರ್ಷ ರೂ.456.00 ಲಕ್ಷಗಳು), ಇದು ಜೆ.ಎಮ್.ಎಫ್.ಸಿ. ಸಾಗರ್ ನ್ಯಾಯಾಲಯದಲ್ಲಿ ಕೊಟ್ಟ ತೀರ್ಪಿನ ವಿರುದ್ಧ ಇರುವುದರಿಂದ ಪ್ರಕರಣವನ್ನು ಮುಂದಿನ ಉಚ್ಚನ್ಯಾಯಾಲಕ್ಕೆ ಮನವಿ ಸಲ್ಲಿಸಲಾಗಿದೆ.

b) Inclusion of 'Stowing Excise Duty' component for imposition of Central Excise Duty towards coal supply made to the Corporation and claim by collieries are disputed by the Group and hence no provision is considered necessary.

ಕಲ್ಲಿದ್ದಲು ಸರಬರಾಜು ಮೇಲಿನ ಕೇಂದ್ರ ಅಬಕಾರಿ ಸುಂಕದಲ್ಲಿ ಸೇರಿರುವ ಸ್ಟೋಯಿಂಗ್ ಅಬಕಾರಿ ಸುಂಕದ ಕೊಲ್ಲೈರಿಗಳ ಬೇಡಿಕೆ ಹಾಗೂ ಕೊಲ್ಲೈರಿಗಳ ಹಕ್ಕೊತ್ತಾಯವು ವಿವಾದದಲ್ಲಿರುವುದರಿಂದ ಯಾವುದೇ ಅವಕಾಶವನ್ನು ಕಲ್ಪಿಸಿರುವುದಿಲ್ಲ.

c) Differential customs duty on imported coal demanded by the Commissioner of Customs & Central Excise, Ennore Sea Port, Chennai amounting to INR 1,267 lakhs (PY: INR 1,267 lakhs). The demand has been contested by the Group, pending settlement no provision is considered necessary.

ಕಸ್ಟಮ್ಸ್ ಮತ್ತು ಸೆಂಟ್ರಲ್ ಎಕ್ಸೈಸ್ ಆಯುಕ್ತರು, ಎನ್ನೊರೆ ಬಂದರು, ಚೆನ್ನೈ ಬೇಡಿಕೆಯಿಟ್ಟಿರುವ ಆಮದು ಕಲ್ಲಿದ್ದಲಿನ ಮೇಲಿನ ವ್ಯತ್ಯಾಸಾತ್ಮಕ ಅಬಕಾರಿ ಸುಂಕವಾದ ರೂ.1,267 ಲಕ್ಷಗಳನ್ನು (ಹಿಂದಿನ ವರ್ಷ ರೂ.1,267 ಲಕ್ಷಗಳು) ಗುಂಪು ವಿರೋಧಿಸಿರುವುದರಿಂದ ಅವಕಾಶವನ್ನು ಕಲ್ಪಿಸಿರುವುದಿಲ್ಲ.

d) Differential customs duty on imported coal demanded by the Commissioner of Customs & Central Excise, Guntur amounting to INR 11,216 lakhs (PY: INR 11,216 lakhs). The demand has been contested by the Group, pending settlement no provision is considered necessary.

ಕಸ್ಟಮ್ಸ್ ಮತ್ತು ಸೆಂಟ್ರಲ್ ಎಕ್ಸೈಸ್ ಆಯುಕ್ತರು, ಗುಂಟೂರು ಬೇಡಿಕೆಯಿಟ್ಟಿರುವ ಆಮದು ಕಲ್ಲಿದ್ದಲಿನ ಮೇಲಿನ ವ್ಯತ್ಯಾಸಾತ್ಮಕ ಅಬಕಾರಿ ಸುಂಕವಾದ ರೂ.11,216 ಲಕ್ಷಗಳನ್ನು (ಹಿಂದಿನ ವರ್ಷ ರೂ.11,216 ಲಕ್ಷಗಳು) ಗುಂಪು ವಿರೋಧಿಸಿರುವುದರಿಂದ ಅವಕಾಶವನ್ನು ಕಲ್ಪಿಸಿರುವುದಿಲ್ಲ.

e) Demand amounting to INR 126.73 lakhs (PY: INR 141.74 lakhs) payable to Superintendent of Police, Department of Police, Govt. of Karnataka, Mandya, towards leave contribution and short payment of lent establishment charges pertaining to October 1998 to March 2017 at Shivasamudram Project is under reconciliation and hence no provision is considered as necessary.

ಪೋಲಿಸ್ ಸೂಪರಿಂಟೆಂಡೆಂಟ್, ಪೋಲಿಸ್ ಇಲಾಖೆ, ಕರ್ನಾಟಕ ಸರ್ಕಾರ, ಮಂಡ್ಯ ಇವರ ರಜೆ ಸಂಬಳ ಮತ್ತು ಅಕ್ಟೋಬರ್ 1998 ರಿಂದ ಮಾರ್ಚ 2017ರ ವರೆಗಿನ ಎರವಲು ಸೇವೆಯ ರೂ.126.73 ಲಕ್ಷಗಳು (ಹಿಂದಿನ ವರ್ಷ ರೂ.141.74 ಲಕ್ಷಗಳು) ಶಿವನಸಮುದ್ರ ಯೋಜನೆಗೆ ಸಂಬಂಧಿಸಿದಂತೆ ಬೇಡಿಕೆಯು ಪರಿಶೀಲನೆಯಲ್ಲಿರುವುದರಿಂದ ಲೆಕ್ಕದಲ್ಲಿ ಪರಿಗಣಿಸಿಲ್ಲ.

f) Applicability of service tax and tax liability for the services rendered by Police Department to various hydel projects of KPCL on reimbursement basis (lent establishment services) earlier to introduction of Negative List of services i.e., till 1.07.2012 has been reviewed by Service Tax authorities and tax has been demanded to an extent of INR 63.13 lakhs in certain Projects.

ಜಲ ವಿದ್ಯುತ್ ಯೋಜನಾ ಪ್ರದೇಶಗಳಿಗೆ ಸಂಬಂಧಪಟ್ಟಂತೆ ಮರುಪಾವತಿ ಆಧಾರದ ಮೇಲೆ ಪೋಲಿಸ್ ಇಲಾಖೆಯು ಸಲ್ಲಿಸಿದ ಸೇವೆಯ ಮೇಲಿನ ಸೇವಾ ತೆರಿಗೆ ಮತ್ತು ತೆರಿಗೆ ಹೊಣೆಯನ್ನು, ಸೇವೆಗಳ ಋಣಾತ್ಮಕ ಪಟ್ಟಿ ಮಂಡಿಸಿದ ಪೂರ್ವದ (ದಿನಾಂಕ 1.07.2012ರ ವರೆಗೆ) ಅವಧಿಗೆ ಸೇರಿದ್ದು, ಸೇವಾ ತೆರಿಗೆ ಅಧಿಕಾರಿಗಳ ಪರಿಶೀಲಿಸಿ ಕೆಲವು ಯೋಜನೆಗಳಿಗೆ ರೂ.63.13 ಲಕ್ಷಗಳ ಬೇಡಿಕೆಯನ್ನು ಇರಿಸಿದ್ದಾರೆ.

g) Income-Tax Liabilities: Total Contingent liability on account of disputed income tax before various appellate authorities amounts to INR 29,373.01 lakhs. (PY: INR 28,645 lakhs)

ಆದಾಯ ತೆರಿಗೆ ಹೊಣೆಗಾರಿಕೆ: ವಿವಿಧ ನ್ಯಾಯಾಧೀಕರಣಗಳ ಮುಂದಿರುವ ವಿವಾದಿತ ಆದಾಯ ತೆರಿಗೆಗಳ ಸಾದಿಲ್ವಾರು ಹೊಣೆಗಾರಿಕೆಯ ಒಟ್ಟು ಮೊತ್ತ ರೂ.29,373.01 ಲಕ್ಷಗಳು (ಹಿಂದಿನ ವರ್ಷ ರೂ.28,645 ಲಕ್ಷಗಳು).

h) Contingent Liability towards claim on acquisition mines: Pursuant to the applications filed with the various Central/ State Government and statutory authorities for transfer of approvals/ licenses/ clearances in favour of the Group, the Group has received various claims/ demands/ deposits to be made which is pending for certain clarifications. Claim is received towards payment of non-agricultural tax of rehabilitation land and non-agricultural tax for village at Baranj, Chichirali and Kesurli for the period 2015-16 amounting to INR 82 lakhs and the same has not been paid since the mutation of the said lands in the name of the Group is pending.

ಗಣಿ ಸ್ವಾಧೀನತೆಯ ಅನಿಶ್ಚಿತ ಹೊಣೆಗಾರಿಕೆ: ವಿವಿಧ ಸರ್ಕಾರಿ ಮತ್ತು ಶಾಸನಬದ್ಧ ಅಧಿಕಾರಿಗಳಿಗೆ ಗುಂಪು ಅದರ ಪರವಾಗಿ ಲೈಸನ್ಸ್ / ಪರವಾನಗಿಯ ವರ್ಗಾವಣೆಗೆ ಸಂಬಂಧಿಸಿದಂತೆ ಸಲ್ಲಿಸಿದ ಅರ್ಜಿಯ ಅನುಸಾರವಾಗಿ, ಗುಂಪು ವಿವಿಧ ಹಕ್ಕುಬೇಡಿಕೆ / ಬೇಡಿಕೆ / ಠೇವಣಿಗಳನ್ನು ಮಾಡಬೇಕಾಗಿದೆ ಹಾಗೂ ಇದರ ಸ್ಪಷ್ಟೀಕರಣ ಬಾಕಿಯಿರುವುದು. ಕೃಷಿ ಅಲ್ಲದ ಭೂಮಿಯ ಪುನರ್‌ಸ್ಥಾಪನೆಯ ತೆರಿಗೆ ಹಾಗೂ ಬಾರಾಂಜ್, ಚಿಚಿರಲಿ ಹಾಗೂ ಕೆಸುರ್ಲಿ ಗ್ರಾಮಗಳಿಗೆ 2015-16ನೇ ಸಾಲಿಗೆ ಕೃಷಿ ಅಲ್ಲದ ತೆರಿಗೆ ಪಾವತಿಸುವಂತೆ ಪ್ರಸ್ತುತ ವರ್ಷದಲ್ಲಿ ರೂ.82 ಲಕ್ಷಗಳ ಹಕ್ಕುಬೇಡಿಕೆಯ ಪಾವತಿಯು ಮೇಲೆ ಉಲ್ಲೇಖಿತ ಭೂಮಿಗಳ ಗುಂಪಿನ ಹೆಸರಿನಲ್ಲಿ ಪರಿವರ್ತನೆ ಆಗದೇ ಇರುವುದರಿಂದ ಬಾಕಿಯಿರುತ್ತದೆ.

i) An amount of INR 227.80 Lakhs (PY: INR 246 lakhs) for claim made by forest authorities towards interest for delayed payment of lease rentals for the period from 09.08.2004 to 08.05.2016 at Kappadagudda Wind Mill Farm Project

09.08.2004 ರಿಂದ 08.05.2016 ರ ಅವಧಿಯವರೆಗಿನ ಕಪ್ಪತಗುಡ್ಡ ಪವನ ಶಕ್ತಿ ವಿದ್ಯುತ್ ಯೋಜನೆಯ ತಡವಾಗಿ ಪಾವತಿಸಿದ ಗುತ್ತಿಗೆ ಬಾಡಿಗೆಗೆ ಸಂಬಂಧಿಸಿದಂತೆ ಅರಣ್ಯ ಇಲಾಖೆಯವರು ರೂ.227.80 ಲಕ್ಷಗಳ (ಹಿಂದಿನ ವರ್ಷ ರೂ.246 ಲಕ್ಷಗಳು) ಹಕ್ಕುಬೇಡಿಕೆಯನ್ನು ಮಂಡಿಸಿರುತ್ತಾರೆ.

j) Includes the claim received from collieries prior to the date of notification issued by Government of India towards District Mineral Fund amounting to INR 7,087.54 Lakhs (PY: INR 8,196.23 lakhs)

ಭಾರತ ಸರ್ಕಾರವು ಹೊರಡಿಸಿದ ಅಧಿಸೂಚನೆಯ ದಿನಾಂಕದ ಹಿಂದಿನ ಅವಧಿಯ ಡಿಸ್ಟ್ರಿಕ್ಟ್ ಮಿನರಲ್ ಫಂಡ್‌ಗೆ ಸಂಬಂಧಪಟ್ಟ ರೂ.7,087.54 ಲಕ್ಷಗಳ (ಹಿಂದಿನ ವರ್ಷ ರೂ.8,196.23 ಲಕ್ಷಗಳು) ಕೊಲ್ಲೆರಿಗಳ ಹಕ್ಕು ಬೇಡಿಕೆಯನ್ನು ಒಳಗೊಂಡಿರುತ್ತದೆ.

k) An amount of INR 6,000 lakhs of claim made by KECML towards washery charges at INR 90/MT and the same has not been provided for since the Group has filed the petition in the Hon'ble Supreme Court of India against the above adjudication.

- **Leases:** An entity shall determine whether an arrangement existing at the date of transition to Ind AS contains a lease on the basis of facts and circumstances existing at the date of transition to Ind AS, except where the effect is expected to be not material. The Company has used this exemption and assessed all arrangements based on conditions existing as at the date of transition.
- **Classification and measurement of financial assets:** Financial assets that qualify to be measured at amortized cost are measured accordingly prospectively. Where it is impracticable to apply the effective interest method retrospectively, the fair value of the financial asset or financial liability at the date of transition to Ind AS is considered the deemed carrying amount.

KPC Gas Power Corporation Limited

(Formerly KPC Bidadi Power Corporation Private Limited)

Notes to the financial statements for the year ended 31 March 2018

2.19 New standards and interpretations not yet adopted

In March 2017, the Ministry of Corporate Affairs issued the Companies (Indian Accounting Standards) (Amendments) Rules, 2017, notifying amendments to Ind AS 7, 'Statement of cash flows' and Ind AS 102, 'Share-based payment.' These amendments are in accordance with the recent amendments made by International Accounting Standards Board (IASB) to IAS 7, 'Statement of cash flows' and IFRS 2, 'Share-based payment,' respectively. Ind AS 7 amendment is applicable to the company from April 1, 2017.

Amendment to Ind AS 7:

The amendment to Ind AS 7 requires the entities to provide disclosures that enable users of financial statements to evaluate changes in liabilities arising from financing activities, including both changes arising from cash flows and non-cash changes, suggesting inclusion of a reconciliation between the opening and closing balances in the balance sheet for liabilities arising from financing activities, to meet the disclosure requirement.

The company is evaluating the requirements of the amendment and the effect on the financial statements is being evaluated.

Ind AS 115 Revenue from Contracts with Customers:

Ind AS 115, Revenue from Contracts with Customers was initially notified under the Companies (Indian Accounting Standards) Rules, 2015.

The standard applies to contracts with customers. The core principle of the new standard is that an entity should recognize revenue to depict transfer of promised goods or services to customers in an amount that reflects the consideration to which the entity expects to be entitled in exchange for those goods or services. Further, the new standard requires enhanced disclosures about the nature, timing and uncertainty of revenues and cash flows arising from the entity's contracts with customers. The new standard offers a range of transition options. An entity can choose to apply the new standard to its historical transactions - and retrospectively adjust each comparative period.

Alternatively, an entity can recognize the cumulative effect of applying the new standard at the date of initial application - and make no adjustments to its comparative information. The chosen transition option can have a significant effect on revenue trends in the financial statements. A change in the timing of revenue recognition may require a corresponding change in the timing of recognition of related costs.

The standard has been currently deferred. The Company is currently evaluating the requirements of Ind AS 115, and has not yet determined the impact on the financial statements.

As per our attached report of even date
For Balu & Anand
Chartered Accountants
Firm Registration No.: 000367S

Sd/-
CA Srinivas Bharath N K
PARTNER
Membership No: 211142

Date: 09.08.2018
Place: Bangalore

For and on behalf of the Board

Sd/-
(R Nagaraja)
Director
DIN 03108629

Sd/-
(G Kumar Naik)
Chairman
DIN 01918435

Sd/-
(Sushma G.)
Company Secretary
M.No. A41881

ಕೆ.ಪಿ.ಸಿ ಅನಿಲ ವಿದ್ಯುತ್ ನಿಗಮ ನಿಯಮಿತ

ಪೂರ್ವದ ಕೆ.ಪಿ.ಸಿ ಬಿಡದಿ ವಿದ್ಯುತ್ ನಿಗಮ ಖಾಸಗಿ ನಿಯಮಿತ

31ನೇ ಮಾರ್ಚ್ 2018 ಕ್ಕೆ ಕೊನೆಗೊಂಡ ಪ್ರತ್ಯೇಕ ಆರ್ಥಿಕ ಸ್ಥಿತಿ ವಿವರಣಾ ಪಟ್ಟಿಗೆ ಟಿಪ್ಪಣಿಗಳು

1. ನಿಗಮದ ಪಕ್ಷಿನೋಟ

1400 ಮೆ.ವ್ಯಾ. ವಿದ್ಯುತ್‌ಶಕ್ತಿಯನ್ನು ಉತ್ಪಾದಿಸಲು ನಾಫ್ತಾ ಅನಿಲ ಆಧಾರಿತ ವಿದ್ಯುತ್ ಸ್ಥಾವರದ ಅಳವಡಿಕೆಗಾಗಿ ಏಪ್ರಿಲ್ 19 1996ರಂದು ನಿಗಮವನ್ನು ಸ್ಥಾಪಿಸಲಾಯಿತು.ಆರಂಭದಲ್ಲಿ ಸಾರ್ವಜನಿಕ ನಿಯಮಿತ ಸಂಸ್ಥೆಯಾಗಿ ನೋಂದಾಯಿಸಲಾದ ನಿಗಮವನ್ನು 3 ನವೆಂಬರ್ 1999ರಂದು ಖಾಸಗೀ ನಿಯಮಿತವಾಗಿ ಬದಲಾಯಿಸಲಾಯಿತು. ಕರ್ನಾಟಕ ಸರ್ಕಾರದ ಸ್ವಾಮ್ಯದ ಸಂಸ್ಥೆಯಾದ ಕರ್ನಾಟಕ ವಿದ್ಯುತ್ ನಿಗಮ ನಿಯಮಿತವು (ಕೆಪಿಸಿಎಲ್) ಕಂಪನಿಯ ಎಲ್ಲಾ ಷೇರುಗಳ ಹಿಡುವಳಿಯನ್ನು ಹೊಂದಿದೆ. ಇದರಾನುಸಾರವಾಗಿ ಕಂಪನಿಯು ಕೆಪಿಸಿಎಲ್‌ನ ಸಂಪೂರ್ಣ ಸ್ವಾಮ್ಯದ ಅಧೀನ ಸಂಸ್ಥೆಯಾಗಿದೆ. ಇತ್ತೀಚಿನ ವರ್ಷಗಳಲ್ಲಿ ಕಂಪನಿಯು ಎಲ್‌ಎನ್‌ಜಿ ಮೂಲಗಳ ವಿದ್ಯುತ್ ಸ್ಥಾವರದ ಸ್ಥಾಪನೆಯತ್ತ ನಿಗಾ ವಹಿಸುತ್ತಿದೆ.ಯೋಜನೆಯು ಆರಂಭಿಕ ಅಳವಡಿಕೆಯ ಹಂತದಲ್ಲಿದ್ದು, ಅವಶ್ಯಕ ಟೆಂಡರ್ ಪ್ರಕ್ರಿಯೆಯು ಪ್ರಗತಿಯಲ್ಲಿದೆ. 31 ಮಾರ್ಚ್ 2018ಕ್ಕೆ ಕಂಪನಿಯು ವಾಣಿಜ್ಯ ಕಾರ್ಯಾಚರಣೆಯನ್ನು ಪ್ರಾರಂಭಿಸಿರುವುದಿಲ್ಲ.

2. ಲೆಕ್ಕಾಚಾರದ ಮಹತ್ತರ ಧೋರಣೆಗಳು

ಕೆಳಗೆ ನೀಡಲಾದ ಲೆಕ್ಕಾಚಾರದ ಧೋರಣೆಗಳನ್ನು ಆರ್ಥಿಕ ವಿವರಣಾ ಪಟ್ಟಿಗಳಲ್ಲಿ ಮಂಡಿಸಲಾದ ಎಲ್ಲಾ ಅವಧಿಗಳಿಗೆ ಸಮಂಜಸವಾಗಿ ಅಳವಡಿಸಲಾಗಿದೆ.

2.1 ಪ್ರತ್ಯೇಕ ಆರ್ಥಿಕ ಸ್ಥಿತಿ ವಿವರಣಾ ಪಟ್ಟಿಗಳ ಸಿದ್ಧತೆಯ ತಳಹದಿ:

ಈ ಆರ್ಥಿಕ ಸ್ಥಿತಿ ವಿವರಣಾ ಪಟ್ಟಿಗಳನ್ನು ಭಾರತದ ಲೆಕ್ಕಮಾನದಂಡ (IND AS) ಅನುಸಾರ ಐತಿಹಾಸಿಕ ವೆಚ್ಚದ ರೂಢಿಯಡಿಯಲಿ ಸಂಚಯವಾಗುವ ಆಧಾರದ ಮೇಲೆ ವಿದ್ಯುತ್ ಪೂರೈಕೆ ಕಾಯ್ದೆ 1948ರ ಜೊತೆಗೆ ವಿದ್ಯುತ್ ಕಾಯ್ದೆ 2003ರ ಉಪಬಂಧಗಳು ಹಾಗೂ ಕಂಪನಿ ಕಾಯ್ದೆ 2013ರ('ಕಾಯ್ದೆ') (ಘೋಷಿಸಲಾದ ಮಿತಿಯವರೆಗೆ) ಉಪಬಂಧಗಳ ಪ್ರಕಾರ ತಯಾರಿಸಲಾಗಿದೆ. ನ್ಯಾಯಬೆಲೆಗೆ ಮಾಪನ ಮಾಡಲಾದ ಕೆಲವು ಆರ್ಥಿಕ ಸಾಧನಗಳು ಇದಕ್ಕೆ ಹೊರತಾಗಿರುತ್ತವೆ. ಭಾರತದ ಲೆಕ್ಕಮಾನದಂಡಗಳನ್ನು (IND AS) ಕಂಪನಿಗಳ (ಭಾರತದ ಲೆಕ್ಕಮಾನದಂಡಗಳು) ನಿಯಮಗಳು, 2015 ಹಾಗೂ ಕಂಪನಿಗಳ (ಭಾರತದ ಲೆಕ್ಕಮಾನದಂಡಗಳು) ತಿದ್ದುಪಡಿ ನಿಯಮಗಳು, 2016ರ ನಿಯಮ 3ರ ಜೊತೆಗೆ ಕಂಪನಿ ಕಾಯ್ದೆಯ ಕಲಂ 133ರಡಿಯಲ್ಲಿ ಅನುಶಾಸನ ಮಾಡಲಾಗಿದೆ.

31 ಮಾರ್ಚ್ 2018ಕ್ಕೆ ತಯಾರಿಸಲಾದ ಆರ್ಥಿಕ ವಿವರಣಾ ಪಟ್ಟಿಗಳು, ಭಾರತದ ಲೆಕ್ಕಮಾನದಂಡ (IND AS) ಅನುಸಾರ ತಯಾರಿಸಲಾದ ಮೊದಲ ಆರ್ಥಿಕ ವಿವರಣಾ ಪಟ್ಟಿಗಳಾಗಿರುತ್ತವೆ. ನಿಗಮವು ಎಲ್ಲಾ ಭಾರತದ ಲೆಕ್ಕಮಾನದಂಡಗಳನ್ನು ಅಳವಡಿಸಿಕೊಂಡಿರುತ್ತದೆ ಹಾಗೂ ಭಾರತದ ಲೆಕ್ಕಮಾನದಂಡ 101 ಪ್ರಥಮ ಬಾರಿ ಭಾರತದ ಲೆಕ್ಕಮಾನದಂಡಗಳ ಅಳವಡಿಕೆಯ ಅನುಸಾರ ಇವುಗಳ ಅಳವಡಿಕೆಯನ್ನು ಮಾಡಲಾಗಿದೆ. ಕಂಪನಿ (ಲೆಕ್ಕ) ನಿಯಮಗಳು, 2014 (IGAAP)ರ ನಿಯಮ 7ರ ಜೊತೆಗೆ ಕಾಯ್ದೆಯ ಕಲಂ 133 ರಡಿಯಲ್ಲಿ ಅನುಶಾಸನ ಮಾಡಲಾದ ಭಾರತದಲ್ಲಿ ಸಾಮಾನ್ಯವಾಗಿ ಸ್ವೀಕರಿಸಲಾದ ಲೆಕ್ಕತತ್ವಗಳಿಂದ ಪರಿವರ್ತನೆಯನ್ನು ಮಾಡಲಾಗಿದೆ.

ಹೊಸದಾಗಿ ಹೊರಡಿಸಿದ ಲೆಕ್ಕಾಚಾರದ ಮಾನದಂಡದ ಆರಂಭಿಕ ಅಳವಡಿಕೆ ಅಥವಾ ಲೆಕ್ಕಮಾನದಂಡದ ದೃಷ್ಟಿಕೋನದಲ್ಲಿ ಇಲ್ಲಿಯತನಕ ಬಳಕೆಯಾಗುತ್ತಿರುವ ಲೆಕ್ಕಚಾರದ ಧೋರಣೆಗಳಲ್ಲಿ ಬದಲಾವಣೆಯ ಅವಶ್ಯಕತೆಯಿರುವ ಸಂದರ್ಭಗಳನ್ನು ಹೊರತುಪಡಿಸಿ, ಲೆಕ್ಕಾಚಾರದ ಮಾನದಂಡಗಳನ್ನು ಸತತವಾಗಿ ಅಳವಡಿಸಲಾಗಿದೆ.

2.2 ಅಂದಾಜುಗಳ ಬಳಕೆ

ಭಾರತದ ಲೆಕ್ಕಮಾನದಂಡಗಳು ಒಪ್ಪುವಂತಹ ಆರ್ಥಿಕ ವಿವರಣಾ ಪಟ್ಟಿಗಳ ತಯಾರಿಕೆಯಲ್ಲಿ ಆಡಳಿತ ಮಂಡಳಿಯು ಲೆಕ್ಕಾಚಾರದ ಧೋರಣೆಗಳ ಅಳವಡಿಕೆ ಹಾಗೂ ಆಸ್ತಿ, ಹೊಣೆಗಾರಿಕೆ, ಆದಾಯ ಹಾಗೂ ವೆಚ್ಚಗಳ ವರದಿಯಾದ ಮೊತ್ತಗಳ ಮೇಲೆ ಪರಿಣಾಮ ಬೀರುವ ನಿರ್ಧಾರ, ಅಂದಾಜುಗಳು ಹಾಗೂ ಕಲ್ಪನೆಗಳನ್ನು ಮಾಡಬೇಕಾಗಿರುತ್ತದೆ. ಆರ್ಥಿಕ ವಿವರಣಾ ಪಟ್ಟಿಗಳಲ್ಲಿ ಬಳಸಲಾದ ಅಂದಾಜುಗಳು ಹಾಗೂ ಊಹೆಗಳು ಆರ್ಥಿಕ ವಿವರಣಾ ಪಟ್ಟಿಗಳ ದಿನಾಂಕದಂದು ಇರುವ ಸಂಬಂಧಿತ ಸತ್ಯಾಂಶ ಹಾಗೂ ಸಂದರ್ಭಗಳ ಆಡಳಿತ ಮಂಡಳಿಯ ಮೌಲ್ಯಮಾಪನದ ಮೇಲೆ ಅವಲಂಬಿಸುತ್ತವೆ. ಅಂದಾಜುಗಳು ಹಾಗೂ ಕಲ್ಪನೆಗಳನ್ನು ನಿರಂತರವಾಗಿ ಪರಿಶೀಲಿಸಲಾಗುತ್ತದೆ. ಲೆಕ್ಕಾಚಾರದ ಅಂದಾಜುಗಳಲ್ಲಿ ಯಾವುದೇ ತಿದ್ದುಪಡಿಯಿದ್ದಲ್ಲಿ ಅದನ್ನು ಭವಿಷ್ಯವರ್ತಿಯಾಗಿ ಪ್ರಸ್ತುತ ಹಾಗೂ ಮುಂದಿನ ಅವಧಿಗಳಲ್ಲಿ ಗುರುತಿಸಲಾಗುತ್ತದೆ.

2.3 ಚಾಲ್ತಿ–ಚಾಲ್ತಿರಹಿತ ವರ್ಗೀಕರಣ

ಎಲ್ಲಾ ಆಸ್ತಿ ಹಾಗೂ ಜವಾಬ್ದಾರಿಗಳನ್ನು ಚಾಲ್ತಿ ಹಾಗೂ ಚಾಲ್ತಿರಹಿತವೆಂದು ವರ್ಗೀಕರಿಸಲಾಗಿದೆ.

ಆಸ್ತಿಗಳು

ಈ ಕೆಳಗಿನ ಸಂದರ್ಭಗಳನ್ನು ಸಂಸ್ಥೆಯು ಆಸ್ತಿಯನ್ನು ಚಾಲ್ತಿಯೆಂದು ವರ್ಗೀಕರಿಸಬಹುದಾಗಿದೆ–

(ಅ) ತನ್ನ ಸಾಮಾನ್ಯ ಕಾರ್ಯಾಚರಣೆಯ ಆವರ್ತನದಲ್ಲಿ ಆಸ್ತಿಯನ್ನು ಕೈಗೂಡಿಸಿಕೊಳ್ಳುವ ನಿರೀಕ್ಷೆ ಅಥವಾ ಮಾರುವ ಅಥವಾ ಬಳಸುವ ಉದ್ದೇಶವನ್ನು ಹೊಂದಿರುವಾಗ

ಕೆ.ಪಿ.ಸಿ ಅನಿಲ ವಿದ್ಯುತ್ ನಿಗಮ ನಿಯಮಿತ

ಪೂರ್ವದ ಕೆ.ಪಿ.ಸಿ ಬಿಡದಿ ವಿದ್ಯುತ್ ನಿಗಮ ಖಾಸಗಿ ನಿಯಮಿತ

31ನೇ ಮಾರ್ಚ್ 2018 ಕ್ಕೆ ಕೊನೆಗೊಂಡ ಪ್ರತ್ಯೇಕ ಆರ್ಥಿಕ ಸ್ಥಿತಿ ವಿವರಣಾ ಪಟ್ಟಿಗೆ ಟಿಪ್ಪಣಿಗಳು

(ಆ) ಆಸ್ತಿಯನ್ನು ಪ್ರಾಥಮಿಕವಾಗಿ ವ್ಯಾಪಾರದ ಸಲುವಾಗಿ ಹೊಂದಿರುವಾಗ;

(ಇ) ಆಸ್ತಿಯು ವರದಿಯ ದಿನಾಂಕದ ನಂತರ 12 ತಿಂಗಳುಗಳೊಳಗಾಗಿ ಕೈಗೂಡುವ ನಿರೀಕ್ಷೆಯಿರುವಾಗ;

(ಈ) ವಿನಿಮಯ ಅಥವಾ ವರದಿಯ ದಿನಾಂಕದ ನಂತರ ಕನಿಷ್ಟ 12 ತಿಂಗಳುಗಳವರೆಗೆ ಹೊಣೆಗಾರಿಕೆಗಳ ಇತ್ಯರ್ಥಕ್ಕಾಗಿ ಬಳಸಲು ಆಸ್ತಿಯ ಮೇಲೆ ನಿರ್ಬಂಧವಿರದಿದ್ದಲ್ಲಿ, ಆಸ್ತಿಯು ನಗದು ಅಥವಾ ನಗದು ಸಮಾನವಾಗಿರುತ್ತದೆ.

ಸಂಸ್ಥೆಯು ಇತರೆ ಎಲ್ಲಾ ಆಸ್ತಿಗಳನ್ನು ಚಾಲ್ತಿರಹಿತವೆಂದು ವರ್ಗೀಕರಿಸಬಹುದಾಗಿದೆ.

ಹೊಣೆಗಾರಿಕೆಗಳು

ಈ ಕೆಳಗಿನ ಸಂದರ್ಭಗಳನ್ನು ಸಂಸ್ಥೆಯು ಹೊಣೆಗಾರಿಕೆಯನ್ನು ಚಾಲ್ತಿಯೆಂದು ವರ್ಗೀಕರಿಸಬಹುದಾಗಿದೆ–

(ಅ) ತನ್ನ ಸಾಮಾನ್ಯ ಕಾರ್ಯಾಚರಣೆಯ ಆವರ್ತನದಲ್ಲಿ ಹೊಣೆಗಾರಿಕೆಯನ್ನು ಇತ್ಯರ್ಥ ಮಾಡುವ ನಿರೀಕ್ಷೆ ಹೊಂದಿರುವಾಗ;

(ಆ) ಹೊಣೆಗಾರಿಕೆಯನ್ನು ಪ್ರಾಥಮಿಕವಾಗಿ ವ್ಯಾಪಾರದ ಸಲುವಾಗಿ ಹೊಂದಿರುವಾಗ;

(ಇ) ಹೊಣೆಗಾರಿಕೆಯನ್ನು ವರದಿಯ ದಿನಾಂಕದ ನಂತರ 12 ತಿಂಗಳುಗಳೊಳಗಾಗಿ ಮರುಪಾವತಿಸಬೇಕಾಗಿರುವಾಗ;

(ಈ) ವರದಿಯ ದಿನಾಂಕದ ನಂತರ ಕನಿಷ್ಟ ಹನ್ನೆರಡು ತಿಂಗಳುಗಳವರೆಗೆ ಹೊಣೆಗಾರಿಕೆಯ ಇತ್ಯರ್ಥವನ್ನು ಮುಂದೂಡುವ ನಿರುಪಾಧಿಕ ಹಕ್ಕನ್ನು ಹೊಂದಿರದಿದ್ದಾಗ. ಹೊಣೆಗಾರಿಕೆಯ ಷರತ್ತುಗಳ ಪರಿಣಾಮವಾಗಿ ಪೂರಕವ್ಯಕ್ತಿಯ ಆಯ್ಕೆಯ ಮೇರೆಗೆ ಈಕ್ವಿಟಿ ಸಾಧನಗಳ ಮೂಲಕ ಮಾಡಿದ ಇತ್ಯರ್ಥವು ವರ್ಗೀಕರಣದ ಮೇಲೆ ಪರಿಣಾಮವನ್ನು ಬೀರುವುದಿಲ್ಲ.

ಸಂಸ್ಥೆಯು ಇತರೆ ಎಲ್ಲಾ ಹೊಣೆಗಾರಿಕೆಗಳನ್ನು ಚಾಲ್ತಿರಹಿತವೆಂದು ವರ್ಗೀಕರಿಸಬಹುದಾಗಿದೆ.

ಕಾರ್ಯಾಚರಣೆಯ ಆವರ್ತನ

ಆಸ್ತಿಗಳ ಸಂಸ್ಕರಣೆಗಾಗಿ ಅವುಗಳ ಅರ್ಜನೆ ಹಾಗೂ ನಗದು ಅಥವಾ ನಗದು ಸಮಾನಗಳಲ್ಲಿ ಅವುಗಳ ಕೈಗೂಡುವಿಕೆಯ ನಡುವಿನ ಅವಧಿಯು ಕಾರ್ಯಾಚರಣೆಯ ಆವರ್ತನವಾಗಿರುತ್ತದೆ. ಸಂಸ್ಥೆಯ ಸಾಮಾನ್ಯ ಕಾರ್ಯಾಚರಣೆಯ ಆವರ್ತನವನ್ನು ಸ್ಪಷ್ಟವಾಗಿ ಗುರುತಿಸಲು ಅಸಾಧ್ಯವಾದಾಗ, 12 ತಿಂಗಳುಗಳೆಂದು ಭಾವಿಸಲಾಗುತ್ತದೆ.

2.4 ನಿರೂಪಣೆ ಹಾಗೂ ಕಾರ್ಯಾಚರಣೆಯ ಕರೆನ್ಸಿ

ನಿಗಮ ಕಾರ್ಯಾತ್ಮಕ ಹಾಗೂ ನಿಗಮವು ಕಾರ್ಯನಿರ್ವಹಿಸುವ ಪ್ರಧಾನ ಆರ್ಥಿಕ ವಲಯದ ಕರೆನ್ಸಿಯಾದ ಭಾರತೀಯ ರೂಪಾಯಿಗಳಲ್ಲಿ ಆರ್ಥಿಕ ವಿವರಣಾ ಪಟ್ಟಿಗಳನ್ನು ಮಂಡಿಸಲಾಗಿದೆ.

2.5 ಆದಾಯದ ಗುರುತಿಸುವಿಕೆ:

- ಅಂತರ್ನಿಹಿತ ಬಡ್ಡಿದರಗಳನ್ನಾಧರಿಸಿ ಬಡ್ಡಿ ಆದಾಯವನ್ನು ಕಾಲಾನುಪಾತ ವಿಧಾನದ ಮುಖಾಂತರ ಗುರುತಿಸಲಾಗುತ್ತದೆ.
- ಇತರೆ ಆದಾಯವನ್ನು ಸಂಚಿತವಾಗುವ ಆಧಾರದ ಮೇಲೆ ಗುರುತಿಸಲಾಗುತ್ತದೆ.

2.6 ಸ್ಥಿರಾಸ್ತಿ ಮತ್ತು ಯಂತ್ರೋಪಕರಣಗಳು

(i) ಅಳತೆ ಹಾಗೂ ಗುರುತಿಸುವಿಕೆ

ಸ್ಥಿರಾಸ್ತಿ ಮತ್ತು ಯಂತ್ರೋಪಕರಣಗಳಾಗಿ ಗುರುತಿಸಲ್ಪಡುವ ಅರ್ಹ ಯಂತ್ರೋಪಕರಣಗಳನ್ನು ಅದರ ವೆಚ್ಚದಲ್ಲಿ ಅಳತೆ ಮಾಡಲಾಗುವುದು ಮತ್ತು ಸಂಚಿತ ಸವಕಳಿ ಹಾಗೂ ದುರ್ಬಲತೆ ಹಾನಿಗಳನ್ನು ಕಳೆದು ತೋರಿಸಲಾಗಿದೆ.

ಸ್ಥಿರಾಸ್ತಿ ಮತ್ತು ಯಂತ್ರೋಪಕರಣಗಳ ವೆಚ್ಚವು ಖರೀದಿ ದರ, ಆಮದು ಸುಂಕ ಹಾಗೂ ಹಿಂತಿರುಗಿಸಲಾಗದ ಖರೀದಿ ತೆರಿಗೆಗಳು, ವಾಣಿಜ್ಯ ರಿಯಾಯತಿ ಹಾಗೂ ಸೋಡಿಗಳನ್ನು ಕಳೆಯುವುದು, ವಸ್ತುವನ್ನು ಅದರ ಉದ್ದೇಶಿತ ಕಾರ್ಯಕ್ಕಾಗಿ ಉಪಯೋಗಿಸುವ ಕಾರ್ಯ ಸ್ಥಿತಿಗೆ ತರುವಲ್ಲಿ ಮಾಡಿದ ನೇರ ವೆಚ್ಚ ಮತ್ತು ಬಂಡವಾಳೀಕರಣಗೊಂಡ ಸಾಲದ ವೆಚ್ಚಗಳು ಮತ್ತು ಯಂತ್ರೋಪಕರಣಗಳನ್ನು ಕಳಚಲು ಮತ್ತು ತೆಗೆಯಲು ಬರಿಸಬೇಕಾದ ಅಂದಾಜು ವೆಚ್ಚ ಮತ್ತು ಯಂತ್ರೋಪಕರಣ ಇರುವ ನಿವೇಶನದ ಪುನರ್ನಿರ್ಮಾಣ ವೆಚ್ಚ.

ಸ್ವಯಂ ನಿರ್ಮಾಣಗೊಂಡ ಆಸ್ತಿ ಮತ್ತು ಯಂತ್ರೋಪಕರಣಗಳ ವೆಚ್ಚವು ಸಾಮಗ್ರಿಗಳ ವೆಚ್ಚ ಮತ್ತು ನೇರ ಸಿಬ್ಬಂದಿ ವೆಚ್ಚ, ವಸ್ತುವನ್ನು ಅದರ ಉದ್ದೇಶಿತ ಕಾರ್ಯಕ್ಕಾಗಿ ಉಪಯೋಗಿಸುವ ಕಾರ್ಯ ಸ್ಥಿತಿಗೆ ತರುವಲ್ಲಿ ಮಾಡಿದ ನೇರ ವೆಚ್ಚ ಮತ್ತು ಬಂಡವಾಳೀಕರಣಗೊಂಡ ಸಾಲದ ವೆಚ್ಚಗಳು ಮತ್ತು ಯಂತ್ರೋಪಕರಣಗಳನ್ನು ಕಳಚಲು ಮತ್ತು ತೆಗೆಯಲು ಬರಿಸಬೇಕಾದ ಅಂದಾಜು ವೆಚ್ಚ ಮತ್ತು ಯಂತ್ರೋಪಕರಣ ಇರುವ ನಿವೇಶನದ ಪುನರ್ನಿರ್ಮಾಣ ವೆಚ್ಚವನ್ನು ಒಳಗೊಂಡಿರುತ್ತದೆ.

ಕೆ.ಪಿ.ಸಿ ಅನಿಲ ವಿದ್ಯುತ್ ನಿಗಮ ನಿಯಮಿತ

ಪೂರ್ವದ ಕೆ.ಪಿ.ಸಿ ಬಿಡದಿ ವಿದ್ಯುತ್ ನಿಗಮ ಖಾಸಗಿ ನಿಯಮಿತ

31ನೇ ಮಾರ್ಚ್ 2018 ಕ್ಕೆ ಕೊನೆಗೊಂಡ ಪ್ರತ್ಯೇಕ ಆರ್ಥಿಕ ಸ್ಥಿತಿ ವಿವರಣಾ ಪಟ್ಟಿಗೆ ಟಿಪ್ಪಣಿಗಳು

ಸ್ಥಿರಾಸ್ತಿ ಮತ್ತು ಯಂತ್ರೋಪಕರಣ ಮಹತ್ವದ ಭಾಗಗಳು ಬೇರೆ ಬೇರೆಯಾದ ಉಪಯುಕ್ತ ಅವಧಿಯನ್ನು ಹೊಂದಿದ ಪಕ್ಷದಲ್ಲಿ ಯಂತ್ರೋಪಕರಣ ಮತ್ತು ಆಸ್ತಿಗಳನ್ನು ಪ್ರತ್ಯೇಕವಾಗಿ ಪರಿಗಣಿಸಿ ಲೆಕ್ಕಾಚಾರ ಮಾಡಲಾಗುವುದು.

ಯಾವುದೇ ಸ್ಥಿರಾಸ್ತಿ ಮತ್ತು ಯಂತ್ರೋಪಕರಣಗಳನ್ನು ವಿಲೇವಾರಿಮಾಡಿದ ಸಂದರ್ಭದಲ್ಲಿ ಯಾವುದೇ ಲಾಭ ಅಥವಾ ನಷ್ಟವನ್ನು, ಲಾಭ ಅಥವಾ ನಷ್ಟ ತಃಖ್ತೆಯಲ್ಲಿ ಲೆಕ್ಕಾಚಾರ ಮಾಡಲಾಗುವುದು.

ಸ್ಥಿರಾಸ್ತಿ ಮತ್ತು ಯಂತ್ರೋಪಕರಣಗಳ ಭಾಗಗಳನ್ನು ಬದಲಾಯಿಸಲು ಮಾಡಿದ ವೆಚ್ಚವನ್ನು ಸ್ಥಿರಾಸ್ತಿ ಮತ್ತು ಯಂತ್ರೋಪಕರಣದ ನಿವ್ವಳ ವೆಚ್ಚದಲ್ಲಿ ಸಂಸ್ಥೆಗೆ ದೊರಕುವ ಭವಿಷ್ಯದ ಆರ್ಥಿಕ ಲಾಭಗಳ ಕಾಲಾವಧಿಯಿಂದ ಸೇರಿಸಲಾಗುವುದು.

ನಿರ್ಮಾಣ ಹಂತದಲ್ಲಿರುವ ಸ್ಥಿರಾಸ್ತಿ ಮತ್ತು ಯಂತ್ರೋಪಕರಣಗಳನ್ನು ಪ್ರಗತಿಯಲ್ಲಿರುವ ಬಂಡವಾಳ ಕಾಮಗಾರಿಗಳೆಂದು ಪರಿಗಣಿಸಲಾಗುವುದು.

(ii) ಭಾರತದ ಲೆಕ್ಕಮಾನದಂಡಗಳಿಗೆ (IND AS) ಪರಿವರ್ತನೆ

ಭಾರತದ ಲೆಕ್ಕಮಾನದಂಡಗಳಿಗೆ (IND AS) ಪರಿವರ್ತನೆಯಾದಾಗ ಕಂಪನಿಯು ಹಿಡಿತಮುಕ್ತ ಭೂಮಿಯ ನ್ಯಾಯಬೆಲೆಯನ್ನು ಆಯ್ದುಕೊಂಡಿದೆ ಹಾಗೂ ಆಸ್ತಿ, ಸ್ಥಾವರ ಹಾಗೂ ಯಂತ್ರೋಪಕರಣಗಳ ಇತರೆ ಭಾಗಗಳ ದಿನಾಂಕ 1 ಏಪ್ರಿಲ್ 2015ಕ್ಕೆ ಇದ್ದಂತೆ IND AS ವೆಚ್ಚವನ್ನು ಪರಿಗಣಿಸಿದೆ.

(iii) ಆನಂತರದ ವೆಚ್ಚ

ಸ್ಥಿರವಾಗಿ ಸಂಸ್ಥೆಗೆ ದೊರಕುವ ಭವಿಷ್ಯದ ಆರ್ಥಿಕ ಲಾಭಗಳ ಕಾಲಾವಧಿಯಿಂದ ಸ್ಥಿರಾಸ್ತಿ ಮತ್ತು ಯಂತ್ರೋಪಕರಣಗಳ ಮೇಲೆ ಮಾಡಿರುವ ಆನಂತರದ ವೆಚ್ಚವನ್ನುಬಂಡವಾಳೀಕರಣಗೊಳಿಸಲಾಗುವುದು.

(iv) ಸವಕಳಿ

ಸ್ಥಿರಾಸ್ತಿ ಮತ್ತು ಯಂತ್ರೋಪಕರಣಗಳ ಮೇಲಿನ ಸವಕಳಿಯನ್ನು ಆಸ್ತಿಗಳ ವೆಚ್ಚದಿಂದ ಆಸ್ತಿಗಳ ಅಂದಾಜು ಉಳಿಕೆಯ ಮೌಲ್ಯವನ್ನು ಕಳೆದು ಆಸ್ತಿಗಳ ಅಂದಾಜು ಉಪಯುಕ್ತ ಅವಧಿಯ ಮೇರೆಗೆ ಸರಳರೇಖೆ ವಿಧಾನವನ್ನು ಅನುಸರಿಸಿ ಸವಕಳಿಯ ಲೆಕ್ಕಾಚಾರವನ್ನು ಮಾಡಲಾಗುವುದು. ಸಾಮಾನ್ಯವಾಗಿ ಸವಕಳಿ ವೆಚ್ಚವು ಲಾಭ ಅಥವಾ ನಷ್ಟ ತಃಖ್ತೆಯಲ್ಲಿ ಗುರುತಿಸ್ಪಡುತ್ತದೆ. ಹಣಕಾಸು ಭೋಗ್ಯದಡಿಯಲ್ಲಿ ಸ್ವಾಧೀನ ಪಡೆಸಿಕೊಂಡ ಆಸ್ತಿಯ ಸವಕಳಿಯನ್ನು ಭೋಗ್ಯದ ಅವಧಿ ಅಥವಾ ಆಸ್ತಿಯ ಉಪಯುಕ್ತ ಅವಧಿ ಯಾವುದು ಮೊದಲೊ ಆ ಅವಧಿಗೆ ಸವಕಳಿ ಮಾಡಲ್ಪಡುವುದು. ಆದರೆ, ಭೋಗ್ಯದ ಅವಧಿ ಕಡೆಯಲ್ಲಿ ನಿಗಮಕ್ಕೆ ಆಸ್ತಿಯ ಮಾಲಿಕತ್ವ ದೊರೆತ ಪಕ್ಷದಲ್ಲಿ ಈ ಸವಕಳಿ ವಿಧಾನ ಅನ್ವಯವಾಗುವುದಿಲ್ಲ. ಹಿಡುವಳಿಮುಕ್ತ ಭೂಮಿಯ ಮೇಲೆ ಸವಕಳಿ ಲೆಕ್ಕಾಚಾರ ಮಾಡಿರುವುದಿಲ್ಲ.

ನಿಗಮವು ಸ್ಥಿರಾಸ್ತಿ ಮತ್ತು ಯಂತ್ರೋಪಕರಣಗಳ ಮೇಲಿನ ಸವಕಳಿಯನ್ನು ಆಸ್ತಿಗಳ ಉಪಯುಕ್ತ ಅವಧಿಯ ಪ್ರಾರಂಭದಿಂದ 2009ರ CERC ಮಾರಾಟದರ ನಿಯಂತ್ರಣಗಳ ಅನುಸಾರವಾಗಿ ನಿರ್ದಿಷ್ಟ ಸವಕಳಿ ದರಗಳ ಆಧಾರದ ಮೇಲೆ ಲೆಕ್ಕಾಚಾರ ಮಾಡಿರುತ್ತದೆ.

ಸವಕಳಿಯ ವಿಧಾನ, ಜೀವಿತಾವಧಿ ಹಾಗೂ ಉಳಿಕೆಯ ಮೌಲ್ಯವನ್ನು ಪ್ರತಿ ಆರ್ಥಿಕ ವರ್ಷಾಂತ್ಯಕ್ಕೆ ಪರಿಶೀಲಿಸಲಾಗುತ್ತದೆ ಹಾಗೂ ಸೂಕ್ತವೆನಿಸಿದಲ್ಲಿ ಹೊಂದಾಣಿಕೆ ಮಾಡಲಾಗುತ್ತದೆ. ತಾಂತ್ರಿಕ ಮೌಲ್ಯಮಾಪನ ಹಾಗೂ ಸಲಹೆಯ ಆಧಾರದ ಮೇಲೆ, ಆಡಳಿತ ಮಂಡಳಿಯು ತನ್ನ ಅಂದಾಜು ಜೀವಿತಾವಧಿಯು ಆಸ್ತಿಯ ಬಳಕೆಯನ್ನು ನೀರಿಕ್ಷಿಸುವ ಅವಧಿಯನ್ನು ಅತ್ಯುತ್ತಮವಾಗಿ ಪ್ರತಿನಿಧಿಸುತ್ತದೆಯೆಂದು ನಂಬಿರುತ್ತದೆ.

ಯಾವುದೆ ಯಂತ್ರೋಪಕರಣಗಳನ್ನು ಹೊಸದಾಗಿ ಸೇರಿಸಲ್ಪಟ್ಟಿದ್ದರೆ / (ವಿಲೇವಾರಿಯಾಗಿದ್ದಲ್ಲಿ) ಸೇರಿಸಲ್ಪಟ್ಟ / ವಿಲೇವಾರಿಯಾದ ದಿನಾಂಕದಿಂದ ಪ್ರಮಾಣನುಸಾರವಾಗಿ ಸವಕಳಿ ಲೆಕ್ಕಾಚಾರ ಮಾಡಲಾಗುವುದು.

(v) ಹೂಡಿಕೆ ಆಸ್ತಿಗೆ ಮರುವರ್ಗೀಕರಣ

ಆಸ್ತಿಯ ಬಳಕೆಯು ಮಾಲೀಕನ ಸ್ವಾಧಿನತೆಯಿಂದ ಹೂಡಿಕೆ ಆಸ್ತಿಗೆ ಬದಲಾದಾಗ, ಆಸ್ತಿಯನ್ನು ಮರುವರ್ಗೀಕರಣ ದಿನಾಂಕದ ಅದರ ಮುಂದೊಯ್ಯುವ ವೆಚ್ಚಕ್ಕೆ ಹೂಡಿಕೆಯ ಆಸ್ತಿಯೆಂದು ಮರುವರ್ಗೀಕರಿಸಲಾಗಿದೆ.

2.7 ಉದ್ಯೋಗಿ ಸೌಲಭ್ಯಗಳು

ಅಲ್ಪಾವಧಿ ಉದ್ಯೋಗಿ ಸೌಲಭ್ಯಗಳು

ಅಲ್ಪಾವಧಿ ಉದ್ಯೋಗಿ ಸೌಲಭ್ಯ ಬಾಧ್ಯತೆಗಳನ್ನು ರಿಯಾಯಿತರಹಿತ ಆಧಾರದ ಮೇಲೆ ಗುರುತಿಸಲ್ಪಡುವುದು ಮತ್ತು ತತ್ಸಂಬಂಧ ಸೇವೆ ಪಡೆದ ಆಸ್ತಿಯ ವೆಚ್ಚಕ್ಕೆ ಸೇರಿಸಲ್ಪಡುವುದು ಅಥವಾ ವೆಚ್ಚವೆಂದು ಪರಿಗಣಿಸಲಾಗುವುದು. ಉದ್ಯೋಗಿಯು ನಿಗಮಕ್ಕೆ ಸಲ್ಲಿಸಿದ ಹಿಂದಿನ ಸೇವೆಗಳ ಅನುಸಾರವಾಗಿ ನಿಗಮವು ಪಾವತಿಸುವ ಬಾಧ್ಯತೆಯಿದ್ದು ಮತ್ತು ಬಾಧ್ಯತೆಯ ಮೊತ್ತವು ಅಂದಾಜು ಮಾಡಿದ್ದ ಪಕ್ಷದಲ್ಲಿ, ಸಂಚಿತ ವೇತನ ಸಹಿತ ರಜೆಗೆ ಸಂಬಂಧಿಸಿದ ಜವಾಬ್ದಾರಿಗಳನ್ನು, ಬೋನಸ್ ಪಾವತಿ ಮತ್ತು ಇನ್ನಿತರ ಶಾಸನಬದ್ಧ ಬಾಧ್ಯತೆಗಳು ಗುರುತಿಸಲ್ಪಡುತ್ತದೆ.

ಕೆ.ಪಿ.ಸಿ ಅನಿಲ ವಿದ್ಯುತ್ ನಿಗಮ ನಿಯಮಿತ

ಪೂರ್ವದ ಕೆ.ಪಿ.ಸಿ ಬಿಡದಿ ವಿದ್ಯುತ್ ನಿಗಮ ಖಾಸಗಿ ನಿಯಮಿತ

31ನೇ ಮಾರ್ಚ್ 2018 ಕ್ಕೆ ಕೊನೆಗೊಂಡ ಪ್ರತ್ಯೇಕ ಆರ್ಥಿಕ ಸ್ಥಿತಿ ವಿವರಣಾ ಪಟ್ಟಿಗೆ ಟಿಪ್ಪಣಿಗಳು

2.8 ಗುತ್ತಿಗೆಗಳು

ಗಣನೀಯ ಹಾನಿಸಂಭವ ಹಾಗೂ ಮಾಲಿಕತ್ವದ ಪ್ರತಿಫಲವನ್ನು ಗೇಣಿದಾತನು ಉಳಿಸಿಕೊಳ್ಳುವ ಗುತ್ತಿಗೆಗಳನ್ನು ಕಾರ್ಯಾಚರಣೆಯ ಗುತ್ತಿಗೆಯೆಂದು ವರ್ಗೀಕರಿಸಲಾಗಿದೆ.ಕಾರ್ಯಾಚರಣೆ ಗುತ್ತಿಗೆಯಡಿ ಪಡೆದುಕೊಂಡ ಆಸ್ತಿಯ ಒಟ್ಟು ಗುತ್ತಿಗೆ ಬಾಡಿಗೆಯನ್ನು(ನಿಗದಿತ ಬಾಡಿಗೆ ಏರಿಕೆಯನ್ನು ಒಳಗೊಂಡು), ಗೇಣಿದಾರರ ನಿರೀಕ್ಷಿತ ಹಣದುಬ್ಬರ ವೆಚ್ಚದ ಹೆಚ್ಚಳವನ್ನು ಸರಿದೂಗಿಸಲು ನಿರೀಕ್ಷಿತ ಸಾಮಾನ್ಯ ಹಣದುಬ್ಬರಕ್ಕೆ ಅಂತಹ ಪಾವತಿಯನ್ನು ಸಮನಾಗಿ ನಿಗದಿಪಡಿಸಿರುವುದನ್ನು ಹೊರತುಪಡಿಸಿ, ಸರಳರೇಖೆ (ಸ್ಟ್ರೈಟ್ ಲೈನ್) ವಿಧಾನದ ಆಧಾರದ ಮೇಲೆ ಗುತ್ತಿಗೆಯ ಅವಧಿಯಲ್ಲಿ ಲಾಭ ಮತ್ತು ನಷ್ಟದ ವಿವರಣಾ ಪಟ್ಟಿಯಲ್ಲಿ ಗುರುತಿಸಲಾಗಿದೆ.

ಗಣನೀಯ ಹಾನಿಸಂಭವ ಹಾಗೂ ಮಾಲಿಕತ್ವದ ಪ್ರತಿಫಲವನ್ನು ನಿಗಮವು ಹೊಂದಿರುವ ಗುತ್ತಿಗೆಗಳನ್ನು ಆರ್ಥಿಕ ಗುತ್ತಿಗೆಯೆಂದು ವರ್ಗೀಕರಿಸಲಾಗಿದೆ. ಆರ್ಥಿಕ ಗುತ್ತಿಗೆಯಡಿಯಲ್ಲಿ ಪಡೆಯಲಾದ ಆಸ್ತಿಗಳನ್ನು ಅವುಗಳ ನ್ಯಾಯಬೆಲೆ ಅಥವಾ ಗುತ್ತಿಗೆಯ ಆರಂಭದಲ್ಲಿನ ಕನಿಷ್ಟ ಗುತ್ತಿಗೆ ಪಾವತಿಯ ಪ್ರಸ್ತುತ ಬೆಲೆ ಇವೆರಡರಲ್ಲಿ ಯಾವುದು ಕಡಿಮೆಯಿರುತ್ತದೆಯೋ ಆ ಬೆಲೆಗೆ ಬಂಡವಾಳೀಕರಿಸಲಾಗಿದೆ. ಆಸ್ತಿಗಳಿಗೆ ಅನ್ವಯಿಸುವ ಲೆಕ್ಕಾಚಾರದ ಧೋರಣೆಗಳಂತೆ ಆಸ್ತಿ ಸಂಬಂಧಿತ ಪ್ರಾರಂಭಿಕ ಪ್ರತ್ಯಕ್ಷ ವೆಚ್ಚಗಳು ಹಾಗೂ ತರುವಾಯ ತಗಲುವ ವೆಚ್ಚಗಳನ್ನು ಬಂಡವಾಳೀಕರಿಸಲಾಗುವುದು. ಗುತ್ತಿಗೆ ಪಾವತಿಗಳನ್ನು ಆರ್ಥಿಕ ವೆಚ್ಚ ಹಾಗೂ ಬಾಕಿಯಿರುವ ಹೊಣೆಗಾರಿಕೆಗಳಲ್ಲಿ ಇಳತವೆಂದು ಭಾಗ ಮಾಡಲಾಗಿದೆ.

ಗುತ್ತಿಗೆ ಆಧಾರದ ಮೇಲೆ ಆಸ್ತಿಗಳನ್ನು ಮಾರುವವರ ಜೊತೆಗೆ ವಿವಿಧ ಗುತ್ತಿಗೆ ಒಪ್ಪಂದಗಳನ್ನು ಮಾಡಿಕೊಳ್ಳುವಾಗ ನಿಗಮವು ಸಾಮಾನ್ಯವಾಗಿ ಮರುಪಾವತಿಸಬಹುದಾದ ಭದ್ರತಾ ಠೇವಣಿಯನ್ನು ಪಾವತಿಸಬೇಕಾಗುವುದು. ಅಂತಹ ಭದ್ರತಾ ಠೇವಣಿಗಳು ಆರ್ಥಿಕ ಆಸ್ತಿಗಳಾಗಿದ್ದು, ಅವುಗಳನ್ನು ಆರಂಭಿಕವಾಗಿ ನ್ಯಾಯಬೆಲೆಗೆ ಗುರುತಿಸಲಾಗುವುದು. ಆರಂಭಿಕ ನ್ಯಾಯಬೆಲೆ ಹಾಗೂ ಮರುಪಾವತಿಸಬೇಕಾದ ಠೇವಣಿ ಮೊತ್ತದ ನಡುವಿನ ವ್ಯತ್ಯಾಸವನ್ನು ಗುತ್ತಿಗೆಯ ಮುಂಗಡಪಾವತಿಯೆಂದು ಗುರುತಿಸಲಾಗುವುದು. ಮರುಪಾವತಿಸಬೇಕಾದ ಭದ್ರತಾ ಠೇವಣಿಗಳ ಪ್ರಸ್ತುತ ಬೆಲೆಯನ್ನು ಸಮಾನ ರೂಪದ ಋಣಪತ್ರಗಳ ಮಾರುಕಟ್ಟೆಯ ಬಡ್ಡಿದರವನ್ನು ಬಳಸಿ ಕಡಿಮೆಮಾಡಿ ಆರಂಭಿಕ ನ್ಯಾಯ ಬೆಲೆಯನ್ನು ಅಂದಾಜು ಮಾಡಲಾಗಿದೆ.

ಆರಂಭಿಕ ಗುರುತಿಸುವಿಕೆ ನಂತರ, ಮುಂದೊಯ್ಯುವ ವೆಚ್ಚವನ್ನು ಗುತ್ತಿಗೆ ಅವಧಿಯಲ್ಲಿ ಮರುಪಾವತಿ ಮೊತ್ತದವರೆಗೆ ಏರಿಸುವ ಪರಿಣಾಮಕಾರಿ ಬಡ್ಡಿ ವಿಧಾನವನ್ನು ಅನುಸರಿಸಿ ಭದ್ರತಾ ಠೇವಣಿಗಳನ್ನು ಗುರುತಿಸಲಾಗಿದೆ.ಠೇವಣಿಗಳ ಮುಂದೊಯ್ಯುವ ವೆಚ್ಚದಲ್ಲಿ ಆಗುವ ಏರಿಕೆಯನ್ನು ಬಡ್ಡಿ ಆದಾಯವೆಂದು ಗುರುತಿಸಲಾಗಿದೆ. ಗುತ್ತಿಗೆಯ ಮುಂಗಡಪಾವತಿಯನ್ನು ಗುತ್ತಿಗೆ ಬಾಡಿಗೆ ವೆಚ್ಚವೆಂದು ಗುತ್ತಿಗೆ ಅವಧಿಯಲ್ಲಿ ಸರಳರೇಖೆ ವಿಧಾನವನ್ನು ಅನುಸರಿಸಿ ಋಣೀಕರಿಸಲಾಗಿದೆ

2.9 ಎರವಲು ವೆಚ್ಚಗಳು

ನಿರ್ದಿಷ್ಟ ಯೋಜನೆಗೆ ಸಂಬಂಧಿಸಿದ ಅರ್ಹತಾ ಆಸ್ತಿಯ ನಿರ್ಮಾಣಕ್ಕಾಗಿ ಅಥವಾ ಸ್ವಾಧೀನಕ್ಕಾಗಿ ತಗುಲಿದ ಎರವಲು ವೆಚ್ಚವನ್ನು ಅಂತಹ ಆಸ್ತಿಯ ವೆಚ್ಚದ ಭಾಗವೆಂದು ಪರಿಗಣಿಸಿ ಬಂಡವಾಳಕರಣಗೊಳಿಸಲಾಗುವುದು. ಒಂದು ಅರ್ಹತಾ ಆಸ್ತಿಯು ಉದ್ದೇಶಿತ ಬಳಕೆಗಾಗಿ ತಯಾರಾಗಲು ಅಗತ್ಯವಾದ ಸಮಯವನ್ನು ತೆಗೆದುಕೊಳ್ಳುತ್ತದೆ.

ಅರ್ಹತಾ ಆಸ್ತಿಗಳನ್ನು ಸ್ವಾಧೀನಪಡಿಸಿಕೊಳ್ಳಲು ತಗುಲಿದ ನಿರ್ದಿಷ್ಟವಲ್ಲದ ಎರವಲು ವೆಚ್ಚವನ್ನು, ಕಾಮಗಾರಿ ವೆಚ್ಚಕ್ಕೆ ಎರವಲು ವೆಚ್ಚದ ಅನುಪಾತದಲ್ಲಿ ಪ್ರತ್ಯೇಕವಾಗಿ ಒಂದೊಂದು ಕಾಮಗಾರಿಗಳಿಗೆ ಹಂಚಲಾಗುತ್ತದೆ, ಅಂತಹ ಎರವಲು ವೆಚ್ಚಗಳನ್ನು ಅವಧಿಯ ಅಂತ್ಯದಲ್ಲಿ ಬಾಕಿಯಿರುವ ಸಾಲಗಳ ಸರಾಸರಿ ಸರಿದೂಗಿಸಿದ ವೆಚ್ಚದ ಆಧಾರದ ಮೇಲೆ ನಿರ್ಧರಿಸಲಾಗುತ್ತದೆ.

2.10 ಪ್ರತಿ ಷೇರಿನ ಗಳಿಕೆ

ನಿಗಮದ ಈಕ್ವಿಟಿ ಷೇರುದಾರರಿಗೆ ಸೇರಬೇಕಾದ ವಾರ್ಷಿಕ ನಿವ್ವಳ ಲಾಭ / ಹಾನಿಯನ್ನು ಷೇರುಗಳ ಸರಿದೂಗಿಸಿದ ಸರಾಸರಿ ಸಂಖ್ಯೆಯಿಂದ ವಿಭಜಿಸುವ ಮೂಲಕ ಪ್ರತಿ ಈಕ್ವಿಟಿ ಶೇರುದಾರರಿಗೆ ಸಲ್ಲಬೇಕಾದ ಪ್ರತಿ ಷೇರಿನ ಗಳಿಕೆ / (ಹಾನಿ)ಯನ್ನು ಲೆಕ್ಕಹಾಕಲಾಗುತ್ತದೆ.

2.11 ಮುನ್ನೇರ್ಪಾಡುಗಳು, ಅನಿಶ್ಚಿತ ಹೊಣೆಗಾರಿಕೆಗಳು ಮತ್ತು ಅನಿಶ್ಚಿತ ಸ್ವತ್ತುಗಳು

ಹಿಂದಿನ ಘಟನೆಯ ಪರಿಣಾಮವಾಗಿ, ಖಾತರಿಯಿಂದ ಲೆಕ್ಕಹಾಕಲು ಸಾಧ್ಯವಾಗುವ ಹಾಗೂ ಬಂಧಕದ ಇತ್ಯರ್ಥಕ್ಕೆ ಆರ್ಥಿಕ ಲಾಭದ ಹೊರಹರಿವಿನ ಸಂಭಾವ್ಯ ಅಗತ್ಯವಿರುವ ಪ್ರಸ್ತುತ ಕಾನೂನಾತ್ಮಕ ಅಥವಾ ರಚನಾತ್ಮಕ ಬಂಧಕವನ್ನು ನಿಗಮವು ಹೊಂದಿರುವಾಗ ಅದನ್ನು ಮುನ್ನೇರ್ಪಾಡುಗಳೆಂದು ಗುರುತಿಸಲಾಗುವುದು. ನಿರೀಕ್ಷಿತ ಭವಿಷ್ಯದ ನಗದು ಹರಿವುಗಳನ್ನು, ಹಣದ ಸಮಯಬೆಲೆಯ ಪ್ರಸ್ತುತ ಮಾರುಕಟ್ಟೆಯ ಬೆಲೆಕಟ್ಟುವಿಕೆಯನ್ನು ಹಾಗೂ ಹೊಣೆಗಾರಿಕೆಗಳಿಗೆ ನಿರ್ದಿಷ್ಟವಾಗಿರುವ ಹಾನಿಸಂಭವಗಳನ್ನು ಪ್ರತಿಬಿಂಬಿಸುವ ತೆರಿಗೆ ಪೂರ್ವ ದರಕ್ಕೆ ಕಡಿಮೆಗೊಳಿಸಿ ಮುನ್ನೇರ್ಪಾಡುಗಳನ್ನು ನಿರ್ಧರಿಸಲಾಗಿದೆ. ನಿರೀಕ್ಷಿತ ಭವಿಷ್ಯದ ಕಾರ್ಯಾಚರಣೆಯ ಹಾನಿಗಳಿಗೆ ಮುನ್ನೇರ್ಪಾಡುಗಳನ್ನು ಮಾಡಿರುವುದಿಲ್ಲ. ಕ್ಲೇಮುಗಳು, ವ್ಯಾಜ್ಯ, ಕಂದಾಯ, ದಂಡ, ಜುಲ್ಮಾನೆ ಇವುಗಳಿಗೆ ಸಂಬಂಧಿಸಿದ ನಷ್ಟದ ಮುನ್ನೇರ್ಪಾಡನ್ನು ಹೊಣೆಗಾರಿಕೆಯ ಉಂಟಾಗುವ ಸಂಭವತೆ ಹಾಗೂ ಖಾತರಿಯಿಂದ ಲೆಕ್ಕಹಾಕಲು ಸಾಧ್ಯವಿರುವಾಗ ಗುರುತಿಸಲಾಗುವುದು.

ಕೆ.ಪಿ.ಸಿ ಅನಿಲ ವಿದ್ಯುತ್ ನಿಗಮ ನಿಯಮಿತ

ಪೂರ್ವದ ಕೆ.ಪಿ.ಸಿ ಬಿಡದಿ ವಿದ್ಯುತ್ ನಿಗಮ ಖಾಸಗಿ ನಿಯಮಿತ

31ನೇ ಮಾರ್ಚ್ 2018 ಕ್ಕೆ ಕೊನೆಗೊಂಡ ಪ್ರತ್ಯೇಕ ಆರ್ಥಿಕ ಸ್ಥಿತಿ ವಿವರಣಾ ಪಟ್ಟಿಗೆ ಟಿಪ್ಪಣಿಗಳು

ಹಿಂದಿನ ಘಟನೆಗಳಿಂದ ಉದ್ಭವಿಸುವ ಪ್ರಸ್ತುತ ಬಾಧ್ಯತೆಗಳನ್ನು ಬಗೆಹರಿಸಲು (ಇತ್ಯರ್ಥಗೊಳಿಸಲು), ಆರ್ಥಿಕ ಪ್ರಯೋಜನಗಳನ್ನು ಒಳಗೊಂಡ ಸಂಪನ್ಮೂಲಗಳ ಹೊರ ಹರಿವಿನ ಸಾಧ್ಯತೆಯ ಸಂಭವನೀಯತೆಯು ನಿಚ್ಚಳವಾಗಿರುವುದಿಲ್ಲ ಅಥವಾ ಬಾಧ್ಯತೆಯ ಇತ್ಯರ್ಥಕ್ಕಾಗಿ ಬೇಕಾಗುವ ಹಣವನ್ನು ನಿರ್ದಿಷ್ಟವಾಗಿ ಅಂದಾಜಿಸಲಾಗುವುದಿಲ್ಲ.

ಆರ್ಥಿಕ ಪ್ರಯೋಜನೆಗಳ ಒಳಹರಿವು ಸಂಭವನೀಯವಾಗಿರುವಲ್ಲಿ ಅನಿಶ್ಚಿತ ಸ್ವತ್ತುಗಳನ್ನು ಬಹಿರಂಗಪಡಿಸಲಾಗುವುದು.

2.12 ಆಸ್ತಿಗಳ ದುರ್ಬಲತೆ

ನಿಗಮವು ಪ್ರತಿ ಅಢಾವೆಪತ್ರದ ದಿನಾಂಕದಂದು, ಯಾವುದಾದರು ಆಸ್ತಿ ದುರ್ಬಲಗೊಂಡಿದೆಯೋ, ಇಲ್ಲವೋ ಎಂದು ನಿರ್ಧರಣೆ ಮಾಡುತ್ತದೆ ಅಂತಹ ಸೂಚನೆಯಿರುವಾಗ, ನಿಗಮವು ಆಸ್ತಿಯ ಮರಳಪಡೆಯಬಹುದಾದ ಮೊತ್ತವನ್ನು ಅಂದಾಜಿಸುತ್ತದೆ. ಹೆಚ್ಚಿನ ಮಟ್ಟಿಗೆ ಸ್ವತಂತ್ರವಾಗಿ ನಗದು ಹರಿವನ್ನು ಉತ್ಪಾದನೆ ಮಾಡದ ಆಸ್ತಿಗೆ ಮರಳಪಡೆಯಬಹುದಾದ ವೆಚ್ಚವನ್ನು ಆ ಆಸ್ತಿಗೆ ಸಂಬಂಧಪಟ್ಟ ನಗದು ಉತ್ಪಾದನಾ ಘಟಕಕ್ಕೆ ನಿರ್ಧರಿಸಲಾಗುತ್ತದೆ. ಅಂತಹ ಆಸ್ತಿಯ ಅಥವಾ ಆಸ್ತಿಗೆ ಸಂಬಂಧಪಟ್ಟ ನಗದು ಉತ್ಪಾದನಾ ಘಟಕದ ಮರಳಪಡೆಯಬಹುದಾದ ಮೊತ್ತವು ಅದರ ಮುಂದೊಯ್ಯುವ ವೆಚ್ಚಕ್ಕಿಂತ ಕಡಿಮೆಯಿದ್ದಲ್ಲಿ, ಮುಂದೊಯ್ಯುವ ವೆಚ್ಚವನ್ನು ಮರಳಪಡೆಯಬಹುದಾದ ಮೊತ್ತಕ್ಕೆ ಇಳಕೆ ಮಾಡಲಾಗುತ್ತದೆ. ಈ ಇಳಕೆಯನ್ನು ಲಾಭ ಮತ್ತು ನಷ್ಟದ ವಿವರಣಾ ಪಟ್ಟಿಯಲ್ಲಿ ದುರ್ಬಲತಾ ನಷ್ಟವೆಂದು ಪರಿಗಣಿಸಲಾಗುತ್ತದೆ. ಅಢಾವೆ ಪತ್ರದ ದಿನಾಂಕದಂದು ಹಿಂದೆ ನಿಗದಿಪಡಿಸಿದ ದುರ್ಬಲತಾ ನಷ್ಟವು ಇಲ್ಲವೆಂದು ತಿಳಿದುಬಂದಲ್ಲಿ, ಮರಳಪಡೆಯಬಹುದಾದ ಮೊತ್ತವನ್ನು ಮತ್ತೆ ನಿಗದಿಪಡಿಸಿ, ಆಸ್ತಿಯನ್ನು ಮರಳಪಡೆಯಬಹುದಾದ ಮೊತ್ತಕ್ಕೆ ತೋರಿಸಲಾಗುವುದು.

2.13 ತೆರಿಗೆಗಳು

ಆದಾಯ ತೆರಿಗೆ ವೆಚ್ಚವು; ಪ್ರಸ್ತುತ ತೆರಿಗೆ (ಅರ್ಥಾತ್, ಒಂದು ಅವಧಿಗೆ ಆದಾಯ ತೆರಿಗೆ ನಿಯಮಾವಳಿಗಳ ಅನುಸಾರ ನಿರ್ಧರಿಸಲ್ಪಟ್ಟ ಮೊತ್ತ) ಮತ್ತು ಮುಂದೂಡಲ್ಪಟ್ಟ ತೆರಿಗೆ ವೆಚ್ಚ ಅಥವಾ ಆದಾಯ (ಅರ್ಥಾತ್, ಆಸ್ತಿಗಳ ಅಥವಾ ಹೊಣೆಗಾರಿಕೆಗಳ ಪ್ರಸ್ತುತ ಅಢಾವೆ ಪತ್ರದಲ್ಲಿನ ಮೌಲ್ಯ ಹಾಗೂ ತೆರಿಗೆಗಾಗಿ ನಮೂದಿಸಲ್ಪಟ್ಟ ಮೌಲ್ಯದಲ್ಲಿನ ತಾತ್ಕಾಲಿಕ ವ್ಯತ್ಯಾಸದಿಂದಾದ ತೆರಿಗೆ ಪರಿಣಾಮದ ಮೊತ್ತ) ವನ್ನು ಒಳಗೊಂಡಿರುತ್ತದೆ.

ಪ್ರಸ್ತುತ ಆದಾಯ ತೆರಿಗೆ

ಪ್ರಸ್ತುತ ಆದಾಯ ತೆರಿಗೆಯು ತೆರಿಗೆ ವಿಧಿಸಬಹುದಾದ ಆದಾಯದ ಮೇಲಿನ ನಿರೀಕ್ಷಿತ ಪಾವತಿಸಬೇಕಾದ ಅಥವಾ ಪಡೆಯಬಹುದಾದ ತೆರಿಗೆ ಅಥವಾ ಹಿಂದಿನ ವರ್ಷಗಳಿಗೆ ಸಂಬಂಧಪಟ್ಟ ಪಾವತಿಸಬೇಕಾದ ಅಥವಾ ಪಡೆಯಬಹುದಾದ ತೆರಿಗೆಯ ಹೊಂದಾಣಿಕೆಗಳನ್ನು ಒಳಗೊಂಡಿರುತ್ತದೆ. ಪ್ರಸ್ತುತ ತೆರಿಗೆಯ ಮೊತ್ತವು ಆದಾಯ ತೆರಿಗೆಗೆ ಸಂಬಂಧಿತ ಅನಿಶ್ಚಿತತೆಗಳನ್ನು ಪರಿಗಣಿಸಿದ ನಂತರ ಪಾವತಿಸಬೇಕಾದ ಅಥವಾ ಪಡೆಯಬೇಕಾದ ನಿರೀಕ್ಷಿತ ತೆರಿಗೆ ಮೊತ್ತದ ಅತ್ಯುತ್ಕೃಷ್ಟ ಅಂದಾಜನ್ನು ಪ್ರತಿಬಿಂಬಿಸುತ್ತದೆ. ಇದನ್ನು ಕಟ್ಟಳೆ ಮಾಡಿದ ಅಥವಾ ವರದಿಯ ದಿನಾಂಕದಂದು ವಾಸ್ತವಿಕವಾಗಿ ಕಟ್ಟಳೆ ಮಾಡಿದ ತೆರಿಗೆ ದರಗಳನ್ನು (ಹಾಗೂ ತೆರಿಗೆ ಕಾನೂನು) ಬಳಸಿ ಲೆಕ್ಕಹಾಕಲಾಗಿದೆ.

ಕಾನೂನುಬದ್ಧವಾಗಿ ಜಾರಿಗೊಳಿಸಿದ ಗುರುತಿಸಿದ ಮೊತ್ತಗಳ ಸರಿದೂಗಿಸುವಿಕೆಯ ಹಕ್ಕು ಇರುವಾಗ ಹಾಗೂ ಆಸ್ತಿಯ ಕೈಗೂಡಿಸುವಿಕೆ ಮತ್ತು ಜವಾಬ್ದಾರಿಗಳ ಇತ್ಯರ್ಥವನ್ನು ನಿವ್ವಳ ಆಧಾರದ ಮೇಲೆ ಮಾಡುವ ಉದ್ದೇಶವನ್ನು ಹೊಂದಿರುವಾಗ ಮಾತ್ರ ಪ್ರಸ್ತುತ ತೆರಿಗೆ ಆಸ್ತಿ ಹಾಗೂ ಪ್ರಸ್ತುತ ತೆರಿಗೆ ಹೊಣೆಗಾರಿಕೆಗಳನ್ನು ಸರಿದೂಗಿಸಲಾಗಿದೆ.

ಮುಂದೂಡಲ್ಪಟ್ಟ ತೆರಿಗೆ

ಮುಂದೂಡಲ್ಪಟ್ಟ ತೆರಿಗೆಯನ್ನು ಅಢಾವೆ ಪತ್ರಿಕೆಯ ವಿಧಾನವನ್ನು ಬಳಸಿ ಗುರುತಿಸಲಾಗಿದೆ. ಮುಂದೂಡಲ್ಪಟ್ಟ ತೆರಿಗೆ ಆಸ್ತಿ ಹಾಗೂ ಹೊಣೆಗಾರಿಕೆಗಳನ್ನು ಕಳೆಯಬಹುದಾದ ಹಾಗೂ ತೆರಿಗೆ ವಿಧಿಸಬಹುದಾದ ಆಸ್ತಿ ಮತ್ತು ಹೊಣೆಗಾರಿಕೆಗಳ ತೆರಿಗೆಯ ತಳಹದಿ ಹಾಗೂ ಮುಂದೊಯ್ಯುವ ವೆಚ್ಚದ ನಡುವಿನ ತಾತ್ಕಾಲಿಕ ವ್ಯತ್ಯಾಸಕ್ಕೆ ಗುರುತಿಸಲಾಗಿದೆ. ವ್ಯಾಪಾರ ಸಂಯೋಜನೆವಲ್ಲದ ವ್ಯವಹಾರದಲ್ಲಿನ, ಲೆಕ್ಕಾಚಾರ ಅಥವಾ ತೆರಿಗೆಯ ಲಾಭ ಅಥವಾ ನಷ್ಟದ ಮೇಲೆ ಪರಿಣಾಮ ಬೀರದ ಗುಡ್‌ವಿಲ್ ಅಥವಾ ಆಸ್ತಿ ಅಥವಾ ಹೊಣೆಗಾರಿಕೆಯಿಂದ ಉದ್ಭವಿಸುವ ಮುಂದೂಡಲ್ಪಟ್ಟ ಆದಾಯ ತೆರಿಗೆಯು ಇದಕ್ಕೆ ಹೊರತಾಗಿರುತ್ತದೆ.

ಮುಂದಿನ ಅವಧಿಗೆ ವರ್ಗಾಯಿಸಿ ಮತ್ತು ಹೊಂದಣಿಕೆಗೊಳಪಡುವ ಉಪಯೋಗಿಸದ ತೆರಿಗೆ ಹಾನಿಗಳನ್ನು ಮತ್ತು ತೆರಿಗೆ ಜಮೆಗಳನ್ನು ಹೊಂದಾಣಿಕೆ ಮಾಡಲು ಭವಿಷ್ಯತ್ತಿನಲ್ಲಿ ಲಭಿಸುವ ತೆರಿಗೆಗೊಳಪಡುವ ಲಾಭದ ನಿಶ್ಚಿತತೆ (ಸಂಭವನೀಯತೆ)ಯನ್ನು ಆಧರಿಸಿ ಮತ್ತು ತೆರಿಗೆಗೊಳಪಡುವ ಲಾಭದ ಮೊತ್ತದವರೆಗೆ ಉಪಯೋಗಿಸದ ತೆರಿಗೆ ಹಾನಿಗಳನ್ನು ಮತ್ತು ತೆರಿಗೆ ಜಮೆಗಳನ್ನು ಮುಂದೂಡಲ್ಪಟ್ಟ ತೆರಿಗೆ ಆಸ್ತಿಯೆಂದು ಗುರುತಿಸಲಾಗುವುದು.

ಮುಂದೂಡಲ್ಪಟ್ಟ ಆದಾಯ ತೆರಿಗೆ ಹೊಣೆಗಾರಿಕೆಗಳನ್ನು ಎಲ್ಲಾ ತೆರಿಗೆ ವಿಧಿಸಬಹುದಾದ ತಾತ್ಕಾಲಿಕ ವ್ಯತ್ಯಾಸಗಳಿಗೆ ಗುರುತಿಸಲಾಗಿದೆ

ಕೆ.ಪಿ.ಸಿ ಅನಿಲ ವಿದ್ಯುತ್ ನಿಗಮ ನಿಯಮಿತ

ಪೂರ್ವದ ಕೆ.ಪಿ.ಸಿ ಬಿಡದಿ ವಿದ್ಯುತ್ ನಿಗಮ ಖಾಸಗಿ ನಿಯಮಿತ

31ನೇ ಮಾರ್ಚ್ 2018 ಕ್ಕೆ ಕೊನೆಗೊಂಡ ಪ್ರತ್ಯೇಕ ಆರ್ಥಿಕ ಸ್ಥಿತಿ ವಿವರಣಾ ಪಟ್ಟಿಗೆ ಟಿಪ್ಪಣಿಗಳು

ಮುಂದಿನ ಅವಧಿಗೆ ವರ್ಗಾಯಿಸಿದ ಮುಂದೂಡಲ್ಪಟ್ಟ ತೆರಿಗೆ ಆಸ್ತಿಯನ್ನು ಪ್ರತಿ ವರ್ಷದ ಅಂತ್ಯಕ್ಕೆ ಆರ್ಥಿಕ ವರದಿಗಳನ್ನು ತಯಾರಿಸುವಾಗ ಪುನರ್ವಿಮರ್ಶೆ ಮಾಡಲಾಗುತ್ತದೆ ಹಾಗೂ ಮುಂದೂಡಲ್ಪಟ್ಟ ಆದಾಯ ತೆರಿಗೆ ಆಸ್ತಿಯ ಸಂಪೂರ್ಣ ಅಥವಾ ಭಾಗಶಃ ಬಳಕೆಗೆ ಬೇಕಾದ ಸಾಕಷ್ಟು ತೆರಿಗೆ ವಿಧಿಸಬಹುದಾದ ಲಾಭದ ಸಂಭಾವ್ಯತೆ ಇರದ ಮಟ್ಟಿಗೆ ಇದನ್ನು ಕಡಿಮೆ ಮಾಡಲಾಗುತ್ತದೆ.

ವರದಿಯ ದಿನಾಂಕದಂದು ರೂಪಿಸಿದ/ ಗಣನೀಯವಾಗಿ ರೂಪಿಸಿದ ತೆರಿಗೆ ದರಗಳ (ತೆರಿಗೆ ಕಾನೂನುಗಳ) ಮೇರೆಗೆ ಆಸ್ತಿಗಳನ್ನು ವಿಲೇವಾರಿ ಮಾಡಿದಾಗ ಅಥವಾ ಹೊಣೆಗಾರಿಕೆಗಳನ್ನು ಪಾವತಿಸಿದ ಅವಧಿಯಲ್ಲಿ ಬಹುತೇಕವಾಗಿ ಅನ್ವಯಿಸುವ ತೆರಿಗೆ ದರಗಳನ್ನು ಆಧರಿಸಿ ಮುಂದೂಡಲ್ಪಟ್ಟ ತೆರಿಗೆ ಆಸ್ತಿ ಮತ್ತು ಹೊಣೆಗಾರಿಕೆಗಳನ್ನು ಪರಿಮಾಣಿಸಲಾಗುವುದು.

ಕನಿಷ್ಟ ಪರ್ಯಾಯ ತೆರಿಗೆ

ಆದಾಯ ತೆರಿಗೆ ಕಾಯ್ದೆ, 1961ರ ನಿಬಂಧನೆಗಳ ಅಡಿಯಲ್ಲಿ ಕನಿಷ್ಟ ಪರ್ಯಾಯ ತೆರಿಗೆಯನ್ನು ಪ್ರಸ್ತುತ ತೆರಿಗೆಯೆಂದು ಲಾಭ ಮತ್ತು ನಷ್ಟದ ವಿವರಣಾ ಪಟ್ಟಿಯಲ್ಲಿ ಗುರುತಿಸಲಾಗಿದೆ. ಕಾಯ್ದೆಯ ಅಡಿಯಲ್ಲಿ ಕನಿಷ್ಟ ಪರ್ಯಾಯ ತೆರಿಗೆ ಪಾವತಿಯ ಕ್ರೆಡಿಟ್ ಮೊತ್ತವನ್ನು, ಸಾಮಾನ್ಯ ತೆರಿಗೆ ಹೊಣೆಗಾರಿಕೆಯ ಜೊತೆ ಹೊಂದಾಣಿಕೆ ಮಾಡಲು ಮುಂದೊಯ್ಯುವ ಅವಧಿಯಲ್ಲಿ ನಿಗಮವು ಸಾಮಾನ್ಯ ಆದಾಯ ತೆರಿಗೆಯನ್ನು ಪಾವತಿಸುವ ಒಪ್ಪುವಂತಹ ಪುರಾವೆಗಳಿದ್ದಾಗ ಮಾತ್ರ, ಅಷ್ಟರ ಮಟ್ಟಿಗೆ ಆಸ್ತಿಯೆಂದು ಗುರುತಿಸಲಾಗಿದೆ. ಆಸ್ತಿಯೆಂದು ಗುರುತಿಸಲಾದ ಕನಿಷ್ಟ ಪರ್ಯಾಯ ತೆರಿಗೆಯ ಕ್ರೆಡಿಟ್ ಮೊತ್ತವನ್ನು ಪ್ರತಿ ಅಢಾವೆ ಪತ್ರಿಕೆಯ ದಿನಾಂಕದಂದು ಪುನರ್ ಪರಿಶೀಲಿಸಲಾಗುತ್ತದೆ ಹಾಗೂ ಒಪ್ಪುವಂತಹ ಪುರಾವೆಯು ಲಭ್ಯವಿರದ ಮಟ್ಟಿಗೆ ಕಡಿಮೆ ಮಾಡಲಾಗುತ್ತದೆ.

2.14 ನಗದು ಹರಿವಿನ ವಿವರಣಾ ಪಟ್ಟಿ

ಕಾರ್ಯಾಚರಣೆಯಿಂದಾಗುವ ನಗದು ಹರಿವನ್ನು ಅಪ್ರತ್ಯಕ್ಷ ವಿಧಾನದ ಮೂಲಕ ಕಂಡುಕೊಳ್ಳಲಾಗುವುದು. ನಗದು ರಹಿತ ವ್ಯವಹಾರಗಳು, ಗತಿಸಿದ ಅಥವಾ ಭವಿಷ್ಯತ್ತಿನ ಮುಂದೂಡಲ್ಪಟ್ಟ ಅಥವಾ ಒದಗಿ ಬಂದ (deferrals or accruals) ನಗದು ಸ್ವೀಕೃತಿ ಅಥವಾ ಪಾವತಿಗಳನ್ನು ಮತ್ತು ಹೂಡಿಕೆ ಅಥವಾ ಆರ್ಥಿಕ ಚಟುವಟಿಕೆಗಳಿಗೆ ಸಂಬಂಧಿಸಿದ ಆದಾಯ ಮತ್ತು ಖರ್ಚುಗಳೊಂದಿಗೆ ಹೊಂದಾಣಿಕೆ ಮಾಡಿ ಕಾರ್ಯಾಚರಣೆಯಿಂದಾಗುವ ನಗದು ಹರಿವನ್ನು ಕಂಡುಕೊಳ್ಳಲಾಗುವುದು.

2.15 ನಗದು ಮತ್ತು ನಗದು ಸಮಾನಗಳು

ನಗದು ಮತ್ತು ನಗದು ಸಮಾನಗಳು ನಗದು, ಹನ್ನೆರಡು ತಿಂಗಳುಗಳಿಗಿಂತ ಕಡಿಮೆ ಅವಧಿಯಲ್ಲಿ ಮುಕ್ತಾಯ (maturity) ಗೊಳ್ಳುವಚಾಲ್ತಿ ಖಾತೆ ಮತ್ತು ಠೇವಣಿ ಖಾತೆಗಳಲ್ಲಿನ ಹಣವನ್ನು ಒಳಗೊಂಡಿರುತ್ತದೆ.

2.16 ನ್ಯಾಯೋಚಿತ ಮೌಲ್ಯಮಾಪನ

ಮೌಲ್ಯ ನಿರ್ಧರಣೆಯ ದಿನಾಂಕದಂದು ಪ್ರಧಾನ ಮಾರುಕಟ್ಟೆಯಲ್ಲಿ ಅಥವಾ ಇದರ ಅನುಪಸ್ಥಿತಿಯಲ್ಲಿ ನಿಗಮವು ಪ್ರವೇಶ ಹೊಂದಿರುವ ತುಂಬಾ ಅನುಕೂಲವನ್ನುಂಟು ಮಾಡುವ ಮಾರುಕಟ್ಟೆ ಪಾಲುದಾರರ ಮಧ್ಯೆ ಕ್ರಮಬದ್ಧವಾಗಿ ಜರುಗಿದ ವ್ಯವಹಾರದಲ್ಲಿ ಆಸ್ತಿಗಳ ಮಾರಾಟದಿಂದ ಪಡೆಯಬಹುದಾದ ಅಥವಾ ಭಾಧ್ಯತೆಗಳ ವರ್ಗಾವಣೆಗಾಗಿ ಸಂದಾಯಿಸಿದ ದರವನ್ನು 'ನ್ಯಾಯೋಚಿತ ಮೌಲ್ಯ' ಎಂದು ಹೇಳಲಾಗುವುದು. ಬಾಧ್ಯತೆಗಳ ನ್ಯಾಯೋಚಿತ ಮೌಲ್ಯವು ಅವುಗಳ ನೇರವೇರಿಸದಿರುವದರಿಂದಾಗಬಹುದಾದ ಗಂಡಾಂತರವನ್ನು ಪ್ರತಿಬಿಂಬಿಸುತ್ತದೆ.

ಆರ್ಥಿಕ ಆಸ್ತಿಗಳ ಉಲ್ಲೇಖಿತ ಬೆಲೆ ಲಭ್ಯವಿದ್ದಲ್ಲಿ, ನಿಗಮವು ಅಂತಹ ಆಖತಪತ್ರಗಳ (ಇಂಸ್ಟ್ರುಮೆಂಟ್ಸ್) ಕಾರ್ಯನಿರತ ಮಾರುಕಟ್ಟೆಯಲ್ಲಿನ ಉಲ್ಲೇಖಿತ ಬೆಲೆಯನ್ನಾಧರಿಸಿ ನ್ಯಾಯೋಚಿತ ಮೌಲ್ಯಮಾಪನ ಮಾಡಲಾಗುವುದು. ಒಂದು ವೇಳೆಮಾರುಕಟ್ಟೆಯಲ್ಲಿ ಆಸ್ತಿ ಅಥವಾ ಬಾಧ್ಯತೆಗಳ ವ್ಯವಹಾರಗಳು ಸಾಕಷ್ಟು ಸಲ ಮತ್ತು ಹೆಚ್ಚಿನ ಗಾತ್ರದಲ್ಲಿ ಜರುಗಿದ ಬೆಲೆಗಳ ಮಾಹಿತಿಯನ್ನು ನಿರಂತರವಾಗಿ ಒದಗಿಸುತ್ತಿದ್ದರೆ ಅಂತಹ ಮಾರುಕಟ್ಟೆಯು ಕ್ರಿಯಾಶೀಲವಾಗಿರುವುದೆಂದು ಪರಿಗಣಿಸಬಹುದಾಗಿದೆ.

ಒಂದು ವೇಳೆ ಕ್ರಿಯಾಶೀಲ ಮಾರುಕಟ್ಟೆಯಲ್ಲಿ ಉಲ್ಲೇಖಿತ ಬೆಲೆ ಲಭ್ಯವಾಗದಿದ್ದಲ್ಲಿ, ಆಗ ನಿಗಮವು ಪ್ರಸ್ತುತ ಗ್ರಹಿಸಬಹುದಾದ ಮಾಹಿತಿ (ಇನ್‌ಪುಟ್ಸ್) ಗಳ ಗರಿಷ್ಟ ಬಳಕೆ ಮತ್ತು ಗ್ರಹಿಸಲು ಅಸಾಧ್ಯವಾದ ಮಾಹಿತಿಗಳ ಕನಿಷ್ಟ ಬಳಕೆಯ ಮೌಲ್ಯಮಾಪನ ವಿಧಾನಗಳನ್ನು ಬಳಸುವುದು. ವ್ಯವಹಾರದ ಮೌಲ್ಯಮಾಪನಕ್ಕಾಗಿ ಆಯ್ದುಕೊಂಡ ಮೌಲ್ಯಮಾಪನದ ವಿಧಾನವು ಮಾರುಕಟ್ಟೆಯ ಭಾಗಿದಾರರು ಪರಿಗಣಿಸುವ ಎಲ್ಲಾ ಅಂಶಗಳನ್ನು ಒಳಗೊಂಡಿರುತ್ತದೆ.

ಆಸ್ತಿಗಳ ಅಥವಾ ಭಾದ್ಯತೆಗಳ ನ್ಯಾಯೋಚಿತ ಮೌಲ್ಯವನ್ನು ನಿರ್ಧರಿಸುವಾಗ ನಿಗಮವು ಗ್ರಹಿಸಬಹುದಾದ ಮಾರುಕಟ್ಟೆಯ ಅಂಕಿ ಅಂಶಗಳನ್ನು ಸಾಧ್ಯವಾದಷ್ಟು ಮಟ್ಟಿಗೆ ಬಳಸುತ್ತದೆ. ಮೌಲ್ಯ ಮೌಲ್ಯಮಾಪನ ವಿಧಾನಗಳಲ್ಲಿ ಬಳಸಿದ ಅಂಕಿ ಅಂಶ ಅಥವಾ ಮಾಹಿತಿಗಳನ್ನು ಆಧರಿಸಿ, ನ್ಯಾಯೋಚಿತ ಮೌಲ್ಯವನ್ನು, ನ್ಯಾಯೋಚಿತ ಮೌಲ್ಯದ ವರ್ಗಶ್ರೇಣಿ (fair value hierarchy) ಗಳನ್ನು ವಿವಿಧ ಹಂತಗಳಲ್ಲಿ ಈ ಕೆಳಗಿನಂತೆ ವರ್ಗೀಕರಿಸಲಾಗಿದೆ.

ಕೆ.ಪಿ.ಸಿ ಅನಿಲ ವಿದ್ಯುತ್ ನಿಗಮ ನಿಯಮಿತ

ಪೂರ್ವದ ಕೆ.ಪಿ.ಸಿ ಬಿಡದಿ ವಿದ್ಯುತ್ ನಿಗಮ ಖಾಸಗಿ ನಿಯಮಿತ

31ನೇ ಮಾರ್ಚ್ 2018 ಕ್ಕೆ ಕೊನೆಗೊಂಡ ಪ್ರತ್ಯೇಕ ಆರ್ಥಿಕ ಸ್ಥಿತಿ ವಿವರಣಾ ಪಟ್ಟಿಗೆ ಟಿಪ್ಪಣಿಗಳು

- ಹಂತ 1: ಸಾಮ್ಯತೆ ಹೊಂದಿದ ಆಸ್ತಿಗಳ ಅಥವಾ ಬಾಧ್ಯತೆಗಳ ಕ್ರೀಯಾಶೀಲ ಮಾರುಕಟ್ಟೆಗಳಲ್ಲಿನ ಉಲ್ಲೇಖಿತ ಬೆಲೆಗಳು (ಮಾರ್ಪಡಿಸದ).
- ಹಂತ 2: ಹಂತ 1 ರಲ್ಲಿ ಸೇರಿಸಲಾದ ಉಲ್ಲೇಖಿತ ಬೆಲೆಗಳನ್ನೊಳಗೊಳ್ಳದ, ಆದರೆ ಆಸ್ತಿ ಹಾಗೂ ಬಾಧ್ಯತೆಗಳ ಕುರಿತಾಗಿ ಪ್ರತ್ಯಕ್ಷವಾಗಿ (ಅರ್ಥಾತ್ ಬೆಲೆಗಳನ್ನಾಧರಿಸಿ) ಇಲ್ಲವೇ ಪರೋಕ್ಷವಾಗಿ (ಅರ್ಥಾತ್ ಬೆಲೆಗಳಿಂದ ಉಗಮವಾದುದು) ಗ್ರಹಿಸಬಹುದಾದ ಮಾಹಿತಿಗಳು (ಅಂಕಿ ಅಂಶಗಳು).
- ಹಂತ 3: ಆಸ್ತಿ ಅಥವಾ ಬಾಧ್ಯತೆಗಳ ಕುರಿತು ಮಾರುಕಟ್ಟೆಯ ಗ್ರಹಿಸಬಹುದಾದ ಅಂಕಿ ಅಂಶಗಳನ್ನಾಧರಿಸದೇ ಇರುವ ಮಾಹಿತಿ (ಇನ್‌ಪುಟ್ಸ್) [ಗ್ರಹಿಸಲು ಅಸಾಧ್ಯವಾದ ಮಾಹಿತಿ (ಇನ್‌ಪುಟ್ಸ್)].

ಆಸ್ತಿ ಅಥವಾ ಬಾಧ್ಯತೆಗಳ ನ್ಯಾಯೋಚಿತ ಮೌಲ್ಯದ ನಿರ್ಧರಣೆ ಮಾಡಲು ಬಳಸಿದ ಮಾಹಿತಿಗಳು (ಅಂಕಿ ಅಂಶಗಳು) ನ್ಯಾಯೋಚಿತ ಮೌಲ್ಯದ ನಿರ್ದಿಷ್ಟವಾದ ವರ್ಗಶ್ರೇಣಿಗಳಲ್ಲಿ ಸರಿಹೊಂದದಿದ್ದರೆ ಅಥವಾ ವಿವಿಧ ಶ್ರೇಣಿಗಳಲ್ಲಿ ಸೇರಿದ್ದರೆ, ಆಗ ಸಂಪೂರ್ಣ ಮೌಲ್ಯ ನಿರ್ಧರಣೆಗೆ ಮಹತ್ತರವಾದ ಕನಿಷ್ಟ ಶ್ರೇಣಿಯ ಅಂಕಿ ಅಂಶಗಳಿಗೆ ಸಂಬಂಧಿಸಿದ ನ್ಯಾಯೋಚಿತ ಮೌಲ್ಯದ ವರ್ಗಶ್ರೇಣಿಯಲ್ಲಿ ಸಮಗ್ರವಾಗಿ ವರ್ಗೀಕರಿಸಲಾಗುವುದು.

2.17 ಹಣಕಾಸು ಪತ್ರಗಳು

ಅ) ಹಣಕಾಸಿನ ಆಸ್ತಿ

ಹಣಕಾಸಿನ ಆಸ್ತಿಗಳು ಈಕ್ವಿಟಿಯಲ್ಲಿನ ಹೂಡಿಕೆ, ಮತ್ತು ಸಾಲ ಪತ್ರಗಳು, ವ್ಯಾಪಾರಿ ಸಂಬಂಧ ಬರತಕ್ಕವುಗಳು, ನಗದು ಮತ್ತು ನಗದು ಸಮಾನತೆಗಳು ಮತ್ತು ಇತರೆ ಹಣಕಾಸಿನ ಸ್ವತ್ತುಗಳನ್ನು ಒಳಗೊಂಡಿರುತ್ತದೆ.

ಆರಂಭಿಕ ಗುರುತಿಸುವಿಕೆ

ಎಲ್ಲಾ ಹಣಕಾಸಿನ ಆಸ್ತಿಗಳು ಆರಂಭದಲ್ಲಿ ನ್ಯಾಯೋಚಿತ ಮೌಲ್ಯದ ಅನ್ವಯ ಗುರುತಿಸಲ್ಪಡುತ್ತವೆ. ಒಂದು ವೇಳೆ, ಹಣಕಾಸಿನ ಆಸ್ತಿಗಳು ಲಾಭ ಮತ್ತು ನಷ್ಟದ ಮುಖಾಂತರ ನ್ಯಾಯೋಚಿತ ಮೌಲ್ಯದ [Fair value through profit and loss (FVTPL)] ಅನ್ವಯ ಗುರುತಿಸಲ್ಪಡದೆಯಿದ್ದಲ್ಲಿ, ಹಣಕಾಸಿನ ಆಸ್ತಿಯ ಸ್ವಾಧೀನಕ್ಕೆ ಸಂಬಂಧಿಸಿದ ವ್ಯವಹಾರದ ವೆಚ್ಚದಲ್ಲಿ ತೋರ್ಪಡಿಸಲಾಗುವುದು.

ಮಾರುಕಟ್ಟೆಯ ನಿಬಂಧನೆಗಳ ಅಥವಾ ಆಚರಣೆಗಳ ಅನುಸಾರ ನಿಗದಿಪಡಿಸಲಾದ ಕಾಲ ಮಿತಿಯೊಳಗೆ ಗೊತ್ತುಪಡಿಸಿದ ಹಣಕಾಸು ಆಸ್ತಿಯನ್ನು ವಶಕ್ಕೆ ಕೊಡುವುದಾದಲ್ಲಿ / ಪಡೆಯುವುದಾದಲ್ಲಿ ಹಣಕಾಸಿನ ಆಸ್ತಿಯ ಖರೀದಿ ಅಥವಾ ಮಾರಾಟವನ್ನು ವ್ಯವಹಾರದ ದಿನಾಂಕದಂದು (ಅರ್ಥಾತ್, ನಿಗಮವು ಆಸ್ತಿಯನ್ನು ಖರೀದಿಸಲು ಅಥವಾ ಮಾರಾಟ ಮಾಡಲು ಬದ್ಧತೆಗೊಳಪಟ್ಟ ದಿನಾಂಕ) ಗುರುತಿಸಲ್ಪಡುವುದು.

ತರುವಾಯದ ಮೌಲ್ಯಮಾಪನ:

(i) ಹಣಕಾಸು ಆಸ್ತಿಗಳ ಮೂಲ ಬೆಲೆಯನ್ನು (ಪ್ರಾರಂಭಿಕ ವೆಚ್ಚವನ್ನು) ಕ್ರಮೇಣ ವಜಾಗೊಳಿಸಿದ ನಂತರದ ಮೌಲ್ಯದಲ್ಲಿ (amortised cost) ಮೌಲ್ಯ ನಿರ್ಧರಣೆ:

ವ್ಯವಹಾರದ ಮಾದರಿಯಲ್ಲಿ ಹೊಂದಿದ ಹಣಕಾಸು ಆಸ್ತಿಗಳನ್ನು, ಒಪ್ಪಂದದ ಮೇರೆಗೆ ಲಭಿಸುವ ನಗದು ಹರಿವನ್ನು ಸಂಗ್ರಹಿಸುವ ಉದ್ದೇಶಗಳಿಗಾಗಿ ಹೊಂದಲಾಗಿರುವುದು. ಹಣಕಾಸು ಆಸ್ತಿಯ ಒಪ್ಪಂದದ ನಿಬಂಧನೆಗಳು, ನಿರ್ದಿಷ್ಟ ದಿನಾಂಕಗಳಂದು ಅಸಲಿನ ಮರುಪಾವತಿ ಮತ್ತು ಬಾಕಿ ಉಳಿದಿರುವ ಅಸಲಿನ ಮೇಲೆ ಪರಿಣಾಮಕಾರಿ ಬಡ್ಡಿದರ [Effective Interest Rate (ERI)] ವಿಧಾನವನ್ನು ಅನುಸರಿಸಿ ಆಕರಿಸಿದ ಬಡ್ಡಿ ಸ್ವೀಕೃತಿಯಿಂದ ಲಭಿಸುವ ನಗದು ಹರಿವಿನ ಸ್ವೀಕೃತಿಗೆ ಅವಕಾಶ ಮಾಡಿಕೊಡುವವು.

ಪರಿಣಾಮಕಾರಿ ಬಡ್ಡಿ ದರವನ್ನು (ERI), ಕ್ರಮೇಣ ಮೊಟಕುಗೊಳಿಸಿ ಲಭಿಸುವ ಮೊಬಲಗುವನ್ನು ಆರ್ಥಿಕ ಚಟುವಟಿಕೆಯ ಆದಾಯವೆಂದು ಲಾಭ ಮತ್ತು ನಷ್ಟ ತಃಖ್ತೆಯಲ್ಲಿ ಗುರುತಿಸಲಾಗುವುದು.

(ii) ಹಣಕಾಸು ಆಸ್ತಿಗಳನ್ನು ಇತರ ವಿಸ್ತೃತ ಆದಾಯ ವಿವರಣ ಪಟ್ಟಿಯ (Other Comprehensive Income) ಮೂಲಕ ನ್ಯಾಯೋಚಿತ ಮೌಲ್ಯ (Fair Value) ದಲ್ಲಿ ಉಲ್ಲೇಖಿಸಲಾಗುವುದು.

ವ್ಯವಹಾರದ ಮಾದರಿಯಲ್ಲಿ ಹೊಂದಿದ ಹಣಕಾಸು ಆಸ್ತಿಗಳನ್ನು ಒಪ್ಪಂದದ ಮೇರೆಗೆ ಲಭಿಸುವ ನಗದು ಹರಿವನ್ನು ಸಂಗ್ರಹಿಸುವ ಮತ್ತು ಹಣಕಾಸು ಆಸ್ತಿಗಳ ಮಾರಾಟದ ಉದ್ದೇಶಗಳಿಗಾಗಿ ಹೊಂದಲಾಗಿರುವುದು. ಹಣಕಾಸು ಆಸ್ತಿಯ ಒಪ್ಪಂದದ ನಿಬಂಧಗಳು, ನಿರ್ದಿಷ್ಟ ದಿನಾಂಕಗಳಂದು ಅಸಲಿನ ಮರುಪಾವತಿ ಮತ್ತು ಬಾಕಿ ಉಳಿದಿರುವ ಅಸಲಿನ ಮೇಲೆ ಆಕರಿಸಿದ ಬಡ್ಡಿಯನ್ನು ತರುವಾಯ ಇತರ ವಿಸ್ತೃತ ಆದಾಯ ವಿವರಣ ಪಟ್ಟಿಯ ಮೂಲಕ ನ್ಯಾಯೋಚಿತ ಮೌಲ್ಯದಲ್ಲಿ [Fair Value through other Comprehensive Income

ಕೆ.ಪಿ.ಸಿ ಅನಿಲ ವಿದ್ಯುತ್ ನಿಗಮ ನಿಯಮಿತ

ಪೂರ್ವದ ಕೆ.ಪಿ.ಸಿ ಬಿಡದಿ ವಿದ್ಯುತ್ ನಿಗಮ ಖಾಸಗಿ ನಿಯಮಿತ

31ನೇ ಮಾರ್ಚ್ 2018 ಕ್ಕೆ ಕೊನೆಗೊಂಡ ಪ್ರತ್ಯೇಕ ಆರ್ಥಿಕ ಸ್ಥಿತಿ ವಿವರಣಾ ಪಟ್ಟಿಗೆ ಟಿಪ್ಪಣಿಗಳು

(FVTOCI)] ಲೆಕ್ಕಿಸಲಾಗುವುದು. ಹಣಕಾಸು ಆಸ್ತಿಗಳಲ್ಲಿನ ನ್ಯಾಯೋಚಿತ ಬೆಲೆಯ ಚಲನ ವಲನವನ್ನು ಇತರೆ ವಿಸ್ತೃತ ಆದಾಯ ಪಟ್ಟಿಯಲ್ಲಿ ಉಲ್ಲೇಖಿಸಲಾಗುವುದು. ವ್ಯಾಪಾರ ವಹಿವಾಟಿಗಾಗಿ ಹೊಂದಿರುವ ಈಕ್ವಿಟಿ ಆಖಿತ ಪತ್ರಗಳನ್ನು ಲಾಭ ಮತ್ತು ಹಾನಿ ತಖ್ತೆಯ ಮುಖಾಂತರ ನ್ಯಾಯೋಚಿತ ಮೌಲ್ಯದಲ್ಲಿ [Fair Value through Profit and Loss (FVTPL)] ವರ್ಗಿಕರಿಸಲಾಗುವುದು, ನಿಗಮವು ಇತರೆ ಈಕ್ವಿಟಿ ಆಖಿತ ಪತ್ರಗಳನ್ನು 'ಹಣಕಾಸುಆಸ್ತಿಗಳನ್ನು ಇತರ ವಿಸ್ತೃತ ಆದಾಯ ವಿವರಣ ಪಟ್ಟಿಯ ಮೂಲಕ ನ್ಯಾಯೋಚಿತ ಮೌಲ್ಯದ (FVTOCI) ಅನ್ವಯ ವರ್ಗಿಕರಿಸಲಾಗುವುದು.ಈ ವರ್ಗಿಕರಣವನ್ನು ಆರಂಭಿಕ ಗುರುತಿಸುವಿಕೆ ಯಲ್ಲಿ ಮಾಡಬಹುದಾಗಿದ್ದು ಹಾಗೂ ಇದನ್ನು ರದ್ದುಪಡಿಸಲಾಗದು. 'ಹಣಕಾಸು ಆಸ್ತಿಗಳನ್ನು ಇತರ ವಿಸ್ತೃತ ಆದಾಯ ವಿವರಣ ಪಟ್ಟಿಯ ಮೂಲಕ ನ್ಯಾಯೋಚಿತ ಮೌಲ್ಯದ (FVTOCI)' ಮೇರೆಗೆ ವರ್ಗಿಕೃತ ಈಕ್ವಿಟಿ ಆಖಿತ ಪತ್ರಗಳ ನ್ಯಾಯೋಚಿತ ಮೌಲ್ಯದ ಬದಲಾವಣೆಗಳನ್ನು, ಲಾಭಾಂಶವನ್ನು (Dividend) ಹೊರತು ಪಡಿಸಿ ಇತರೆ ವಿಸ್ತೃತ ಆದಾಯ ಪಟ್ಟಿ [Other Comprehensive Income (OCI)] ಯಲ್ಲಿ ಗುರುತಿಸಲಾಗುವುದು.

(iii) ಹಣಕಾಸು ಆಸ್ತಿಗಳನ್ನು ಲಾಭ ಮತ್ತು ನಷ್ಟ ತಃಖ್ತೆಯ ಮೂಲಕ ನ್ಯಾಯೋಚಿತ ಮೌಲ್ಯದಲ್ಲಿ ಉಲ್ಲೇಖಿಲಾಗುವುದು. ಒಂದು ವೇಳೆ ಹಣಕಾಸು ಆಸ್ತಿಯು ಪ್ರಾರಂಭಿಕ ವೆಚ್ಚವನ್ನು (ಮೂಲ ಬೆಲೆಯನ್ನು) ಕ್ರಮೇಣ ವಜಾಗೊಳಿಸಿದ ನಂತರದ ಮೌಲ್ಯ (Amortised cost) ಅಥವಾ 'ಹಣಕಾಸು ಆಸ್ತಿಗಳನ್ನು ಇತರ ವಿಸ್ತೃತ ಆದಾಯ ವಿವರಣ ಪಟ್ಟಿಯ ಮೂಲಕ ನ್ಯಾಯೋಚಿತ ಮೌಲ್ಯದ (FVTOCI)' ವರ್ಗಿಕರಣಗಳ ನಿರ್ಣಾಯಕ ಅಂಶ (ಮಾನದಂಡ) ಗಳನ್ನು ಪೂರೈಸದಿದ್ದಲ್ಲಿ, ಅಂತಹ ಹಣಕಾಸು ಆಸ್ತಿಗಳನ್ನು ಲಾಭ ಮತ್ತು ನಷ್ಟ ತಃಖ್ತೆಯ ಮುಖಾಂತರ ನ್ಯಾಯೋಚಿತ ಮೌಲ್ಯದಲ್ಲಿ ಲೆಕ್ಕಿಸಲಾಗುವುದು.

ಹಣಕಾಸು ಆಸ್ತಿಗಳ ಅಮಾನ್ಯಗೊಳಿಸುವಿಕೆ

ಹಣಕಾಸು ಆಸ್ತಿಗಳಿಂದ ಲಭಿಸಬಹುದಾದ ನಗದು ಹರಿವನ್ನು ಸ್ವೀಕರಿಸಲು ಒಪ್ಪಂದದನ್ವಯ ಅಧಿಕಾರವು ಮೊಟಕುಗೊಂಡಾಗ ಅಥವಾ ಹಣಕಾಸು ಆಸ್ತಿಗಳನ್ನು ವರ್ಗಾಯಿಸಿದಾಗ ಅಥವಾ ಅಂತಹ ವರ್ಗಾವಣೆಯು ಅಮಾನ್ಯಕರಣಕ್ಕೊಳಗಾದ ಸಂದರ್ಭಗಳಲ್ಲಿ ಹಣಕಾಸು ಆಸ್ತಿಗಳನ್ನು ಅಮಾನ್ಯಕರಣಗೊಳಿಸಲಾಗುವುದು. ಹಣಕಾಸು ಆಸ್ತಿಗಳನ್ನು ಸಂಪೂರ್ಣವಾಗಿ ಅಮಾನ್ಯಕರಣಗೊಳಿಸಿದಾಗ, ಅಂತಹ ಆಸ್ತಿಗಳು ಲೆಕ್ಕಪುಸ್ತಕದಲ್ಲಿ ಹೊಂದಿರುವ ಮೌಲ್ಯ [ಅಮಾನ್ಯಕರಣ ದಿನಾಂಕದಂದು ಲೆಕ್ಕಾಚಾರ ಮಾಡಿದ ಮೌಲ್ಯ] ಮತ್ತು ವರ್ಗಾವಣೆಯಿಂದ ಲಭಿಸಿದ ಮೌಲ್ಯ (ಅಥವಾ ಯಾವುದೇ ಹೊಸ ಆಸ್ತಿಗಳನ್ನು ಪಡೆದ ಮೊಬಲಗುವಿನಲ್ಲಿ ಯಾವುದೇ ಜವಾಬ್ದಾರಿಗಳನ್ನು ಸ್ವೀಕರಿಸಿದ ಮೊಬಲಗುವನ್ನು ಕಳೆದು ಲಭಿಸಿದ ಮೌಲ್ಯ) ದ ವ್ಯತ್ಯಾಸವನ್ನು ಲಾಭ ಮತ್ತು ನಷ್ಟ ತಃಖ್ತೆಯಲ್ಲಿ ಗುರುತಿಸಲಾಗುವುದು.

ಹಣಕಾಸು ಆಸ್ತಿಗಳ ದುರ್ಬಲತೆ

ವ್ಯಾಪಾರಿ ಸಂಬಂಧ ಬರತಕ್ಕವುಗಳು, ಒಪ್ಪಂದದ ಮೇರೆಗೆ ಪಡೆದ ಆಸ್ತಿಗಳು, ಭಾರತೀಯ ಲೆಕ್ಕಾಚಾರ ಮಾನದಂಡ – 109 (IND AS - 109) ರನ್ವಯ ಗುತ್ತಿಗೆಯಿಂದ ಪಡೆಯಬಹುದಾದವುಗಳು, ಸಾಲ ಪತ್ರಗಳಲ್ಲಿ ಮಾಡಿದ ಗುಂತಾವಣೆ (Investments in Debt Instruments) ಗಳನ್ನು ಮೂಲ ಬೆಲೆಯ ಕ್ರಮೇಣ ವಜಾಗೊಳಿಸಿದ ನಂತರದ ಮೌಲ್ಯದಲ್ಲಿ ಲೆಕ್ಕಿಸಲಾಗಿರುವುದು ಮತ್ತು ಹಣಕಾಸು ಆಸ್ತಿಗಳನ್ನು ಇತರ ವಿಸ್ತೃತ ಆದಾಯ ವಿವರಣ ಪಟ್ಟಿಯ ಮೂಲಕ ನ್ಯಾಯೋಚಿತ ಮೌಲ್ಯದ (FVTOCI) ಆಧಾರದ ಮೇರಗೆ ಲೆಕ್ಕಿಸಲಾದ ಸಾಲ ಪತ್ರಗಳನ್ನು, ಸಂಬಂಧಿತ ಹಣಕಾಸು ಆಸ್ತಿಗಳಿಂದ ನಿರೀಕ್ಷಿತ ಜಮೆಯ ಹಾನಿಗಳನ್ನು (Expected Credit Losses) ಆಧರಿಸಿ ಆಸ್ತಿಗಳ ದುರ್ಬಲತೆಯನ್ನು ಪರೀಕ್ಷಿಸಲಾಗುವುದು.

(i) ವ್ಯಾಪಾರಿ ಸಂಬಂಧ ಬರತಕ್ಕವುಗಳು:

ಪ್ರತಿ ಲೆಕ್ಕಪತ್ರ ವರದಿಯ ದಿನಾಂಕದಂದು ಆಸ್ತಿಗಳ ದುರ್ಬಲತೆಯ ವಿಶ್ಲೇಷಣೆಯನ್ನು ಕೈಗೊಳ್ಳಲಾಗುವುದು. ಭವಿಷ್ಯತ್ತಿನ ಆರ್ಥಿಕ ಸ್ಥಿತಿಗತಿಗಳ ಮುನ್ಸೂಚನೆ ಮತ್ತು ವಾಸ್ತವಿಕ ಸ್ಥಿತಿಗತಿಗಳನ್ನು ಪ್ರತಿಫಲಿಸುವ ಪೂರ್ವವಧಿಯ ಹಾನಿಯ ದರಗಳನ್ನಾಧರಿಸಿ ಅವಕಾಶಗಳ ಮ್ಯಾಟ್ರಿಕ್ಸ್ (ಅಣಿಮಣಿ) ನ್ನು ಉಪಯೋಗಿಸಿ ಸರಳೀಕರಿಸಿದ ವಿಧಾನವನ್ನು ಅಳವಡಿಸಿಕೊಂಡು, ಆಸ್ತಿಯ ಜೀವಿತಾವಧಿಯಲ್ಲಿ (Life Time of Asset) ನಿರೀಕ್ಷಿತ ಜಮೆಯ ಹಾನಿಗಳನ್ನು ಅಂದಾಜಿಸಲಾಗುವುದು. ಪ್ರಸ್ತುತ ವಿಧಾನದಲ್ಲಿ ಇಂತಹ ಆಸ್ತಿಗಳಿಂದಾಗಬಹುದಾದ ನಿರೀಕ್ಷಿತ ನಗದು ಹಾನಿಗಳನ್ನು ಅಂದಾಜಿಸಲು ಪೂರಕವಾಗುವಂತೆ, ಆಸ್ತಿಗಳನ್ನು ಸಮಾನ ರೂಪದ ವಿಶ್ವಾಸಾರ್ಹತೆಯ ಗುಣಲಕ್ಷಣಗಳಾದ ಉದ್ಯಮ, ಗ್ರಾಹಕರ ವಿಭಾಗ, ಹಳೆಯ ಬಾಕಿಯ ಸ್ಥಿತಿಗತಿ ಮತ್ತು ಇತರೆ ಅಂಶಗಳನ್ನಾಧರಿಸಿ ವರ್ಗೀಕರಣಗೊಳಿಸಲಾಗುವುದು.

(ii) ಇತರೆ ಹಣಕಾಸು ಆಸ್ತಿಗಳು:

ಜಮೆಯ ಗಂಡಾಂತರದಲ್ಲಿ ಮಹತ್ತರವಾದ ಏರಿಕೆಯಾದಲ್ಲಿ ಅಂತಹ ಆಸ್ತಿಗಳ ಜೀವಿತಾವದಿಯಲ್ಲಿ ಉಪೇಕ್ಷೆಗೊಳಗಾಗುವ ಸಂಭವನೀಯತೆಯನ್ನಾಧರಿಸಿ ಇತರ ಹಣಕಾಸು ಆಸ್ತಿಗಳ ಆರಂಭಿಕ ಗುರುತಿಸುವಿಕೆ ಮತ್ತು ಆಸ್ತಿಗಳ ದುರ್ಬಲತೆಯನ್ನು

ಕೆ.ಪಿ.ಸಿ ಅನಿಲ ವಿದ್ಯುತ್ ನಿಗಮ ನಿಯಮಿತ

ಪೂರ್ವದ ಕೆ.ಪಿ.ಸಿ ಬಿಡದಿ ವಿದ್ಯುತ್ ನಿಗಮ ಖಾಸಗಿ ನಿಯಮಿತ

31ನೇ ಮಾರ್ಚ್ 2018 ಕ್ಕೆ ಕೊನೆಗೊಂಡ ಪ್ರತ್ಯೇಕ ಆರ್ಥಿಕ ಸ್ಥಿತಿ ವಿವರಣಾ ಪಟ್ಟಿಗೆ ಟಿಪ್ಪಣಿಗಳು

ಲೆಕ್ಕಿಸಲಾಗುವುದರಿಂದ ಜಮೆಯ ಗಂಡಾಂತರದಲ್ಲಿಯ ಮಹತ್ತರವಾದ ಬದಲಾವಣೆಗಳನ್ನು ಪರಿಗಣಿಸಿ, ಇತರೆ ಆರ್ಥಿಕ ಆಸ್ತಿಗಳ ದುರ್ಬಲತೆಯನ್ನು ಪರೀಕ್ಷಿಸಲಾಗುವುದು.

(ಆ) ಆರ್ಥಿಕ ಹೊಣೆಗಾರಿಕೆಗಳು

ಆರಂಭಿಕ ಗುರುತಿಸುವಿಕೆ ಮತ್ತು ಮೌಲ್ಯಮಾಪನ:

ಆರ್ಥಿಕ ಹೊಣೆಗಾರಿಕೆಗಳನ್ನು ಆರಂಭಿಕವಾಗಿ ನ್ಯಾಯೋಚಿತ ಮೌಲ್ಯದಲ್ಲಿ ಲೆಕ್ಕಿಸಿದ್ದು, ಸದ್ಯದಲ್ಲಿ (ಪ್ರಸ್ತುತ) ಲಾಭ ಮತ್ತು ನಷ್ಟ ತಃಖ್ತೆಯ ಮುಖಾಂತರ ನ್ಯಾಯೋಚಿತ ಮೌಲ್ಯದಲ್ಲಿ [Fair Value through Profit and Loss (FVTPL)] ತೋರಿಸಿರುವುದನ್ನು ಹೊರತುಪಡಿಸಿ ಉಳಿದೆಲ್ಲ ಆರ್ಥಿಕ ಹೊಣೆಗಾರಿಕೆಗಳ ನ್ಯಾಯೋಚಿತ ಮೌಲ್ಯದೊಂದಿಗೆ ಹೊಂದಲು ವ್ಯಯಿಸಿದ ಎಲ್ಲ ತರಹದ ವ್ಯವಹಾರಿಕ ವೆಚ್ಚಗಳನ್ನು ಸೇರಿಸಿ ಆರ್ಥಿಕ ಹೊಣೆಗಾರಿಕೆಗಳನ್ನು ಆರಂಭಿಕವಾಗಿ ಗುರುತಿಸಲಾಗುವುದು.

ತರುವಾಯದ ಮೌಲ್ಯಮಾಪನ:

ಆರ್ಥಿಕ ಜವಾಬ್ದಾರಿಗಳನ್ನು ತರುವಾಯದ ಮೌಲ್ಯಮಾಪನಕ್ಕಾಗಿ ಈ ಕೆಳಗಿನಂತೆ ಗುಂಪುಗಳಲ್ಲಿ ವರ್ಗೀಕರಿಸಲಾಗುವುದು.

* ಆರಂಭಿಕ ಹೊಣೆಗಾರಿಕೆಯನ್ನು ಕ್ರಮೇಣ ವಜಾಗೊಳಿಸಿ ಉಳಿದ ಮೌಲ್ಯ (Amortised Cost) ದಲ್ಲಿ ತೋರಿಸಲಾಗುವುದು.

* ಲಾಭ ಮತ್ತು ನಷ್ಟ ತಃಖ್ತೆಯ ಮುಖಾಂತರ ನ್ಯಾಯೋಚಿತ ಮೌಲ್ಯದಲ್ಲಿ ತೋರಿಸಲಾಗುವುದು (FVTPL)

(i) ಆರ್ಥಿಕ ಹೊಣೆಗಾರಿಕೆಗಳನ್ನು ಆರಂಭಿಕ ವೆಚ್ಚವನ್ನು ಕ್ರಮೇಣ ವಜಾಗೊಳಿಸಿ ಉಳಿದ ಮೌಲ್ಯದಲ್ಲಿ (Amortised Cost) ತೋರಿಸಲಾಗುವುದು ಆರ್ಥಿಕ ಹೊಣೆಗಾರಿಕೆಗಳ ಆರಂಭಿಕ ಮೊಬಲಗುವನ್ನು ಕ್ರಮೇಣ ವಜಾಗೊಳಿಸಿ ಉಳಿದ ಮೌಲ್ಯವು (Amortised Cost) ಆರಂಭಿಕ ಗುರುತಿಸುವಿಕೆಯಲ್ಲಿ ಅಂತಹ ಜವಾಬ್ದಾರಿಗಳನ್ನು ಲೆಕ್ಕಿಸಿದ ಮೊಬಲಗುವಿನಲ್ಲಿ ಅಸಲು ಮರುಪಾವತಿಗಳನ್ನು ಕಳೆದು ಬಂದ ಮೊಬಲಗುವಿನಲ್ಲಿ ಪರಿಣಾಮಕಾರಿ ಬಡ್ಡಿ ವಿಧಾನವನ್ನು ಅನುಸರಿಸಿ ಕಂಡುಕೊಂಡ ಆರಂಭಿಕ ಮೊಬಲಗು ಮತ್ತು ಅವಧಿ ಮುಕ್ತಾಯದ ಮೌಲ್ಯದಲ್ಲಿನ ವ್ಯತ್ಯಾಸದಲ್ಲಿರುವ ಸಂಚಿತ ಮೊಬಲಗುವನ್ನು ಕೂಡಿಸಿದಾಗ ಅಥವ ಕಳೆದಾಗ ಲಭಿಸಿದ ಮೌಲ್ಯವಾಗಿರುವುದು.

(ii) ಆರ್ಥಿಕ ಹೊಣೆಗಾರಿಕೆಗಳನ್ನು ಲಾಭ ಮತ್ತು ನಷ್ಟದ ತಃಖ್ತೆಯ ಮುಖಾಂತರ ನ್ಯಾಯೋಚಿತ ಮೌಲ್ಯ (FVTPL) ದಲ್ಲಿ ಉಲ್ಲೇಖಿಸಿರುವುದು.

ವ್ಯಾಪಾರ ವಹಿವಾಟಿಗಾಗಿ ಹೊಂದಿರುವ ಆರ್ಥಿಕ ಜವಾಬ್ದಾರಿಗಳನ್ನು ಲಾಭ ಮತ್ತು ನಷ್ಟ ತಃಖ್ತೆಯ ಮುಖಾಂತರ ನ್ಯಾಯೋಚಿತ ಮೌಲ್ಯ (FVTPL) ದಲ್ಲಿ ಲೆಕ್ಕಿಸಲಾಗಿದೆ.

ಆರ್ಥಿಕ ಜವಾಬ್ದಾರಿಗಳ ಅಮಾನ್ಯೀಕರಣ:

ಆರ್ಥಿಕ ಜವಾಬ್ದಾರಿಗಳನ್ನು ಅಳಿಸಿದಾಗ ಮಾತ್ರ (ಅರ್ಥಾತ್ ಒಪ್ಪಂದಗಳಲ್ಲಿನ ಬಾಧ್ಯತೆಗಳ ಹೊರೆ ಇಳಿಸಿದಾಗ ಅಥವಾ ಬಾಧ್ಯತೆಗಳನ್ನು ರದ್ದುಗೊಳಿಸಿದಾಗ ಅಥವಾ ಬಾಧ್ಯತೆಗಳ ಅವಧಿ ಮೀರಿದಾಗ) ಅವುಗಳನ್ನು ಅಮಾನ್ಯೀಕರಣಗೊಳಿಸಲಾಗುವುದು.

(ಇ) ಆರ್ಥಿಕ ಆಸ್ತಿಗಳ ಮತ್ತು ಆರ್ಥಿಕ ಬಾಧ್ಯತೆಗಳ ಸರಿದೂಗಿಸುವಿಕೆ

ಆರ್ಥಿಕ ಆಸ್ತಿ ಹಾಗೂ ಬಾಧ್ಯತೆಗಳಿಗೆ ಸಂಬಂಧಿಸಿದಂತೆ ನಿಗಮವು ಗುರುತಿಸಲ್ಪಟ್ಟ ಮೊಬಲಗುವನ್ನು ಅಳಿಸಿ ಹಾಕಲು ಕಾನೂನುಬದ್ಧ ಅಧಿಕಾರ ಹೊಂದಿದ್ದರೆ ಮತ್ತು ಆಸ್ತಿ ಹಾಗೂ ಬಾಧ್ಯತೆಗಳ ನಿವ್ವಳತೆಯನ್ನು ಆಧರಿಸಿ ಇತ್ಯರ್ಥಗೊಳಿಸಲು ಉದ್ದೇಶಿಸಿದ್ದರೆ ಅಥವಾ ಆಸ್ತಿಗಳ ಮಾರಾಟ ಹಾಗೂ ಬಾಧ್ಯತೆಗಳ ಇತ್ಯರ್ಥವನ್ನು ಏಕಕಾಲದಲ್ಲಿ ಮಾಡುವುದಾದಲ್ಲಿ ಮಾತ್ರ ಹಣಕಾಸು ಆಸ್ತಿಗಳನ್ನು ಮತ್ತು ಬಾಧ್ಯತೆಗಳನ್ನು ಸರಿದೂಗಿಸಬಹುದು ಮತ್ತು ನಿವ್ವಳ ಮೊಬಲಗುವನ್ನು ಆರ್ಥಿಕ ಸ್ಥಿತಿ ವಿವರಣಾ ಪಟ್ಟಿಯಲ್ಲಿ ತೋರಿಸಬಹುದಾಗಿದೆ.

(ಈ) ಆರ್ಥಿಕ ಆಸ್ತಿಗಳ ಮರುವರ್ಗೀಕರಣ

ಆರ್ಥಿಕ ಆಸ್ತಿ ಮತ್ತು ಬಾಧ್ಯತೆ (ಹೊಣೆಗಾರಿಕೆ) ಗಳ ಆರಂಭಿಕ ಗುರುತಿಸುವಿಕೆಯಲ್ಲಿ, ನಿಗಮವು ಅವುಗಳ ವರ್ಗೀಕರಣವನ್ನು ನಿರ್ಧರಿಸುತ್ತದೆ. ಆರಂಭಿಕ ಗುರುತಿಸುವಿಕೆಯ ನಂತರ ಆರ್ಥಿಕ ಆಸ್ತಿಯಾದ ಈಕ್ವಿಟಿ ಅಖತ ಪತ್ರಗಳನ್ನು ಹಣಕಾಸು ಆಸ್ತಿಗಳನ್ನು ಇತರ ವಿಸ್ತೃತ ಆದಾಯ ವಿವರಣ ಪಟ್ಟಿಯ ಮೂಲಕ ನ್ಯಾಯೋಚಿತ ಮೌಲ್ಯದ (FVTOCI) ವಿಧಾನದಲ್ಲಿ ವರ್ಗೀಕರಿಸಿದ್ದರೆ ಮತ್ತು ಆರ್ಥಿಕ ಆಸ್ತಿಗಳು ಮತ್ತು ಹೊಣೆಗಾರಿಕೆ (ಬಾಧ್ಯತೆ) ಗಳನ್ನು ನಿರ್ದಿಷ್ಟವಾಗಿ ವ್ಯಾಪಾರ ವಹಿವಾಟಿಗಾಗಿ ಹೊಂದಿರುವ ಆರ್ಥಿಕ ಜವಾಬ್ದಾರಿಗಳನ್ನು ಲಾಭ ಮತ್ತು ನಷ್ಟ ತಃಖ್ತೆಯ ಮುಖಾಂತರ ನ್ಯಾಯೋಚಿತ ಮೌಲ್ಯ (FVTPL) ವರ್ಗದಲ್ಲಿ ವಿಂಗಡಿಸಿದ್ದರೆ; ಅಂತಹುವಗಳ ಮರುವರ್ಗೀಕರಣ ಮಾಡಲು ಅವಕಾಶವಿರುವುದಿಲ್ಲ. ಸಾಲಪತ್ರಗಳನ್ನು (Debt instruments) ಹೊಂದಿದ ಆರ್ಥಿಕ ಆಸ್ತಿಗಳನ್ನು, ಕೇವಲ ಇಂತಹ ಆಸ್ತಗಳನ್ನು

ಕೆ.ಪಿ.ಸಿ ಅನಿಲ ವಿದ್ಯುತ್ ನಿಗಮ ನಿಯಮಿತ

ಪೂರ್ವದ ಕೆ.ಪಿ.ಸಿ ಬಿಡದಿ ವಿದ್ಯುತ್ ನಿಗಮ ಖಾಸಗಿ ನಿಯಮಿತ

31ನೇ ಮಾರ್ಚ್ 2018 ಕ್ಕೆ ಕೊನೆಗೊಂಡ ಪ್ರತ್ಯೇಕ ಆರ್ಥಿಕ ಸ್ಥಿತಿ ವಿವರಣಾ ಪಟ್ಟಿಗೆ ಟಿಪ್ಪಣಿಗಳು

ನಿರ್ವಹಿಸುವ ವ್ಯವಹಾರ ಮಾದರಿಯಲ್ಲಿ ಬದಲಾವಣೆಯಾದಾಗ ಮಾತ್ರ ಮರುವರ್ಗೀಕರಣ ಮಾಡಬಹುದು. ವ್ಯವಹಾರ ಮಾದರಿಯ ಬದಲಾವಣೆಯು ವಿರಳವಾಗಿ ಸಂಭವಿಸುವುದು. ಬಾಹ್ಯ ಮತ್ತು ಆಂತರಿಕ ಬದಲಾವಣೆಗಳು ನಿಗಮದ ಕಾರ್ಯಾಚರಣೆಯ ಮೇಲೆ ಮಹತ್ತರವಾದ ಪರಿಣಾಮ ಬೀರುವುದಾದಲ್ಲಿ, ನಿಗಮದ ಆಡಳಿತ ಮಂಡಳಿಯು ವ್ಯವಹಾರದ ಮಾದರಿಯ ಬದಲಾವಣೆಯನ್ನು ಮಾಡಬಹುದು.ನಿಗಮದ ಕಾರ್ಯಾಚರಣೆಗಳಿಗಾಗಿ ಮಹತ್ವವಾದ ಚಟುವಟಿಕೆಯನ್ನು ಒಂದು ವೇಳೆ ಆರಂಭಿಸಿದ್ದರೆ, ಇಲ್ಲವೇ ಸ್ಥಗಿತಗೊಳಿಸಿದ್ದರೆ ಅಂತಹ ಸಂದರ್ಭದಲ್ಲಿ ವ್ಯವಹಾರದ ಮಾದರಿಯಲ್ಲಿ ಬದಲಾವಣೆ ಮಾಡುವ ಸಾಧ್ಯತೆಯಿದೆ. ಒಂದು ವೇಳೆ ನಿಗಮವು ಆರ್ಥಿಕ ಆಸ್ತಿಗಳ ಮರುವರ್ಗೀಕರಣ ಮಾಡಿದ್ದಾದಲ್ಲಿ, ಅಂತಹ ಮರುವರ್ಗೀಕರಣವು, ಮರುವರ್ಗೀಕರಿಸಿದ ದಿನಾಂಕದಿಂದ ಮುಂಬರುವ ಅವಧಿಗೆ ಅನ್ವಯಿಸುವುದು. ಅಲ್ಲದೇ ವ್ಯವಹಾರದ ಮಾದರಿಯ ಬದಲಾವಣೆ ಮಾಡಿದ ಅವಧಿಯ ತಕ್ಷಣದ ಮುಂದಿನ ಅವಧಿಯ ಮೊದಲನೆಯ ದಿನಾಂಕವೇ ಮರುವರ್ಗೀಕರಿಸಿದ ದಿನಾಂಕವಾಗಿರುವುದು. ಇಂತಹ ಸಂಧರ್ಭಗಳಲ್ಲಿ ನಿಗಮವು ಹಿಂದಿನ ಅವಧಿಗಳಲ್ಲಿ ಗುರುತಿಸಿದ ಲಾಭಗಳನ್ನು,ಹಾನಿಗಳನ್ನು (ದುರ್ಬಲತೆಯ ಲಾಭ ಅಥವಾ ಹಾನಿಗಳನ್ನೊಳಗೊಂಡು) ಅಥವಾ ಬಡ್ಡಿಗಳನ್ನು ಮಾರ್ಪಡಿಸಿ ತೋರಿಸುವುದಿಲ್ಲ.

2.18 ಪ್ರಥಮ ಬಾರಿ ಭಾರತೀಯ ಲೆಕ್ಕಮಾನದಂಡಗಳ ಅಳವಡಿಕೆ:

31 ಮಾರ್ಚ್ 2017ರ ಅಂತ್ಯಕ್ಕೆ ತಯಾರಿಸಲಾದ ನಿಗಮದ ಆರ್ಥಿಕ ವಿವರಣಾ ಪಟ್ಟಿಗಳು ಕಂಪನಿಗಳ (ಭಾರತದ ಲೆಕ್ಕಮಾನದಂಡಗಳು) ನಿಯಮಗಳು, 2015ರಲ್ಲಿ ಸೂಚಿಸಲಾದ ಭಾರತದ ಲೆಕ್ಕಮಾನದಂಡಗಳ (IND AS) ಅನುಸಾರ ತಯಾರಿಸಲಾದ ಮೊದಲ ಆರ್ಥಿಕ ವಿವರಣಾ ಪಟ್ಟಿಗಳಾಗಿರುತ್ತವೆ.

31 ಮಾರ್ಚ್ 2016ನ್ನು ಒಳಗೊಂಡ ಅವಧಿಯವರೆಗೆ ನಿಗಮವು ತನ್ನ ಆರ್ಥಿಕ ವಿವರಣಾ ಪಟ್ಟಿಗಳನ್ನು ಕಂಪನಿ (ಭಾರತೀಯ ಲೆಕ್ಕಮಾನದಂಡಗಳು) ನಿಯಮಗಳು, 2014ರ (ಭಾರತದಲ್ಲಿ ಸಾಮಾನ್ಯವಾಗಿ ಸ್ವೀಕರಿಸಲಾದ ಲೆಕ್ಕಾಚಾರದ ಧೋರಣೆಗಳು) ನಿಯಮ 7ರ ಜೊತೆಗೆ ಕಂಪನಿ ಕಾಯ್ದೆ 2013ರ ಕಲಂ 133ರಲ್ಲಿ ನೀಡಲಾದ ಲೆಕ್ಕಮಾನದಂಡಗಳ ಅನುಸಾರ ತಯಾರಿಸಿರುತ್ತದೆ.

ಪರಿವರ್ತನಾ ದಿನಾಂಕ 1 ಏಪ್ರಿಲ್ 2015ರಂದು ಭಾರತದ ಲೆಕ್ಕಮಾನದಂಡ (IND AS) 101ರ ಅನುಸಾರ ಭಾರತದ ಲೆಕ್ಕಮಾನದಂಡಗಳ (IND AS) ಅಳವಡಿಕೆಯನ್ನು ಮಾಡಲಾಗಿದೆ. ಭಾರತದ ಲೆಕ್ಕಮಾನದಂಡ (IND AS) 101ರ ಅನ್ವಯ ಪ್ರಥಮ ಬಾರಿ ಭಾರತದ ಲೆಕ್ಕಮಾನದಂಡಗಳ ಅನುಸಾರ ತಯಾರಿಸಲಾದ ಆರ್ಥಿಕ ವಿವರಣಾ ಪಟ್ಟಿಗಳಿಗೆ ಅನ್ವಯಿಸುವ ಎಲ್ಲಾ ಭಾರತದ ಲೆಕ್ಕಮಾನದಂಡಗಳನ್ನು ಮಂಡಿಸಿದ ಎಲ್ಲಾ ಆರ್ಥಿಕ ವರ್ಷಗಳಿಗೆ ನಿರಂತರವಾಗಿ ಹಾಗೂ ಪೂರ್ವಾನ್ವಯವಾಗುವಂತೆ ಅಳವಡಿಸಬೇಕಾಗಿರುತ್ತದೆ.

ಅವಶ್ಯವಿದ್ದಲ್ಲಿ ಎಲ್ಲಾ ಭಾರತದ ಲೆಕ್ಕಮಾನದಂಡಗಳನ್ನು ನಿರಂತರವಾಗಿ ಹಾಗೂ ಪೂರ್ವಾನ್ವಯವಾಗುವಂತೆ ಅಳವಡಿಸಲಾಗಿದೆ. ಭಾರತದ ಲೆಕ್ಕಮಾನದಂಡ (IND AS) ಹಾಗೂ ಭಾರತದಲ್ಲಿ ಸಾಮಾನ್ಯವಾಗಿ ಸ್ವೀಕರಿಸಲಾದ ಲೆಕ್ಕಾಚಾರದ ಧೋರಣೆಗಳ (IGAAP) ಅನುಸಾರದ ಆಸ್ತಿ ಹಾಗೂ ಜವಾಬ್ದಾರಿಗಳ ಮುಂದೊಯ್ಯುವ ವೆಚ್ಚದಲ್ಲಿನ ವ್ಯತ್ಯಾಸವನ್ನು ನೇರವಾಗಿ ಈಕ್ವಿಟಿಯಲ್ಲಿ ಗುರುತಿಸಲಾಗಿದೆ.

ಈ ಆರ್ಥಿಕ ವಿವರಣಾ ಪಟ್ಟಿಗಳ ತಯಾರಿಕೆಯಲ್ಲಿ ನಿಗಮವು ಭಾರತದ ಲೆಕ್ಕಮಾನದಂಡ (IND AS) 101ರ ಅನುಸಾರ ಕೆಲವು ವಿನಾಯಿತಿ ಹಾಗೂ ಹೊರತುಪಡಿಸುವಿಕೆಯನ್ನು ಈ ಕೆಳಗಿನಂತೆ ಹೊಂದಿರುತ್ತದೆ.

ಪೂರ್ವಾನ್ವಯವಾಗುವಂತೆ ಹೊರತುಪಡಿಸುವಿಕೆ ಹಾಗೂ ವಿನಾಯಿತಿಗಳು

- **ಅಂದಾಜುಗಳು**: ಪರಿವರ್ತನಾ ದಿನಾಂಕದಂದು ಭಾರತದ ಲೆಕ್ಕಮಾನದಂಡಗಳ ಪ್ರಕಾರ ಮಾಡಿದ ಸಂಸ್ಥೆಯು ಅಂದಾಜುಗಳು, ಹಿಂದಿನ ಸಾಮಾನ್ಯವಾಗಿ ಸ್ವೀಕರಿಸಲಾದ ಭಾರತದ ಲೆಕ್ಕತತ್ವಗಳ ಅನುಸಾರ ಅದೇ ದಿನಾಂಕದಂದು ಮಾಡಲಾದ ಅಂದಾಜುಗಳಿಗೆ ಸಮಂಜಸವಾಗಿರಬೇಕಾಗಿರುತ್ತದೆ. ಇದಕ್ಕೆ ವಾಸ್ತವಿಕ ಪುರಾವೆಯಿರುವ ದೋಷಪೂರಿತ ಅಂದಾಜುಗಳು ಹೊರತಾಗಿರುತ್ತವೆ. ನಿಗಮವು ಹಿಂದಿನ ಸಾಮಾನ್ಯವಾಗಿ ಸ್ವೀಕರಿಸಲಾದ ಭಾರತದ ಲೆಕ್ಕತತ್ವಗಳ ಅನುಸಾರ ಮಾಡಿದ ಅಂದಾಜುಗಳಿಗೆ ಯಾವುದೇ ಬದಲಾವಣೆಯನ್ನು ಮಾಡಿರುವುದಿಲ್ಲ.

- **ಆಸ್ತಿ, ಸ್ಥಾವರ ಹಾಗೂ ಯಂತ್ರೋಪಕರಣಗಳು**: ನಿಗಮವು ಆಸ್ತಿ, ಸ್ಥಾವರ, ಯಂತ್ರೋಪಕರಣಗಳು ಹಾಗೂ ಅಗೋಚರ ಆಸ್ತಿಗಳನ್ನು ಭಾರತದಲ್ಲಿ ಸಾಮಾನ್ಯವಾಗಿ ಸ್ವೀಕರಿಸಲಾದ ಲೆಕ್ಕಾಚಾರದ ಧೋರಣೆಗಳ (IGAAP) ಅನುಸಾರದ ಮುಂದೊಯ್ಯುವ ವೆಚ್ಚಕ್ಕೆ ಅಳತೆಮಾಡಿ IND ASಗೆ ಪರಿವರ್ತನಾ ದಿನಾಂಕದಂದು ಪರಿಗಣಿತ ವೆಚ್ಚವಾಗಿ ಆಯ್ದುಕೊಂಡಿರುತ್ತದೆ.

- **ಆರ್ಥಿಕ ಆಸ್ತಿ ಹಾಗೂ ಆಸ್ತಿಗಳ ಗುರುತಿಸದಿರುವಿಕೆ**: ನಿಗಮವು ಭಾರತದ ಲೆಕ್ಕಮಾನದಂಡ 109ರ ಅನುಸಾರ ಗುರುತಿಸದಿರುವಿಕೆಯ ತತ್ವವನ್ನು ಭವಿಷ್ಯವರ್ತಿಯಾಗಿ ಅಳವಡಿಸಿಕೊಂಡಿರುತ್ತದೆ ಹಾಗೂ ಭಾರತದ ಲೆಕ್ಕಮಾನದಂಡಗಳ ಪ್ರಕಾರ ಗುರುತಿಸುವಿಕೆಯ ಅರ್ಹತೆಯಿರುವ 1 ಏಪ್ರಿಲ್ 2015ಕ್ಕೂ ಹಿಂದಿನ ಅವಧಿಯ ಗುರುತಿಸದೇ ಇರುವ ಉತ್ಪಾದನೆರಹಿತ ಆರ್ಥಿಕ ಆಸ್ತಿ ಹಾಗೂ ಆರ್ಥಿಕ ಹೊಣೆಗಾರಿಕೆಗಳನ್ನು ಗುರುತಿಸಿರುವುದಿಲ್ಲ.

ಕೆ.ಪಿ.ಸಿ ಅನಿಲ ವಿದ್ಯುತ್ ನಿಗಮ ನಿಯಮಿತ

ಪೂರ್ವದ ಕೆ.ಪಿ.ಸಿ ಬಿಡದಿ ವಿದ್ಯುತ್ ನಿಗಮ ಖಾಸಗಿ ನಿಯಮಿತ

31ನೇ ಮಾರ್ಚ್ 2018 ಕ್ಕೆ ಕೊನೆಗೊಂಡ ಪ್ರತ್ಯೇಕ ಆರ್ಥಿಕ ಸ್ಥಿತಿ ವಿವರಣಾ ಪಟ್ಟಿಗೆ ಟಿಪ್ಪಣಿಗಳು

- **ಗುತ್ತಿಗೆಗಳು:** ಸಂಸ್ಥೆಯು ಮಹತ್ವದ ಪರಿಣಾಮವಿರದಿರುವ ಅಂಶಗಳನ್ನು ಹೊರತುಪಡಿಸಿ, ಭಾರತದ ಲೆಕ್ಕಮಾನದಂಡಗಳಿಗೆ ಪರಿವರ್ತನೆಯಗುವ ದಿನಾಂಕದಂದು ಇರುವ ನಿಜಾಂಶ ಹಾಗೂ ಸಂದರ್ಭಗಳ ಆಧಾರದ ಮೇಲೆ ಆ ದಿನಾಂಕದಂದು ಚಾಲ್ತಿಯಲ್ಲಿರುವ ವ್ಯವಸ್ಥೆಯು ಯಾವುದಾದರೂ ಗುತ್ತಿಗೆಯನ್ನು ಒಳಗೊಂಡಿದೆಯೇ ಎಂದು ಪರಿಶೀಲಿಸಬೇಕಾಗಿರುತ್ತದೆ. ನಿಗಮವು ಈ ವಿನಾಯಿತಿಯನ್ನು ಪಡೆದುಕೊಂಡಿರುತ್ತದೆ ಹಾಗೂ ಪರಿವರ್ತನಾ ದಿನಾಂಕದಂದಿರುವ ಸ್ಥಿತಿಯ ಅನುಸಾರ ಎಲ್ಲಾ ವ್ಯವಸ್ಥೆಗಳನ್ನು ಪರಿಶೀಲಿಸಿರುತ್ತದೆ.

- **ಆರ್ಥಿಕ ಆಸ್ತಿಗಳ ಮಾಪನ ಹಾಗೂ ವರ್ಗೀಕರಣ:** ಋಣವಿಮೋಚನಾ ವೆಚ್ಚಕ್ಕೆ ಲೆಕ್ಕಹಾಕಲು ಅರ್ಹವಿರುವ ಆರ್ಥಿಕ ಆಸ್ತಿಗಳನ್ನು ಅದರಾನುಸಾರ ಭವಿಷ್ಯವರ್ತಿಯಾಗಿ ಲೆಕ್ಕಿಸಲಾಗಿದೆ. ಪರಿಣಾಮಕಾರಿ ಬಡ್ಡಿ ಪದ್ಧತಿಯನ್ನು ಪೂರ್ವಾನ್ವಯವಾಗುವಂತೆ ಅಳವಡಿಸುವುದು ಕಾರ್ಯಸಾಧ್ಯವಾಗದಿದ್ದಲ್ಲಿ, ಪರಿವರ್ತನಾ ದಿನಾಂಕಕ್ಕಿದ್ದಂತೆ ಆರ್ಥಿಕ ಆಸ್ತಿ ಅಥವಾ ಆರ್ಥಿಕ ಹೊಣೆಗಾರಿಕೆಗಳ ನ್ಯಾಯಬೆಲೆಯನ್ನು ಮುಂದೊಯ್ಯುವ ಪರಿಗಣಿತ ವೆಚ್ಚವೆಂದು ಲೆಕ್ಕಿಸಲಾಗಿದೆ.

2.19. ಅಳವಡಿಕೆ ಮಾಡದ ಹೊಸ ಮಾನದಂಡಗಳು ಹಾಗೂ ವ್ಯಾಖ್ಯಾನಗಳು

ಮಾರ್ಚ್ 2017ರಲ್ಲಿ ಕಂಪನಿಗಳ ವ್ಯವಹಾರ ಸಚಿವಾಲಯವು ಕಂಪನಿ (ಭಾರತದ ಲೆಕ್ಕಮಾನದಂಡಗಳು) (ತಿದ್ದುಪಡಿಗಳು) ನಿಯಮಗಳು, 2017ನ್ನು ಪ್ರಕಟಿಸಿ, ಭಾರತದ ಲೆಕ್ಕಮಾನದಂಡ 7 'ನಗದು ಹರಿವಿನ ವಿವರಣಾ ಪಟ್ಟಿ' ಹಾಗೂ ಭಾರತದ ಲೆಕ್ಕಮಾನದಂಡ 102 'ಷೇರು ಆಧಾರಿತ ಪಾವತಿಗಳಿಗೆ ತಿದ್ದುಪಡಿಗಳನ್ನು ಸೂಚಿಸಿತು. ಈ ತಿದ್ದುಪಡಿಗಳು ಅಂತರಾಷ್ಟ್ರೀಯ ಲೆಕ್ಕಮಾನದಂಡಗಳ ಮಂಡಳಿಯು ಅಂತರಾಷ್ಟ್ರೀಯ ಲೆಕ್ಕಮಾನದಂಡ 7 'ನಗದು ಹರಿವಿನ ವಿವರಣಾ ಪಟ್ಟಿ' ಹಾಗೂ ಅಂತರಾಷ್ಟ್ರೀಯ ಲೆಕ್ಕಮಾನದಂಡ 102 'ಷೇರು ಆಧಾರಿತ ಪಾವತಿ' ಗಳಿಗೆ ಮಾಡಿರುವ ಇತ್ತೀಚಿನ ತಿದ್ದುಪಡಿಗಳಿಗೆ ಕ್ರಮವಾಗಿ ಅನುಗುಣವಾಗಿರುತ್ತವೆ. ಭಾರತದ ಲೆಕ್ಕಮಾನದಂಡ 7 ನಿಗಮಕ್ಕೆ 1 ಏಪ್ರಿಲ್, 2017ರಿಂದ ಅನ್ವಯವಾಗುತ್ತದೆ.

ಭಾರತದ ಲೆಕ್ಕಮಾನದಂಡ 7ರ ತಿದ್ದುಪಡಿ:

ಭಾರತದ ಲೆಕ್ಕಮಾನದಂಡ 7ರ ತಿದ್ದುಪಡಿಯ ಅನುಸಾರ ಸಂಸ್ಥೆಯು ಪ್ರಸ್ತುತಪಡಿಸುವಿಕೆಯ ಅಗತ್ಯತೆಗಳನ್ನು ಪೂರೈಸಲು ನಗದು ಹರಿವು ಬದಲಾವಣೆ ಹಾಗೂ ನಗದು ರಹಿತ ಬದಲಾವಣೆಗಳನ್ನೊಳಗೊಂಡ ಹಣಕಾಸಿನ ಚಟುವಟಿಕೆಗಳಿಂದ ಹೊಣೆಗಾರಿಕೆಗಳಲ್ಲಾಗುವ ಬದಲಾವಣೆಗಳ ಮೌಲ್ಯಮಾಪನವನ್ನು ಆರ್ಥಿಕ ವಿವರಣಾಪಟ್ಟಿಗಳ ಬಳಕೆದಾರರು ಮಾಡಲು ಸಾಧ್ಯವಾಗಲು, ಹಣಕಾಸಿನ ಚಟುವಟಿಕೆಗಳಿಂದ ಅಢಾವೆ ಪತ್ರಿಕೆಯಲ್ಲಿನ ಹೊಣೆಗಾರಿಕೆಗಳ ಆರಂಭಿಕ ಹಾಗೂ ಆಖೈರು ಶಿಲ್ಕುಗಳ ಬದಲಾವಣೆಗಳನ್ನು ಸೂಚಿಸುವ ವಿವರಣೆಗಳನ್ನು ಪ್ರಸ್ತುತಪಡಿಸಬೇಕಾಗಿರುತ್ತದೆ.

ನಿಗಮವು ತಿದ್ದುಪಡಿಯ ಅಗತ್ಯತೆ ಹಾಗೂ ಆರ್ಥಿಕ ವಿವರಣಾ ಪಟ್ಟಿಗಳ ಮೇಲಿನ ಪರಿಣಾಮವನ್ನು ನಿರ್ಧರಿಸುತ್ತಿದೆ.

ಭಾರತದ ಲೆಕ್ಕಮಾನದಂಡ 115 ಗ್ರಾಹಕರ ಜೊತೆಗಿನ ಒಪ್ಪಂದದಿಂದ ಬಂದ ಆದಾಯವನ್ನು ಆರಂಬದಲ್ಲಿ ಕಂಪನಿ (ಭಾರತದ ಲೆಕ್ಕಮಾನದಂಡಗಳು) ನಿಯಮಗಳು, 2015ರ ಅಡಿಯಲ್ಲಿ ಪ್ರಕಟಿಸಲಾಗಿತ್ತು.

ಈ ಲೆಕ್ಕಮಾನದಂಡವು ಗ್ರಾಹಕರ ಜೊತೆಗಿನ ಒಪ್ಪಂದಗಳಿಗೆ ಅನ್ವಯಿಸುತ್ತದೆ. ಹೊಸ ಮಾನದಂಡದ ಪ್ರಧಾನ ನಿಯಮದ ಅನುಸಾರ ಸಂಸ್ಥೆಯು ಗ್ರಾಹಕರಿಗೆ ಭರವಸೆ ನೀಡಿದ ಸಾಮಗ್ರಿ ಅಥವಾ ಸೇವೆಗಳ ವರ್ಗಾವಣೆ ಸೂಚಿಸುವ ಆದಾಯವನ್ನು ಗುರುತಿಸಬೇಕಾಗಿರುತ್ತದೆ ಹಾಗೂ ಈ ಆದಾಯವನ್ನು ಆ ಸಾಮಗ್ರಿ ಅಥವಾ ಸೇವೆಯ ನೀರೀಕ್ಷಿತ ವಿನಿಮಯ ಮೊತ್ತವನ್ನು ಸೂಚಿಸುವ ಬೆಲೆಗೆ ಪರಿಗಣಿಸಬೇಕಾಗಿರುತ್ತದೆ. ಮುಂದುವರೆದು, ಹೊಸ ಲೆಕ್ಕಮಾನದಂಡದ ಅಗತ್ಯತೆಗಳ ಅನುಸಾರ ಗ್ರಾಹಕರ ಜೊತೆಗಿನ ಒಪ್ಪಂದದಿಂದ ಬರುವ ಆದಾಯದ ಸ್ವರೂಪ, ಸಮಯ ಹಾಗೂ ಅನಿಶ್ಚಿತತೆ ಮತ್ತು ನಗದು ಹರಿವುಗಳ ಬಗ್ಗೆ ಹೆಚ್ಚಿನ ಮಾಹಿತಿಯನ್ನು ನೀಡಬೇಕಾಗಿರುತ್ತದೆ. ಹೊಸ ಲೆಕ್ಕಮಾನದಂಡವು ಅನೇಕ ಪರಿವರ್ತನಾ ಆಯ್ಕೆಗಳನ್ನು ನೀಡುತ್ತದೆ. ಸಂಸ್ಥೆಯು ಹೊಸ ಲೆಕ್ಕಮಾನದಂಡವನ್ನು ಹಿಂದಿನ ವ್ಯವಹಾರಗಳಿಗೆ ಅನ್ವಯಿಸಲು ಆಯ್ದುಕೊಳ್ಳಬಹುದು ಹಾಗೂ ಪ್ರತಿ ಹೋಲಿಕೆಯ ಅವಧಿಗಳಲ್ಲಿ ಪೂರ್ವಾನ್ವಯವಾಗುವಂತೆ ಹೊಂದಾಣಿಕೆಗಳನ್ನು ಮಾಡಬಹುದು. ಪರ್ಯಾಯವಾಗಿ, ಸಂಸ್ಥೆಯು ಆರಂಭಿಕ ದಿನಾಂಕದಂದು ಹೊಸ ಲೆಕ್ಕಮಾನದಂಡಗಳ ಅಳವಡಿಕೆಯಿಂದಾಗುವ ಸಂಚಿತ ಪರಿಣಾಮವನ್ನು ಗುರುತಿಸಿ, ಹೋಲಿಕೆಯ ಅವಧಿಯಲ್ಲಿ ಯಾವುದೇ ಹೊಂದಾಣಿಕೆಗಳನ್ನು ಮಾಡದೇ ಇರಬಹುದು. ಪರಿವರ್ತನಾ ಆಯ್ಕೆಯು ಆರ್ಥಿಕ ಟಿಪ್ಪಣಿಗಳ ಆದಾಯ ಪ್ರವೃತ್ತಿಯ ಮೇಲೆ ಮಹತ್ತರ ಪರಿಣಾಮವನ್ನು ಬೀರಬಹುದು. ಆದಾಯದ ಗುರುತಿಸುವಿಕೆಯ ಸಮಯದ ಬದಲಾವಣೆಯಾದಲ್ಲಿ ಅದಕ್ಕೆ ಸಂಬಂಧಿತ ವೆಚ್ಚಗಳ ಗುರುತಿಸುವಿಕೆಯ ಸಮಯವನ್ನೂ ಬದಲಾಯಿಸುವುದು ಅವಶ್ಯಕವಾಗಿರುತ್ತದೆ.

ಕೆ.ಪಿ.ಸಿ ಅನಿಲ ವಿದ್ಯುತ್ ನಿಗಮ ನಿಯಮಿತ

ಪೂರ್ವದ ಕೆ.ಪಿ.ಸಿ ಬಿಡದಿ ವಿದ್ಯುತ್ ನಿಗಮ ಖಾಸಗಿ ನಿಯಮಿತ

31ನೇ ಮಾರ್ಚ್ 2018 ಕ್ಕೆ ಕೊನೆಗೊಂಡ ಪ್ರತ್ಯೇಕ ಆರ್ಥಿಕ ಸ್ಥಿತಿ ವಿವರಣಾ ಪಟ್ಟಿಗೆ ಟಿಪ್ಪಣಿಗಳು

ಪ್ರಸ್ತುತವಾಗಿ ಈ ಲೆಕ್ಕಮಾನದಂಡವನ್ನು ಮುಂದೂಡಲಾಗಿದೆ. ನಿಗಮವು ಭಾರತದ ಲೆಕ್ಕಮಾನದಂಡ 115ರ ಅಗತ್ಯತೆಯನ್ನು ನಿರ್ಧರಿಸುತ್ತಿದೆ ಹಾಗೂ ಆರ್ಥಿಕ ಟಿಪ್ಪಣಿಗಳ ಮೇಲಿನ ಪರಿಣಾಮವನ್ನು ಲೆಕ್ಕಹಾಕಿರುವುದಿಲ್ಲ.

ದಿನಾಂಕದಂದು ಲಗತ್ತಿಸಲಾದ ನಮ್ಮ ವರದಿಯ ಪ್ರಕಾರ

ಬಾಲು & ಆನಂದ್

ಚಾರ್ಟರ್ಡ್ ಅಕೌಂಟೆಂಟ್ಸ್

ಕಂಪನಿ ನೋಂದಣಿ ಸಂಖ್ಯೆ 003675 ಎಸ್

ಆಡಳಿತ ಮಂಡಳಿಯ ಪರವಾಗಿ

ಸಹಿ/-	ಸಹಿ/-	ಸಹಿ/-
ಎನ್.ಕೆ ಶ್ರೀನಿವಾಸ್ ಭರತ್	(ಆರ್.ನಾಗರಾಜ)	(ಜಿ.ಕುಮಾರ್ ನಾಯಕ್)
ಪಾಲುದಾರರು,	ನಿರ್ದೇಶಕರು	ಅಧ್ಯಕ್ಷರು
ಸದಸ್ಯತ್ವ ಸಂಖ್ಯೆ 21142	ಡಿಐಎನ್: 03108629	ಡಿಐಎನ್: 01918435

ಸಹಿ/-

(ಸುಷ್ಮಾ.ಜಿ)

ಕಂಪನಿಯ ಕಾರ್ಯದರ್ಶಿ

ಸದಸ್ಯತ್ವ ಸಂಖ್ಯೆ. ಎ41881

09ನೇ ಅಗಸ್ಟ್ 2018

ಬೆಂಗಳೂರು,

KARNATAKA POWER
CORPORATION L

ಕರ್ನಾಟಕ ವಿದ್ಯುತ್ ನಿಗಮ ನಿಯಮಿತ

KARNATAKA POWER CORPORATION LTD.

(A Government of Karnataka Enterprise)

Regd. Office: Shakthi Bavan, 82, Race Course Road, Bengaluru 560 001. Karnataka. India.

Tel.: +91 80 225 6568 / 226 9930-37 | Fax: +91 80 2225 2144 | www.karnatakapower.com

CIN: U85110KA1970SGC001919